ಶೀ:- ಶನಿ ಸಂತಾನ
[ನಗ್ನಸತ್ಯ - ಭಾಗ - ೨]

ಲೇ:- ಅ.ನ. ಕೃಷ್ಣರಾಯರು

1954

ಅ.ನ.ಕೃ.



ಶನಿಸಂತಾನ

ತ್ರ

ೌಟುಂಬಿಕ, ಹಾಗೂ ರಾಷ್ಟ್ರೀಯ
ಎಲ್ಲ ಸಮಸ್ಯೆಗಳ ಮೂಲಾಧಾರ
ರಿ ವೇಶ್ಯಾಸಮಸ್ಯೆ ತಕ್ಕಮಟ್ಟಿಗೆ
ಸೂಚಿಸಿದ್ದಾರೆ. ಕನ್ನಡನಾಡಿ
ಾಮಾಜಿಕ ನೈರ್ಮಲ್ಯದ ಕಡೆಗೆ
ಕಾದಂಬರಿ '**ನಗ್ನಸತ್ಯ**'
ವಾಗಿದೆ.)

ಬೆಲೆ ರೂ. ೧—೮—೦

ಗಳು

ಬರಿ. ಅತೃಪ್ತಕಾಮ,
ಪಿಸಿರುವ ಕಾದಂಬರಿ
ಟಗೊಂಡಿರುವ ಈ
ನ್ನು ನಿರ್ಭೀತಿ
ದಂಬರಿ

—೦

ಶನಿ ಸಂತಾನ

ಸುಖದ ಮರೀಚಿಕೆಯ
ಬೆನ್ನು ಹತ್ತಿ ಬಾಳು ಬವಣೆಗೊಂಡಿತು.
ಸತ್ಯ, ಪ್ರೇಮ, ತ್ಯಾಗ, ಪೌರುಷಗಳ
ತುಳಿದು ತುಳಿದು ರುದ್ರನಾಟ್ಯವಾಡಿತು.
ನಾನು, ನಾನು ;—ನನಗೆ, ನನಗೆ
ಎಂಬುದದೇ ಕಾಲಪುರುಷನ ಆಕ್ರಂದನ.
ನೀನು, ನೀನು ;—ನಿನಗೆ, ನಿನಗೆ
ಎಂಬುದದೇ ಧರ್ಮಪುರುಷನ ಉನ್ಮೀಲನ.
ತ್ಯಾಗಜೀವಿ ಹೆಣ್ಣು ಲೋಕದ ಕಣ್ಣು,
ಭೋಗಜೀವಿ ಹೆಣ್ಣು ಲೋಕದ ಹುಣ್ಣು.
ತ್ಯಾಗಮೂರ್ತಿ ಅವಳೆ ಗೌರಿ—ಶಿವೆ.
ಭೋಗಮೂರ್ತಿ ಅವಳೆ ಕಾಳಿ—ರುದ್ರೆ.
ಸಾವಿನ ಅಡಿಯಲ್ಲಿರ್ಪುದೇ ಭೋಗ.
ಜೀವದ ಉಡಿಯಲ್ಲಿರ್ಪುದೇ ತ್ಯಾಗ.

— ಅನಾಮಿಕ.

ಶನಿ ಸಂತಾನ

[ನಗ್ನಸತ್ಯ—ಭಾಗ ೨]

ಅ. ನ. ಕೃ.

ಪ್ರಸಾದ್ ಪಬ್ಲಿಕೇಷನ್ಸ್
ಮೈಸೂರು.

ಮೊದಲನೆಯ ಮುದ್ರಣ : ೧೯೫೧
ಎರಡನೆಯ ಮುದ್ರಣ : ೧೯೫೪

ಬೆಲೆ ರೂ. ೧-೮-೦

ಮುದ್ರಣ :
ಇಂಡಿಯಾ ಪ್ರೆಸ್, ಮೈಸೂರು.

ಎರಡನೆಯ ಮುದ್ರಣದ ಮುನ್ನುಡಿ

ಬಹು ಜನರ ವಿಶ್ವಾಸ ಗಳಿಸಿ, ಕೆಲಜನರ ಆಕ್ರೋಶ ಕೆರಳಿಸಿದ '**ನಗ್ನಸತ್ಯ**' ಮಾಲೆಯ ಎರಡನೆಯ ಕಾದಂಬರಿ '**ಶನಿ ಸಂತಾನ**' ಎರಡನೆಯ ಮುದ್ರಣ ಕಾಣುತ್ತಿರುವುದು ಸಂತೋಷದ ವಿಷಯ.

ಸತ್ಯವನ್ನು ಹೇಳಬೇಕು—ಆದರೆ ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳಬೇಕೆನ್ನುವುದು ಸಂಪ್ರದಾಯದ ಮಾತು. ಸತ್ಯ ಘೋರವಾಗಿದ್ದಲ್ಲಿ ಅದು ಅಪ್ರಿಯವಾದರೂ ಹೇಳಲೇಬೇಕೆನ್ನುವುದು ಪ್ರಗತಿಶೀಲರ ವಾದ. ಅಪ್ರಿಯ ಸತ್ಯವನ್ನು ಹೊರಗಾಣಿಸಿರುವ '**ಶನಿ ಸಂತಾನ**' ಕೆಲವರ ನಿಂದೆ, ಭರ್ತ್ಸನೆಗಳಿಗೆ ಗುರಿಯಾದುದೇನೂ ಅಚ್ಚರಿಯಲ್ಲ.

ಸಂಸ್ಕೃತ ಲಾಕ್ಷಣಿಕರು ವಿಮರ್ಶಕನನ್ನು, ಓದುಗನನ್ನು 'ಸುಹೃದಯಿ' ಎಂದು ಕರೆದಿದ್ದಾರೆ. ಪೂರ್ವಗ್ರಹಬಾಧೆಗೆ ನಿಲುಕದೆ, ಸುಹೃದಯದಿಂದ ಒಂದು ಕಲಾಕೃತಿಯನ್ನು ಓದುಗ ಗಮನಿಸಿದಲ್ಲದೆ ಅವನಿಗೆ ಅದರ ತೇಜಸ್ಸು, ಸೌಂದರ್ಯ ಸತ್ಯದರ್ಶನವಾಗುವುದಿಲ್ಲ.

'**ಶನಿ ಸಂತಾನ**' ಪ್ರಕಟವಾದಾಗ ವಿಮರ್ಶಕರು ಕದಡಿದ ನೀರು ಈಗ ತಿಳಿಯಾಗಿದೆಯೆಂದು ಭಾವಿಸಿದ್ದೇನೆ. ಓದುಗರು ಇನ್ನಾದರೂ ಈ ಗ್ರಂಥವನ್ನು ಶುದ್ಧಮನಸ್ಸಿನಿಂದ ಓದಿ, ಲೇಖಕನ ಹೃದಯದಲ್ಲಿ ಸ್ಥಿರವಾಗಿ ಮೂಡಿರುವ ಸತ್ಯಪ್ರಿಯತೆ, ಲೋಕಕಲ್ಯಾಣ ಭಾವನೆಯನ್ನರಿಯಬಹುದು.

ಮೈಸೂರು
೯–೧೨–೧೯೫೪

ಅ. ನ. ಕೃ

ಮೊದಲನೆಯ ಮುದ್ರಣದ ಮುನ್ನುಡಿ

'ನಗ್ನಸತ್ಯ' ದಲ್ಲಿ ಚಿತ್ರಿಸಲ್ಪಟ್ಟ ವೇಶ್ಯಾಜೀವನದ ದುರಂತ ಕಥೆಯ ಬೆಳವಳಿಗೆಯೇ 'ಶನಿ ಸಂತಾನ'. ಸಹಸ್ರಾರು ವರ್ಷಗಳಿಂದ, ಸಹಸ್ರ ಮುಖ ಗಳಲ್ಲಿ ಬೆಳೆದು ಬಂದಿರುವ ಈ ಸಮಸ್ಯೆಯ ಚಿತ್ರೀಕರಣ ಒಂದು ಕಾದಂಬರಿಯ ಇತಿಮಿತಿಯಲ್ಲಿ ಅಡಗುವುದು ಸಾಧ್ಯವಿಲ್ಲ. 'ನಗ್ನಸತ್ಯ' ದಲ್ಲಿ ಸಮಸ್ಯೆಯ ಆರ್ಥಿಕ ಮುಖವನ್ನು ಪ್ರಧಾನವಾಗಿಟ್ಟುಕೊಂಡು, ಉಳಿದ ಸಮಸ್ಯೆಗಳ ಮೇಲೆ ತೋರು ಬೆಳಕನ್ನು ಮಾತ್ರ ಚೆಲ್ಲಿದ್ದೇನೆ. 'ಶನಿ ಸಂತಾನ' ದಲ್ಲಿ ಮನೋ ವ್ಯಾಪಾರದ ಮುಖಕ್ಕೆ ಪ್ರಾಧಾನ್ಯಕೊಟ್ಟಿದ್ದೇನೆ. ಉಳಿದಿರುವ 'ಸಂಜೆಗತ್ತಲು' ಕಾದಂಬರಿಯಲ್ಲಿ ಈ ಸಮಸ್ಯೆಯ ಪರಿಣಾಮದ ಚಿತ್ರ ಕೊಡಲ್ಪಟ್ಟಿದೆ.

'ನಗ್ನಸತ್ಯ' ಕಾದಂಬರಿಗೆ ಪತ್ರಿಕೆಗಳಲ್ಲಿ ದೊರೆತಿರುವ ವಿಮರ್ಶನ ಪ್ರತಿಕ್ರಿಯೆ ನೋಡಿದರೆ ಜಗತ್ತು ವಿಚಾರದೃಷ್ಟಿಯಲ್ಲಿ ಪ್ರಗತಿಶೀಲವಾದರೂ ನಮ್ಮ ವಿಮರ್ಶಕರು 'ಅಪ್ಪ ಹಾಕಿದ ಆಲದ ಮರಕ್ಕೆ' ನೇಣು ಬಿಗಿದುಕೊಳ್ಳು ತ್ತಿರುವುದು ಕಂಡುಬರುತ್ತದೆ. 'ಪುಸ್ತಕ ಪ್ರಪಂಚ'—'ಪ್ರಜಾವಾಣಿ'— 'ಚಿತ್ರಗುಪ್ತ'—'ಕರ್ಮವೀರ' ಪತ್ರಿಕೆಗಳಲ್ಲಿ ಬಂದಿರುವ ವಿಮರ್ಶೆ—ಗ್ರಂಥದ ವಿಮರ್ಶೆಯಲ್ಲ, ಗ್ರಂಥಕರ್ತನ ವಿಮರ್ಶೆ—ನಮ್ಮ ವಿಚಾರ ದಾರಿದ್ರ್ಯದ ಕುರುಹಾಗಿದೆ. ಅನುಭವ, ಪಾಂಡಿತ್ಯವಿಲ್ಲದೆ, ಸಯುಕ್ತವಾದ ಮಾಡುವ ಸಾಮರ್ಥ್ಯವಿಲ್ಲದೆ, ಸಾಹಿತ್ಯದ ಓನಾಮದ ಪರಿಚಯ ಕೂಡ ಇಲ್ಲದೆ ವಿಚಾರ ಶೀಲ, ಕ್ರಿಯಾನಿಷ್ಠ ಲೇಖಕರ ಕೃತಿಗಳನ್ನು ಮನಸ್ಸು ಬಂದಂತೆ ತೆಗಳುವ ಪುಂಡತನ ಕೊನೆಗಂಡಲ್ಲದೆ ಕನ್ನಡ ಸಾಹಿತ್ಯ ಪ್ರಗತಿಪಥದಲ್ಲಿ ಸಾಗುವುದು ಸಾಧ್ಯವಿಲ್ಲ. ಕೈಯಲ್ಲಿ ಪತ್ರಿಕೆಯಿದೆಯೆಂದು, ಬರೆದುದು ಅಚ್ಚಾಗುತ್ತದೆ ಯೆಂದು 'ಅಕ್ಷರ ವ್ಯಭಿಚಾರ' ಮಾಡುವ ವಿಮರ್ಶಕರ ಆಸುರೀವೃತ್ತಿ ಅಡಗ ಬೇಕು. 'ನಗ್ನಸತ್ಯ'ದ ಬಗ್ಗೆ ಬಂದಿರುವ ವಿಮರ್ಶೆಗಳನ್ನು ಕೂಲಂಕಷ

ವಾಗಿ ಈ ಕಾದಂಬರಿಯ ಮುನ್ನುಡಿಯಲ್ಲಿ ಚರ್ಚಿಸಬೇಕೆಂದಿದ್ದೆ. 'ಶನಿ ಸಂತಾನ' ದ ಮೇಲೆ ಬರುವ ವಿಮರ್ಶೆಗಳ ವೈಖರಿಯನ್ನು ನೋಡಿಕೊಂಡು, ಎಲ್ಲವನ್ನೂ ಕ್ರೋಢೀಕರಿಸಿ 'ಸಂಜೆಗತ್ತಲು' ಕಾದಂಬರಿಯ ಹಿನ್ನುಡಿಯಲ್ಲಿ ಕೂಲಂಕಷವಾಗಿ ಚರ್ಚಿಸಬೇಕೆಂದಿದ್ದೇನೆ.

'ಶನಿ ಸಂತಾನ' ಓದಿದವರು ಸರಸ್ವತಿಯ ಪಾತ್ರ ನಿರೂಪಣೆಯನ್ನು ಕಂಡು ಅಚ್ಚರಿಪಡದಿರುವುದಿಲ್ಲ. ಇಂಥ ವ್ಯಕ್ತಿಗಳು ಇರುತ್ತಾರೆಯೇ—ಒಂದು ವೇಳೆ ಇದ್ದರೂ ಅವರನ್ನು ಸಾಹಿತ್ಯದಲ್ಲಿ ಚಿತ್ರಿಸಬಹುದೇ ಎಂಬ ಪ್ರಶ್ನೆಗಳೇಳುತ್ತವೆ. ಓದುಗರಾಗಲಿ, ವಿಮರ್ಶಕರಾಗಲಿ ತಮ್ಮ ದೃಷ್ಟಿಪಥ, ಅನುಭವದ ಮಿತಿಗಳಲ್ಲಿ ಬರುವ ವಿಷಯಗಳಷ್ಟೇ ಪ್ರಕೃತಿಯಲ್ಲಿರುವುದು ಎಂದು ಭಾವಿಸಬಾರದು. ಸಾಮಾನ್ಯರ ಕಣ್ಣುಗಳಿಗೆ ಕಾಣದ ಅನೇಕ ವಿಷಯಗಳನ್ನು ಸೂಕ್ಷ್ಮದರ್ಶಿಯಾದ ಕಲಾವಿದ ಕಾಣುತ್ತಾನೆಂಬ ಅಪರಿಚಿತ ಸತ್ಯ ಜೀವಂತವಾಗಿದೆ. ಸಾಹಿತ್ಯದಲ್ಲಿ 'ಇದು ಬೇಡ—ಅದು ಬೇಕು' ಎನ್ನುವ ಪ್ರಶ್ನೆಯೇ ಬರುವುದಿಲ್ಲ. ವಿಶ್ವಕೋಶದಲ್ಲಿ ಅಕಾರದಿಂದ ಕ್ಷಕಾರದವರೆಗೆ ಬರುವ ಎಲ್ಲ ವಿಷಯಗಳನ್ನೂ ಧಾರಾಳವಾಗಿ ಬಳಸಿಕೊಳ್ಳುವ ಸ್ವಾತಂತ್ರ್ಯ ಕ್ರಿಯಾಶಾಲಿಯಾದ ಲೇಖಕನ ಜನ್ಮಸಿದ್ಧ ಹಕ್ಕು.

ಋಜುಮಾರ್ಗವನ್ನು ಬಿಟ್ಟು, ತನ್ನ ಕೀಳಾಸೆಗಳ ಸಂತೃಪ್ತಿಗೆ ಹೊರಟ ಹೆಣ್ಣಿನ ಚಿತ್ರವನ್ನೂ ಓದುಗರು ಸರಸ್ವತಿಯ ಪಾತ್ರದಲ್ಲಿ ಕಾಣಬಹುದು. ಇಂಥಹದೇ ಆದ ನಿರ್ವಿಣ್ಣಸಮಯದಲ್ಲಿ ತನ್ನ ಶೀಲ ಕಾಯ್ದುಕೊಂಡು, ಧರ್ಮದ 'ಮುಳ್ಳುಹಾದಿ'ಯಲ್ಲಿ ನಡೆದ ಹೆಣ್ಣಿನ ಚಿತ್ರವನ್ನು ನನ್ನ 'ತಾಯಿಯ ಕರುಳು' ಕಾದಂಬರಿಯ ಸಾವಿತ್ರಿ ಪಾತ್ರದಲ್ಲಿ ಓದುಗರು ಕಾಣಬಹುದು. ಈ ಲೇಖಕ ಜೀವನದ ಒಳ್ಳಿತು ಕೆಟ್ಟಿತು, ಕತ್ತಲೆ ಬೆಳಕು, ತ್ಯಾಗಭೋಗಗಳ ಸಮಗ್ರ ಚಿತ್ರ ಕೊಡುತ್ತಿರುವುದು ಓದುಗರ ಗಮನಕ್ಕೆ ಬರಬೇಕಾದುದು ಅಗತ್ಯ.

"ಅನ್ನಪೂರ್ಣ"
ವಿಶ್ವೇಶ್ವರಪುರಂ, ಬೆಂಗಳೂರು—೨ ಅ. ನ. ಕೃ
೧೫—೯—೧೯೫೧.

ಶನಿ ಸಂತಾನ

"We must rescue the individual from the state of intellectual, moral, and physiological atrophy brought about by modern conditions of life: re-establish him in his unity, in the harmony of his personality: induce him to utilize all the heriditary qualities of his tissues and his consciousness: break the shell in which education and society have succeeded in enclosing him: reject all systems. We have to intervene in the fundamental organic and mental processes. These processes are man himself. But man has no independent existence. He is bound to his environment. In order to remake him, we have to transform his world."

Dr. Alexis Carrell in "MAN, THE UNKNOWN"

ಶನಿ ಸಂತಾನ

೧

ಮುತ್ತಮ್ಮ ಸಹಸ್ರನಾಮ ಹೇಳಿಕೊಳ್ಳುವಂತೆ ಉದ್ದಕ್ಕೂ ಬಯ್ದು ಕೊಂಡೇ ಎಮ್ಮೆ ತೊಳೆಯುತ್ತಿದ್ದಳು. ರಾಡಿಯಲ್ಲಿ ಸುಖವಾಗಿ ಸ್ನಾನ ಮಾಡಿ ಬಂದಿದ್ದ ಎಮ್ಮೆಗೆ ಮುತ್ತಮ್ಮನ ಅಭಿಷೇಕ ಅಪ್ರಿಯವಾಗಿತ್ತು. ಅದು ನಿಂತಲ್ಲಿ ನಿಲ್ಲದೆ ಗೂಟದ ಸುತ್ತ ತಿರುಗುತ್ತಿತ್ತು. ಆಗಾಗ್ಗೆ ಗೂಟದಿಂದ ಕಿತ್ತುಕೊಂಡು ಓಡಿಹೋಗಲೆತ್ನಿಸುತ್ತಿತ್ತು. ಮುತ್ತಮ್ಮ ಅದರ ಜತೆಗೂ ತಿರುಗುತ್ತ ಎಮ್ಮೆಯ ಮೇಲೆ ನೀರು ಹೊಯ್ದು ತಿಕ್ಕುತ್ತಿದ್ದಳು. ಅಸಮಾಧಾನಗೊಂಡ ಎಮ್ಮೆ ನೆನೆದ ತನ್ನ ಬಾಲ ಬೀಸುತ್ತಿತ್ತು. ಬಾಲದ ಕೂದಲುಗೊಂಡೆಯ ಮೇಲೆ ಕುಳಿತಿದ್ದ ನೀರಿನ ಹನಿಗಳು ಮುತ್ತಮ್ಮನ ಮುಖದ ಮೇಲೆ ಸಿಂಪಡಿಸುತ್ತಿದ್ದವು. ಅದಕ್ಕೆ ಮತ್ತಷ್ಟು ರೇಗಿ ಮುತ್ತಮ್ಮ ಧ್ವನಿಯೆತ್ತರಿಸಿ ಎಮ್ಮೆಯನ್ನು ಬಯ್ಯುತ್ತಿದ್ದಳು. ಎಮ್ಮೆ ಸಿಂಪಡಿಸಿದ ನೀರು ಪಕ್ಕದಲ್ಲಿದ್ದ ನಾಯಿಯ ಮೇಲೆ ಬಿದ್ದು ಅದನ್ನೂ ಕೆರಳಿಸುತ್ತಿತ್ತು. ನಾಯಿ ರೇಗಿ ಬೊಗಳುತ್ತಾ ಹೋಗಿ ಎಮ್ಮೆಯ ಮೇಲೆ ಬೀಳಲೆತ್ನಿಸುತ್ತಿತ್ತು. ಎಮ್ಮೆ ಮುಖವನ್ನಲ್ಲಾಡಿಸಿ ಕೊಂಬುಗಳನ್ನು ನಾಯಿಗೆ ತೋರುತ್ತಿತ್ತು. ಕೊಂಬಿಗೆ ಬೆದರಿದ ನಾಯಿ ಸ್ವಲ್ಪ ದೂರ ಓಡಿ ಹೋಗಿ ಅಲ್ಲಿ ನಿಂತು ಗಟ್ಟಿಯಾಗಿ ಬೊಗಳುತ್ತಿತ್ತು. ಮುತ್ತಮ್ಮ, ನಾಯಿ ಇಬ್ಬರೂ ಪಣ ಕಟ್ಟಿಕೊಂಡು ಎಮ್ಮೆಗೆ ತಾಗಿದ್ದರು.

ಮನೆಯೊಳಗೆ ಭಾಗ್ಯಮ್ಮ ಲೊಟಗುಟ್ಟಿಕೊಂಡು ಹಸೀ ಸೌದೆ ಉರಿಸುತ್ತ ಅಡಿಗೆ ಮಾಡಲು ಹೊರಟಿದ್ದಳು. ಅಡಿಗೆ ಮಾಡುವ ಅಭ್ಯಾಸ ಭಾಗ್ಯಮ್ಮನಿಗೆ ತಪ್ಪಿಹೋಗಿ ಬಹಳ ದಿವಸಗಳಾಗಿದ್ದವು. ಕಮಲ ಬದುಕಿದ್ದಾಗ ತನ್ನ ಮನೆ ಅದ್ದೂರಿಯಾಗಿ ನಡೆಯುತ್ತಿದ್ದ ದಿನಗಳನ್ನು ಜ್ಞಾಪಿಸಿಕೊಳ್ಳುವಳು. ಹೊಗೆಯ ಹಿಂಸೆಯ ಜತೆಗೆ ಮನಸ್ಸಿನ ಉಮ್ಮಳವೂ ಸೇರಿ ಅವಳ ಕಣ್ಣುಗಳಿಂದ ನೀರು

ಬರುತ್ತಿತ್ತು. ಹೊಟೇಲ್ ಊಟ, ಹೊಟೇಲ್ ತಿಂಡಿಯಲ್ಲಿ ಕಾಲಹಾಕುತ್ತಿದ್ದ ತನಗೆ ಮುತ್ತಮ್ಮನ ಮನೆಯ 'ಪಿಂಡ ಬೇಯಿಸುವ' ಪಾಡು ಬಂದಿತಲ್ಲಾ ಎಂದು ದುಃಖಿಸುತ್ತಿದ್ದಳು. ಮುತ್ತಮ್ಮ ಹೆಗಲುಮುರಿಯ ದುಡಿಯುತ್ತಿದ್ದಾಗ ತಾನು ಕೈಕಟ್ಟಿಕೊಂಡು ಸುಮ್ಮನೆ ಕೂಡುವುದು ಸಾಧ್ಯವಾಗುತ್ತಿರಲಿಲ್ಲ. ಇಬ್ಬರೂ ಕೆಲಸ ಹಂಚಿಕೊಂಡಿದ್ದರು. ಎಮ್ಮೆ ನೋಡಿಕೊಂಡು, ಹಾಲು ಕರೆದು ಮಾರಿ ಕೊಂಡು ಬರುವುದು ಮುತ್ತಮ್ಮನ ಕಾರ್ಯಭಾಗವಾಗಿತ್ತು; ಮನೆಯಲ್ಲಿ ಅಡಿಗೆ ಮಾಡಿ ಮನೆಗೆಲಸ ನೋಡಿಕೊಳ್ಳುವುದು ಭಾಗ್ಯಮ್ಮನ ಪಾಲಿಗೆ ಬಂದ ಕೆಲಸವಾಗಿತ್ತು.

ಈ ಇಬ್ಬರ ಸ್ನೇಹ ನಿರ್ವಿಘ್ನವಾಗಿ ನಡೆದುಕೊಂಡು ಹೋಗುವುದಕ್ಕೆ ಯಾವ ಅಡ್ಡಿ ಅತಂಕವೂ ಇರಲಿಲ್ಲ. ಭಾಗ್ಯಮ್ಮನನ್ನು ಮುತ್ತಮ್ಮ ತಾನೇ ಕರೆದಿದ್ದುದರಿಂದ ಅವಳ ವಿಷಯದಲ್ಲಿ ವಿಶ್ವಾಸದಿಂದ ವರ್ತಿಸುವುದು ಅನಿವಾರ್ಯವಾಗಿತ್ತು. ಆದರೆ ಮುತ್ತಮ್ಮನ ಮನಸ್ಸಿನಲ್ಲಿ ಅಪನಂಬಿಕೆ, ಅಸಂತೋಷ ಹೊಗೆಯಾಡುತ್ತಿದ್ದವು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅದನ್ನವಳು ವ್ಯಕ್ತಗೊಳಿಸುತ್ತಿದ್ದಳು. ಅನ್ನದಲ್ಲಿ ಕಲ್ಲು ಸಿಕ್ಕಿದರೆ ಭಾಗ್ಯಮ್ಮನನ್ನು ಆಕ್ಷೇಪಿಸುವುದರ ಬದಲು ರೇಷನ್ ಅಂಗಡಿಯವನನ್ನು ಶಪಿಸುತ್ತಿದ್ದಳು; ಭಾಗ್ಯಮ್ಮ ಹೊರಗೆ ಹೋಗಿ ತಡಮಾಡಿಕೊಂಡು ಬಂದರೆ ಪಕ್ಕದಲ್ಲಿ ತೆಪ್ಪಗೆ ಮಲಗಿದ್ದ ನಾಯಿಯನ್ನು ಹೊಡೆದು ತನ್ನ ಕೋಪ ತೀರಿಸಿಕೊಳ್ಳುತ್ತಿದ್ದಳು.

ಮುತ್ತಮ್ಮನ ಮನಸ್ಸಿನಲ್ಲಾಗುತ್ತಿದ್ದ ವ್ಯಾಪಾರವನ್ನು ಭಾಗ್ಯಮ್ಮ ಚೆನ್ನಾಗಿ ಅರ್ಥಮಾಡಿಕೊಂಡಿದ್ದಳು. ಅದನ್ನು ಬಿಡಿಸಿ ಕೇಳಿ ಮಾತಿಗೆ ಸಿಕ್ಕು ಹಾಕಿಕೊಳ್ಳುವುದಕ್ಕೆ ಅವಳು ಇಷ್ಟಪಡಲಿಲ್ಲ. ಮುಂದೆ ನೆಲಸಲು ಸ್ಥಳ ಭದ್ರ ಮಾಡಿಕೊಳ್ಳದೆ ಮುತ್ತಮ್ಮನ ವಿರೋಧ ಕಟ್ಟಿಕೊಂಡರೆ ತನ್ನ ಗತಿ ಅಧೋಗತಿ ಯಾಗುವುದೆಂದು ಅವಳು ಚೆನ್ನಾಗಿ ಬಲ್ಲಳು. ಮುತ್ತಮ್ಮ ಎಷ್ಟೇ ರೇಗಿ ಹಾರಾಡಿದರೂ ಭಾಗ್ಯಮ್ಮ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ತನ್ನ ಕೆಲಸದಲ್ಲಿ ಉದ್ಯುಕ್ತಳಾಗಿರುತ್ತಿದ್ದಳು.

ಇದ್ದ ಒಂದು ಎಮ್ಮೆಯ ಜೊತೆಗೆ ಇನ್ನೊಂದು ಎಮ್ಮೆ ಕಟ್ಟಿಕೊಂಡರೆ

ತನ್ನ ಜೀವನ ಸುಖವಾಗಿ ಸಾಗುವುದೆಂದು ಮುತ್ತಮ್ಮ ಭಾವಿಸಿ, ಭಾಗ್ಯಮ್ಮನಿಂದ ಸಹಾಯ ಸಿಕ್ಕುವುದೆಂದು ಲೆಕ್ಕ ಹಾಕಿಕೊಂಡೇ ಅವಳನ್ನು ಸ್ವಾಗತಿಸಿದ್ದಳು. ನಾಲ್ಕಾರುಸಲ ಪರ್ಯಾಯವಾಗಿ ಈ ಮಾತನ್ನು ಭಾಗ್ಯಮ್ಮನಿಗೆ ಸೂಚಿಸಿಯೂ ಇದ್ದಳು. ಆದರೆ ಭಾಗ್ಯಮ್ಮ 'ಕಮಕ್ ಕಿಮಕ್' ಎಂದಿರಲಿಲ್ಲ. ತನ್ನ ಮನೆ ಸೇರಿಕೊಂಡು, ತನ್ನ ಕೂಳು ಧ್ವಂಸ ಮಾಡಿಕೊಂಡು, ಭಾಗ್ಯಮ್ಮ ಪುಟ್ಟ ಗಂಟು ಮಾಡಿಕೊಳ್ಳುತ್ತಿದ್ದಾಳೆ ಎನ್ನುವ ಅಭಿಪ್ರಾಯ ಮುತ್ತಮ್ಮನ ಮನಸ್ಸಿನಲ್ಲಿ ಬೇರೂರಿತು.

ಭಾಗ್ಯಮ್ಮನಲ್ಲಿ ಹಣವಿದೆಯೆಂದು ಭಾವಿಸುವುದಕ್ಕೆ ಮುತ್ತಮ್ಮನಿಗೆ ಕಾರಣವೂ ಇತ್ತು.

ಶ್ರೀನಾಥನ ಇಚ್ಛೆಯಂತೆ ಗೆಳೆಯ ಲಾಯರ್ ಶರ್ಮ ಅವನ 'ಜೀವನದ ಕಣ್ಣು' ಕಾದಂಬರಿಯನ್ನು ಪ್ರಕಾಶಕರು ಸಂಜೀವರಾಯರಿಗೆ ಸಾವಿರ ರೂಪಾಯಿಗಳಿಗೆ ಮಾರಿದ್ದ. ಆ ಹಣವನ್ನು ಭಾಗ್ಯಮ್ಮನ ಕೈಗೆ ಹಾಕುವ ಮುನ್ನ ಡಾ|| ನೀಲಕಂಠರಾಯನನ್ನು ಒಂದು ಮಾತು ಕೇಳೋಣವೆಂದು ಅವನ ಮನೆಗೆ ಹೋದ.

"ಹಣ ಕೈಯಲ್ಲಿದೆ ಡಾಕ್ಟರ್. ಏನು ಮಾಡಲಿ?"

"ಏನು ಮಾಡಬೇಕೆಂದು ಶ್ರೀನಾಥ ಬರೆದಿಟ್ಟು ಹೋಗಿದ್ದಾನಲ್ಲಪ್ಪ"

"ಶ್ರೀನಾಥನನ್ನು ಕೊಂದು ಆ ತಾಟಕಿಯ ಕೈಯಲ್ಲಿ ಹಣ ಹಾಕುವುದು ಯಾವ ನ್ಯಾಯ?"

"ಶ್ರೀನಾಥನ ಮೃತ್ಯುಪತ್ರ ಗೌರವಿಸಬೇಕಾದುದು ನಮ್ಮ ಕರ್ತವ್ಯ. ಅವನು ಮಾಡಿದ್ದು ನ್ಯಾಯವೋ ಅನ್ಯಾಯವೋ ಎನ್ನುವ ಚರ್ಚೆ ನಾವೇಕೆ ಮಾಡಬೇಕು."

"ಪ್ರಾಣಿ ದುಡಿದು ದುಡಿದು ಕಂಡವರ ಬಾಯಿಗೆ ಹಾಕಿ ಹೋದ. ಒಪ್ಪತ್ತು ಹೊಟ್ಟೆಯ ತುಂಬ ಊಟ ಮಾಡಲಿಲ್ಲ. ಮೈ ತುಂಬ ಬಟ್ಟೆ ಹಾಕಲಿಲ್ಲ. ಗಾಳಿಗೊಡ್ಡಿದ ದೀಪದಂತಾಯಿತು ಅವನ ಬಾಳು."

"ಅವನ ಕೃತಿಗಳ ಬೆಳಕನ್ನು ಯಾವ ಗಾಳಿಯೂ ಆರಿಸಲಾರದು ಶರ್ಮ.

ನಾನು ಹೆಚ್ಚು ಓದಿದವನಲ್ಲ—ಆದರೆ ನನ್ನ ತಿಳುವಳಿಕೆಯಿರುವ ಮಟ್ಟಿಗೆ ಕನ್ನಡ ಸಾಹಿತ್ಯದ ಮೈಲಿಗಲ್ಲು ನಮ್ಮ ಶ್ರೀನಾಥ. ಹೆದ್ದಾರಿ ನಿರ್ಮಿಸಿಕೊಟ್ಟಿದ್ದಾನೆ—ಉಳಿದವರು ಅವನ ದಾರಿ ತುಳಿಯದೆ ಗತ್ಯಂತರವೇ ಇಲ್ಲ."

"ನಿನ್ನ ಮಾತು ಅಕ್ಷರಶಃ ಸತ್ಯ. ಅವನು ಪದೇಪದೇ ಹೇಳುತ್ತಿದ್ದ ಒಂದು ಮಾತು ನನಗೆ ನೆನಪಿಗೆ ಬರುತ್ತದೆ. ಈ ಕಮಲನ ಸಹವಾಸ ಅವನಿಗೆ ಗಂಟು ಬೀಳದಿದ್ದರೆ ಅವನು ತನ್ನ ಆಸೆಯನ್ನು ಸಾಧಿಸಿಯೂ ಸಾಧಿಸುತ್ತಿದ್ದ."

"ಅವನ ಆಸೆಯೇನು ಹೇಳು? ಅವನು ಸಾಧಿಸಬೇಕೆಂದಿದ್ದುದನ್ನು ನಾವು ಸಾಧಿಸೋಣ."

"ನೀನು ಬಲ್ಲಂತೆ ಅವನು ತನ್ನ ವಿಚಾರ ಮಾತನಾಡುತ್ತಿದ್ದುದೇ ವಿರಳ. ಆದರೆ ಒಂದೊಂದು ದಿನ ಅವನ ಮಾತು ಆತ್ಮಕಥೆಯ ಕಡೆ ಹೊರಳುತ್ತಿತ್ತು,—'ಶರ್ಮಾ ಸಾಹಿತ್ಯದ ಅತ್ಯುಚ್ಚ ಶಿಖರ ಮುಟ್ಟಬೇಕೆಂದು ನಾನು ಬಯಸುತ್ತಿದ್ದೇನೆ. ಆ ಬಯಕೆ ತಪ್ಪಲ್ಲವೆಂದು ಕಾಣುತ್ತದೆ."—'ಅದರಲ್ಲಿ ತಪ್ಪೇನು ಬಂತು ಶ್ರೀನಾಥ. ನಿನ್ನ ಬಯಕೆಯನ್ನು ಸಾಧಿಸುವ ಶಕ್ತಿಯನ್ನೂ ಭಗವಂತ ನಿನಗೆ ಕೊಟ್ಟಿದ್ದಾನೆ.'—'ಅಷ್ಟೇ ಅಲ್ಲ ಶರ್ಮ, ಕೀರ್ತಿಯ ಜತೆಗೆ ಅಪಾರ ಧನವನ್ನು ಗಳಿಸಬೇಕೆಂದು ನಾನು ಆಸೆಪಡುತ್ತಿದ್ದೇನೆ.'—'ಅದೇ ಸ್ವಲ್ಪ ಸಂದೇಹ! ಸರಸ್ವತಿ ಲಕ್ಷ್ಮಿ ಒಂದೆಡೆಯಲ್ಲಿ ಕೂಡುವುದು ವಿರಳ ಶ್ರೀನಾಥ. ನೀನು ಹಣ ಗಳಿಸಲು ಮನಸ್ಸು ಮಾಡಿದರೆ ನಿನ್ನ ಸಾಹಿತ್ಯತಪಸ್ಸಿಗೆ ಭಂಗ ಬರುತ್ತದೆ'—'ಇಲ್ಲ ಶರ್ಮ ಭಂಗ ಬರುವುದಿಲ್ಲ. ನಾನು ಬ್ಲ್ಯಾಕ್‌ಮಾರ್ಕೆಟ್ ಮಾಡಿ ಸಂಪಾದಿಸಲಿಚ್ಛಿಸುವುದಿಲ್ಲ. ದಿನಕ್ಕೆ ಹತ್ತು ಗಂಟೆ ದುಡಿಯುತ್ತಿದ್ದೇನೆ. ಹದಿನಾರು ಗಂಟೆ ದುಡಿಯುತ್ತೇನೆ. ವಾರಕ್ಕೊಂದು ಗ್ರಂಥ ಮುಗಿಸುತ್ತೇನೆ. ನನ್ನ ದಾರಿಯಲ್ಲೇ ನಡೆದು ಹಣ ಗಳಿಸಬೇಕೆಂದು ಇಚ್ಛೆಪಡುತ್ತೇನೆ.'—'ನಿನಗೆ ದುಡ್ಡಿನ ದಾಹವೇಕೆ ಹುಟ್ಟಿದೆ?' '—' ನೋಡು ಶರ್ಮ, ಲೇಖನ ವೃತ್ತಿಯ ಕಷ್ಟ ಸುಖ ಯಾರಿಗೂ ಅರ್ಥವಾಗುವುದಿಲ್ಲ. ನಾವು ಬರೆದ ಒಂದು ಕೃತಿ ಜನಗಳ ಮನಸ್ಸಿಗೆ ಬರದಿದ್ದರೆ ನಮ್ಮನ್ನು ಹೀಗಳೆಯುತ್ತಾರೆ. ಒಂದು

ಕೃತಿ ಅವರಿಗೆ ಪ್ರಿಯವಾಯಿತೆಂದರೆ ಬಾಯ್ತುಂಬ ಹೊಗಳುತ್ತಾರೆ. ಹೊಗಳು ವಾಗ ತೆಗಳುವಾಗ ಲೇಖಕನ ಗತಿ ಏನಾಗಿರಬೇಕು. ಅವನಿಗೆ ಊಟಕ್ಕೆ ಮಾರ್ಗವಿದೆಯೇ, ವಾಸಕ್ಕೆ ಮನೆಯಿದೆಯೇ, ಉಡಲು ಬಟ್ಟೆಯಿದೆಯೇ, ಕಾಯಿಲೆ ಬಿದ್ದರೆ ಔಷಧ ಕೊಳ್ಳಲು ಗತಿಯಿದೆಯೇ ಎಂದು ಯಾರೂ ಯೋಚಿಸು ವುದಿಲ್ಲ. ಈ ವಾತಾವರಣದಲ್ಲಿ ಸಾಹಿತ್ಯ ಹೇಗೆ ಬೆಳೆಯಲು ಸಾಧ್ಯ? ಉದಯೋನ್ಮುಖ ಲೇಖಕರಿಗೆ ಸ್ವಲ್ಪ ನೆರವು ಕೊಡದಿದ್ದರೆ ಅವರು ಮುಂದೆ ಬರುವುದು ಹೇಗೆ? ಅಭ್ಯಾಸಕ್ಕೆ ಬೇಕಾದ ನಾಲ್ಕು ಪುಸ್ತಕ ಕೊಳ್ಳುವುದಕ್ಕೆ ಅವರಿಗೆ ಗತಿಯಿರದಿದ್ದರೆ ಅವರ ಮಾನಸಿಕ ಪ್ರಗತಿಯಾಗುವುದು ಹೇಗೆ?'— 'ನಿಜ. ಸಾಹಿತ್ಯ, ಕಲೆಗಳನ್ನು ನೆಚ್ಚಿದವರ ಪಾಡೆಲ್ಲಾ ಇಷ್ಟೆ.'—'ಅವರ ಪಾಡನ್ನು ಸುದಾರಿಸುವ ಅಗತ್ಯವಿಲ್ಲವೇ?'—' ಇಲ್ಲವೆಂದವರು ಯಾರು? ಸರ್ಕಾರ ಮತ್ತು ದೊಡ್ಡ ದೊಡ್ಡ ಸಾರ್ವಜನಿಕ ಸಂಸ್ಥೆಗಳು ಕೈಗೊಳ್ಳಬೇಕಾದ ಕೆಲಸ ಇದು. ನೀನೂ ನಾನೂ ಏನು ಮಾಡಲು ಸಾಧ್ಯ?' 'ಸರ್ಕಾರ ಮಾಡಲು ಸಾಧ್ಯವಾಗದಿರುವುದನ್ನು ನಾವು ಮಾಡಲು ಸಾಧ್ಯ. ಸಾಹಿತ್ಯ ಕಲೆಗಳು ಯಾವಾಗ ಒಂದು ಸರ್ಕಾರದ ವಶವರ್ತಿಗಳಾಗುತ್ತವೆಯೋ ಆಗ ಅವು ಅಸ್ವತಂತ್ರವಾಗುತ್ತವೆ. ಸರ್ಕಾರದ ಆಶ್ರಯದಲ್ಲಿ ನಿರ್ಮಾಣವಾಗುವ ಸಾಹಿತ್ಯಕ್ಕೂ ಫೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ಟಿಗೂ (Fort St. George Gazettee) ಏನೂ ವ್ಯತ್ಯಾಸವಿಲ್ಲ. ದೃಷ್ಟಾಂತಕ್ಕೆ ಆಧುನಿಕ ಸೋವಿಯಟ್ ರಷ್ಯಾ ನೋಡು. ರಷ್ಯಾದಲ್ಲಿ ಸಾಹಿತಿಗಳು ರಾಜವೈಭವ ಅನುಭವಿಸುತ್ತಿದ್ದಾರೆ. ಅವರನ್ನು ಸೋವಿಯಟ್ ಸರ್ಕಾರ ಗಿಣಿ ಸಾಕಿದಂತೆ ಸಾಕುತ್ತಿದೆ. ಅವರೂ ಗಿಣಿಗಳಂತೆಯೇ ಮಾತನಾಡುತ್ತಿದ್ದಾರೆ. ಟಿಕನಾಫ್, ಇಲ್ಯ ಎಹ್‌ರನ್‌ಬರ್ಗ್, ಫೆಡಿನ್, ಗಾಂಕಾರ್, ಷೋಲಾಕಾಫ್ ಪ್ರತಿಭಾಶಾಲಿಗಳೆಂಬುದರಲ್ಲಿ ಭಿನ್ನಾಭಿ ಪ್ರಾಯವಿಲ್ಲ. ಆದರೆ ಅವರ ಕೃತಿಗಳೆಲ್ಲಾ ಸೋವಿಯಟ್ ಸರ್ಕಾರದ ಪುರವಣಿಗಳಾಗಿವೆ. ಸರ್ಕಾರದ ಯೋಜನೆಗಳ ಪ್ರಚಾರ ಮಾಡುವುದೇ ಅವುಗಳ ಗುರಿ. ಲೇಖಕ ತನ್ನ ಪ್ರತಿಭೆಯನ್ನು ಒಂದು ಸಂಸ್ಥೆ, ವ್ಯಕ್ತಿಯ ಅಭಿಪ್ರಾಯಗಳಿಗೆ ಅಧೀನ ಮಾಡಿದರೆ ಆವನ ಸಾಹಿತ್ಯ ನಿಸ್ತೇಜವಾಗುತ್ತದೆ.

ಇಂಥ ಸಾಹಿತ್ಯ ನಮ್ಮಲ್ಲಿ ಬೆಳೆಯುವುದಕ್ಕಿಂತ ಬೆಳೆಯದಿರುವುದೇ ಲೇಸು.'—'ಸರ್ಕಾರ ಸಾಧಿಸಲಾಗದುದನ್ನು ವೈಯಕ್ತಿಕವಾಗಿ ನೀನು ಹೇಗೆ ಸಾಧಿಸಬಲ್ಲೆ.'—'ಸಾಧಿಸಬಲ್ಲೆ. ಲೇಖಕರಾಗಬೇಕು, ಸಾಹಿತಿಗಳಾಗಬೇಕು ಎಂದು ಬಹಳ ಜನ ಬಯಸುತ್ತಾರೆ. ಆದರೆ ಲೇಖನ ವೃತ್ತಿಯ ಜಗನ್ನಾಥ ಚಕ್ರದ ಕೆಳಗೆ ಸಿಕ್ಕಿ ಉಳಿಯುವವರು ವಿರಳ. ಪ್ರತಿಭೆ, ಸಾಧನೆ, ನಿಷ್ಠೆ ಇದ್ದವರು ಉಳಿದುಕೊಳ್ಳುತ್ತಾರೆ. ಇಂಥವರು ಸಾವಿರಕ್ಕೆ—ಹತ್ತು ಸಾವಿರಕ್ಕೆ ಒಬ್ಬರು. ನಾವು ಹೆಚ್ಚು ಜನರನ್ನು ಉಳಿಸಲು ಸಾಧ್ಯ. ಸಮಯೋಚಿತವಾದ ಒಂದು ಒಳ್ಳೆಯ ಮಾತು, ಒಂದು ತುತ್ತು ಅನ್ನ, ಅಭ್ಯಾಸಕ್ಕೆ ನಾಲ್ಕು ಪುಸ್ತಕ, ರುಕ್ಮಿಣಿದೇವಿಯ ನೃತ್ಯ ನೋಡಲು ಒಂದು ಟಿಕೆಟ್ಟಿಗೆ ಹಣ ಅವರ ಕೈಗೆ ಹಾಕಿದರೆ ಅವರ ಬಾಳಿಗೆ ಸ್ವಲ್ಪ ನೆಮ್ಮದಿ ಬಂದು ಅವರನ್ನು ಹೆಚ್ಚು ಕೆಲಸದ ಕಡೆ ಪ್ರೇರೇಪಿಸಬಹುದು. ನಾನು ಸಂಪಾದಿಸುವುದನ್ನು ಆದಕ್ಕೆ ಮೀಸಲು ಮಾಡಬೇಕೆಂದಿದ್ದೇನೆ. ನೀನು, ಡಾಕ್ಟರು, ಸೋದರಿ ಸುಶೀಲಮ್ಮ ನೀವು ಅದರ ಟ್ರಸ್ಟಿಗಳಾಗಿರಬೇಕು. ನಾನು ಸಂಪಾದಿಸಿ, ಉಳಿಸುವುದು ಅಲ್ಪ ಮೊತ್ತವಾಗಿರಬಹುದು—ಆದರೆ ನಮ್ಮ ಪರಿಸ್ಥಿತಿಯಲ್ಲಿ ಎಷ್ಟೇ ಸ್ವಲ್ಪ ಸಹಾಯ ದೊರೆತರೂ ಅದು ಮಹತ್ತ್ವವಾದುದು."

ಶ್ರೀನಾಥನಿಗೂ ತನಗೂ ಆದ ಸಂಭಾಷಣೆಯನ್ನು ಶರ್ಮ ವಿವರಿಸುತ್ತಿದ್ದಾಗ ಡಾಕ್ಟರ್ ನೀಲಕಂಠರಾಯನ ಕರುಳು ಕುತ್ತಿಗೆಗೆ ಬಂದಿತು. ಮುಖ ಗಂಭೀರವಾಗಿ ಕಣ್ಣು ಕೆಂಪಗಾಯಿತು. ಯಾವದೋ ಅವ್ಯಕ್ತ ಭೀಮಶಕ್ತಿ ಅವನನ್ನು ಹಿಡಿದಲುಗಿಸಿದಂತಾಯಿತು. ಬಾಯಲ್ಲಿ ಮಾತು ತಡವರಿಸಿತು.

"ಅವನ ಕನಸು ಕಣಸಾಗಲಿಲ್ಲ."

"ಆದಕ್ಕೆ ನಾವು ಒಂದು ಸ್ವರೂಪ ಕೊಡಬಹುದು ಡಾಕ್ಟರ್. 'ಜೀವನದ ಕಣ್ಣು' ಒಂದು ಸಾವಿರ ರೂಪಾಯಿ ಕೊಟ್ಟಿದೆ. ಅದನ್ನು ಶ್ರೀನಾಥನ ಉದ್ದೇಶಕ್ಕೆ ಉಪಯೋಗಿಸಬಹುದು."

"ಈಗದು ಶ್ರೀನಾಥನ ಹಣವಲ್ಲ ಶರ್ಮ—ಭಾಗ್ಯಮ್ಮನ ಹಣ. ಅವಳ ಹಣವನ್ನು ನಾವು ದುರುಪಯೋಗಪಡಿಸಿದಂತಾಗುತ್ತದೆ."

"ಅದಕ್ಕೊಂದು ಮಾರ್ಗ ಹುಡುಕಿದ್ದೇನೆ. ಶ್ರೀನಾಥನ ಸಾವಿರ ರೂಪಾಯಿಯನ್ನು ಬ್ಯಾಂಕಿನಲ್ಲಿ ಹಾಕೋಣ. ಭಾಗ್ಯಮ್ಮ ಜೀವಂತಳಾಗಿರುವ ವರಿಗೆ ಅದರ ಬಡ್ಡಿಯನ್ನು ಅನುಭವಿಸಲಿ. ಅವಳು ಸತ್ತಮೇಲೆ ಆ ಹಣವನ್ನು ಶ್ರೀನಾಥನ ಉದ್ದೇಶಕ್ಕೆ ವಿನಿಯೋಗಿಸೋಣ."

ಶರ್ಮನ ಸಲಹೆಯನ್ನು ಡಾ|| ನೀಲಕಂಠರಾಯ ಅತ್ಯುತ್ಸಾಹದಿಂದ ಒಪ್ಪಿ ಕೊಳ್ಳದಿದ್ದರೂ ಶಾಂತಿಸಮ್ಮತಿಯನ್ನು ಸೂಚಿಸಿದ.

ಈ ಒಪ್ಪಂದ ಭಾಗ್ಯಮ್ಮನಿಗಾಗಲಿ ಮುತ್ತಮ್ಮನಿಗಾಗಲಿ ತಿಳಿಯಲಿಲ್ಲ. ಭಾಗ್ಯಮ್ಮ ತಿಂಗಳಿಗೊಮ್ಮೆ, ಶರ್ಮನ ಆಫೀಸಿಗೆ ಹೋಗಿ ನಾಲ್ಕು ರೂಪಾಯಿ ತರುತ್ತಿದ್ದಳು. ಮುತ್ತಮ್ಮನ ಮನಸ್ಸಿನಲ್ಲಿ ಅನುಮಾನ ಹುಟ್ಟುವುದಕ್ಕೆ ಇದೇ ಮೂಲಕಾರಣವಾಗಿತ್ತು.

ಮುತ್ತಮ್ಮನ ಮನೆಯ ಅಡಿಗೆಯ ಕೆಲಸ ಮುಗಿದ ಕೂಡಲೆ ಭಾಗ್ಯಮ್ಮ ಅವಳಿಗೂ ಬಡಿಸಿ ತಾನೂ ಬಡಿಸಿಕೊಂಡು ಊಟಮಾಡಿ ಮನೆಬಿಟ್ಟು ಹೊರಗೆ ಹೊರಟುಬಿಡುತ್ತಿದ್ದಳು. ಮುತ್ತಮ್ಮ ಊಟಕ್ಕೇಳದಿದ್ದ ದಿವಸ ತಾನು ಊಟ ಮಾಡಿ ಅವಳಿಗೆ ಅಡಿಗೆ ಮುಚ್ಚಿಟ್ಟು ಹೊರಟುಬಿಡುತ್ತಿದ್ದಳು.

ಭಾಗ್ಯಮ್ಮ ನಿರರ್ಥಕವಾಗಿ ಕಾಲಹರಣ ಮಾಡುತ್ತಿರಲಿಲ್ಲ. ಅವಳಿಗೆ ಬರುತ್ತಿದ್ದ ನೂರಾರು ಸಣ್ಣ ಪುಟ್ಟ ಕುಶಲಕಲೆಗಳ ಸದುಪಯೋಗ ಮಾಡಿ ಕೊಳ್ಳುತ್ತಿದ್ದಳು. ಶೀಷೆಗಳಲ್ಲಿ ಹೂವು, ಚೆಂಡು ಹಾಕುವುದು, ಕಾಗದದ ಹೂಗಳನ್ನು ಮಾಡುವುದು, ಕ್ರೋಷಾ ಕೆಲಸ, ತೂತಿನ ರಟ್ಟಿನ ಮೇಲೆ ಮೃಗ ಪಕ್ಷಿಗಳನ್ನು ಬಣ್ಣಬಣ್ಣದ ದಾರಗಳಿಂದ ರಚಿಸುವುದು, ಬಣ್ಣಬಣ್ಣದ ರಂಗವಲ್ಲಿ ಯಿಂದ ದೇವತಾ ಮೂರ್ತಿಗಳನ್ನು ಮಾಡುವುದು, ಗೊಂಬೆಗಳಿಗೆ ಅಲಂಕಾರ ಮಾಡುವುದು ಇತ್ಯಾದಿ ಇತ್ಯಾದಿ. ತನ್ನ ಗುರುತಿನವರು ಯಾರಾದರೊಬ್ಬರ ಮನೆಗೆ ಹೋಗಿ ಅವರಿಗೆ ಕುಶಲವಿದ್ಯೆಯ ಪಾಠ ಹೇಳಿ, ಎಂಟಾಣೆ ಒಂದು ರೂಪಾಯಿ ಸಂಪಾದಿಸುತ್ತಿದ್ದಳು. ಕೈಗೆ ಕಾಸು ಬಿದ್ದ ದಿನ ಮನೆಗೆ ಬಿರಿಯಾನಿ ಯನ್ನೋ, ಮೊಟ್ಟೆಗಳನ್ನೋ, ನಾಲ್ಕಾರು ಡ್ರಾಂ ಬ್ರಾಂದಿಯನ್ನೋ ಕೊಂಡು ತಂದು ಮುತ್ತಮ್ಮನಿಗೂ ಪಾಲು ಕೊಟ್ಟು ತಾನೂ ಸೇವಿಸುತ್ತಿದ್ದಳು. ಕೆಲಸ

ವಿಲ್ಲದ ದಿನ ಪಾಪಕ್ಕನ ಮನೆಯಲ್ಲಿ ಕುಳಿತು ಹರಟೆಕೊಚ್ಚಿ ಬರುತ್ತಿದ್ದಳು. ನಿತ್ಯೋತ್ಸಾಹದಿಂದ ಕೂಡಿದ ಅವಳ ಜೀವನ ನೋಡಿ ಮಗಳು ಹೋದ ದುಃಖವನ್ನು ಎಷ್ಟು ಬೇಗ ಮರೆತುಬಿಟ್ಟಳು ಎಂದು ಮುತ್ತಮ್ಮ ಆಶ್ಚರ್ಯ ಪಡುತ್ತಿದ್ದಳು.

೨

ಸಂಗೀತವಿದ್ವಾನ್ ಮೇಲುಕೋಟೆ ರಾಘವಾಚಾರ್ಯರ 'ವಾಣಿ ಸಂಗೀತ ವಿದ್ಯಾಲಯ'ದ ಹೆಸರನ್ನು ಬಸವನಗುಡಿ ವಿಸ್ತರಣದಲ್ಲಿ ಕೇಳರಿಯದಿದ್ದವರು ವಿರಳ; ಇಡಿಯ ಬೆಂಗಳೂರಿನಲ್ಲಿಯೇ ಕೇಳರಿಯದವರಿಲ್ಲವೆಂದರೂ ತಪ್ಪಾಗುವುದಿಲ್ಲ. ಆಚಾರ್ಯರು ಸಂಗೀತ ಕಛೇರಿಗಳನ್ನು ಮಾಡಿ 'ವಿದ್ವಾನ್' ಗಳಿಸಿಕೊಳ್ಳದಿದ್ದರೂ ಪಾಠ ಪ್ರವಚನಗಳಿಂದ ಅವರಿಗೆ ಆ ಪದವಿ ದೊರೆತಿತ್ತು. ನಾಟಕದವರು, ಕೀರ್ತನಕಾರರು 'ಮಾರ್ತಾಂಡ, ಶಾರ್ದೂಲ, ಕಂಠೀರವ, ಶಿರೋಮಣಿ'ಗಳಾಗುವುದಕ್ಕೆ ಹೇಗೆ ಲೈಸೆನ್ಸ್ ಬೇಕಿಲ್ಲವೋ ಹಾಗೆ ಸಂಗೀತಗಾರರು 'ವಿದ್ವಾನ'ರಾಗಲಿಕ್ಕೆ ಯಾವ ಅಡ್ಡಿ ಆತಂಕವೂ ಇರಲಿಲ್ಲ. ನಾಲ್ಕಾರು ದೊಡ್ಡ ಪಾಠ, ಸಣ್ಣ ಪಾಠಗಳ ಜತೆಗೆ ಆಚಾರ್ಯರು ಸಂಗೀತ ಶಾಲೆಯನ್ನೂ ನಡೆಸುತ್ತಿದ್ದರು. ಆಚಾರ್ಯರು ನಿರೀಕ್ಷಿಸಿದಷ್ಟು ವರಮಾನ ಸಂಗೀತದಿಂದ ಬರದಿದ್ದರೂ ಅವರು ಅದನ್ನು ಕೈಬಿಟ್ಟಿರಲಿಲ್ಲ. ಪಾಠಕ್ಕೆ ಹೋಗುತ್ತಿದ್ದ ಮನೆಯವರಿಗೆ ಸೀರೆ, ಒಡವೆ ಖರೀದಿಮಾಡಿಸಿ ಕೊಡುವುದು, ಸಂಗೀತವಾದ್ಯಗಳನ್ನು ತಂದುಕೊಡುವುದು ಮೊದಲಾದ ಉಪಕಸುಬಿನಲ್ಲಿ ಆಚಾರ್ಯರು ಅಲ್ಪ ಸ್ವಲ್ಪ ಗಳಿಸುತ್ತಿದ್ದರು.

ಆಚಾರ್ಯರ ಸಂಗೀತನೈಪುಣ್ಯವನ್ನು ಮೈಸೂರಿನ ಸಂಗೀತ ವಿದ್ವಾಂಸರು ಒಪ್ಪಿಕೊಳ್ಳದಿದ್ದರೂ ಅವನ ಬೃಹತ್ ಚೈತನ್ಯವನ್ನು ನಿರ್ವಿವಾದವಾಗಿ ಒಪ್ಪಿಕೊಂಡಿದ್ದರು. ಬೆಳಿಗ್ಗೆ ಆರುಗಂಟೆಗೆದ್ದು ಬೈಸಿಕಲ್ ಹತ್ತಿ ಆಚಾರ್ಯರು ಹೊರಟರೆ ಎಂಟುಗಂಟೆಯ ವೇಳೆಗೆ ಎರಡು ಮೂರು ಪಾಠ ಮುಗಿಸಿಕೊಂಡು, ಮೂರು ನಾಲ್ಕು ಸರ್ಕಾರಿ ಅಧಿಕಾರಿಗಳ ದರ್ಶನಲಾಭ ಪಡೆದು ಶಾಲೆಗೆ ಬರುತ್ತಿದ್ದರು. ಎಂಟರಿಂದ ಹತ್ತರವರೆಗೆ ಶಾಲೆಯಾಗುತ್ತಿತ್ತು. ಹತ್ತು ಗಂಟೆಗೆ ಪುನಃ ಹೊರಟರೆ ಒಂದು ಗಂಟೆ, ಎರಡು ಗಂಟೆಯವರೆಗೆ ಕೆಲವು ಪಾಠಗಳನ್ನು ಮುಗಿಸಿ, ತಮ್ಮ ವ್ಯವಹಾರ ನೋಡಿಕೊಂಡು ಬರುತ್ತಿದ್ದರು.

ನಾಲ್ಕು ಗಂಟೆಯವರೆಗೆ ಆಚಾರ್ಯರ ಸ್ನಾನ, ಊಟ, ವಿಶ್ರಾಂತಿ ಸಾಗುತ್ತಿತ್ತು. ನಾಲ್ಕರಿಂದ ಏಳರವರೆಗೆ ಶಾಲೆ ನಡೆಸಿ ಮತ್ತೆ ಒಂದೆರಡು ಗಂಟೆಗಳ ಕಾಲ ಪಾಠಗಳ ಮನೆಗಳ ಕಡೆ ಹೋಗಿ ಬರುತ್ತಿದ್ದರು. ಈ ಕಾರ್ಯಕ್ರಮ ಅವರ ಜೀವನದಲ್ಲಿ ಚಾಚೂ ತಪ್ಪದೆ ಎರಡು ದಶಕಕಾಲ ನಡೆದು ಬಂದಿತ್ತು.

ಆಚಾರ್ಯರ ಪ್ರಸಾರವೈಖರಿ ಎಲ್ಲರನ್ನೂ ಬೆರಗುಗೊಳಿಸಿತ್ತು. ಆಚಾರ್ಯರು ಬೆಂಗಳೂರು ಬಿಟ್ಟು ತುಮಕೂರಿಗೆ ಹೋದರೆ ಪತ್ರಿಕೆಗಳ 'ಆಗಮನ ನಿರ್ಗಮನ' ಕಾಲಂನಲ್ಲಿ ಪ್ರಕಟವಾಗುತ್ತಿತ್ತು. ಆಚಾರ್ಯರ ಕಾರ್ಯಕಲಾಪಗಳು, ಅವರ ಶಾಲೆಯ ಕಾರ್ಯಕಲಾಪಗಳು, ಅವರು ತುಮಕೂರು, ಗುಬ್ಬಿ, ಮಧುಗಿರಿ, ಶಿವಮೊಗ್ಗೆ, ಚನ್ನಗಿರಿ, ನಾಯ್ಕನಹಟ್ಟಿ, ಚಳ್ಳಕೆರೆಗಳಲ್ಲಿ ಮಾಡಿದ್ದ ಸಂಗೀತ ಕಛೇರಿಗಳ ವಿವರಗಳು, ಅವರ ಶಿಷ್ಯ ಮಂಡಲಿಯ ಪ್ರಗತಿ ಕೂಲಂಕಷವಾಗಿ ಪತ್ರಿಕೆಗಳಲ್ಲಿ ವರದಿಯಾಗುತ್ತಿತ್ತು. ಇತರರಿಗೆ ಶ್ರಮ ಕೊಡಬಾರದೆಂದು ಆಚಾರ್ಯರೇ ವರದಿಗಳನ್ನು ಸಿದ್ಧಗೊಳಿಸಿ ಪತ್ರಿಕಾ ಕಛೇರಿಗಳಿಗೆ ತಾವೇ ಹೋಗಿ ಕೊಟ್ಟು ಸಂಪಾದಕರನ್ನು ಬಾಯಿ ತುಂಬ ಹೊಗಳಿ ವರದಿಗಳನ್ನು ಪ್ರಕಟ ಮಾಡಿಸುತ್ತಿದ್ದರು. ಇಷ್ಟು ಶ್ರಮ ನಿಸ್ವಾರ್ಥಕವಾಗಲಿಲ್ಲ. ಸಂಸ್ಥಾನದ ಸಂಗೀತ ಪರೀಕ್ಷೆಗಳ ಪರೀಕ್ಷಕ ಸ್ಥಾನ ಆಚಾರ್ಯರಿಗೆ ಸಿಕ್ಕಿತು. ಆದರಿಂದ ಅವರ ಅಂತಸ್ತು ಮತ್ತಷ್ಟು ಮೇಲಕ್ಕೇರಿತು.

ಹೇಗಾದರೂ ಮಾಡಿ ತಮ್ಮ ಸಂಗೀತ ಶಾಲೆಗೆ ಸರ್ಕಾರದಿಂದ ಸಹಾಯ ಧನ (Grant) ಪಡೆಯಬೇಕೆಂಬುದು ಆಚಾರ್ಯರ ಮಹತ್ವಾಕಾಂಕ್ಷೆಯಾಗಿತ್ತು. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮನೆಗೆ ಎಷ್ಟು ಬೆಣ್ಣೆ ಹೊತ್ತರೂ ಪ್ರಯತ್ನ ಸಫಲವಾಗಿರಲಿಲ್ಲ. ಒಂದು 'ವಿವಿಧ ವಿನೋದಾವಳಿ' ಯನ್ನೇರ್ಪಡಿಸಿ ಅದಕ್ಕೆ ಶಿಕ್ಷಣ ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ, ಅವರನ್ನು ಬಾಯಿ ತುಂಬ ಹೊಗಳಿ ಬುಟ್ಟಿಗೆ ಹಾಕಿಕೊಂಡು ತಮ್ಮ ಕೆಲಸ ಸಾಧಿಸಬೇಕೆಂದು ಆಚಾರ್ಯರು ಮನಸ್ಸು ಮಾಡಿದರು.

ಈ ವಿಷಯವನ್ನು ಕುಮಾರಯ್ಯನಲ್ಲಿ ಆಪ್ತಾಲೋಚನೆ ಮಾಡಿದಾಗ

ಅವನೂ ಹಾರ್ದಿಕ ಬೆಂಬಲ ಕೊಟ್ಟ. ತಮ್ಮ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಂಗೀತ ಪ್ರದರ್ಶನ, ವಾದ್ಯಮೇಳ—ಜತೆಗೆ ಕುಮಾರಯ್ಯ, ಅವನ ಶಿಷ್ಯ ಮಂಡಳಿಯ ನೃತ್ಯ ಏರ್ಪಡಿಸಿದರೆ ಕೈತುಂಬ ಹಣ ಬರುವುದರಲ್ಲಿ ಸಂದೇಹವಿಲ್ಲವೆಂಬುದನ್ನು ಆಚಾರ್ಯರು ಮನಗಂಡರು. ಆಚಾರ್ಯರು ವಾದ್ಯ ಮೇಳದ (Orchestra) ಸಹಾಯ ಕುಮಾರಯ್ಯನಿಗೆ ಪದೇ ಪದೇ ಬೇಕಾಗುತ್ತಿದ್ದುದರಿಂದ ಅವನು ಸಹಾಯ ಮಾಡದೆ ಗತ್ಯಂತರವೇ ಇರಲಿಲ್ಲ.

ಕಾರ್ಯಕ್ರಮ ಮೂರುಗಂಟೆಯ ವ್ಯಾಪ್ತಿ ಪಡೆದಿರಬೇಕೆಂದು ನಿಶ್ಚಯಿಸಲಾಯಿತು. ಒಂದು ಗಂಟೆ ಸಂಗೀತ, ಒಂದು ಗಂಟೆ ನೃತ್ಯವಾಗುತ್ತದೆ. ಉಳಿದ ಇನ್ನೊಂದು ಗಂಟೆಗೇನುಮಾಡುವುದೆಂದು ಯೋಚನೆ ಹುಟ್ಟಿತು. 'ಒಂದು ನಾಟಕ ಆಡಿಸಿಬಿಡಿ' ಎಂದು ಕುಮಾರಯ್ಯ ಸಲಹೆ ಇತ್ತ. ಆಚಾರ್ಯರು ಕೃತಜ್ಞತಾಪೂರ್ವಕವಾಗಿ ಅವನ ಸಲಹೆ ಸ್ವೀಕರಿಸಿ ತಮ್ಮ ಶಿಷ್ಯ ಶಿಷ್ಯೆಯರ ಕೈಯಲ್ಲಿ 'ಧೃವ ಚರಿತ್ರೆ' ಆಡಿಸುವುದೆಂದು ನಿಶ್ಚಯಿಸಿದರು. ಪಾತ್ರವಿವರ ಸಿದ್ಧಗೊಳಿಸಿ ಆಚಾರ್ಯರು ಕುಮಾರಯ್ಯನ ಕೈಗಿತ್ತರು. ಕುಮಾರಯ್ಯ ಅದನ್ನು ಪರಾಮರ್ಶಿಸುತ್ತ

"ಎಲ್ಲಾ ಹಾಕಿ ಐನಾತಿ ಪಾತ್ರವನ್ನೇ ಬಿಟ್ಟಿದ್ದೀರಲ್ಲಾ ಸ್ವಾಮಿ. ಧೃವನನ್ನು ಯಾರ ಕೈಯಲ್ಲಿ ಮಾಡಿಸುವಿರಿ ?"

"ಅದಕ್ಕೊಂದು ಯೋಚನೆ ಮಾಡಿದ್ದೇನೆ ತಾಳು. ನನ್ನ ಪ್ರಯತ್ನ ಸಫಲವಾದರೆ ನಾಟಕ ಭರ್ಜರಿಯಾಗಿಹೋಗುತ್ತದೆ."

"ಏನು ಮಾಡುತ್ತೀರೋ ಮಾಡಿ ಸ್ವಾಮಿ."

"ನೀನಷ್ಟು ಟಿಕೆಟ್ ಮಾರಿಸಿಕೊಡಬೇಕು ಕುಮಾರಯ್ಯ. ಖರ್ಚು ಕಳೆದು ಕೈತುಂಬ ಹಣ ಬರದಿದ್ದರೆ ನಾವಿಷ್ಟು ಒದ್ದಾಡಿದ್ದಕ್ಕೆ ಏನು ಸಾರ್ಥಕ ಹೇಳು."

"ನಿಮ್ಮ ಶಿಷ್ಯರ ಕೈಗೆಲ್ಲಾ ಟಿಕೆಟ್ ಪುಸ್ತಕ ಕೊಡಿ ಸ್ವಾಮಿ."

"ಅವರನ್ನು ಬಿಡುತ್ತೇನೆಯೇ ? ನೀನೂ ಸ್ವಲ್ಪ ಕಷ್ಟಪಡಬೇಕಪ್ಪ."

"ನಾನೂ ಮಾರುತ್ತೇನೆ, ನನ್ನ ಶಿಷ್ಯರ ಕೈಯಲ್ಲಿಯೂ ಮಾರಿಸುತ್ತೇನೆ."

"ನನಗೆ ನೀನು ಸಹಾಯ ಮಾಡಿದರೆ ಮುಂದೆ ನಿನ್ನ ಸ್ಕೂಲಿಗೆ ಹೀಗೇ ಒಂದು ವಿನೋದಾವಳಿ ಆಡಿಸಿಕೊಡುತ್ತೇನೆ."

ಎಂದು ಕುಮಾರಯ್ಯನ ಮೂಗಿಗೆ ತುಪ್ಪ ಸವರಿದರು. ಕುಮಾರಯ್ಯ ಆಚಾರ್ಯರ ಮಾತಿಗೆ ಮರುಳಾದ.

ಆಚಾರ್ಯರು ಮಾರನೆಯ ದಿನವೇ ಶಿಕ್ಷಣ ಮಂತ್ರಿಗಳನ್ನು ಕಂಡು ಅಧ್ಯಕ್ಷಸ್ಥಾನಕ್ಕೆ ಅವರನ್ನು ಒಪ್ಪಿಸಿಕೊಂಡು ಬಂದರು. ಮಂತ್ರಿಗಳು ಅಧ್ಯಕ್ಷ ರಾಗುತ್ತಾರೆಂದು ಹೇಳಿದ ಮೇಲೆ ಟೌನ್‌ಹಾಲ್ ದೊರೆಯುವುದೂ ಕಷ್ಟ ವಾಗಲಿಲ್ಲ.

'ಧ್ರುವ'ನ ಪಾತ್ರ ನಿರ್ಧರಿಸುವ ದೊಡ್ಡ ಕೆಲಸ ಉಳಿದಿತ್ತು. ಆಚಾರ್ಯರು ಬೈಸಿಕಲ್ ಹತ್ತಿಕೊಂಡು ತಮ್ಮ ಪಾಠದ ಮನೆಯೊಂದಕ್ಕೆ ಬಂದರು.

ಸರಸ್ವತಮ್ಮ ಆಚಾರ್ಯರನ್ನು ಮರ್ಯಾದೆಯಿಂದ ಸ್ವಾಗತಿಸಿದಳು. ತೊಟ್ಟಿ ಯಲ್ಲಿ ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಂಡು ಆಚಾರ್ಯರು

"ಮಕ್ಕಳು ಮನೆಯಲ್ಲಿಲ್ಲವೋ?" ಎಂದು ಕೇಳಿದರು.

"ಇಲ್ಲ ಸ್ಕೂಲಿಗೆ ಹೋಗಿದ್ದಾರೆ. ಎಲ್ಲಿ ಕಾಣಲಿಲ್ಲ ಮೇಷ್ಟರೇ, ಮೂರು ದಿವಸದಿಂದ ಪಾಠಕ್ಕೂ ಬರಲಿಲ್ಲ."

"ಅಯ್ಯೋ ಏನು ಹೇಳುತ್ತೀರಮ್ಮ ನನ್ನ ಗ್ರಹಚಾರ."

"ಏನಾಯಿತು ಮೇಷ್ಟರೇ?"

ಎಂದು ಸರಸ್ವತಮ್ಮ ಗಾಬರಿಗೊಂಡು ಕೇಳಿದಳು.

"ಗಾಬರಿಯಾಗಬೇಡಿ. ಒಂದು ದೊಡ್ಡ ಕೆಲಸ ಆರಂಭಿಸಿಬಿಟ್ಟಿದ್ದೇನೆ. ಸ್ವಲ್ಪವೂ ಪುರಸತ್ತಿಲ್ಲದಂತಾಗಿದೆ."

"ಅದೇನು ಮೇಷ್ಟ್ರೇ ಅಂಥ ದೊಡ್ಡ ಕೆಲಸ?"

"ನಮ್ಮ ಸ್ಕೂಲಿನ ಸಹಾಯಾರ್ಥ ಒಂದು 'ವಿನೋದಾವಳಿ' ವ್ಯವಸ್ಥೆ ಮಾಡುತ್ತಿದ್ದೇನೆ. ಮೂರು ಗಂಟೆ ಕಾರ್ಯಕ್ರಮ; ಒಂದು ಗಂಟೆ ಸಂಗೀತ, ಒಂದು ಗಂಟೆ ನೃತ್ಯ, ಒಂದು ಗಂಟೆ ನಾಟಕ."

" ಕಾರ್ಯಕ್ರಮ ಚೆನ್ನಾಗಿದೆ. ನೃತ್ಯ ಯಾರದು ?"

" ಕುಮಾರ್ ಮತ್ತು ಪಾರ್ಟಿಯವರದು. ಅವರು ಒಂದು ನೃತ್ಯಶಾಲೆ ನಡೆಸುತ್ತಿದ್ದಾರೆ ನಿಮಗೆ ಗೊತ್ತಿರಬಹುದು."

" ನಾನೇನು ಬಲ್ಲೆ ಮೇಷ್ಟರೇ. ನಾಟಕ ?"

" ಧೃವಚರಿತ್ರೆ—ನನ್ನ ಶಿಷ್ಯ ಶಿಷ್ಯೆಯರ ಕೈಯಲ್ಲೇ ಆಡಿಸುತ್ತೇನೆ. ಎಲ್ಲಾ ಆಯಿತು, ಮುಖ್ಯವಾದದ್ದೇ ಆಗಲಿಲ್ಲ."

" ಏನದು ?"

" ಧೃವನ ಪಾತ್ರ. ಅದಕ್ಕೆ ಸರಿಯಾದವರು ಸಿಕ್ಕಿಲ್ಲ. ಇನ್ನು ಎಂಟು ದಿವಸ ಉಳಿಯಿತಲ್ಲ, ಏನು ಮಾಡಲಿ ಎಂದು ಕೈ ಕೈ ಹಿಸುಕಿಕೊಳ್ಳು ತ್ತಿದ್ದೇನೆ."

" ನನ್ನಿಂದೇನಾದರೂ ಸಹಾಯವಾಗಬೇಕಾದರೆ ತಿಳಿಸಿ ಮೇಷ್ಟರೇ. ಮಾಡಿಕೊಡುತ್ತೇನೆ."

" ನಿಮ್ಮಿಂದ ಬಹಳ ಸಹಾಯವಾಗಬೇಕು. ನೀವು ಟಿಕೆಟ್ ಮಾರಿ ಕೊಡಬೇಕು. ನಿಮ್ಮ ಮಕ್ಕಳು ತಮ್ಮ ಸ್ಕೂಲು ಕಾಲೇಜಿನಲ್ಲಿ ಟಿಕೆಟ್ ಮಾರಿ ಕೊಡಬೇಕು. ಅಲ್ಲದೆ ನಿಮ್ಮಿಂದ ಇನ್ನೂ ಒಂದು ಉಪಕಾರವಾಗಬೇಕು. ನೀವು ಒಪ್ಪಿದರೆ ಸುಧಾ ಕೈಯಲ್ಲಿ 'ಧೃವ'ನ ಪಾತ್ರ ಮಾಡಿಸಬೇಕೆಂದಿದ್ದೇನೆ."

" ಆಗಬಹುದು. ಹೆಣ್ಣು ಹುಡುಗಿ ಕೈಯಲ್ಲಿ ಗಂಡಸು ಪಾತ್ರ ಮಾಡಿಸುವುದೇ ?"

" ಅದಕ್ಕೇನಮ್ಮ. ಸುಬ್ಬುಲಕ್ಷ್ಮಿ ಸಿನೀಮಾದಲ್ಲಿ ನಾರದನ ಪಾತ್ರ ಮಾಡ ಬಹುದು, ಸುಧಾ ಬಾಲಕನ ಪಾತ್ರ ಮಾಡಿದರೇನಂತೆ."

" ನನಗೇನೋ ಸಂತೋಷವೇ. ಆದರೆ ಅವಳು ದಿನ ಪ್ರಾಕ್ಟೀಸಿಗೆ ಬರಬೇಕಾಗುತ್ತೋ ಏನೋ ?"

" ಎಷ್ಟು ದಿವಸ—ಎಂಟೇ ದಿವಸ. ಅವಳನ್ನು ಇಲ್ಲಿಂದ ಕರೆದುಕೊಂಡು ಹೋಗಿ ತಿರುಗಿ ಕರೆದುಕೊಂಡು ಬಂದು ಬಿಡುವುದಕ್ಕೆ ನಾನು ಜನ ಗೊತ್ತು ಮಾಡುತ್ತೇನೆ. ನಿಮ್ಮ ಅಭ್ಯಂತರವಿಲ್ಲವಷ್ಟೇ ?"

" ನಿಮ್ಮ ಸ್ಕೂಲಿನ ಕೆಲಸವೆಂದಮೇಲೆ ಅಭ್ಯಂತರವೆಲ್ಲಿಂದ ಬಂತು. "

" ನಾಟಕ ಮುಗಿದು ಕೈಗೆ ನಾಲ್ಕು ಕಾಸು ಬಂದರೆ ಮಗುವನ್ನು ಬರಿಯ ಕೈಯಲ್ಲಿ ಕಳಿಸಲ್ಲಮ್ಮ. ನನ್ನ ಚೈತನ್ಯವಿದ್ದಷ್ಟು ಮರ್ಯಾದೆ ಮಾಡುತ್ತೇನೆ. "

" ನಿಮ್ಮ ಸಂತೋಷ. "

ಮಂತ್ರಿಗಳು ಅಧ್ಯಕ್ಷರಾಗುವ ವಿಷಯವೇ ಸರಸ್ವತಮ್ಮನ ಒಪ್ಪಿಗೆಯನ್ನು ದೊರಕಿಸಿತು; ಇನ್ನು ಮರ್ಯಾದೆ ಮಾಡುವ ವಿಷಯ ಅದನ್ನು ಮತ್ತಷ್ಟು ಬಲಪಡಿಸಿತು.

ಆಚಾರ್ಯರು ಬಂದ ಕೆಲಸ ಯಶಸ್ವಿಯಾಗಿತ್ತು. ಅವರು ಅತ್ತಿತ್ತ ನೋಡಿ

" ಯಜಮಾನರು ಬಂದಿಲ್ಲವೋ ? " ಎಂದರು.

" ಇನ್ನೂ ಬಂದಿಲ್ಲ. ನಿಮಗೇ ಗೊತ್ತಿದೆಯಲ್ಲ. ಅವರದು ಹೀಗೇ ಎಂದು ಹೇಳುವಂತಿಲ್ಲ. "

" ಅವರ ಕೈಯಲ್ಲಿ ನೂರು ರೂಪಾಯಿಯಾದರೂ ಕೊಡಿಸಬೇಕು. ಅಷ್ಟು ಟಿಕೆಟ್ಟು ನಾನು ಮುಡಿಪಾಗಿಟ್ಟಿದ್ದೇನೆ. "

" ಹೇಳಿನೋಡುತ್ತೇನೆ. " ಎಂದು ಸರಸ್ವತಮ್ಮ ಸೂಚಿಸಿದಳು.

೩

ವಿನೋದಾವಳಿಯ ಪ್ರ್ಯಾಕ್ಟೀಸು ಆಚಾರ್ಯರ ಸಂಗೀತ ವಿದ್ಯಾಲಯದಲ್ಲಿ ಆರಂಭವಾಯಿತು. ಆಚಾರ್ಯರ ಶಿಷ್ಯರಲ್ಲಿ ಯಾರಾದರೂ ಬಂದು ಸುಧೆಯನ್ನು ಕರೆದುಕೊಂಡು ಹೋಗುತ್ತಿದ್ದರು. ಸುಧಾನ ಅಕ್ಕ ಮಂಜುಳಾ ವಾದ್ಯಮೇಳದಲ್ಲಿ ವೀಣೆ ನುಡಿಸಬೇಕಾಗುತ್ತಿತ್ತು. ಅವಳು ಆಚಾರ್ಯರು ಹೇಳಿಕಳುಹಿಸಿದಾಗ ಪ್ರ್ಯಾಕ್ಟೀಸಿಗೆ ಹೋಗುತ್ತಿದ್ದಳು. ಒಂದೊಂದು ದಿನ ಸರಸ್ವತಮ್ಮನೂ ಮಕ್ಕಳೊಂದಿಗೆ ಪ್ರ್ಯಾಕ್ಟೀಸಿಗೆ ಹೋಗಿ ಬರುತ್ತಿದ್ದಳು. ಸುಧಾ ಮಂಜುಳಾ ಇವರನ್ನು ಮನೆಗೆ ಕರೆದುಕೊಂಡು ಬರಲು ಯಾರೂ ಸಿಕ್ಕದಿದ್ದ ದಿನ ಕುಮಾರಯ್ಯನೇ ಕರೆದುಕೊಂಡು ಬಂದು ಬಿಟ್ಟು ಹೋಗುತ್ತಿದ್ದ.

ಆಚಾರ್ಯರ ಶಿಷ್ಯಮಂಡಳಿ, ಕುಮಾರಯ್ಯನ ಶಿಷ್ಯಮಂಡಳಿ, ಸುಧಾ, ಮಂಜುಳಾ ಎಲ್ಲರಿಗೂ ಟಿಕೆಟ್ ಮಾರುವ ಕೆಲಸವೇ ಆಯಿತು. ಸರಸ್ವತಮ್ಮ ತಾನೇ ಓಡಿಯಾಡಿ ನೂರು ರೂಪಾಯಿ ಟಿಕೆಟ್ ಮಾರಿದ್ದಳು. ಆಚಾರ್ಯರು ಉದ್ದೇಶಪಟ್ಟಿದ್ದಂತೆ ಮಂಜಯ್ಯನವರು ನೂರು ರೂಪಾಯಿ ಕೊಡಲಿಲ್ಲ; ಆದರೆ ಸರಸ್ವತಮ್ಮನ ಬಲವಂತಕ್ಕೆ ಐವತ್ತು ರೂಪಾಯಿ ತೆತ್ತರು.

ಪತ್ರಿಕಾ ಸಂಪಾದಕರನ್ನು ಆಶ್ರಯಿಸಿ ಆಚಾರ್ಯರು ಸಾಕಷ್ಟು ಬಿಟ್ಟಿ ಪ್ರಕಟಣೆ ಗಿಟ್ಟಿಸಿಕೊಂಡರು.

'ವಿನೋದಾವಳಿ'ಯ ದಿನ ಟೌನ್‌ಹಾಲ್ ಕಿಕ್ಕಿರಿಯುವಂತೆ ತುಂಬಿತು. ಮಂತ್ರಿಗಳು ಯಥಾವಿಧಿಯಂತೆ ನಲವತ್ತು ನಿಮಿಷ ತಡವಾಗಿ ಬಂದರು. ಅವರು ಬಂದ ಕೂಡಲೆ ಪ್ರದರ್ಶನ ಆರಂಭವಾಯಿತು.

ಕಾರ್ಯಕ್ರಮ ನೃತ್ಯ ಪ್ರದರ್ಶನದಿಂದ ಮೊದಲಾಯಿತು. ಕುಮಾರನ ಶಿಷ್ಯರು ಅಲರಿಪು ಮಾಡಿದ ಮೇಲೆ, ಕುಮಾರ ಮತ್ತು ಸಂಗಡಿಗರು 'ರಾಧಾಕೃಷ್ಣ' ನೃತ್ಯವನ್ನು ಕಥಕ್ ಸಂಪ್ರದಾಯದಲ್ಲಿ ಪ್ರದರ್ಶಿಸಿದರು. ತರುವಾಯ ಕುಮಾರನ ಇಬ್ಬರು ಶಿಷ್ಯೆಯರು ಸ್ವರಜತಿ ಪ್ರದರ್ಶಿಸಿದ ಮೇಲೆ

ಕುಮಾರ ತನಿಯಾಗಿ 'ನಾಗ ನೃತ್ಯ'ವನ್ನು ಕಥಾಕಳಿ ಸಂಪ್ರದಾಯದಲ್ಲಿ ಅಭಿನಯಿಸಿದ. ಕೊನೆಯದಾಗಿ ಶಿವ-ತಾಂಡವ. ಪ್ರೇಕ್ಷಕರು ಕರತಾಡನ ಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ವಾದ್ಯಮೇಳದ ಜತೆಗೆ ಹಾಡುವುದಕ್ಕೆ ಆಚಾರ್ಯರೇ ಕುಳಿತರು. ಮೇಳದ ಜೋಡಣೆಯನ್ನು ಪ್ರೇಕ್ಷಕರು ಮೆಚ್ಚಿಕೊಂಡರು. ವೀಣೆ, ಪಿಟೀಲು, ಸಿತಾರ್, ಮೃದಂಗ, ಜಲತರಂಗ್ ವಾದ್ಯಗಳಿಗೆ ತನಿ ಆವರ್ತಗಳನ್ನು ಬಿಟ್ಟು ಕೊಡುತ್ತಿದ್ದರು. ಮಂಜುಳಾ ಎಂದಿಗಿಂತ ಸ್ವಲ್ಪ ಹೆಚ್ಚಾಗಿ ತನ್ನ ವೀಣೆಯಲ್ಲಿ ಅಪಶ್ರುತಿ ನುಡಿಸಿದುದನ್ನು ಬಹುಮಂದಿ ಪ್ರೇಕ್ಷಕರು ಗಮನಿಸಲಿಲ್ಲ.

ಮೂರನೆಯ ಅಂಶವೇ 'ಧ್ರುವಚರಿತ್ರೆ' ಪ್ರದರ್ಶನ. ಪಾತ್ರಗಳನ್ನು ವಹಿಸಿದ್ದವರೆಲ್ಲಾ ಸಣ್ಣಮಕ್ಕಳು. ಅವರಲ್ಲಿ ಉತ್ತಾನಪಾದ, ಧ್ರುವ ಇಬ್ಬರೇ ಸ್ವಲ್ಪ ವಯಸ್ಸಾದವರು. ಸುಧೆಯ ಹಾಡುಗಾರಿಕೆ, ನೈಸರ್ಗಿಕ ಅಭಿನಯ ಎಲ್ಲ ಮನಸ್ಸನ್ನೂ ಮುದಗೊಳಿಸಿತು. ಪ್ರೇಕ್ಷಕ ವರ್ಗದಿಂದ ಯಾರೋ ಹತ್ತು ರೂಪಾಯಿಯ ನೋಟು ಕಳಿಸಿಕೊಟ್ಟು ಧ್ರುವನಿಗೆ ಕೊಡಬೇಕೆಂದು ತಿಳಿಸಿದರು.

ಕೊನೆಯ ದೃಶ್ಯ ಮುಗಿಯುವುದರೊಳಗಾಗಿ ತೆರೆ ಬಿಡಿಸಿ ಆಚಾರ್ಯರು ಅಧ್ಯಕ್ಷರನ್ನು ವೇದಿಕೆಯ ಮೇಲೆ ಕರೆದುಕೊಂಡು ಬಂದರು. ಆಚಾರ್ಯರು ನಾಲ್ಕು ಮಾತನಾಡಿ ತಮ್ಮ ಶಾಲೆಯ ಪರಿಚಯ ಮಾಡಿಕೊಟ್ಟು, ಕಲಾರಾಧಕರಾದ ಮಾನ್ಯ ಮಂತ್ರಿಗಳ ಸಹಾಯದಿಂದ ಶಾಲೆ ಇತ್ತೋಪ್ಯತಿಶಯವಾಗಿ ಬೆಳೆಯಬೇಕಾಗಿರುವ ಅಂಶವನ್ನು ಸೂಕ್ಷ್ಮವಾಗಿ ಸೂಚಿಸಿದರು. ಅಧ್ಯಕ್ಷರು ಶಾಲೆ, ಸಂಗೀತ ಕಲೆ, ಆಚಾರ್ಯರ ಕಲಾ ಪ್ರಾವೀಣ್ಯ, ಸಂಸ್ಥಾನದ ಕಲಾ ಪ್ರಪಂಚದಲ್ಲಿ ಅವರಿಗಿರುವ ಹಿರಿಯ ಸ್ಥಾನಗಳೆಲ್ಲವನ್ನೂ ವಿಶದವಾಗಿ ಪ್ರಸ್ತಾಪಿಸಿ ಆಶೀರ್ವದಿಸುತ್ತಾ ಧ್ರುವನ ಪಾತ್ರವನ್ನಭಿನಯಿಸಿದ ಸುಧೆಯ ಕಲಾನುಹತಿಯನ್ನು ಕೊಂಡಾಡಿದರು. ಆಚಾರ್ಯರು ಎಲ್ಲರಿಗೂ ವಂದನೆಗಳನ್ನರ್ಪಿಸಿ ಕುಮಾರಯ್ಯನಿಗೂ ಇತರ ಸಹಾಯಕರಿಗೂ ಹಾರಗಳನ್ನರ್ಪಿಸಿದರು.

ಪ್ರದರ್ಶನ ಮುಗಿದ ಎರಡು ದಿನ ಆಚಾರ್ಯರು ಸರಸ್ವತಮ್ಮನ ಮನೆಯ

ಕಡೆ ಸುಳಿಯಲಿಲ್ಲ. ಮೂರನೆಯ ದಿವಸ ಮಧ್ಯಾನ್ಹ ದಯೆಮಾಡಿಸಿ, ಮುಖದಿಂದಿಳಿಯುತ್ತಿದ್ಧ ಬೆವರುನೀರನ್ನು ಉತ್ತರೀಯದಿಂದ ಒರಸಿಕೊಳ್ಳುತ್ತ ಕುಳಿತರು. ಸರಸ್ವತಮ್ಮ ಕೂಡಲೆ ಒಂದು ಕಪ್ ಕಾಫಿ ಮಾಡಿ ತಂದುಕೊಟ್ಟಳು. ಕಾಫಿ ಕುಡಿದ ಮೇಲೆ ಆಚಾರ್ಯರಿಗೆ ಹೋದ ಜೀವ ಬಂದಂತಾಯಿತು.

" ಏನು ಮೇಷ್ಟ್ರೇ, ಇಷ್ಟು ಆಯಾಸಪಟ್ಟಿರುವಿರಿ ? "

" ಇದೆಯಲ್ಲಮ್ಮ ಕರ್ಮ. ಟಿಕೆಟ್ ತೆಗೆದುಕೊಂಡು ಹೋದವರು ದುಡ್ಡೇ ಕೊಟ್ಟಿಲ್ಲ. ಅವರ ಮನೆ ಬಾಗಿಲಿಗೆ ಅಲೆಯುತ್ತಿದ್ದೇನೆ. "

" ಅವತ್ತು ಕಲೆಕ್ಷನ್ ಎಷ್ಟಾಯಿತು ? "

" ಸರಿ—ಅದನ್ನು ಹೇಳಿಕೊಳ್ಳೋಕೆ ನಾಚಿಕೆಯಾಗುತ್ತೆ. "

" ಏಕೆ ಮೇಷ್ಟ್ರೇ, ಟೌನ್‌ಹಾಲ್ ತುಂಬಿಹೋಗಿತ್ತು. "

" ಬಿಟ್ಟಿ ನಾಟಕ ಸಂಗೀತ ಎಂದರೆ ಯಾರು ಬರುವುದಿಲ್ಲ ಹೇಳಿ. ಟಿಕೆಟ್ ತೆಗೆದುಕೊಂಡವರೆಲ್ಲಾ ಬಂದಿದ್ದರು. ಆದರೆ ಕೈಗೆ ದುಡ್ಡು ಮಾತ್ರ ಬಂದಿಲ್ಲ. "

" ಗೇಟ್ ಕಲೆಕ್ಷನ್ನೂ ಆಗಲಿಲ್ಲವೇ ? "

" ಗೇಟ್ ಕಲೆಕ್ಷನ್ನೂ, ಟಿಕೆಟ್ ಮಾರಾಟವಾಗಿರುವುದೂ ಎಲ್ಲಾ ಸೇರಿ ಕೈಗೆ ಆರುನೂರು ರೂಪಾಯಿ ಬಂದಿದೆ. ಐನೂರು ಖರ್ಚಾಗಿದೆ. ಇನ್ನೂ ಬಂದರೆ ೨೦೦–೩೦೦ ಬರಬೇಕು. ನೋಡಿಕೊಳ್ಳೋಣ ಅದು ಬಂದ ಕಾಲಕ್ಕೆ. "

" ಸುಮ್ಮನೆ ಶ್ರಮಪಟ್ಟ ಹಾಗಾಯಿತಲ್ಲ ಮೇಷ್ಟರೇ. "

" ಹೌದಮ್ಮ. ಏನು ಮಾಡುವುದು. ನನ್ನ ಗ್ರಹಚಾರ ಚೆನ್ನಾಗಿಲ್ಲ. ಯಾವದಕ್ಕೆ ಕೈಹಾಕಿದರೂ ಹೀಗೇ ನೋಡಿ. ಬರುವ ಭಾದ್ರಪದ ಕಳೆಯುವವರೆಗೂ ಇದೇ ಹಣೇಬರಹ ಎಂದು ಜ್ಯೋತಿಷ್ಯರು ಹೇಳಿದ್ದಾರೆ. "

ಆಚಾರ್ಯರ ಅನುಭವ ಕೇಳಿ ಸರಸ್ವತಮ್ಮನ ಉತ್ಸಾಹ ಕುಂದಿ ಹೋಯಿತು. ಸುಧೆಗೆ ಮದ್ಯಾದೆ ಮಾಡುವ ವಿಷಯ ತಣ್ಣಗಾಯಿತೆಂದುಕೊಂಡಳು. ಆದರೆ ಆಚಾರ್ಯರ ಮಾತುಗಳಲ್ಲಿ ಅವಳಿಗೆ ವಿಶ್ವಾಸ ಹುಟ್ಟಲಿಲ್ಲ. ಇನ್ನು ಈ ಪ್ರಸ್ತಾಪ ಮಾಡಿ ಸುಖವಿಲ್ಲೆಂದು ಸರಸ್ವತಮ್ಮ ಸುಮ್ಮನಾದಳು.

'ವಿನೋದಾವಳಿ'ಯ ಸಂದರ್ಭದಲ್ಲಿ ಕುಮಾರನಿಗೆ ಸರಸ್ವತಮ್ಮನ ಪರಿಚಯವಾಗಿತ್ತು. ಆ ಪರಿಚಯವನ್ನು ಬೆಳೆಸಿಕೊಂಡು ಕುಮಾರ ಎರಡು ದಿನಕ್ಕೊಮ್ಮೆ ಸರಸ್ವತಮ್ಮನ ಮನೆಗೆ ಬಂದು ಹೋಗುತ್ತಿದ್ದ. ಒಂದುದಿನ ಸರಸ್ವತಮ್ಮ

"ಕುಮಾರರೇ, ಸುಧಾ ನಿಮ್ಮಲ್ಲಿ ಡ್ಯಾನ್ಸ್ ಕಲಿಯಬೇಕೆಂದು ಆಸೆ ಪಡುತ್ತಿದ್ದಾಳೆ. ಹೇಳಿಕೊಡಲು ಸಾಧ್ಯವೇ ?" ಎಂದು ಕೇಳಿದಳು.

ಸುಧೆಯ ಪಾತ್ರಾಭಿನಯ ಕಂಡು ಮಾರುಹೋಗಿದ್ದ ಕುಮಾರನ ಮನಸ್ಸಿನಲ್ಲಿಯೂ ಅವಳನ್ನು ಶಿಷ್ಯಳನ್ನಾಗಿ ಪರಿಗ್ರಹಿಸಬೇಕೆಂಬ ಆಸೆಯಿತ್ತು. ಆದರೆ ತಾನಾಗಿ ಈ ವಿಷಯ ಸೂಚಿಸಲು ಹೆದರಿ ಸುಮ್ಮನಿದ್ದ. ಸಲಹೆ ಸರಸ್ವತಮ್ಮನಿಂದಲೇ ಬಂದುದನ್ನು ಕಂಡು ಅವನಿಗೆ ಪರಮ ಸಂತೋಷವಾಯಿತು.

"ನನ್ನ ಮನಸ್ಸಿನಲ್ಲಿಯೂ ಇತ್ತಮ್ಮ. ನೀವೇನನ್ನುವಿರೋ ಎಂದು ಅನುಮಾನಪಟ್ಟುಕೊಂಡು ಸುಮ್ಮನಿದ್ದೆ. ನನ್ನ ಸ್ಕೂಲಿಗೆ ಕಳುಹಿಸಿಕೊಡುತ್ತೀರೇನು ?"

"ಎಲ್ಲಿ ಸಾಧ್ಯ ಕುಮಾರರೇ. ಬೆಳಿಗ್ಗೆ ಪಾಠ, ಸ್ಕೂಲು. ಸ್ಕೂಲಿನಿಂದ ಬಂದಕೂಡಲೆ ಪಾಠ. ಬೆಳಿಗ್ಗೆ ಮೇಷ್ಟ್ರು ಬೇರೆ ಸಂಗೀತ ಪಾಠಕ್ಕೆ ಬರುತ್ತಾರೆ."

"ಹಾಗಾದರೆ ನಾನೇ ಇಲ್ಲಿಗೆ ಬಂದು ಹೇಳಿಕೊಡುತ್ತೇನೆ."

"ನಿಮಗೆ........"

"ಆ ಯೋಚನೆ ಇಟ್ಟುಕೊಳ್ಳಬೇಡಿ. ಸುಧಾ ಕಲಿತು ಮುಂದಕ್ಕೆ ಬಂದರೆ ನನಗೆ ಒಳ್ಳೆಯ ಹೆಸರು. ನನ್ನ ಪ್ರದರ್ಶನವಿದ್ದ ದಿವಸ ಅವಳನ್ನು ನೀವು ಕಳಿಸಿಕೊಟ್ಟರೆ ಸಾಕು."

"ಅದಕ್ಕೇನು ಅವಶ್ಯಕವಾಗಿ ಕರೆದುಕೊಂಡು ಹೋಗಿ" ಎಂದು ಹೇಳಿದಳು.

ಕುಮಾರ ಒಳ್ಳೆಯ ದಿವಸ ನೋಡಿ ಸುಧೆಗೆ ನೃತ್ಯಪಾಠ ಆರಂಭಿಸಿದ. ತಾನೇ ಒಂದು ಜತೆ ಶ್ರುತಿಬದ್ಧವಾದ ಗೆಜ್ಜೆಗಳನ್ನು ಶಿಷ್ಯಳಿಗೆ ಕೊಟ್ಟ.

ಸರಸ್ವತಮ್ಮನ ಜೀವನದ ಪರಿಚಯವಾಗಲು ಕುಮಾರನಿಗೆ ಬಹಳ ದಿವಸ ಹಿಡಿಯಲಿಲ್ಲ. ಅವನು ಮೇಲಿಂದ ಮೇಲೆ ಸರಸ್ವತಮ್ಮನ ಮನೆಗೆ ಬರುವುದನ್ನು

ಕಂಡ ಆಚಾರ್ಯರು ಒಂದು ದಿನ ಅವಳ ಚರಿತ್ರೆಯನ್ನು ಕೂಲಂಕಷವಾಗಿ ಹೇಳಿದ್ದರು.

ಸರಸ್ವತಮ್ಮನ ಗಂಡ ಸುಬ್ಬಣ್ಣ ಲಾಯರ್ ಗುಮಾಸ್ತನಾಗಿದ್ದ. ಲಾಯರ್ ಶ್ರೀನಿವಾಸರಾಯರು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅವನಿಗೂ ದೆಶೆ ನಡೆಯಿತು. ತಾನು ಸಾಕಷ್ಟು ತಿಂದು ಉಳಿದುದನ್ನು ಲಾಯರ್ ಕೈಗೆ ಹಾಕುತ್ತಿದ್ದ. ಸುಬ್ಬಣ್ಣ ಲಾಯರ ಗಳಿಕೆಯಲ್ಲಿ ಸಮಭಾಗಿಯಾಗಿದ್ದುದರ ಜತೆಗೆ ಅವರ ದುಶ್ಚಟಗಳಲ್ಲಿಯೂ ಸಮಭಾಗಿಯಾಗುತ್ತ ಬಂದ. ಕುದುರೆ ಜೂಜು, ಕುಡಿತದ ಜತೆಗೆ ಬಳೇಪೇಟೆಯಲ್ಲಿ ತನ್ನ ಆಫೀಸಿನ ಹಿಂದಿನ ಬೀದಿಯಲ್ಲಿದ್ದ ಒಬ್ಬ ಕುಲಟೆಯ ಮನೆಯಲ್ಲಿ ದ್ವಿತೀಯ ಸಂಸಾರವನ್ನೂ ಆರಂಭಿಸಿದ.

ಸುಬ್ಬಣ್ಣನನ್ನು ನೋಡಿದವರು ಯಾರೂ ಅವನು ಇಂಥ ವಿಲೋಭನೆಗಳ ದಾಸನಾಗಿದ್ದನೆಂದು ಹೇಳಲು ಸಾಧ್ಯವಿರಲಿಲ್ಲ. ಅವನ ವಿನಯಪರತೆ, ದಯೆ, ಸೌಜನ್ಯ ಎಲ್ಲರ ವಿಶ್ವಾಸವನ್ನು ದೊರಕಿಸಿಕೊಟ್ಟಿತ್ತು. ಸುಬ್ಬಣ್ಣನ ದಕ್ಷತೆ ಕಂಡು ಕೆಲವು ಲಾಯರುಗಳು ಅವನನ್ನು ಶ್ರೀನಿವಾಸರಾಯರ ಆಫೀಸಿನಿಂದ ಹೊತ್ತುಹಾಕಲೆತ್ನಿಸಿದರು. ‘ ನಾನು ಯಾವ ಕಾರಣಕ್ಕೂ ರಾಯರ ಆಫೀಸು ಬಿಡುವುದಿಲ್ಲ ’ ಎಂದವನು ಖಂಡಿತವಾಗಿ ಹೇಳಿಬಿಟ್ಟಿದ್ದ. ಸುಬ್ಬಣ್ಣನ ಸ್ವಾಮಿಭಕ್ತಿ ಶ್ರೀನಿವಾಸರಾಯರ ಘನತೆಯನ್ನು ಮೇಲಕ್ಕೇರಿಸಿತ್ತು.

ಸುಬ್ಬಣ್ಣನಿಗೆ ಮನೆಯಲ್ಲಿಯೂ ಯಾವದಕ್ಕೂ ಕಡಿಮೆಯಿರಲಿಲ್ಲ. ಸರಸ್ವತಮ್ಮ ಗಂಡನಿಗೆ ಪ್ರಯಾಸವಾಗದ ರೀತಿಯಲ್ಲಿ ಸಂಸಾರ ಸಾಗಿಸಿಕೊಂಡು ಹೋಗುತ್ತಿದ್ದಳು. ಜತೆಗೆ ಎರಡು ಕಣ್ಣಿನಂತೆ ಇಬ್ಬರು ಮಕ್ಕಳು— ಮಂಜುಳಾ, ಸುಧಾ. ಮಕ್ಕಳನ್ನು ಕಂಡರಂತೂ ಸುಬ್ಬಣ್ಣನಿಗೆ ಪಂಚಪ್ರಾಣ. ಅವರ ಮೇಲಣ ಅಗಾಧ ಪ್ರೇಮ ಅವನನ್ನು ಸನ್ಮಾರ್ಗದಲ್ಲಿ ನಡಸಿಕೊಂಡು ಹೋಗಬೇಕಾಗಿತ್ತು. ಆದರೆ ಸುಬ್ಬಣ್ಣನ ಗೃಹಸ್ಥಜೀವನ ಎಲ್ಲೋ ಸ್ವಲ್ಪ ಆಯ ತಪ್ಪಿತ್ತು.

ಸರಸ್ವತಮ್ಮ ಆ ವಯಸ್ಸಿನಲ್ಲಿ, ಬದುಕಿದ್ದ ಎರಡು ಮಕ್ಕಳ, ಸತ್ತ ಎರಡು

ಮಕ್ಕಳ, ಗರ್ಭಪಾತವಾದ ಮೂರು ಮಕ್ಕಳ ತಾಯಿಯಾಗಿದ್ದರೂ ಸುಲಕ್ಷಣೆಯಾಗಿದ್ದಳು. ಅವಳ ತೆಳು ಮೈ ಮಲ್ಲಿಗೆಯ ಬಳ್ಳಿಯಂತೆ ಕುಲುಕುತ್ತಿತ್ತು. ಜಾಜಿಯ ಮೊಗ್ಗೆಯಂಥ ಅವಳ ಸುಲಿಪಲ್ಲು ಮುಖಕ್ಕೆ ದಿವ್ಯಶೋಭೆಯನ್ನಿತ್ತಿದ್ದವು. ಅವಳ ಧ್ವನಿ ಗಂಭೀರವಾಗಿದ್ದುದರ ಜತೆಗೆ ಸುಶ್ರಾವ್ಯವಾಗಿತ್ತು. ಸುಬ್ಬಣ್ಣ ಅವಳನ್ನು ತಾನಾಗಿ ಒಲಿದು ವಿವಾಹವಾಗಿದ್ದ. ಸರಸ್ವತಿಯನ್ನು ಕಂಡ ದಿನವೇ ಸುಬ್ಬಣ್ಣನ ಮನಸ್ಸು ಅವಳಲ್ಲಿ ನೆಟ್ಟಿತು. ಇವಳನ್ನೇ ಲಗ್ನವಾಗುವುದಾಗಿ ಹಟ ಹಿಡಿದ. ಸುಬ್ಬಣ್ಣನ ತಂದೆ ರಾಮಯ್ಯನವರು ಹಲವು ಪರಿಯಾಗಿ ಮಗನನ್ನು ಬೇಡಿಕೊಂಡರು.

"ಬೇಡ ಸುಬ್ಬೂ. ಈ ಸಂಬಂಧ ಬೇಡ. ನೀನು ಹುಡುಗ. ನಿನಗೆ ಲೋಕಾನುಭವವಿಲ್ಲ. ಇದಕ್ಕಿಂತಲೂ ಚೆನ್ನಾಗಿರುವ ಹುಡುಗಿಯನ್ನು ನಾನು ಹುಡುಕಿ ತಂದು ನಿನಗೆ ಮದುವೆ ಮಾಡಿಸುತ್ತೇನೆ."

"ಈ ಹುಡುಗಿಯಲ್ಲಿ ಏನಣ್ಣಾ ದೋಷ?"

"ಹುಡುಗಿಯಲ್ಲಿ ಏನು ದೋಷವಿದೆಯೋ ಸದ್ಯ ನಾನು ಕಾಣೆ. ಆದರೆ ಇವಳ ತಾಯಿಯ ಚರಿತ್ರೆ, ಅಕ್ಕಂದಿರ ಚರಿತ್ರೆ ಜಗದ್ವಿಖ್ಯಾತವಾಗಿದೆ. ಇಂಥವರ ಮನೆಯ ಹೆಣ್ಣು ತಂದುಕೊಂಡು ನಾವೇಕೆ ನರಳಬೇಕು. ಪ್ರಪಂಚದಲ್ಲಿ ಬೇರೆ ಹೆಣ್ಣುಗಳು ಗತಿಯಿಲ್ಲದಿದ್ದರೂ ನಾನು ಈ ಸಂಬಂಧಕ್ಕೆ ಸಮ್ಮತಿಸುವುದಿಲ್ಲ."

ಆದರೆ ತಂದೆಯ ಹಟ ನಡೆಯಲಿಲ್ಲ. ಸುಬ್ಬಣ್ಣ ತಾಯಿಯ ಮರೆ ಹೊಕ್ಕ. ಉಪವಾಸ ಮಾಡಿದ. ಅತ್ತೂ ಕರೆದು ಕೊನೆಗೆ ತಂದೆಯ ಕೈಯಲ್ಲಿ 'ಅಸ್ತು' ಅನ್ನಿಸಿದ.

ತಂದೆಯ ಮಾತು ಸತ್ಯವೆಂದು ತಿಳಿಯುವುದಕ್ಕೆ ಸುಬ್ಬಣ್ಣನಿಗೆ ಬಹಳ ವರ್ಷಗಳು ಹಿಡಿಯಲಿಲ್ಲ. ಸಂಸಾರ ಹೂಡಿದ ನಾಲ್ಕು ವರ್ಷಗಳೊಳಗಾಗಿ ಸರಸ್ವತಿಯ ನಿಜರೂಪ ಬಯಲಿಗೆ ಬಿತ್ತು. ತುಮಕೂರಿನ ಅವಳ ಬಾಲ್ಯ ಸ್ನೇಹಿತರು ತನ್ನ ಮನೆಗೆ ಬಂದು ಹೋಗುತ್ತಿದ್ದ ಸಂಗತಿಯೂ ಸುಬ್ಬಣ್ಣನಿಗೆ ತಿಳಿಯಿತು. ಆ ವೇಳೆಗಾಗಲೆ ಮಂಜುಳಾ ಹುಟ್ಟಿದ್ದಳು. ಸುಬ್ಬಣ್ಣ ಒಳ್ಳೆಯ

ಮಾತಿನಲ್ಲಿ ಹೇಳಿನೋಡಿದ. ಸರಸ್ವತಿ ಅವನ ಬಾಯಿ ಬಡಿದುಬಿಟ್ಟಳು. ತಾನೇ ಕಣ್ಣಾರೆ ಕಂಡಮೇಲೆ ಹೆಂಡತಿಯನ್ನು ದನ ಬಡಿಯುವ ಹಾಗೆ ಬಡಿದ. ಅವಳು ತನ್ನ ನಡತೆಯನ್ನು ಸುಧಾರಿಸಿಕೊಳ್ಳುವುದಾಗಿ ಮಂಜುಳನ ಮೇಲೆ ಪ್ರಮಾಣ ಮಾಡಿದಳು. ತಾನು ಲಾಯರ್ ಕಟ್ಟು ಹೊತ್ತುಕೊಂಡು ಕೋರ್ಟಿನಿಂದ ಕೋರ್ಟಿಗೆ ಅಲೆಯುತ್ತಿದ್ದಾಗ ತನ್ನ ಹೆಂಡತಿ ಸಿಕ್ಕಿದವರ ಜತೆ ಕಂಟೋನ್ಮೆಂಟು ಹೊಟೇಲುಗಳು, ಥಿಯೇಟರುಗಳು ಅಲೆಯುತ್ತಿದ್ದಾಳೆಂದು ಸುಬ್ಬಣ್ಣನಿಗೆ ತಿಳಿದುಬಂತು. ಹೆಂಡತಿಯನ್ನು ಚಿತ್ರಹಿಂಸೆ ಮಾಡಿದ. ಅವಳ ಮೈಯಲ್ಲಿದ್ದ ಮೂಳೆಗಳು ಪುಡಿಪುಡಿಯಾಗುವಂತೆ ಹೊಡೆದ. ಅವಳನ್ನು ಬಿಟ್ಟು ಎಲ್ಲಿಗಾದರೂ ಓಡಿಹೋಗಬೇಕೆಂದು ಯೋಚಿಸಿದ. ಒಂದೆಡೆ ಅವಳ ಮೇಲಣ ಮೋಹ, ಒಂದೆಡೆ ಮಂಜುಳನ ಮೇಲಣ ಪ್ರೇಮ ಅವನನ್ನು ನರಕಸದೃಶವಾದ ಆ ಮನೆಗೆ ಕರೆತರುತ್ತಿತ್ತು. ಇದೇ ಸಂದರ್ಭದಲ್ಲಿ ಸರಸ್ವತಮ್ಮ ಒಂದು ಗಂಡುಮಗುವನ್ನು ಪ್ರಸವಿಸಿದಳು. ಮಗು ತನ್ನ ಪಡಿಯಚ್ಚಾಗಿದ್ದುದನ್ನು ಕಂಡು ಸುಬ್ಬಣ್ಣ ಸ್ವರ್ಗವೇ ಭೂಮಿಗಿಳಿದು ಬಂತೆಂದುಕೊಂಡ. ಗ್ಲ್ಯಾಕ್ಸೋ ಬೇಬಿಯಂತಿದ್ದ ಮಗು ಆರೇ ತಿಂಗಳು ಬದುಕಿ ಬಾಲಾರಿಷ್ಟಕ್ಕೆ ತುತ್ತಾಗಿ ಮೃತಪಟ್ಟಿತು. ಗಂಡುಮಗುವಿನ ಜನನ, ನಿಧನ ಸುಬ್ಬಣ್ಣ ಸರಸ್ವತಿಯ ವಿಶ್ವಾಸವನ್ನು ಮತ್ತೆ ಬೆಸೆದವು. ಒಂದು ವರ್ಷದ ತರುವಾಯ ಸರಸ್ವತಿ ಸುಧೆಯನ್ನು ಪ್ರಸವಿಸಿದಳು. ಇನ್ನು ತನ್ನ ಗೃಹಸ್ಥ ಜೀವನ ಒಂದು ನಿಲುಗಡೆಗೆ ಬಂದಿತೆಂದು ಭಾವಿಸಿಕೊಂಡು ಸುಬ್ಬಣ್ಣ ಸಂತೃಪ್ತನಾದ. ಸುಧೆಗೆ ಆರೇಳು ತಿಂಗಳು ತುಂಬಿತೆನ್ನುವುದರಲ್ಲಿ ಸರಸ್ವತಿಯ ಓಡಾಟ ಆರಂಭವಾಯಿತು.

ಸುಬ್ಬಣ್ಣ ನಿರಾಶನಾದ. ಹೆಂಡತಿಯನ್ನು ಹೊಡೆದುಬಡೆದು ಸುಖವಿಲ್ಲವೆಂದುಕೊಂಡ. ಅವಳನ್ನು ಮರೆತು, ಆದಷ್ಟು ಅವಳ ದೂರದಲ್ಲಿರಲು ಪ್ರಯತ್ನಿಸಿದ. ಮದ್ಯಸೇವನೆ ಅಭ್ಯಾಸವಾಯಿತು. ಜತೆಗೆ ಬಳೇಪೇಟೆ ಸಂಸಾರವೂ ಗಂಟುಬಿತ್ತು. ಆ ಜೀವನ ನಡೆಸುವುದಕ್ಕೂ ಸುಬ್ಬಣ್ಣ ಬಹಳ ದಿವಸ ಬದುಕಲಿಲ್ಲ. ಶ್ರೀನಿವಾಸರಾಯರ ಪ್ರ್ಯಾಕ್ಟೀಸೂ ಇಳಿಮುಖವಾಯಿತು. ಮೊದಲಿನಂತೆ ಸುಬ್ಬಣ್ಣ ಉತ್ತಮ ದರ್ಜೆಯ ಬ್ರ್ಯಾಂದಿ, ವಿಸ್ಕಿ ಕುಡಿಯಲು ಸಾಧ್ಯವಿರಲಿಲ್ಲ.

ಕಳ್ಳಂಗಡಿಗೆ ಅವನು ಗಂಟುಬೀಳಬೇಕಾಯಿತು. ಕಳ್ಳಂಗಡಿಯ ಆ್ಯರಕ್ಕೇ ಅವನ ಸ್ವರ್ಗಸುಧೆಯಾಯಿತು.

ಒಂದು ದಿನ ಬಳೇಪೇಟೆಯ ಮನೆಯಲ್ಲಿ ಕಂಠಪೂರ್ತಿ ಕುಡಿದು ಮಲಗಿದ. ರಾತ್ರಿ ಯಾವದೋ ಝಾವದಲ್ಲಿ ಗಡಿಯಾರ ನಿಂತುಹೋಯಿತು. ಬೆಳಿಗ್ಗೆ ಸುದ್ದಿ ಮುಟ್ಟಿದ ಕೂಡಲೆ ಸರಸ್ವತಿ ಬಂದು ಶವವನ್ನು ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದಳು. ಗಂಡನ ಸಲುವಾಗಿ ಸರಸ್ವತಿ ಒಂದು ವರ್ಷ ಕುಂಕುಮ ಧರಿಸಲಿಲ್ಲ, ಹೂ ಮುಡಿಯಲಿಲ್ಲ. ವರ್ಷಾಬ್ಧಿಕ ಕಳೆದ ಕೂಡಲೆ ಅವಳ ಭ್ರೂಮಧ್ಯದಲ್ಲಿ ಕುಂಕುಮ ವಿರಾಜಿಸಿತು, ತುರುಬು ತುಂಬ ಮಲ್ಲಿಗೆ ಹೂವು ರಾರಾಜಿಸಿತು. ನೋಡಿದವರು, ಅಕ್ಕಪಕ್ಕದವರು ಕೆಲವು ದಿನ ಆಡಿಕೊಂಡು ನಕ್ಕರು. ಅವರಿಗೇ ಆಡಿಕೊಂಡದ್ದು ಸಾಕಾಗಿ ತೆಪ್ಪಗಾದರು.

ಸರಸ್ವತಿಯ ಮನೆಯಲ್ಲಿ ಗಂಡು ದಿಕ್ಕು ಯಾರೂ ಇರಲಿಲ್ಲ. ಗಂಡ ಬದುಕಿದ್ದಾಗಲೂ ಅವಳಿಗೆ ಗಂಡು ದಿಕ್ಕು ಇದ್ದಿತೆಂದು ನಂಬಿಕೆಯೂ ಇರಲಿಲ್ಲ. ಆದರೆ ಗಂಡ ಇದ್ದಾನೆ ಎನ್ನುವುದೇ ಹೆಣ್ಣಿಗೊಂದು ರಕ್ಷಾಕವಚ. ನಿರಾಶ್ರಿತಳಾದ ತನ್ನ ಗತಿಯೇನು ಎನ್ನುವ ಚಿಂತೆ ಬಲವಾಗಿ ಸರಸ್ವತಿಯನ್ನು ಕಾಡಲಾರಂಭಿಸಿತು. ಭಾವನ ಅಂತ್ಯಕ್ರಿಯೆಗೆ ಮೈಸೂರಿನಿಂದ ಬಂದ ಸರಸ್ವತಿಯ ಅಣ್ಣ ಚೆಲುವಯ್ಯ, ಅವಳ ಕೈಯಲ್ಲಿದ್ದ ಹಣ ಒಂದೆರಡು ಒಡವೆಗಳನ್ನು ಮಾರಿ ಭಾವನನ್ನು ಸ್ವರ್ಗಕ್ಕೆ ಕಳುಹಿಸಿ, ಬಾಯಿ ಮಾತಿನಿಂದ ತಂಗಿಗೆ ಬೇಕಾದಷ್ಟು ಸಮಾಧಾನ, ಬೇಕಾದಷ್ಟು ವೇದಾಂತ ಹೇಳಿ, ಹೋಗುವಾಗ ಧಾರಾಳವಾಗಿ ಒಂದು ನೂರು ರೂಪಾಯಿ ಅವಳ ಕೈಯಲ್ಲಿ ಹಾಕಿ ಊರಿಗೆ ಪ್ರಯಾಣ ಬೆಳಸಿದ್ದ. ಎರಡು ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಮುಂದೆ ಸರಸ್ವತಿ ಹೇಗೆ ಜೀವನ ಮಾಡುತ್ತಾಳೆ ಎನ್ನುವ ಯೋಚನೆ ಚೆಲುವಯ್ಯನಿಗೆ ಬರಲಿಲ್ಲ. ಯೋಚನೆ ಬಂದರೂ ಅದನ್ನು ವ್ಯಕ್ತಗೊಳಿಸಿದರೆ ತನ್ನ ಮೇಲೆಯೇ ಎಲ್ಲಿ ಈ ಸಂಸಾರವೂ ಅಗತುಕೊಳ್ಳುವುದೋ ಎಂದು ಹೆದರಿ ಅವನು ಮೌನವ್ರತವನ್ನಾಚರಿಸಿದ.

ನಾವಿಕರಿಲ್ಲದ ಹಡಗಿನಲ್ಲಿ ಏಕಾಂಗಿಯಾಗಿ ಸಮುದ್ರ ಪ್ರಯಾಣ

ಹೊರಟಂತಾಯಿತು ಸರಸ್ವತಿಯ ಪಾಡು. ಗಂಡನ ಅಂತ್ಯವಿಧಿಗಾಗಿ ಮಾಡಿದ್ದ ಸಾಲವೂ ಎದೆಯ ಮೇಲೆ ಕುಳಿತಿತ್ತು; ಜೀವನ ಸಾಗಿಸುವ ಯೋಚನೆ; ಮಕ್ಕಳ ವಿದ್ಯಾಭ್ಯಾಸ ಮುಂದುವರಿಸುವ ಯೋಚನೆ—ಇವಿಷ್ಟು ಸಾಲದೆಂದು ಸುಬ್ಬಣ್ಣನಿಗೆ ಸಾಲ ಕೊಟ್ಟಿದ್ದವರ ಕಾಟ. ದಿನಕ್ಕೊಬ್ಬೊಬ್ಬರು ಬಂದು ಸುಬ್ಬಣ್ಣನ 'ಆನ್ ಡಿಮ್ಯಾಂಡ್' (On Demand) ಕಾಗದಗಳನ್ನು ತೋರಿಸಿ ಹಣಕ್ಕೆ ಒತ್ತಾಯ ಮಾಡುತ್ತಿದ್ದರು.

ಒಮ್ಮೆಲೇ ತನ್ನ ಮೇಲೆ ಕವಿದ ಕಷ್ಟದ ರಾಶಿಯನ್ನು ಹೇಗೆ ನಿವಾರಿಸಿ ಕೊಳ್ಳುವುದೆಂದು ಸರಸ್ವತಿ ಯೋಚನೆ ಮಾಡಲಾರಂಭಿಸಿದಳು. ಅವಳಿಗೆ ಯಾವ ಮಾರ್ಗವೂ ತೋರಲಿಲ್ಲ. ಬುದ್ಧಿಗೆ ಮಂಕು ಕವಿದಂತಾಗಿತ್ತು. ಎರಡು ಮಕ್ಕಳನ್ನು ಕಟ್ಟಿಕೊಂಡು ಕೆರೆಯಲ್ಲಿಯೋ ಭಾವಿಯಲ್ಲಿಯೋ ಮುಗುಚಿ ಕೊಳ್ಳೋಣವೇ ಎಂದು ಯೋಚಿಸಿದಳು. ಆದರೆ ಬಾಳಬೇಕು, ಬದುಕಬೇಕು, ಸುಖವನ್ನನುಭವಿಸಬೇಕು ಎನ್ನುವ ಆಸೆಯೂ ಅಧಿಕವಾಗಿತ್ತು.

ಕಷ್ಟ, ನೋವು ಅಸಹನೀಯವಾದಾಗ ಗಂಡನಿಗೆ ಹಿಡಿ ಶಾಪ ಹಾಕುತ್ತಿದ್ದಳು.

"ಇವನು ಬದುಕಿದ್ದಷ್ಟು ದಿವಸ ನನ್ನ ಸುಖಪಡಿಸಿದ್ದು ಅಷ್ಟರಲ್ಲಿಯೇ ಇದೆ. ಸತ್ತ ಮೇಲೂ ಪಿಶಾಚಿಯಾಗಿ ನನ್ನ ಕಾಡುತ್ತಾ ಇದ್ದಾನೆ."

ದೊಡ್ಡ ಮಗಳು ಮಂಜುಳಾ ತಾಯಿಯ ಮಾತಿಗೆ ಹೂಗುಟ್ಟುತ್ತಿದ್ದಳು. ಚಿಕ್ಕ ಮಗಳು ಸುಧಾ ಕಣ್ಣಲ್ಲಿ ನೀರು ತಂದುಕೊಂಡು

"ಅಣ್ಣನನ್ನು ಬಯ್ಯಬೇಡಮ್ಮ" ಎಂದು ಬೇಡುತ್ತಿದ್ದಳು.

"ಬಯ್ಯದೆ ಏನು ಮಾಡಲಿ ಹೇಳು. ನಡುನೀರಿನಲ್ಲಿ ನಮ್ಮ ಕೈಬಿಟ್ಟು ಕಣ್ಣು ಮುಚ್ಚಿಕೊಂಡನಲ್ಲಾ ನಿಮ್ಮಪ್ಪ — ನಿಮ್ಮ ಗತಿಯೇನು, ನನ್ನ ಗತಿಯೇನು?"

"ದೇವರು ಮಾಡಿಸಿದ್ದಾಗುತ್ತದೆ."

ಮಗಳ ಮನಸ್ಸು ನೋಯಿಸಿದುದಕ್ಕೆ ಸರಸ್ವತಿಗೆ ಪಶ್ಚಾತ್ತಾಪವಾಗು ತ್ತಿತ್ತು. ಸುಧೆಯನ್ನಪ್ಪಿಕೊಂಡು ಗೊಳೋ ಎಂದು ಅತ್ತು ಸಮಾಧಾನ

ಪಡುತ್ತಿದ್ದಳು.

ಒಂದು ದಿನ ಒಬ್ಬ ವ್ಯಕ್ತಿ ಬಂದು ಸರಸ್ವತಿಯ ಮನೆಯ ಬಾಗಿಲಿನಲ್ಲಿ ನಿಂತುಕೊಂಡು ಅವಳ ಹೆಸರು ಹಿಡಿದು ಕೂಗಿದ.

ಸರಸ್ವತಿ ಹೊರಗೆ ಬಂದು ನೋಡಿದಳು. ವ್ಯಕ್ತಿಗೆ ಮಧ್ಯಮ ವಯಸ್ಸು. ನಲವತ್ತಿರಬಹುದು. ತಲೆಯ ಮೇಲೆ ಕ್ರಾಪು. ಕ್ರಾಪಿನ ಮಧ್ಯೆ ಪಿಳ್ಳೆಜುಟ್ಟು. ಕೆಂಪನೆಯ ದುಂಡುಮುಖ. ಆತ ಧರಿಸಿದ್ದುದು ಫಿನ್‌ಲೇ ಮಿಲ್ಲಿನ ನವುರಾದ ಪಂಚೆ. ಮೈಮೇಲೆ ಸಿಲ್ಕ್ ಜುಬ್ಬ ಮತ್ತು ಟರ್ಕಿ ಟವಲು. ಅವನ ಕೈಯಲ್ಲಿ ವಜ್ರ ಕೆಂಪಿನ ಎರಡು ಮೂರು ಉಂಗುರಗಳು. ಎಡಗೈಯಲ್ಲಿ ಚಿನ್ನದ ಸರಪಳಿ ಹಾಕಿದ ಗಡಿಯಾರ. ಅವನ ಕುತ್ತಿಗೆಯಲ್ಲಿ ಒಂದೆಳೆ ಚಿನ್ನದ ಸರ.

"ಯಾರಪ್ಪಾ ನೀವು?"

"ಸರಸ್ವತಮ್ಮನವರು ನೀವು ತಾನೆ?"

"ಹೌದು ನಾನೇ."

"ನನ್ನ ಹೆಸರು ಮಂಜಯ್ಯ. ನಿಮ್ಮ ಯಜಮಾನರಿಗೂ ನನಗೂ ತುಂಬ ಸ್ನೇಹ."

"ಒಳಗೆ ಬನ್ನಿ."

ಮಂಜಯ್ಯ ತೊಟ್ಟಿಯಲ್ಲಿ ಹಾಸಿದ್ದ ಚಾಪೆಯ ಮೇಲೆ ಕುಳಿತು

"ನಿಮ್ಮ ಯಜಮಾನರು ಸುಬ್ಬಣ್ಣನವರಿಗೂ ನನಗೂ ತುಂಬ ದಿವಸದ ಸ್ನೇಹ. ಅವರ ತಿಂಡಿ ಕಾಫಿಗೆಲ್ಲಾ ನನ್ನ ಹೋಟೆಲಿಗೇ ಬರುತ್ತಿದ್ದರು.

"ನಿಮ್ಮ ಹೋಟಲು ಎಲ್ಲಿದೆ?"

"ರಂಗಸ್ವಾಮಿಗುಡಿ ಬೀದಿಯಲ್ಲಿ. 'ಮೋಹಿನಿ ಉಪಾಹಾರ ಮಂದಿರ.' ನನ್ನ ಹೋಟೆಲ್ ಹೆಸರು ನೀವು ಕೇಳಿರಬಹುದು."

"ಕೇಳಿದ್ದೇನೆ. ನಿಮ್ಮ ಹೆಸರೂ ಕೇಳಿದ್ದೇನೆ. ಯಜಮಾನರು ಆಗಾಗ್ಗೆ ನಿಮ್ಮ ವಿಷಯ ಪ್ರಸ್ತಾಪ ಮಾಡುತ್ತಿದ್ದರು."

"ಸುಬ್ಬಣ್ಣನವರು ಆಗಾಗ್ಗೆ ಕೈಸಾಲ ತೆಗೆದುಕೊಂಡು ಹೋಗುತ್ತಿದ್ದರು; ಅದನ್ನು ಹಿಂದಕ್ಕೆ ತಂದೂ ಕೊಡುತ್ತಿದ್ದರು. ಈಗ ಆರು ತಿಂಗಳ ಕೆಳಗೆ

ಸಾವಿರದ್ವೈನೂರು ರೂಪಾಯಿ ಸಾಲಬೇಕೆಂದರು. ಯಾವ ಆಧಾರಭೋಗ್ಯವೂ ಇಲ್ಲದೆ ನಾನು ಅಷ್ಟು ಹಣ ಕೊಡಲು ಒಪ್ಪಲಿಲ್ಲ. "

ಮುಂದೆ ಮಂಜಯ್ಯನ ಬಾಯಿಂದ ಏನು ಹೊರಬೀಳಬಹುದೆಂದು ಊಹಿಸಲು ಸರಸ್ವತಿಗೆ ತಡವಾಗಲಿಲ್ಲ.

" ನೀವು ಎಷ್ಟು ಸಾಲ ಕೊಟ್ಟಿದ್ದಿರಿ ? "

" ಐದುನೂರು ಕೊಡಬೇಕಾಗಿ ಬಂತು. ಬಡ್ಡಿ ಬಿಟ್ಟುಬಿಡಲು ನಾನು ಸಿದ್ಧನಾಗಿದ್ದೇನೆ, ಅಸಲು ನೀವು ತೀರಿಸಿಬಿಟ್ಟರೆ ಸಾಕು. "

ಸರಸ್ವತಿಯ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಒಂದಲ್ಲ ಎರಡಲ್ಲ ಐದುನೂರು ರೂಪಾಯಿ? ಮಗಳು ಕಾಲೇಜಿಗೆ ಹೋಗುವುದಕ್ಕೆ ಬಸ್ ಚಾರ್ಜು ಕೊಡಲು ಗತಿಯಿಲ್ಲದಿದ್ದಾಗ ಮಂಜಯ್ಯ ಐದುನೂರು ರೂಪಾಯಿ ವಸೂಲ್ಮಾಡಿಕೊಳ್ಳಲು ಬಂದಿದ್ದ. ಸರಸ್ವತಿಯ ಬಾಯಲ್ಲಿ ಮಾತು ಹೊರಡಲಿಲ್ಲ.

" ನೀವು ಐದುನೂರನ್ನೂ ಒಟ್ಟಿಗೆ ಕೊಡಬೇಕಾಗಿಲ್ಲ. ನಿಮಗೂ ಕಷ್ಟ ಏದೆಯೆಂದು ನಾನು ಬಲ್ಲೆ. ಸಾಧ್ಯವಾಗುವಷ್ಟು ಕೊಟ್ಟುಕೊಂಡು ಹೋಗಿ. ತಿಂಗಳಿಗೆ ಐವತ್ತು ರೂಪಾಯಿ ಕಂತಿನಂತೆ ಕೊಟ್ಟರೆ ನಾನು ತೆಗೆದುಕೊಳ್ಳಲು ಸಿದ್ಧನಾಗಿದ್ದೇನೆ. "

ಮಂಜಯ್ಯನೆದುರಿಗೆ ತನ್ನ ಸಂಸಾರದ ಸ್ಥಿತಿಯನ್ನು ಹೇಳಿಕೊಳ್ಳುವುದಕ್ಕೆ ಸರಸ್ವತಿಗೆ ಸಂಕೋಚವಾಯಿತು. ಆದರೆ ಹೇಳಿಕೊಳ್ಳದೆ ನಿರ್ವಾಹವಿರಲಿಲ್ಲ.

" ಇಷ್ಟು ಹಣ ತೆಗೆದುಕೊಂಡು ಅವರೇನು ಮಾಡಿದರು ಮಂಜಯ್ಯನವರೇ. ಮನೆಗಂತೂ ಒಂದು ಬಿಡಿಗಾಸೂ ಕೊಡಲಿಲ್ಲ.

" ನಾನೇನು ಬಲ್ಲೆ. ಹಣ ಹೇಗೆ ಖರ್ಚುಮಾಡುತ್ತೀರಿ ಎಂದು ನಾನು ಅವರನ್ನು ಕೇಳುವುದು ಸಾಧ್ಯವೇ ? "

" ನೋಡಿ ಮಂಜಯ್ಯನವರೇ. ಅವರ ವ್ಯವಹಾರವೊಂದೂ ನನಗೆ ದೇವರ ಸತ್ಯವಾಗಿ ಗೊತ್ತಿಲ್ಲ. ಎರಡು ಮಕ್ಕಳನ್ನು ಕಟ್ಟಿಕೊಂಡು ಜೀವನ

ಹೇಗೆ ಮಾಡುವುದೆಂದು ನಾನು ಯೋಚಿಸುತ್ತಿರುವಾಗ ಇವರ ಸಾಲಗಳು ಬೇರೆ ನನ್ನ ಕೊರಳಿಗೆ ಉರುಲಾಗುತ್ತಿವೆ. ಪಾಪಿಜನ್ಮ—ಈ ಹೆಣ್ಣು ಜನ್ಮ!"

ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಂಜಯ್ಯನ ಮುಖದಲ್ಲಿ ಕನಿಕರ ತೇಲಿತು. ದುಃಖೋಪಶಮನ ಮಾಡಿಕೊಂಡು ಬರಲು ಸರಸ್ವತಿ ಒಳಗೆ ಎದ್ದು ಹೋದಳು.

ಮಂಜಯ್ಯನ ಕಣ್ಣುಗಳು ಮನೆಯ ಸಿಂಹಾವಲೋಕನ ಮಾಡಿದವು. ಅವನು ಕುಳಿತಿದ್ದ ತೊಟ್ಟಿಯ ಬಲಗಡೆ ಅಡಿಗೆಯ ಮನೆಯಿತ್ತು, ಎಡಗಡೆ ಒಂದು ರೂಮಿತ್ತು, ತೊಟ್ಟಿಯ ತುಂಬ ದೇವರ ಪಟಗಳಿದ್ದವು. ರೂಮಿನ ಬಾಗಿಲಿಗೆ ಕಸೂತಿ ಮಾಡಿದ ಒಂದು ತೆರೆ ಹಾಕಲ್ಪಟ್ಟಿತ್ತು. ತೊಟ್ಟಿಯ ಮೂಲೆಯಲ್ಲಿ ತಂಬೂರಿಯೊಂದು ಗೋಡೆಗೆ ಒರಗಿಸಿಡಲ್ಪಟ್ಟಿತ್ತು.

ಜುಬ್ಬದ ಕಿಸೆಯಿಂದ ಮಂಜಯ್ಯ 'ಗಣೇಶಾಮಾರ್ಕ್' ಬೀಡಿಯ ಕಟ್ಟನ್ನು ಹೊರಗೆ ತೆಗೆಯಲು ಅನುಮಾನಪಡಲಿಲ್ಲ. ಬೀಡಿ ಹಚ್ಚಿಕೊಂಡು ಮನಸ್ಸಿನಲ್ಲಿ ಲೆಕ್ಕ ಹಾಕುತ್ತ ಕುಳಿತ.

ಸರಸ್ವತಿ ಬಿಸಿಬಿಸಿಯಾಗಿ ಕಾಫಿ ಮಾಡಿ ತಂದಿಟ್ಟಳು. ಮಂಜಯ್ಯ ತನ್ನ ಟರ್ಕಿ ಟವಲಿನಿಂದ ಬಿಸಿ ಪಾತ್ರೆಯನ್ನು ಕೈಗೆತ್ತಿಕೊಂಡು ಕಾಫಿ ಸವಿಯ ತೊಡಗಿದ.

"ತಂಬೂರಿ ಇದೆ. ನಿಮಗೆ ಸಂಗೀತ ಬರುತ್ತದೆಯೇ?"

"ನನಗೂ ಅಲ್ಪಸ್ವಲ್ಪ ಬರುತ್ತದೆ. ಮಕ್ಕಳು ಸಂಗೀತ ಕಲಿಯುತ್ತಿದ್ದಾರೆ."

"ಮಕ್ಕಳು ಓದುತ್ತಿದ್ದಾರೆಯೇ?"

"ಹೂ. ದೊಡ್ಡ ಮಗಳು ಕಾಲೇಜಿನಲ್ಲಿದ್ದಾಳೆ. ಅವಳು ವೀಣೆ ಅಭ್ಯಾಸ ಮಾಡುತ್ತಿದ್ದಾಳೆ. ಚಿಕ್ಕವಳು ಹೈಸ್ಕೂಲಿನಲ್ಲಿ ಓದುತ್ತಿದ್ದಾಳೆ. ಅವಳು ಬಾಯಿ ಹಾಡುಗಾರಿಕೆ ಅಭ್ಯಾಸ ಮಾಡುತ್ತಿದ್ದಾಳೆ."

"ಯಾರು ಪಾಠ ಹೇಳುತ್ತಿದ್ದಾರೆ."

"ಸಂಗೀತ ವಿದ್ವಾನ್ ರಾಘವಾಚಾರ್ರು."

" ಅವರೇ—ಅವರನ್ನು ನಾನು ಬಲ್ಲೆ. "

" ನಿಮ್ಮ ಸ್ಥಳ. "

" ಮೊದಲು ಉಡುಪಿ. ನಾನಿಲ್ಲಿಗೆ ಬಂದು ಮೂವತ್ತು ವರ್ಷಗಳಾದವು. ಸಣ್ಣ ಪ್ರಮಾಣದಲ್ಲಿ ಹೊಟೇಲು ಆರಂಭಿಸಿದೆ. ದೇವರ ದಯೆ ಚೆನ್ನಾಗಿತ್ತು. ವ್ಯಾಪಾರ ಕುದುರಿತು. ಊರಿನಲ್ಲಷ್ಟು ಹೊಲಗದ್ದೆ ಮಾಡಿಕೊಂಡಿದ್ದೇನೆ. "

" ನಿಮ್ಮ ಮನೆಯೆಲ್ಲಿ ? "

" ಚಾಮರಾಜಪೇಟೆ ಎರಡನೆಯ ರೋಡಿನಲ್ಲಿದೆ. ಮೊದಲು ಆ ಮನೆಗೆ ಬಾಡಿಗೆಗೆ ಬಂದೆ—ಆಮೇಲೆ ಅದನ್ನೇ ಕೊಂಡುಕೊಂಡು ನನಗೆ ಹೇಗೆ ಬೇಕೋ ಹಾಗೆ ಕಟ್ಟಿಸಿಕೊಂಡೆ. ಮನೆಯ ಮುಂದೆ ಎರಡು ಅಂಗಡಿ ಮಾಡಿಸಿದ್ದೇನೆ. ಅದೂ ಐವತ್ತು ರೂಪಾಯಿ ಬಾಡಿಗೆ ದುಡಿಯುತ್ತದೆ. "

" ದೇವರು ನಿಮಗಿಷ್ಟು ಅನುಕೂಲ ಮಾಡಿರುವಾಗ ಬಡಪಾಯಿ ನನ್ನನ್ನೇಕೆ ಹಣಕ್ಕೆ ಒತ್ತಾಯ ಮಾಡುವಿರಿ ? "

" ನಿಮ್ಮ ಯಜಮಾನರಿಗೆ ನಾನು ಕೊಟ್ಟ ಹಣ ಕಷ್ಟಪಟ್ಟು ಸಂಪಾದಿಸಿದ್ದಮ್ಮ. ಕೈಯಲ್ಲಿ ಕಾಸಿದೆಯೆಂದು ಬೀದಿಯಲ್ಲಿ ತೂರುವುದಕ್ಕಾಗುತ್ತದೆಯೇ ? ನಿಮ್ಮ ಸ್ಥಿತಿಗತಿ ನೋಡಿ ನನಗೆ ತುಂಬ ಕನಿಕರವುಂಟಾಗಿದೆ. ಎಲ್ಲಾ ರೀತಿಯಿಂದಲೂ ನಿಮಗೆ ಸಹಾಯ ಮಾಡಬೇಕೆಂದು ನನ್ನ ಆಸೆ. "

" ನೀವು ನನ್ನ ಭಾಗದ ದೇವರ ಹಾಗೆ ಬಂದಿರಿಯಪ್ಪ. ನನ್ನ ಶ್ರೀರಾಮನೇ ನಿಮ್ಮನ್ನಿಲ್ಲಿ ಕರೆದುಕೊಂಡು ಬಂದ. "

" ನಿಮ್ಮ ಮಕ್ಕಳು ಓದುತ್ತಿದ್ದಾರೆ. ಅವರಿಗೆ ವೀಣೆ, ಬಾಯಿ ಹಾಡುಗಾರಿಕೆ ಪಾಠ ಹೇಳಿಸುತ್ತಿದ್ದೀರಿ. ನಾನು ತಿಳಿದಿರುವ ಮಟ್ಟಿಗೆ ರಾಘವಾಚಾರಿ ಕಿಲುಬು ಕಾಸು ಕೂಡ ಬಿಡುವ ಮನುಷ್ಯನಲ್ಲ. ಇದರ ಜತೆಗೆ ನಿಮ್ಮೆಲ್ಲರ ಜೀವನವಾಗಬೇಕು. ಇಷ್ಟು ಖರ್ಚು ಹೇಗೆ ತೂಗಿಸುವಿರಿ ಎಂದು ಕೇಳಬಹುದೇ ? ನಿಮಗೆ ಅಸಮಾಧಾನವಾಗುವ ಹಾಗಿದ್ದರೆ ಹೇಳಬೇಡಿ. "

" ನನ್ನ ಕಷ್ಟ ಸುಖದ ವಿಷಯ ಇಷ್ಟು ಕನಿಕರ ತೋರಿಸುವವರು

ಯಾರಪ್ಪ? ನಿಮ್ಮಲ್ಲಿ ಹೇಳಿಕೊಳ್ಳದೆ ನಾನು ಬೇರೆ ಯಾರಲ್ಲಿ ಹೇಳಿಕೊಳ್ಳಲಿ. ಕೈಯಲ್ಲಿದ್ದ ಹಣದ ಜತೆಗೆ ಒಂದೆರಡು ಒಡವೆ ಮಾರಿ ಅವರ ಸಂಸ್ಕಾರ ಮಾಡಿದೆ. ನಮ್ಮಣ್ಣ ಊರಿಗೆ ಹೋಗುವಾಗ ನೂರು ರೂಪಾಯಿ ಕೈಯಲ್ಲಿಟ್ಟು ಹೋದ. ಅಲ್ಲಿಂದ ಈವರೆಗೆ ಸಾಲ ಮಾಡಿಕೊಂಡು ಜೀವನ ಸಾಗಿಸುತ್ತ ಬಂದಿದ್ದೇನೆ. ಮನೆಯ ಬಾಡಿಗೆ ಕೊಟ್ಟು ನಾಲ್ಕು ತಿಂಗಳಾಯಿತು. ಮನೆಯವನು ಒಳ್ಳೆಯವನಾದುದರಿಂದ ಹೊರಗೆ ಹಾಕಿಲ್ಲ."

"ಮನೆ ಬಾಡಿಗೆಯೆಷ್ಟು?"

"ತಿಂಗಳಿಗೆ ಹನ್ನೆರಡು ರೂಪಾಯಿ. ಮೊದಲಿನಿಂದ ಈ ಮನೆಯಲ್ಲಿರುವುದರಿಂದ ಮನೆಯವನು ಬಾಡಿಗೆ ಹೆಚ್ಚು ಮಾಡಿಲ್ಲ. ನಾನು ಇವತ್ತು ಬಿಟ್ಟರೆ ಐವತ್ತು ರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ."

ಮಂಜಯ್ಯ ಮತ್ತೊಂದು ಬೀಡಿ ಹಚ್ಚಿ, ದೀರ್ಘವಾಗಿ ಅದನ್ನೆಳೆದು ಸಾವಕಾಶವಾಗಿ ಹೊಗೆ ಬಿಡುತ್ತಾ

"ನಾನೊಂದು ಮಾತು ಹೇಳುತ್ತೇನೆ. ಯೋಚನೆಮಾಡಿ. ನಿಮಗೆ ಅನುಕೂಲವಾಗುವ ಹಾಗಿದ್ದರೆ ಹಾಗೆ ಮಾಡಬಹುದು. ಆದರೆ ನಾನು ಹೀಗೆ ಹೇಳಿದೆನೆಂದು ಅಸಮಾಧಾನಪಟ್ಟುಕೊಳ್ಳಬೇಡಿ."

ಸರಸ್ವತಿಯ ಸೂಕ್ಷ್ಮಮತಿಗೆ ಮಂಜಯ್ಯ ಹೇಳಬೇಕೆಂದಿದ್ದುದು ಹೊಳೆಯದಿರಲಿಲ್ಲ. ಔಷಧದ ಬಳ್ಳಿಯನ್ನು ಹುಡುಕುತ್ತಿದ್ದವಳಿಗೆ ಅದೇ ಬಂದು ಕಾಲಿಗೆ ತೊಡರಿಕೊಂಡಂತಾಯಿತು. ತನ್ನ ಮನಸ್ಸಿಗಾದ ಸಂತೋಷವನ್ನು ಹೊರಗೆ ತೋರಗೊಡದೆ ಗಂಭೀರವಾಗಿ

"ಹೇಳಿ. ಯಾವ ರೂಪದಲ್ಲಿ ಬಂದು ದೇವರು ನಮಗೆ ಸಹಾಯ ಮಾಡುತ್ತಾನೆಯೋ ಬಲ್ಲವರು ಯಾರು?"

"ನಿಮ್ಮ ಸ್ಥಿತಿಯಲ್ಲಿ ನೀವು ಸಾಲ ತೀರಿಸುವುದು ಸಾಧ್ಯವಿಲ್ಲ. ಸುಮ್ಮನೆ ಅವರಿವರು ನಿಮ್ಮನ್ನು ಕಾಡಿ ಬೀದಿಗೆಳೆದುಬಿಡುತ್ತಾರೆ. ನೀವೂ ಕೆಡುವುದಲ್ಲದೆ ನಿಮ್ಮ ಮಕ್ಕಳು ಕೆಟ್ಟುಹೋಗುತ್ತವೆ. ನೀವು ಒಪ್ಪುವುದಾದರೆ ನಾನು ತಿಂಗಳಿಗೆ ನೂರು ರೂಪಾಯಿ ಕೊಡುತ್ತ ಹೋಗುತ್ತೇನೆ. ಮರ್ಯಾದೆಯಾಗಿ ಜೀವನ

ನಡೆಸಿಕೊಂಡು ಹೋಗಿ. ನಿಮ್ಮ ಯಜಮಾನರ ಸಾಲದ ಪತ್ರವನ್ನೂ ನಿಮಗೇ ವಾಪಸುಮಾಡುತ್ತೇನೆ. ಆದರೆ ಒಂದೇ ಕರಾರು. ನಮ್ಮ ಸ್ನೇಹ ಕೆಡದಂತೆ ನೀವು ನೋಡಿಕೊಂಡು ಹೋಗಬೇಕು."

"ಹಾಗಂದರೆ........?"

"ನೀವು ಮುಂದೆ ಯಾವದಾದರೂ ಸ್ನೇಹ ಸಂಬಂಧ ಮಾಡಿದರೆ ನಾನು ಸುಮ್ಮನಿರುವುದಿಲ್ಲ."

"ನನ್ನ ಮನೆಗೆ ಜನ ಬಂದು ಹೋಗುವುದು ಹೆಚ್ಚು. ನಮ್ಮ ಹುಡುಗರ ಮೇಷ್ಟ್ರುಗಳು ಬರುತ್ತಿರುತ್ತಾರೆ, ನನ್ನ ಸಂಬಂಧಿಗಳು ಬರುತ್ತಿರುತ್ತಾರೆ, ನನ್ನ ಅಣ್ಣನ ಕಡೆಯವರು ಬರುತ್ತಿರುತ್ತಾರೆ. ಮನೆಗೆ ಬಂದವರ ವಿಷಯದಲ್ಲೆಲ್ಲಾ ನೀವು ಅನುಮಾನಪಡುತ್ತ ಬಂದರೆ........"

"ನಾನೇನು ಅಷ್ಟು ಮೂರ್ಖನೇ. ಕ್ರಿಯೆ ಬಿಡದೆ ನಡೆದುಕೊಳ್ಳಿ. ನಮ್ಮ ವಿಶ್ವಾಸ ಬೆಳೆದರೆ ನಿಮ್ಮ ಮಕ್ಕಳಿಗೂ ಒಂದು ದಾರಿ ಮಾಡುತ್ತೇನೆ. ಬೆಳೆದ ಹೆಣ್ಣುಮಕ್ಕಳಿಗೆ ಮದುವೆ ಮಾಡದೆ ಮನೆಯಲ್ಲಿ ಎಷ್ಟು ದಿವಸ ಕೂಡಿಸಿ ಕೊಂಡಿರುವುದಕ್ಕಾಗುತ್ತದೆ."

"ಆಗಬಹುದು. ನೀವು ಒಂದೆರಡು ತಿಂಗಳು ನಡೆಸಿ ನನ್ನ ಕೈಬಿಟ್ಟರೆ?"

"ನಂಬಿದವರು ಯಾರಿಗೂ ನಾನು ಮೋಸಮಾಡುವುದಿಲ್ಲ. ಕಾಲ ಕ್ರಮೇಣ ನಿಮಗೇ ನನ್ನ ಸ್ವಭಾವ ಗೊತ್ತಾಗುತ್ತದೆ. ನೀವು ನನಗೆ ಮೋಸ ಮಾಡುವುದನ್ನು ನಾನೇ ಕಣ್ಣಾರೆ ಕಾಣುವವರೆಗೂ ನಾನು ನಿಮ್ಮ ಕೈಬಿಡು ವುದಿಲ್ಲ, ನನಗೆ ಮೋಸ ಮಾಡುವುದಿಲ್ಲವೆಂದು ಪ್ರಮಾಣ ಮಾಡುವಿರಾ?"

"ಆಗಬಹುದು."

ದೇವರಿಗೆ ದೀಪ ಹಚ್ಚಲು ಹೇಳಿ ಮಂಜಯ್ಯ ಕೈಕಾಲು ತೊಳೆದು ಕೊಂಡು ಬಂದ. ದೇವರ ಮುಂದೆ ನಿಂತು ಮಂಜಯ್ಯ ಮೊದಲು ಪ್ರಮಾಣ ಮಾಡಿದ.

"ನನ್ನಾಣೆಗೂ, ಶ್ರೀರಾಮನ ಆಣೆಗೂ, ನನ್ನ ಮಕ್ಕಳ ಆಣೆಗೂ ನಿಮಗೆ ಮೋಸ ಮಾಡುವುದಿಲ್ಲ"

ಎಂದು ಸರಸ್ವತಿ ಪ್ರಮಾಣ ಮಾಡಿದಳು.

ಮಂಜಯ್ಯ ಹೊರಡಲನುವಾಗಿ ಹತ್ತು ರೂಪಾಯಿಗಳ ಐದು ನೋಟನ್ನು ತೆಗೆದು ಸರಸ್ವತಿಯ ಕೈಗಿತ್ತು

"ಸದ್ಯದ ಖರ್ಚಿಗೆ ಇಟ್ಟುಕೊಂಡಿರಿ. ನಾನು ರಾತ್ರಿ ಎಂಟು ಗಂಟೆಗೆ ಬರುತ್ತೇನೆ." ಎಂದು ಹೇಳಿ ಹೋದ.

ಸಂಜೆ ಆರು ಗಂಟೆಯ ವೇಳೆಗೆ ರಾಘವಾಚಾರ್ಯರು ಪಾಠಕ್ಕೆ ಬಂದರು. ಸರಸ್ವತಿ ತನ್ನ ಮಕ್ಕಳ ಸಹಾಯ ತೆಗೆದುಕೊಂಡು ಮನೆಯನ್ನು ಚೊಕ್ಕಟವಾಗಿ ಗುಡಿಸಿ, ಸಾರಿಸಿ, ಸಾಮಾನುಗಳನ್ನೆಲ್ಲಾ ಓರಣವಾಗಿಡುತ್ತಿದ್ದಳು. ಅವಳ ತಲೆ, ಮೈಯೆಲ್ಲಾ ಧೂಳಾಗಿತ್ತು. ಆಚಾರ್ಯರನ್ನು ಕಂಡ ಕೂಡಲೆ

"ಕೂಡಿ ಮೇಷ್ಟರೇ" ಎಂದು ಹೇಳಿದಳು.

ಆಚಾರ್ಯರು ಕುಳಿತುಕೊಂಡು ಈ ಸಡಗರವೇತಕ್ಕೆಂದು ಯೋಚಿಸ ತೊಡಗಿದರು.

"ಇದೇನಮ್ಮ ಇಷ್ಟೊಂದು ಕೆಲಸ ಹಚ್ಚಿಕೊಂಡಿರುವಿರಿ. ಮನೆಗೆ ಯಾರಾದರೂ ನಂಟರಿಷ್ಟರು ಬರುತ್ತಾರೆಯೋ?"

"ನಮ್ಮಣ್ಣ ಕಾಗದ ಬರೆದಿದ್ದಾರೆ ಮೇಷ್ಟ್ರೇ. ಯಾರನ್ನೋ ಜತೆಯಲ್ಲಿ ಕರೆದುಕೊಂಡು ಬರುವರಂತೆ."

"ಮಂಜುಳಮ್ಮನನ್ನು ನೋಡುವುದಕ್ಕೇನು?"

"ಇದ್ದರೂ ಇರಬಹುದು. ಅವಳಿಗೂ ಕಂಕಣಬಲವಿದ್ದು ಲಗ್ನ ಕೂಡಿದರೆ ಏನು ಮಾಡಲಿ?"

"ಏನು ಮಾಡಲಿ ಎಂದರೆ ಮದುವೆ ಮಾಡಿ."

"ಸುಲಭವಾಗಿ ಹೇಳಿಬಿಟ್ಟಿರಿ. ದುಡ್ಡಿಗೇನು ಮಾಡಲಿ?"

"ನಿಮ್ಮ ಅಣ್ಣಾವರು ಅನುಕೂಲ ಮಾಡಿಕೊಡಬಹುದು. ಅಣ್ಣ ತಮ್ಮ ಅನ್ನಿಸಿಕೊಂಡವರು ಇಂಥ ಸಮಯದಲ್ಲಿ ಸಹಾಯ ಮಾಡದೆ ಇನ್ನು ಯಾವಾಗ ಮಾಡಬೇಕು ಹೇಳಿ."

"ಪಾಪ, ಅವನೇನು ಮಾಡಬಲ್ಲ ಮೇಷ್ಟ್ರೇ. ಅವನಿಗೇ ಮದುವೆಗೆ

ನಿಂತಿರುವ ಮಗಳಿದ್ದಾಳೆ. ಮದುವೆ ನಿಶ್ಚಯವಾದರೆ ನೀವು ಸ್ವಲ್ಪ ಸಹಾಯ ಮಾಡಬೇಕು ಮೇಷ್ಟ್ರೆ. ನಮ್ಮ ಯಜಮಾನರ ಪಿತ್ರಾರ್ಜಿತ ಸ್ವಂತ ಜಮೀನಿದೆ. ಎಲ್ಲಾ ಅವರ ದೊಡ್ಡಪ್ಪನ ಮಕ್ಕಳು ನುಂಗಿ ನೀರು ಕುಡಿದು ಕುಳಿತಿದ್ದಾರೆ. ನೀವು ನೆರವಾದರೆ ಜಮೀನಿನ ಸ್ವಲ್ಪ ಭಾಗವಾದರೂ ನನ್ನ ಕೈಸೇರುತ್ತದೆ. ”

“ ಆ ಸಂಬಂಧ ಏನಾದರೂ ಕಾಗದ ಪತ್ರಗಳಿವೆಯೇನು ? ”

“ ಕಾಗದ ಪತ್ರಗಳಿವೆ. ಅವು ಏನೊಂತ ನಾನು ನೋಡಿಲ್ಲ. ನಾಳೆ ನಾಡಿದ್ದು ತೆಗೆದಿಟ್ಟಿರುತ್ತೇನೆ—ನೀವು ಸರಿಯಾದ ಲಾಯರು ಯಾರನ್ನಾದರೂ ಕೇಳಿ ತಿಳಿದುಕೊಳ್ಳಿ. ”

“ ಆಗಬಹುದು. ”

“ ನಮ್ಮ ಯಜಮಾನರು ಮಾಡಿದ ಸಾಲಕ್ಕೆಲ್ಲಾ ನಾನು ಹೊಣೆಯೇ ಮೇಷ್ಟರೇ. ”

“ ಗಂಡ ಮಾಡಿದ ಸಾಲಕ್ಕೆ ಹೆಂಡತಿ ಹೊಣೆ, ಹೆಂಡತಿ ಮಾಡಿದ ಸಾಲಕ್ಕೆ ಗಂಡ ಹೊಣೆ—ಏಕೆ ಹೀಗೆ ಕೇಳುತ್ತಿರುವಿರಿ ? ”

“ ಅದು ಯಾರೋ ಮಂಜಯ್ಯನವರಂತೆ, ಹೋಟಿಲಿನವರು. ಅವರು ಇವತ್ತು ಬಂದು ಐದು ನೂರು ರೂಪಾಯಿ ಕೊಡಬೇಕೆಂದು ಹೇಳಿದರು. ”

“ ಇದ್ದರೂ ಇರಬಹುದಮ್ಮ. ನಿಮ್ಮ ಯಜಮಾನರು ಊರಿನಲ್ಲೆಲ್ಲಾ ಸಾಲ ಮಾಡಿಕೊಂಡಿದ್ದರು. ”

“ ಈ ಮಂಜಯ್ಯನವರು ಹೇಗೆ ? ನಿಮಗೆ ಪರಿಚಯವಿದೆಯೇ ? ”

“ ಪರಿಚಯವಿಲ್ಲ. ಒಳ್ಳೆಯ ಮನುಷ್ಯ ಎಂದು ಕೇಳಿ ಬಲ್ಲೆ. ಹಣಕ್ಕೆ ತರಾತುರಿ ಮಾಡುತ್ತಿದ್ದಾರೋ ? ”

“ ಮಾಡಿದರು. ಇರುವ ಸಂದರ್ಭ ಹೇಳಿ ವಾಯಿದೆ ಕೇಳಿದೆ. ಆಗಲಿ ಎಂದು ಒಪ್ಪಿಕೊಂಡರು.

“ ಸಂಸಾರವಂದಿಗ. ಕಷ್ಟ ಸುಖ ತಿಳಿದವನು. ಒಪ್ಪಿಕೊಳ್ಳದೆ ಏನಮ್ಮ. ಅವನು ದೊಡ್ಡ ಮನಸ್ಸುಮಾಡಿದರೆ ಹಣ ಬಿಟ್ಟುಬಿಡುವುದೂ ಅಸಾಧ್ಯವೇನಲ್ಲ.

" ಆತ ಅಷ್ಟು ಅನುಕೂಲಸ್ಥರೆ ? "

" ಒಂದು ಲಕ್ಷ ರೂಪಾಯಿ ಕುಳ ಕಣಮ್ಮ. ಹೊಟೇಲಿಟ್ಟ. ಬಾಡಿಗೆಗೆ ತೆಗೆದುಕೊಂಡ ಮನೆಯನ್ನೇ ಕೊಂಡುಕೊಂಡ; ಚಾಮರಾಜಪೇಟೆಯಲ್ಲಿ ಬಾಡಿಗೆಗೆ ಮನೆ ತೆಗೆದುಕೊಂಡ, ಅದನ್ನೂ ಕೊಂಡುಕೊಂಡ. ನಗದು ಹಣವೂ ಇಟ್ಟುಕೊಂಡಿದ್ದಾನೆ—ತನ್ನ ಊರಿನಲ್ಲಿ ಆಸ್ತಿಯನ್ನು ಮಾಡಿಕೊಂಡಿದ್ದಾನೆ. ಕಾಗದಗಳನ್ನು ಹುಡುಕಿಡಿ—ಏನಾದರೂ ಸಾಧ್ಯವಾದರೆ ಮಾಡೋಣ. "

" ನಾಳೆಯೇ ಹುಡುಕಿಟ್ಟಿರುತ್ತೇನೆ. "

" ಇವತ್ತು ಮಕ್ಕಳಿಗೂ ಗಲಾಟೆ. ಪಾಠ ನಡೆಯುವ ಹಾಗೆ ಕಾಣಲಿಲ್ಲ. ನಾನು ನಾಡಿದ್ದು ಬರುತ್ತೇನೆ. "

ಎಂದು ಆಚಾರ್ಯರು ಎದ್ದರು.

ಮೇಷ್ಟ್ರರು ತನ್ನ ಮಾತಿಗೆ ಮರುಳಾಗಿ, ತಾನು ಹೇಳಿದುದನ್ನು ಅಕ್ಷರಶಃ ನಂಬಿದುದನ್ನು ಕಂಡು ಸರಸ್ವತಿ ತನ್ನ ಜಾಣ್ಮೆಯನ್ನು ತಾನೇ ಮೆಚ್ಚಿಕೊಂಡಳು.

ಮನೆಗೆಲಸ ಮುಗಿದಂತಾಗಿತ್ತು. ಮಂಜುಳಾ, ಸುಧಾ ಅಡಿಗೆಯ ಕೆಲಸ ವಹಿಸಿಕೊಂಡಿದ್ದರು. ಸರಸ್ವತಿ ತಲೆಗೆ ಸ್ನಾನಮಾಡಿ, ತನ್ನ ನೀಳವಾದ ಕೇಶರಾಶಿಯನ್ನು ಒಣಗಿಸಿಕೊಂಡು ತನ್ನ ಶಯ್ಯಾಗೃಹಕ್ಕೆ ಬಂದಳು. ಟ್ರಂಕ್ ತೆಗೆದು ಉಡುವುದಕ್ಕೆ ಧರ್ಮಾವರದ ಸೀರೆಯನ್ನು ಹೊರಗಿಟ್ಟುಕೊಂಡು ಹಾಸಿಗೆಯ ಮೇಲಿದ್ದ ಕೊಳಕು ಮಗ್ಗಲಾಸಿಗೆಯನ್ನು ಬದಲಾಯಿಸಿ, ಚಲುವೆಯಾಗಿ ಬಂದಿದ್ದ ಹೊಸ ಕರ್‌ಟೆಕ್ಸ್ ಮಗ್ಗಲಾಸಿಗೆ ಹಾಸಿದಳು.

ಸುಧೆಯನ್ನು ಕರೆದು ಅವಳನ್ನು ಅಂಗಡಿಗೆ ಕಳಿಸಿಕೊಟ್ಟು ಕೆಲವು ಬಗೆಯ ಹಣ್ಣುಗಳನ್ನೂ, ವೀಳೆಯದೆಲೆಯನ್ನು ತರಿಸಿ ತನ್ನ ರೂಮಿನ ಮೇಜಿನ ಮೇಲೆ ಅಣಿಮಾಡಿದಳು.

ಏಳೂವರೆಯ ವೇಳೆಗೆ ತಾಯಿ ಮಕ್ಕಳು ಜತೆಯಲ್ಲಿ ಕುಳಿತುಕೊಂಡು ಊಟ ಮುಗಿಸಿದರು. ಮಂಜುಳಾ, ಸುಧಾ ತಾಯಿಯ ಶಯ್ಯಾಗೃಹದ ಪಕ್ಕದಲ್ಲಿದ್ದ ತಮ್ಮ ರೂಮಿಗೆ ಹೋದ ಮೇಲೆ ಸರಸ್ವತಿ ಕೆಲವು ಸುಗಂಧ ಕಡ್ಡಿಗಳನ್ನು ಹೊತ್ತಿಸಿ ತೊಟ್ಟಿಯಲ್ಲಿ ರೂಮಿನಲ್ಲಿ ಇಟ್ಟಳು. ಅಡಿಗೆಯ ಮನೆಯಲ್ಲಿದ್ದ

ಹಾಲಿನ ಪಾತ್ರೆ, ನೀರಿನ ಪಾತ್ರೆ, ಒಂದೆರಡು ಲೋಟಗಳನ್ನು ತಂದು ಮೇಜಿನ ಮೇಲಿಟ್ಟು ರೂಮಿನ ದೀಪ ಆರಿಸಿ ತನ್ನ ಸೀರೆ ಕುಪ್ಪಸ ಬದಲಾಯಿಸಿ ಕೊಂಡು ಅಲ್ಲಿಯೇ ಕತ್ತಲಿನಲ್ಲಿ ಮಂಜಯ್ಯನ ಬರುವನ್ನು ನಿರೀಕ್ಷಿಸುತ್ತ ನಿಂತಳು.

ತೊಟ್ಟಿಯ ದೊಡ್ಡ ಗಡಿಯಾರ ಎಂಟು ಗಂಟೆ ಹೊಡೆಯಿತು. ಮಂಜಯ್ಯ ಬರುವ ಚಿನ್ಹೆ ಕಾಣಲಿಲ್ಲ. ಸರಸ್ವತಿಯ ಮನಸ್ಸಿಗೆ ಆತಂಕವಾಯಿತು. 'ಬರುವರೋ–ಬರುವುದಿಲ್ಲವೋ?' ಎಂದು ಅನುಮಾನ; 'ಬರದೇ ಉಂಟೇ–ಬೆಳಿಗ್ಗೆ ಐವತ್ತು ರೂಪಾಯಿ ಕೂಡ ಕೊಟ್ಟು ಹೋಗಿದ್ದಾರೆ' ಎಂದುಕೊಂಡಳು. ಎಂಟೂವರೆ ಗಂಟೆಗೆ ಮಂಜಯ್ಯನ ಸವಾರಿ ಕೈಯಲ್ಲಿ ಒಂದು ಚೀಲ ಹಿಡಿದು ಪ್ರವೇಶಿಸಿತು.

ಮಂಜಯ್ಯ ತನ್ನ ಕೈಗೆ ಕೊಟ್ಟ ಚೀಲವನ್ನು ತೆಗೆದುಕೊಂಡು ಚಾಪೆಯ ಮೇಲಿಟ್ಟು

"ಏಕೆ ಇಷ್ಟು ತಡವಾಯಿತು? ನಾನು ಏಳೂವರೆಯಿಂದ ನಿಮ್ಮ ದಾರಿ ನೋಡುತ್ತಿದ್ದೇನೆ."

"ಅಂಗಡಿ ಲೆಕ್ಕ ಮುಗಿಸಿಕೊಂಡು ಬರುವುದಕ್ಕೆ ತಡವಾಯಿತು. ನಾಳೆ ಮಂಗಳವಾರ, ಹೋಟಲಿಗೆ ರಜ. ಊಟವಾಯಿತೇ?"

"ಆಗಲೇ ಆಯಿತು. ನಿಮ್ಮ ಊಟ?"

"ನಾನು ಮಾಡುವುದಿಲ್ಲ. ನಾಲ್ಕು ಗಂಟೆಗೆ ಊಟ ಮಾಡಿದೆ."

"ಏಳಿ. ಬಡಿಸುತ್ತೇನೆ."

"ಬೇಡ. ಹಸಿವಿಲ್ಲ. ಇನ್ನುಮೇಲೆ ಇಲ್ಲಿ ಊಟ ಮಾಡದಿದ್ದರಾಗು ತ್ತದೆಯೇ?"

"ಇದೂ ನಿಮ್ಮ ಮನೆ ತಾನೆ."

"ಯಾರು ಅಲ್ಲವೆಂದರು. ಚೀಲದಲ್ಲಿ ಸ್ವಲ್ಪ ತಿಂಡಿಯಿದೆ ತೆಗೆದುಕೋ."

ಸರಸ್ವತಿ ಚೀಲದಲ್ಲಿದ್ದ ಸಾಮಾನುಗಳನ್ನೆಲ್ಲಾ ಹೊರಗೆ ತೆಗೆದಿಟ್ಟಳು. ಚೀಲದಲ್ಲಿ ನಾಲ್ಕು ಕುಚ್ಚು ಮಲ್ಲಿಗೆ ಹೂವು, ಒಂದು ಕಟ್ಟು ವೀಳೆಯದೆಲೆ

ಅದರ ಕೆಳಗೆ ಎರಡು ದಪ್ಪ ತಿಂಡಿಯ ಪೊಟ್ಟಣಗಳು. ಅದರ ಕೆಳಗೆ ನಾಲ್ಕಾರು ವೃತ್ತ ಪತ್ರಿಕೆಗಳಲ್ಲಿ ಸುತ್ತಿದ ಒಂದು ಪೊಟ್ಟಣ.

" ಇದೇನು ? "

" ಬಿಚ್ಚಿ ನೋಡು. ನಿನಗೆ ಗೊತ್ತಾಗುತ್ತದೆ. "

ಸರಸ್ವತಿ ಬಿಚ್ಚಿ ನೋಡಿದಳು. ನೀಲಿ ಬಣ್ಣದ ಧರ್ಮಾವರದ ಸೀರೆ, ಅದೇ ಬಣ್ಣದ ಕುಪ್ಪಸದ ಕಣ. ಮಂಜಯ್ಯನನ್ನು ಆಕ್ಷೇಪಿಸುವಂತೆ

" ಇದನ್ನೇಕೆ ತಂದಿರಿ ? "

" ಇದು ನಮ್ಮ ಮೊದಲನೆಯ ರಾತ್ರಿಯಲ್ಲವೇ ? "

ಸರಸ್ವತಿ ಮುಗುಳ್ನಗೆ ಬೀರಿ, ಒಳಗೆ ಹೋಗಿ ಒಂದು ತಟ್ಟೆ ತಂದು ಅದರಲ್ಲಿ ಖಾರದ, ಸಿಹಿಯ ತಿಂಡಿ ಸಾಮಾನುಗಳಲ್ಲಿ ಅರ್ಧವಿಟ್ಟು, ಹೂವಿನ ಎರಡು ಕುಚ್ಚನ್ನೂ ಇಟ್ಟು

" ನೀವು ಒಳಗೆ ಹೋಗಿ ಕುಳಿತುಕೊಳ್ಳಿ. ಹುಡುಗರಿಗೆ ತಿಂಡಿ ಕೊಟ್ಟು ಬರುತ್ತೇನೆ. "

" ಹಾಗೇ ಮಾಡು. ಇಲ್ಲಿ ನೋಡು. "

ಎಂದು ಸರಸ್ವತಿಯ ಗಲ್ಲ ಹಿಡಿದು

" ಹೊಸ ಸೀರೆ ಉಟ್ಟುಕೊಂಡು ಬಾ " ಎಂದು ಹೇಳಿದ.

ಸರಸ್ವತಿ ಮಕ್ಕಳಿಗೆ ತಿಂಡಿ ಹೂವು ಕೊಟ್ಟು, ಮಂಜಯ್ಯ ತಂದಿದ್ದ ಹೊಸ ಸೀರೆಯನ್ನುಟ್ಟುಕೊಂಡು, ಒಂದು ತಟ್ಟೆಯಲ್ಲಿ ಅವನು ತಂದಿದ್ದ ತಿಂಡಿ ಪದಾರ್ಥಗಳನ್ನಿಟ್ಟುಕೊಂಡು, ಕೈಯಲ್ಲಿ ಹೂ ಹಿಡಿದು ರೂಮಿಗೆ ಬಂದಳು.

ಕೈಯಲ್ಲಿದ್ದ ತಟ್ಟೆಯನ್ನು ಮೇಜಿನ ಮೇಲಿಟ್ಟು ಸರಸ್ವತಿ ಸ್ವಿಚ್ ಹಾಕಿದಳು. ಮಂಜಯ್ಯ ಅವಳನ್ನು ಒಂದರೆಕ್ಷಣ ದಿಟ್ಟಿಸಿ ನೋಡಿ ಭರದಿಂದ ಅಪ್ಪಿ ಮುದ್ದಿಟ್ಟು ತೊಡೆಯ ಮೇಲೆ ಕೂಡಿಸಿಕೊಂಡು

" ಅಲಂಕಾರ ಎಲ್ಲಾ ಸರಿಹೋಯಿತು. ಆದರೆ ಒಂದೇ ಕಡಿಮೆಯಾಯಿತು. "

" ಏನದು ? "

ಮೇಜಿನ ಮೇಲಿದ್ದ ಹೂವನ್ನು ತೆಗೆದುಕೊಂಡು ಮಂಜಯ್ಯ ಸುತ್ತಿ ಕೈಯಲ್ಲಿ ಹಿಡಿದುಕೊಂಡ. ಸರಸ್ವತಿ ಅವನನ್ನೇ ನೋಡಿ

" ನಾನು ಹೂ ಮುಡಿಯುವುದನ್ನು ಬಿಟ್ಟಿದ್ದೇನೆ. "

" ಅದನ್ನು ನಾನು ಬಲ್ಲೆ. ಆ ದಿವಸ ಮುಗಿದುಹೋಯಿತು. ಈಗ ನಿನ್ನ ಕೈ ಹಿಡಿದಿರುವವನು ನಾನು. ನಿನಗೆ ಹೂ ಮುಡಿಸುವವನು ನಾನೇ. "

ಎಂದು ಅವಳ ಹೆರಳಿಗೆ ಹೂ ಸುತ್ತಿದ.

ಸರಸ್ವತಿ ತಿಂಡಿಯ ತಟ್ಟೆಯನ್ನು ಕೈಗೆತ್ತಿಕೊಂಡು ಮಂಜಯ್ಯನಿಗೆ ತಿನ್ನಿಸ ಲಾರಂಭಿಸಿದಳು. ಅವನೂ ಅವಳಿಗೆ ತಿನ್ನಿಸಿದ. ಇಬ್ಬರೂ ಲೋಟದಲ್ಲಿದ್ದ ಹಾಲು ಮುಗಿಸಿದರು. ಸರಸ್ವತಿ ತನ್ನಿನಿಯನಿಗೆ ತಾಂಬೂಲ ಸೇವನೆ ಮಾಡಿಸಿ ದಳು. ಮಂಜಯ್ಯ ತಾಂಬೂಲರಾಗದಿಂದ ರಂಜಿತವಾಗಿದ್ದ ತನ್ನ ಪ್ರೇಯಸಿಯ ಅಧರಗಳನ್ನು ಹೀರಿದ. ಇಬ್ಬರ ತುಟಿಗಳಿಂದ ತಾಂಬೂಲದ ಹನಿಗಳು ಹಾರಿ ಅವರ ಬಟ್ಟೆಗಳ ಮೇಲೆ ಬಿದ್ದವು.

ಸರಸ್ವತಿಯನ್ನಪ್ಪಿ ಮಂಜಯ್ಯ ಉತ್ಕಂಠತೆಯಿಂದ

" ಸರಸ್ವತಿ—ನನಗೆ ಮೋಸ ಮಾಡಬೇಡ " ಎಂದ.

ಸರಸ್ವತಿ ಅವನ ಕೆನ್ನೆ ನೇವರಿಸುತ್ತ

" ಸತ್ಯವಾಗಿ ಮೋಸ ಮಾಡುವುದಿಲ್ಲ. ನೀವು ನನ್ನ ಕೈಬಿಡಬೇಡಿ " ಎಂದಳು.

ಅವರಿಗೆ ಎಚ್ಚರವಾದಾಗ ಬೆಳಕು ಹರಿದಿತ್ತು. ಹಾಲಿನವನು ಹೊರ ಬಾಗಿಲಿನಲ್ಲಿ ಕೂಗಿಕೊಳ್ಳುತ್ತಿದ್ದ.

೪

ಕುಮಾರಯ್ಯ ನರ್ತಕನಾಗುತ್ತಾನೆಂದು ಅವನಾಗಲಿ ಅವನ ಸಂಬಂಧಿಗಳಾಗಲಿ ಅವನನ್ನು ತಿಳಿದವರಾಗಲಿ ಕನಸುಮನಸಿನಲ್ಲಿಯೂ ಭಾವಿಸಲು ಸಾಧ್ಯವಿರಲಿಲ್ಲ. ಕುಮಾರಯ್ಯನ ತಂದೆ ಚನ್ನಗಿರಿ ಮಾದಯ್ಯ ಮಗನನ್ನು ಓದಿಸಿ ಮುಂದಕ್ಕೆ ತರುವ ಸ್ಥಿತಿಯಲ್ಲಿರಲಿಲ್ಲ. ಶ್ರೀಮಂತ ಜಮೀನುದಾರರೊಬ್ಬರ ಮನೆಯಲ್ಲಿ ಅವನು ಮನೆವಾರ್ತೆ ಮಾಡಿಕೊಂಡು ಕಾಲ ಹಾಕುತ್ತಿದ್ದ. ಮಾದಯ್ಯನ ವಯಸ್ಸು ಅರವತ್ತಕ್ಕೆ ಸಮೀಪಿಸಿದ್ದರೂ ಅವನಿಗೆ ಮದುವೆ ಚಪಲ ಬಿಡಲಿಲ್ಲ. ಆ ಅಪರವಯಸ್ಸಿನಲ್ಲಿ ಹದಿನೆಂಟು ವರ್ಷದ ಹುಡುಗಿಯೊಬ್ಬಳನ್ನು ಲಗ್ನವಾದ. ಮಾದಯ್ಯನ ಎರಡನೆಯ ಕುಟುಂಬ ಮನೆಗೆ ಕಾಲಿಟ್ಟ ದಿನದಿಂದಲೇ ಅವಳಿಗೂ ಕುಮಾರಯ್ಯನಿಗೂ ಹಣಾಹಣಿ ಆರಂಭವಾಯಿತು. ಕುಮಾರಯ್ಯ ತನ್ನ ಬೆಳ್ಳಿ ಗೊಲಸನ್ನು ಲಪ್ಟಾಯಿಸಿದ್ದಾನೆಂದು ರುದ್ರಮ್ಮ ಆಪಾದನೆ ಹೊರಸಿದಳು. ಹೆಂಡತಿ ಮಾತು ಕೇಳಿಕೊಂಡು ಮಾದಯ್ಯ ಮಗನನ್ನು 'ಸಾಯಾಬೀಳಾ' ಹೊಡೆದ. ಈ ಸುದ್ದಿ ಕೇಳಿ ಶಿವಮೊಗ್ಗೆಯಿಂದ ಓಡಿಬಂದ ಮಾದಯ್ಯನ ಮಗಳು ಭದ್ರಮ್ಮ, ಅಳಿಯ ಸಂಗಯ್ಯ ತನಿಖೆ ನಡಸಿದರು. ಅವರಿಗೂ ನಿಜಸ್ಥಿತಿ ಗೊತ್ತಾಗಲಿಲ್ಲ. ಕುಮಾರಯ್ಯನ ಮೇಲಣ ಕಿಚ್ಚಿಗೆ ರುದ್ರಮ್ಮ ಸುಳ್ಳು ಆಪಾದನೆ ಹೊರೆಸುತ್ತಿದ್ದಾಳೆನ್ನುವುದಕ್ಕೂ ಆಧಾರವಿತ್ತು; ಕುಮಾರಯ್ಯ ಲಪ್ಟಾಯಿಸಿರಬಹುದೆನ್ನುವುದಕ್ಕೂ ಆಧಾರವಿತ್ತು. ಸಂಗಯ್ಯ ದೋಷವನ್ನು ಕುಮಾರಯ್ಯನ ಮೇಲೆ ಹಾಕಿದ; ಭದ್ರಮ್ಮ ತಮ್ಮನ ಪರ ವಹಿಸಿ ದೋಷವನ್ನು ಚಿಕ್ಕಮ್ಮನ ಮೇಲೆ ಹಾಕಿದಳು. ಕೊನೆಗೆ ಭದ್ರಮ್ಮನ ಬಲವಂತಕ್ಕೆ ಸಂಗಯ್ಯ ಕುಮಾರಯ್ಯನನ್ನು ಶಿವಮೊಗ್ಗೆಗೆ ಕರೆದುಕೊಂಡು ಬಂದು ತನ್ನ ಜತೆಯಲ್ಲಿಟ್ಟುಕೊಂಡ.

ಶಿವಮೊಗ್ಗೆಯಲ್ಲಿ ಸಂಗಯ್ಯನದೊಂದು ಕಬ್ಬಿಣದ ಸಾಮಾನಿನ ಅಂಗಡಿಯಿತ್ತು. ತನ್ನ ಅಂಗಡಿ ಕೆಲಸಕ್ಕೆ ಭಾವಮೈದುನನಿಂದ ಸಹಾಯ ದೊರೆಯು

ಬಹುದೆಂದು ಸಂಗಯ್ಯ ನಿರೀಕ್ಷಿಸಿಕೊಂಡು ಅವನನ್ನು ಸ್ಕೂಲು ಸೇರಿಸಿ ಅವನ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಸಿದ್ಧನಾದ. ಸ್ಕೂಲು ಮುಗಿದೊಡನೆಯೇ ಕುಮಾರಯ್ಯ ಅಂಗಡಿಗೆ ಬಂದು ಭಾವನ ಜತೆ ಕೂಡಬೇಕಾಗಿತ್ತು. ಅವನಿಗೆ ಈ ಕಬ್ಬಿಣದ ಅಂಗಡಿ ಜೀವನ ಸಾಕುಸಾಕಾಗುತ್ತ ಬಂತು.

ಶಿವಮೊಗ್ಗೆಗೆ ಯಾವ ನಾಟಕದ ಕಂಪೆನಿ ಬರಲಿ ಅದರ ಪ್ರಥಮ ಸ್ವಯಂ ಸೇವಕ ಕುಮಾರಯ್ಯ. 'ನಾಟಕದವರ ಸಹವಾಸ ಮಾಡಬೇಡ' ಎಂದು ಸಂಗಯ್ಯ ಹೇಳಿ ಹೇಳಿ ಬೇಸತ್ತ. ಕುಮಾರಯ್ಯ ಭಾವನ ಬೈಗಳ, ಬಡಿತ ಸಹಿಸುತ್ತಿದ್ದನಲ್ಲದೆ ತನ್ನ ಚಾಳಿ ಬಿಡಲಿಲ್ಲ. ನಾಟಕದವರ ಜತೆ ಓಡಿಯಾಡಿ ಕೊಂಡು, ಅವರ ಸೇವೆ ಶಿಶ್ರೂಷೆ ಮಾಡುವುದೆಂದರೆ ಕುಮಾರಯ್ಯನಿಗೆ ಬಹಳ ಪ್ರಿಯವಾಗಿತ್ತು. ಶಿವಮೊಗ್ಗೆಗೆ ಒಮ್ಮೆ ಪ್ರವಾಸ ಬಂದ 'ಕಲಾವಿಕಾಸ ನಾಟಕ ಮಂಡಲಿ'ಯಲ್ಲಿ ಹೆಣ್ಣು ಪಾತ್ರ ಅಭಿನಯಿಸುತ್ತಿದ್ದ ಮಹಾಲಿಂಗಪ್ಪನಿಗೂ ಕುಮಾರಯ್ಯನಿಗೂ 'ಗಳಸ್ಯ ಕಂಠಸ್ಯ'ವಾಯಿತು. ಮಹಾಲಿಂಗಪ್ಪ ನಾಟಕ ಗಳಲ್ಲಿ 'ಡ್ಯಾನ್ಸ್' ಮಾಡಿ ಖ್ಯಾತಿ ಗಳಿಸಿಕೊಂಡಿದ್ದ. ಡ್ಯಾನ್ಸ್ ಅಭ್ಯಾಸ ಮಾಡಿಕೊಂಡು ಉದಯಶಂಕರನಂತೆ ತಾನೂ ಪ್ರಸಿದ್ಧ ನರ್ತಕನಾಗಬೇಕೆಂದು ಅವನು ಹಾತೊರೆಯುತ್ತಿದ್ದ. ವಿಧಿವಶಾತ್ 'ಕಲಾವಿಕಾಸ ನಾಟಕ ಮಂಡಳಿ' ಶಿವಮೊಗ್ಗೆಯಲ್ಲಿ ದಿವಾಳಿ ಎದ್ದುಹೋಯಿತು. ಮಾಲಿಕರು ಹೇಳದೆ ಕೇಳದೆ ಓಡಿಹೋದರು. ನಟರು ಊರಿನವರ ಹತ್ತಿರ ಭಿಕ್ಷೆ, ಸಾಲವೆತ್ತಿ, ತಮ್ಮ ತಮ್ಮ ಊರು ಸೇರಿಕೊಂಡರು. ಮುಂದೇನು ಮಾಡುವುದೆಂದು ಯೋಚಿಸುತ್ತಿದ್ದ ಮಹಾಲಿಂಗೂ ಒಂದು ದಿನ ತನ್ನ ಯೋಚನೆಯನ್ನು ಕುಮಾರಯ್ಯನ ಮುಂದೆ ಬಿಚ್ಚಿಟ್ಟ.

"ನೋಡು ಕುಮಾರೂ—ನಾವು ಹೇಗಾದರೂ ಮಾಡಿ ಮದರಾಸು ಸೇರಿದರೆ ನಮ್ಮ ಮಾರ್ಗ ಸಲೀಸಾಗುತ್ತದೆ. ಅಲ್ಲಿ ಯಾವದಾದರೂ ಫಿಲಂ ಕಂಪನಿಯಲ್ಲಿ ನನಗೆ ನೌಕರಿ ಸಿಕ್ಕುತ್ತದೆ. ಅವರಿವರ ಆಶ್ರಯ ಮಾಡಿಕೊಂಡು ಒಂದು ಡ್ಯಾನ್ಸ್ ಷೋ ಹೊಡೆದುಬಿಟ್ಟರೆ ಮುಂದೆ ಯೋಚನೆಯಿಲ್ಲ. ಆದರೆ ಮದರಾಸು ಸೇರುವುದು ಹೇಗೆಂಬುದೇ ಯೋಚನೆ."

" ಮದರಾಸು ಸೇರಿದ ಮೇಲೆ ಲಾಟರಿ ಆದರೆ. "

" ಆಗಾಕಿಲ್ಲ ಕಣೋ. ನಾನು ಕಂಪೆನಿ ಜತೆ ಎರಡು ಸಲ ಮದರಾಸಿಗೆ ಹೋಗಿ ಬಂದಿದ್ದೇನೆ—ಅಲ್ಲಿನ ವಿಷಯವೆಲ್ಲಾ ನಂಗೆ ಚೆನ್ನಾಗಿ ಗೊತ್ತು. ಡ್ಯಾನ್ಸ್ ಎಂದಗೆ ಮದರಾಸು ಜನ ಪ್ರಾಣ ಬಿಡುತ್ತಾರೆ. "

"ನನಗೂ ಡ್ಯಾನ್ಸ್ ಕಲೀಬೇಕೂಂತ ತುಂಬ ಮನಸ್ಸಾಗಿದೆ ಮಹಾಲಿಂಗೂ. ಮದರಾಸಿನಲ್ಲಿ ಕಲಿಯೋಕೆ ನಂಗೆ ಸಹಾಯ ಮಾಡುವ ಹಾಗಿದ್ರೆ ನಾನೂ ಬರ್‍ತೀನಿ. "

" ಶಿವನ ಮೇಲೆ ಭಾರಹಾಕಿ ಹೋದರಾಯಿತು. ಶಿವಮೊಗ್ಗೆಯಲ್ಲಿ ಕುಳಿತರೆ ಏನಾಗುತ್ತದೆಯೋ—ಮದರಾಸು ದೊಡ್ಡ ಪಟ್ಟಣ. ಅಲ್ಲಿ ಒಂದಲ್ಲ ಒಂದು ಅವಕಾಶ ಸಿಕ್ಕುತ್ತದೆ. "

" ಮದರಾಸಿಗೆ ನಿನ್ನ ಕರ್‍ಕೊಂಡು ಹೋಗೋ ಜವಾಬ್ದಾರಿ ನನಗಿರಲಿ. ಮುಂದಿನ ವಿಷಯ ನೀನು ನೋಡಿಕೊಳ್ಳಬೇಕು. ದುಡ್ಡು ಎಷ್ಟು ಬೇಕಾಗುತ್ತೆ ಮಾಲಿಂಗೂ. "

" ನೂರು ರೂಪಾಯಿ ಬೇಡವಾ ? "

" ನನಗಿರಲಿ ಬಿಡು. ಇವತ್ತು ನಾಳೆ ಸುಮ್ಮನಿದ್ದುಬಿಡು. ನಾಡಿದ್ದು ಇಲ್ಲಿಂದ ಇಬ್ಬರೂ ಹೊರಟುಬಿಡೋಣ " ಎಂದು ಆಶ್ವಾಸನವಿತ್ತ.

ಕುಮಾರಯ್ಯ ಮಾತಿಗೆ ತಪ್ಪಲಿಲ್ಲ. ' ನಾಡಿದ್ದು ' ಮಹಾಲಿಂಗಪ್ಪನನ್ನೂ ಎಬ್ಬಿಸಿಕೊಂಡು ಬೆಂಗಳೂರಿಗೆ ಬಂದ.

ಬೆಂಗಳೂರಿನಲ್ಲಿ ಕುಮಾರಯ್ಯ ಮೆಲ್ಲನೆ ಕಿಸೆಯಿಂದ ಒಂದು ಜತೆ ಚಿನ್ನದ ಬಳೆ ತೆಗೆದು

" ಇದನ್ನು ಮಾರಬೇಕಲ್ಲ ಮಾಲಿಂಗೂ " ಎಂದ.

ಮಹಾಲಿಂಗಪ್ಪನ ಎದೆಯ ಆವೇಗ ಇದ್ದಕ್ಕಿದ್ದಂತೆ ಹೆಚ್ಚಾಯಿತು. ಒಡವೆಯನ್ನವನು ಎವೆಯಿಕ್ಕದೆ ನೋಡುತ್ತಿದ್ದುದನ್ನು ಕಂಡು ಕುಮಾರಯ್ಯ

" ಹೊಡೆದುಕೊಂಡು ಬಂದೆಯೆಂದು ತಿಳಿದುಕೊಳ್ಳಬೇಡಮ್ಮ. ನಮ್ಮಕ್ಕನ್ನ ದುಡ್ಡು ಕೇಳಿದೆ. ಪಾಪ, ನೂರಾರು ರೂಪಾಯಿ ಅವಳ ಹತ್ತಿರ ಎಲ್ಲಿಂದ

ಬರಬೇಕು ಹೇಳು. ಈ ಬಳೆ ಜತೆ ಕೊಟ್ಟು ಆಶೀರ್ವಾದ ಮಾಡಿದಳು. ”

ಎಂದು ಸಮಾಧಾನ ಹೇಳಿದ.

ಇಬ್ಬರೂ ಮದರಾಸು ಮುಟ್ಟಿದರು. ರೈಲ್ವೆ ಸ್ಟೇಷನ್ ಪಕ್ಕದಲ್ಲಿದ್ದ ಛತ್ರದಲ್ಲಿ ತಂಗಿ ಹೋಟಲಿನಲ್ಲಿ ಊಟ ಮುಗಿಸಿದರು. ಮಹಾಲಿಂಗಪ್ಪ ಕೆಲಸ ಹುಡುಕಲಾರಂಭಿಸಿದ. ದಿನವೂ ಜೋಲುಮೋರೆ ಹಾಕಿಕೊಂಡು ಛತ್ರಕ್ಕೆ ಹಿಂದಿರುಗುವುದೇ ಅವನ ಕೆಲಸವಾಯಿತು. ಹೀಗೆ ನಾಲ್ಕು ದಿವಸ ಕಳೆದವು. ಕುಮಾರಯ್ಯನ ಪುಟ್ಟಗಂಟು ಕರಗುತ್ತಿತ್ತು. ಒಂದು ದಿನ, ಮಹಾಲಿಂಗಪ್ಪನ ಸವಾರಿ ಛತ್ರಕ್ಕೆ ದಯಮಾಡಿಸಲಿಲ್ಲ. ಕುಮಾರಯ್ಯ ಕಾದುಕಾದು ಬೇಸರ ಗೊಂಡ. ಹೋಟೆಲಿಗೆ ಊಟಕ್ಕಾದರೂ ಹೋಗಿ ಬರೋಣ ಎಂದು ದುಡ್ಡಿಗೆ ಕೈಹಾಕಿದ. ಒಂದು ಬಿಡಿಗಾಸೂ ಉಳಿದಿರಲಿಲ್ಲ.

ಏನು ಮಾಡಬೇಕೆಂಬುದು ಕುಮಾರಯ್ಯನಿಗೆ ಗೊತ್ತಾಗಲಿಲ್ಲ. ಶಿವಮೊಗ್ಗೆಗೆ ಕಾಗದ ಬರೆದು ಭಾವನಿಂದ ಹಣ ತರಿಸಿಕೊಂಡು ಊರು ಸೇರೋಣವೆಂದು ಯೋಚನೆ ಮಾಡಿದ. ಭಾವನಿಗೆ ತನ್ನ ಪತ್ತೆ ಸಿಕ್ಕಿದರೆ ಅವನು ಬಂದು ಮೂಳೆ ಮುರಿಯುವುದರಲ್ಲಿ ಸಂದೇಹವಿಲ್ಲವೆಂಬುದು ಕುಮಾರಯ್ಯನಿಗೆ ಹೊಳೆಯಿತು.

ಹೊಸ ಊರು—ಹೊಸ ಭಾಷೆ—ಪರಿಚಯದವರು ಯಾರೂ ಇಲ್ಲ. ಊಟ ಮಾಡದೆ ಹಸಿದುಕೊಂಡಿರಲು ಸಾಧ್ಯವಿಲ್ಲ. ಕುಮಾರಯ್ಯ ತಾನೂ ಮಾಲಿಂಗೂ ಊಟ ಮಾಡುತ್ತಿದ್ದ ಹೊಟೇಲಿನ ಅಯ್ಯರ್ ಕಾಲಿಗೆ ಬಿದ್ದು ಬೇಡಿಕೊಂಡ. ಕೆಲಸ ಮಾಡಿದರೆ ಅನ್ನ ಹಾಕುವುದಾಗಿ ಅಯ್ಯರ್ ಹೇಳಿದ. ಅವನ ಮಾತಿಗೆ ಒಪ್ಪಿಕೊಳ್ಳದೆ ಕುಮಾರಯ್ಯನಿಗೆ ಬೇರೆ ಮಾರ್ಗವೇ ಇರಲಿಲ್ಲ.

ಒಂದಲ್ಲ ಒಂದು ದಿನ ಮಹಾಲಿಂಗೂ ಕೈಗೆ ಸಿಕ್ಕುತ್ತಾನೆ ಎನ್ನುವ ನಂಬಿಕೆಯನ್ನು ಕುಮಾರಯ್ಯ ಬಿಡಲಿಲ್ಲ. ಹೊಟೇಲ್ ಕೆಲಸ ಮುಗಿದೊಡನೆಯೇ ಬೀದಿ ಬೀದಿ ಸುತ್ತುತ್ತಿದ್ದ. ಬೀದಿಯಲ್ಲಿ ತಿರುಗಾಡುವವರನ್ನೆಲ್ಲ ದಿಟ್ಟಿಸಿ ನೋಡುತ್ತಿದ್ದ.

ಮೂರು ತಿಂಗಳಲ್ಲಿ ಕುಮಾರಯ್ಯನಿಗೆ ಅಯ್ಯರ್ ಹೊಟೇಲಿನಲ್ಲಿ ತಿಂಡಿ

ಪಾತ್ರೆಗಳನ್ನೆತ್ತುವುದು, ನೆಲ ಸಾರಿಸುವುದು ಕೆಲಸದಿಂದ 'ಸಪ್ಲೈಯರ್' ಕೆಲಸಕ್ಕೆ 'ಪ್ರಮೋಷನ್' ಸಿಕ್ಕಿತು. ಅಯ್ಯರ್ ಕೈಗೆ ಮೂರು ರೂಪಾಯಿ ಸಂಭಾವನೆಯನ್ನೂ ಕೊಡುತ್ತಿದ್ದ. ಆರು ತಿಂಗಳು ಕಳೆಯುವುದರಳೊಳಗಾಗಿ ಕುಮಾರಯ್ಯ, ಅಯ್ಯರ್ ಹೊಟೇಲಿನ 'ನಂ ೧, ಸಪ್ಲೈಯರ್' ಆದ. ಅವನ ಸಂಬಳ ತಿಂಗಳಿಗೆ ಹತ್ತು ರೂಪಾಯಿಗೇರಿತು.

ತನಗೆ ದೊರೆತಿದ್ದ ಸಿದ್ಧಿಯನ್ನರಿತ ಕುಮಾರಯ್ಯ ಹತ್ತು ರೂಪಾಯಿಗೆ ತೃಪ್ತನಾಗಲಿಲ್ಲ. ತನಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಬೇಕೆಂದು ಕೇಳಿದ. ಅಯ್ಯರ್ ಹೆಚ್ಚುಹಣ ಕೊಡುವುದಕ್ಕೆ ಹಿಂದೆಮುಂದೆ ನೋಡಿದಾಗ ಕುಮಾರಯ್ಯ ಅವನಿಗೆ ಕೈಮುಗಿದು ಬೇರೆ ಹೊಟೇಲು ಸೇರಿದ.

ಎರಡು ವರ್ಷಗಳಲ್ಲಿ ಕುಮಾರಯ್ಯ ಚೀಣಬಜಾರ್ ಸ್ಟ್ರೀಟ್, ಮೈಲಾಪುರ, ಟ್ರಿಪ್ಲಿಕೇನ್, ಎಗ್ಮೋರ್, ಮಾಂಬಳಂನಲ್ಲಿದ್ದ ಹೊಟೇಲುಗಳಲ್ಲಿ ಕೆಲಕೆಲ ತಿಂಗಳು ಸರ್ವಿಸು ಮಾಡಿ ಕೊನೆಗೆ ಜಾರ್ಜ್‌ಟೌನಿನಲ್ಲಿದ್ದ 'ಆಲೆಟ್ ರೆಸ್ಟೋರ್‍ಯಾಂಟ್' ನಲ್ಲಿ (**Elite Restaurant**) 'ಸಪ್ಲೈಯರ್' ಆಗಿ ನಿಂತ. ಹೊಟೇಲ್ ಸಮವಸ್ತ್ರ—ಬಿಳೀ ಷರಾಯಿ, ಬಿಳೀ ಕೋಟು, ಬಿಳೀ ಟೋಪಿ, ಅದರ ಮೇಲೆ ಹೊಟೇಲ್ ಹೆಸರು ಕೆತ್ತಿದ ಪಟ್ಟಿ ಅವನ ಮೈಮೇಲೆ ಬಂದವು.

'ಆಲೆಟ್ ರೆಸ್ಟೋರ್‍ಯಾಂಟ್' ಮದರಾಸಿನಲ್ಲಿ ಸುಪ್ರಸಿದ್ಧ ಉಪಾಹಾರ ಮಂದಿರವಾಗಿತ್ತು. ಸೊಗಸಾದ ತೋಟದಲ್ಲಿ ಸ್ಥಾಪಿಸಲ್ಪಟ್ಟಿದ್ದ ಹೊಟೇಲು ನಗರದ ಎಲ್ಲ ಬಗೆಯ ರಸಿಕರನ್ನು ಆಕರ್ಷಿಸುತ್ತಿತ್ತು. ಶ್ರೀಮಂತರು, ವ್ಯಾಪಾರಸ್ಥರು, ದೊಡ್ಡ ದೊಡ್ಡ ಜಮೀನುದಾರರು, ಸಿನೀಮಾ ನಟನಟಿಯರು, ಸಂಗೀತ ವಿದ್ವಾಂಸರು, ನರ್ತಕನರ್ತಕಿಯರು ಸಂಜೆಯ ಹೊತ್ತು ರೆಸ್ಟೋರ್‍ಯಾಂಟಿಗೆ ಬರುತ್ತಿದ್ದರು. ಈ ಹೊಟೇಲನ್ನು ಪ್ರೋತ್ಸಾಹಿಸುತ್ತಿದ್ದವರಲ್ಲಿ ಭರತನಾಟ್ಯ ಪ್ರವೀಣ ರಾಮನಾಥ್ ಮತ್ತು ಅವನ ಜತೆಗಾತಿ ಕುಂಜುಮಣಿಯರೂ ಇದ್ದರು. ರಾಮನಾಥ್ ಕುಂಜುಮಣಿ ಹೊಟೇಲಿಗೆ ಬಂದೊಡನೆಯೇ ಕುಮಾರಯ್ಯ ಎಲ್ಲಿದ್ದರೂ ಧಾವಿಸಿ ಅವರ ಟೇಬಲ್ಲಿಗೆ ಬಂದು ಅವರಿಗೆ ತಿಂಡಿ

ತೀರ್ಥಗಳನ್ನೊದಗಿಸುತ್ತಿದ್ದ. ಹೊಟೇಲಿನಲ್ಲಿ ಆರಂಭವಾದ ಪರಿಚಯವನ್ನು ಕುಮಾರಯ್ಯ ಅಲ್ಲಿಗೇ ಮುಗಿಯಬಿಡಲಿಲ್ಲ.

ಒಂದು ದಿನ ಧೈರ್ಯ ಮಾಡಿಕೊಂಡು, ಪುರಶವಾಕಂನಲ್ಲಿದ್ದ ರಾಮನಾಥರ ಮನೆಗೆ ಹೋದ. ರಾಮನಾಥ್ ರಿಹರ್ಸಲ್ ಮಾಡುತ್ತಿದ್ದರು. ಅಲ್ಲಿಗೇ ಕುಮಾರಯ್ಯನನ್ನು ಬರಮಾಡಿಕೊಂಡರು. ರಿಹರ್ಸಲ್ ಮುಗಿಯುತ್ತಲೇ

" ಏನು ಕುಮಾರ್, ಇಲ್ಲಿಗೆ ಬಂದೆ ? " ಎಂದು ಕೇಳಿದರು.

" ತಮ್ಮನ್ನೇ ನೋಡುವುದಕ್ಕೆ ಬಂದೆ ಸಾರ್. "

" ನನ್ನಿಂದೇನಾಗಬೇಕು ಹೇಳು. "

" ತಮ್ಮಿಂದಲೇ ನನ್ನ ಜೀವನ ನೇರವಾಗಬೇಕು ಸಾರ್. "

ಎಂದು ತಾನು ನೃತ್ಯಕಲೆ ಕಲಿಯಲು ಮದರಾಸಿಗೆ ಬಂದದ್ದು, ಗೆಳೆಯ ಮಹಾಲಿಂಗೂ ಕೈಕೊಟ್ಟುದು, ತಾನು ಹೊಟೇಲು ಕೆಲಸ ಸೇರಿ ಕಾಲ ತಳ್ಳುತ್ತಿರುವುದನ್ನು ವಿವರಿಸಿ

" ತಾವು ದೊಡ್ಡ ಮನಸ್ಸು ಮಾಡಿ ನನ್ನ ಅನುಗ್ರಹಿಸಬೇಕು ಸಾರ್. ಏನು ಕೆಲಸ ಹೇಳಿದರೂ ಮಾಡುತ್ತೇನೆ. ಚೆನ್ನಾಗಿ ಅಡಿಗೆ ಮಾಡುವುದಕ್ಕೂ ನನಗೆ ಬರುತ್ತದೆ. ತಾವು ನೃತ್ಯ ಹೇಳಿಕೊಟ್ಟು, ಮೇಲು ಖರ್ಚಿಗೆ ಸ್ವಲ್ಪ ಹಣ ಕೊಟ್ಟರೆ ಸಾಕು. "

" ಅದೇನೋ ಸರಿ. ನಿನ್ನ ಹೊಟೇಲ್ ಬಿಡಿಸಿ ನಾನು ಕರೆದು ತಂದಿಟ್ಟುಕೊಂಡರೆ ಸುಂದರಂ ಸುಮ್ಮನಿರುತ್ತಾರೆಯೇ ? ಅವರು ನನ್ನ ಸ್ನೇಹಿತರು. "

" ಅವರ ಕಾಲಿಗೆ ಬಿದ್ದು ನಾನು ಬಿಡುಗಡೆಯಾಗುತ್ತೇನೆ ಸಾರ್. ನೀವೂ ಒಂದು ಮಾತು ಹೇಳಿದರೆ ಸುಂದರಂ ಒಪ್ಪುತ್ತಾರೆ. "

ಕುಮಾರಯ್ಯನ ಶ್ರದ್ಧೆ ರಾಮನಾಥರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿತು.

" ಆಗಲಿ ನೋಡೋಣ. ನಾನು ನಾಳೆ ಸುಂದರಂ ಜತೆ ಮಾತಾಡುತ್ತೇನೆ " ಎಂದು ತಿಳಿಸಿದರು.

ಸುಂದರಂ ಜತೆ ರಾಮನಾಥ್ ಮಾಡಿದ ಸಂಧಾನ ನಿಷ್ಫಲವಾಗಲಿಲ್ಲ.

ಕುಮಾರಯ್ಯನ ಕಣ್ಣೀರೂ ಸ್ವಲ್ಪ ಕೆಲಸ ಮಾಡಿತು.

ಕುಮಾರಯ್ಯ ಬಂದು ರಾಮನಾಥರ ಮನೆಯಲ್ಲಿ ಪ್ರತಿಷ್ಠಿತನಾದ. ಅಡಿಗೆ ಕೆಲಸ ಅವನ ಪಾಲಿಗೆ ಬರದಿದ್ದರೂ ರಾಮನಾಥರ ನೃತ್ಯಶಾಲೆಯ ಸಂಬಂಧವಾದ ಕೆಲಸಗಳು, ಅವರ ಮನೆಯ ಸಣ್ಣ ಪುಟ್ಟ ಕೆಲಸಗಳು ಕುಮಾರನ ಪಾಲಿಗೆ ಬಂದವು. ಕುಮಾರಯ್ಯ ಅವುಗಳನ್ನೆಲ್ಲಾ ಸಂತೋಷವಾಗಿ ನಿರ್ವಹಿಸಿಕೊಂಡು ರಾಮನಾಥರ ಕೃಪೆಗೆ ಪಾತ್ರನಾದ. ನೃತ್ಯಶಾಲೆಯಲ್ಲಿ ಅವನಿಗೆ ಪ್ರವೇಶ ಸಿಕ್ಕಿತು. 'ರಿಹರ್ಸಲ್' ವೇಳೆಯಲ್ಲಿ ನೃತ್ಯಾಭ್ಯಾಸ ಮಾಡುತ್ತಿದ್ದುದು ಮಾತ್ರವಲ್ಲದೆ, ಪುರಸತ್ತು ಸಿಕ್ಕಿದಾಗಲೆಲ್ಲಾ ಹಿರಿಯ ಶಿಷ್ಯರ ನೆರವು ಪಡೆದು ಅಭ್ಯಾಸ ಮುಂದುವರಿಸುತ್ತಿದ್ದ. ಮಲಗಿದರೆ ರಾತ್ರಿ ಕನಸಿನಲ್ಲಿಯೂ ಅವನ ಬಾಯಲ್ಲಿ ಜತಿಸ್ವರಗಳು ಹೊರಡುತ್ತಿದ್ದವು.

ಕ್ರಮ ಕ್ರಮೇಣ ರಾಮನಾಥರ ನೃತ್ಯ ಪ್ರದರ್ಶನಗಳಲ್ಲಿ ಕುಮಾರಯ್ಯನಿಗೆ ಎಡೆ ದೊರೆಯಲಾರಂಭಿಸಿತು. ಅವರ ಕಾರ್ಯಕ್ರಮ ಸೂಚೀಪತ್ರಗಳಲ್ಲಿ ಅವನ ಹೆಸರೂ ಕಾಣಿಸಲ್ಪಡುತ್ತಿತ್ತು. ರಾಮನಾಥರು ಸಿಲಾನ್ ಪ್ರವಾಸ ಕೈಗೊಂಡಾಗ ಕುಮಾರಯ್ಯನೂ ಅವರ ಜತೆ ಹೋಗಿ ಖ್ಯಾತಿ ಗಳಿಸಿದ. ಅವನ ಭಾವ ಚಿತ್ರಗಳು ರಾಮನಾಥರ ಕಾರ್ಯಕ್ರಮ ಸೂಚೀಪತ್ರಗಳಲ್ಲಿ ಪ್ರಕಟವಾದುದಲ್ಲದೆ ಮದರಾಸಿನ ಪತ್ರಿಕೆಗಳಲ್ಲಿಯೂ ಪ್ರಕಟವಾದವು. ಕುಮಾರ ಆ ಸಾಹಿತ್ಯವನ್ನೆಲ್ಲಾ ಜೋಪಾನವಾಗಿ ಸಂಗ್ರಹಿಸಿಡುತ್ತಿದ್ದ.

'ಆಲೆಟ್ ರೆಸ್ಟೊರ್ಯಾಂಟ್'ನಲ್ಲಿದ್ದ ಕುಮಾರಯ್ಯನೇ ಇವನು ಎಂದು ಯಾರೂ ಹೇಳಲು ಸಾಧ್ಯವಿರಲಿಲ್ಲ. ಕಚ್ಚೆ ಪಂಚೆ, ಸಿಲ್ಕ್ ಜುಬ್ಬ, ನೀಳವಾದ ಜುಟ್ಟು ಕುಮಾರಯ್ಯನನ್ನು ನಿರ್ದೇಶಿಸುತ್ತಿದ್ದವು. ನೃತ್ಯ ವಿಷಯಗಳಲ್ಲಿ ಧಾರಾಳವಾಗಿ ಮಾತನಾಡುತ್ತಿದ್ದ. ಉದಯಶಂಕರನ ತಾಳರಾಹಿತ್ಯ, ರಾಮಗೋಪಾಲನ ವಿಲಾಯಿತಿ ನೃತ್ಯಾನುಕರಣ, ಮೃಣಾಳಿನಿಯ ಗಂಡು ಕುಣಿತಗಳನ್ನು ಕುಮಾರ ನಿರರ್ಗಳವಾಗಿ ಟೀಕೆ ಮಾಡುತ್ತಿದ್ದ.

ರಾಮನಾಥರ ಶಾಲೆಯಲ್ಲಿ ಎರಡು ವರ್ಷ ಕಳೆಯುವುದರೊಳಗೆ ಕುಮಾರನಿಗೆ ಒಂದು ಸತ್ಯ ಭಾಸವಾಯಿತು. ಮದರಾಸಿನಲ್ಲಿಯೂ ಇನ್ನಿತರ ಕಡೆ

ಗಳಲ್ಲಿಯೂ ಪಂದನಲ್ಲೂರು ಮೀನಾಕ್ಷಿ ಸುಂದರಂ ಪಿಳ್ಳೆಯವರ ಹೆಸರು ತಾನೇ ತಾನಾಗಿ ಮೆರೆದಾಡುತ್ತಿತ್ತು. ಮದರಾಸಿನ ರಸಿಕರಂಜಿನಿ ಸಭೆಯಲ್ಲಾಗಲೀ, ಜಗನ್ನಾಥ ಭಕ್ತ ಸಭೆಯಲ್ಲಾಗಲಿ, ಇತರ ಕಡೆಗಳಲ್ಲಾಗಲಿ ಭರತ ನಾಟ್ಯ ಪ್ರದರ್ಶನ ಮಾಡುತ್ತಿದ್ದವರು ಪ್ರಧಾನವಾಗಿ—'ಮೀನಾಕ್ಷಿ ಸುಂದರಂ ಪಿಳ್ಳೆಯವರ ಶಿಷ್ಯಂದಿರು' ಎಂದು ಪ್ರಸಾರ ಮಾಡಿಕೊಳ್ಳುತ್ತಿದ್ದರು. ಮೀನಾಕ್ಷಿ ಸುಂದರಂ ಪಿಳ್ಳೆಯವರ ಮುದ್ರೆ ಬಿದ್ದ ಹೊರತೂ ತನ್ನ ಕಲೆಗೆ ಬೆಲೆಯಿಲ್ಲವೆಂದು ಕುಮಾರ ತಿಳಿದುಕೊಂಡ.

ರಾಮನಾಥ್ ಆಗಾಗ್ಗೆ ಕುಮಾರನಿಗೆ ಸ್ವಲ್ಪ ಹಣ ಕೊಡುತ್ತಿದ್ದರು. ಪ್ರದರ್ಶನವಾದ ಮಾರನೆಯ ದಿನವೇ ಕುಮಾರನ ಕೈಗೆ ಇಪ್ಪತ್ತೋ ಮೂವತ್ತೋ ಹಾಕುತ್ತಿದ್ದರು. ಕುಮಾರ ಯಾವ ಖರ್ಚಿಗೂ ಹೋಗದೆ ಇನ್ನೂರು ರೂಪಾಯಿಗಳಷ್ಟು ಸಂಗ್ರಹಿಸಿದ್ದ. ಗುಪ್ತವಾಗಿ ಪಂದನಲ್ಲೂರಿಗೆ ಪತ್ರ ಬರೆದು ಅಲ್ಲಿಂದ ಆಹ್ವಾನವನ್ನೂ ದೊರಕಿಸಿಕೊಂಡಿದ್ದ.

ಪಂದನಲ್ಲೂರಿನಲ್ಲಿ ಆರು ತಿಂಗಳಾದರೂ ಇರಬೇಕು. ಗುರುಗಳಿಗೆ ಏನಾದರೂ ಕಾಣಿಕೆಯೊಪ್ಪಿಸಬೇಕು. ಇಷ್ಟಕ್ಕೆಲ್ಲ ಇನ್ನೂರು ರೂಪಾಯಿ ಸಾಲುತ್ತಿರಲಿಲ್ಲ. ರಾಮನಾಥರನ್ನೇ ಕೇಳಿ ಅವರ ಸಹಾಯ ಪಡೆದು ಹೋಗಬೇಕೆಂದರೆ ಅವರು ಅಖಿಲ ಭಾರತ ಪ್ರವಾಸವೊಂದನ್ನು ಕೈಗೊಳ್ಳುವುದಿದ್ದರು. ಅವರ ಸಹಾಯ ಕೇಳುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂಬುದನ್ನು ಕುಮಾರ ಗ್ರಹಿಸಿದ.

'ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆ' ಎನ್ನುವುದು ಅವನ ಧೈರ್ಯವಾಗಿತ್ತು. ಅವನ ಮನಸ್ಸಿಗೆ ಅನುಗುಣವಾದ ಮಾರ್ಗವೂ ಇತ್ತು.

ಒಂದು ಬೆಳಿಗ್ಗೆ ರಾಮನಾಥ್ ಎದ್ದವರೂ ಕುಮಾರನನ್ನು ಕೂಗಿದರು. ಅವನ ಸುಳಿವೇ ಇಲ್ಲ. ಎಲ್ಲಿಯೋ ಹೋಗಿರಬಹುದು, ಬರುತ್ತಾನೆಂದು ಮಧ್ಯಾಹ್ನದವರೆಗೆ ಕಾದರು. ಕುಮಾರ ಬರಲಿಲ್ಲ. ಸ್ನಾನಕ್ಕೆ ಹೊರಟಿದ್ದ ಕುಂಜುಮಣಿ ತನ್ನ ಲೋಲಕ್ಕುಗಳು (Love-locks) ಕಾಣೆಯಾಗಿವೆಯೆಂದು ಬೊಬ್ಬೆ ಹಾಕಿದಳು. 'ಎಲ್ಲೋ ಅಲ್ಲೇ ಇರಬೇಕು ಹುಡುಕು'

ಎಂದು ರಾಮನಾಥ್ ಗದರಿಕೊಂಡರು. ಕುಂಜುಮಣಿ ಲೋಲಕ್ಕುಗಳಿಗೆ ಹುಡುಕಿಯೇ ಹುಡುಕಿದಳು—ರಾಮನಾಥ್ ಕುಮಾರನ ಬರುವಿಗೆ ಕಾದೇ ಕಾದರು.

ಲೋಲಕ್ಕುಗಳೂ ಕುಮಾರ ಏಕಕಾಲದಲ್ಲಿ ಅದೃಶ್ಯವಾದುದು ರಾಮನಾಥರಿಗೆ ಆಶ್ಚರ್ಯವನ್ನುಂಟುಮಾಡಿತು. ಲೋಲಕ್ಕುಗಳು ಕುಮಾರನ ಪ್ರಭಾವದಿಂದಲೇ ಮಾಯವಾಗಿರಬೇಕೆಂದು ಅವರು ನಿರ್ಧರಿಸಲು ತಡವಾಗಲಿಲ್ಲ. ಕುಂಜುಮಣಿ ಗೋಳಿಟ್ಟಳು. ಪೋಲೀಸಿಗೆ ದೂರು ಕೊಟ್ಟು ಕುಮಾರನನ್ನು ಹಿಡಿಸಿ ಅವನಿಗೆ ಶಿಕ್ಷೆ ಮಾಡಿಸಬೇಕೆಂದು ರಾಮನಾಥರನ್ನು ಒತ್ತಾಯ ಮಾಡಿದಳು.

ರಾಮನಾಥರು ಯೋಚಿಸಿ

" ನೋಡು ಕುಂಜೂ, ಕುಮಾರನಿಗೆ ನಾನು ನಾಲ್ಕು ದಿನ ಅನ್ನವಿಟ್ಟು ಪಾಠ ಹೇಳಿದ್ದೇನೆ. ಈಗ ಯಾವ ಮನಸ್ಸಿನಿಂದ ಅವನನ್ನು ಜೈಲಿಗೆ ಕಳಿಸಲಿ ಹೇಳು. ಒಂದು ವೇಳೆ ಅವನು ಸಿಕ್ಕಿದರೆ ಪೋಲೀಸಿನವರು ಕೇಸ್ ಹಾಕುತ್ತಾರೆ. ನಾವು ಕೋರ್ಟಿಗೆ ಅಲೆಯಬೇಕಾಗುತ್ತದೆ. ಪ್ರವಾಸ ಮುಂದಿಟ್ಟುಕೊಂಡು ಈ ರಗಳೆ ಹಚ್ಚಿಕೊಳ್ಳುವುದು ಹೇಗೆ? ಹಿಂದಿನ ಕಾಲದಲ್ಲಿ ವಿದ್ಯೆ ಕಲಿಸಿದ ಗುರುವಿಗೆ ಶಿಷ್ಯ ಕಾಣಿಕೆ ಒಪ್ಪಿಸುತ್ತಿದ್ದ. ಈಗ ಗುರು ಶಿಷ್ಯನಿಗೆ ಕಾಣಿಕೆಯೊಪ್ಪಿಸಿದಂತಾಯಿತು. ಹೋಗಲ್ಲಿ, ಅದಕ್ಕಿಂತಲೂ ಚೆನ್ನಾಗಿರುವ ಲೋಲಕ್ ಮಾಡಿಸಿಕೊಡುತ್ತೇನೆ ಸುಮ್ಮನಿರು " ಎಂದು ಹೇಳಿದರು.

ಕುಂಜುಮಣಿ ಶಿಷ್ಯನಿಗೆ ಆಶೀರ್ವಾದ ಮಾಡಲಿಲ್ಲ; ಹಿಡಿಶಾಪ ಹಾಕಿದಳು.

ಕುಮಾರ ಮೀನಾಕ್ಷಿಸುಂದರಂ ಪಿಳ್ಳೆಯವರ ಬಳಿ ಆರು ತಿಂಗಳು ಕಾಲ ಹಾಕಿ ಅವರಿಂದ ಸರ್ಟಿಫಿಕೇಟು ಪಡೆದುಕೊಂಡ. ಮುಂದೇನು ಎನ್ನುವ ಚಿಂತೆ ಅವನನ್ನು ಕಾಡತೊಡಗಿತು. ಮದರಾಸಿಗೆ ಕಾಲಿಡುವಂತಿರಲಿಲ್ಲ. ರಾಮನಾಥರಿಗೆ ತಾನು ಮಾಡಿಬಂದ ಉಪಕಾರ ಇನ್ನೂ ಹಳೆಯದಾಗಿರಲಿಲ್ಲ. ಯೋಚನೆ ಮಾಡಿಮಾಡಿ ಕೊನೆಗೆ ಬೆಂಗಳೂರಿಗೆ ಹೋಗುವುದೇ ಯುಕ್ತವೆಂದು

ನಿರ್ಧರಿಸಿದ.

ಕೈಯಲ್ಲೊಂದು ಗಂಟು, ಒಂದು ಟಿಕೆಟ್ಟು, ಕಿಸೆಯಲ್ಲಿ ಅರವತ್ತಾರು ರೂಪಾಯಿ ಇಟ್ಟುಕೊಂಡು ಕುಮಾರ ಬೆಂಗಳೂರಿನಲ್ಲಿ ಇಳಿದ. ಅರವತ್ತಾರು ರೂಪಾಯಿ ಕರಗುವುದರೊಳಗಾಗಿ ಬೆಂಗಳೂರಿನಲ್ಲಿ ಸಂಪಾದನೆಗೆ ಮಾರ್ಗ ಹುಡುಕಿಕೊಳ್ಳಬೇಕಾಗಿತ್ತು.

ಸ್ವಲ್ಪ ವೇಷ ಕಟ್ಟಿದ ಹೊರತೂ ಮಾರ್ಗವೇ ಇರಲಿಲ್ಲ. ನೇರವಾಗಿ 'ನ್ಯೂ ಹಿಂದೂ ಹೊಟೇಲಿ'ಗೆ ಬಂದಿಳಿದ. ಇಳಿದ ಕೂಡಲೆ ಹೊಟೇಲ್ ಮ್ಯಾನೇಜರಿಗೆ ತನ್ನ ಪರಿಚಯ ಮಾಡಿಕೊಟ್ಟು, ತನ್ನ ಪ್ರಶಸ್ತಿ ಪತ್ರಗಳನ್ನೂ, ಭಾವಚಿತ್ರಗಳನ್ನೂ ತೋರಿಸಿದ. ಮ್ಯಾನೇಜರು ಅವನನ್ನು ಉದಯಶಂಕರನ ಪುನರಾವತಾರ ಎಂದು ಭಾವಿಸಿದರು.

ಮಾರನೆಯ ದಿನ ಮ್ಯಾನೇಜರ ಜತೆ ಮಾತನಾಡುತ್ತ "ನಾನು ಮೈಸೂರಿನವನು. ಬಹಳ ಕಷ್ಟಪಟ್ಟು ಮೀನಾಕ್ಷಿಸುಂದರಂ ಪಿಳ್ಳೆಯವರ ಹತ್ತಿರ ವಿದ್ಯಾರ್ಜನೆ ಮಾಡಿಕೊಂಡು ಬಂದಿದ್ದೇನೆ. ನನ್ನ ಕಲೆಯ ಪ್ರಯೋಜನ ನಮ್ಮ ಜನರಿಗಾಗಲಿ ಎನ್ನುವುದೇ ನನ್ನ ಆಕಾಂಕ್ಷೆ. ಇಲ್ಲಿ ಸರಿಯಾದ ಅವಕಾಶ ಸಿಕ್ಕದಿದ್ದರೆ ಮದರಾಸಿಗೆ ಹೊರಟುಹೋಗುತ್ತೇನೆ. ಫಿಲಂ ಕಂಪೆನಿಯವರು ಬಾರೆಂದು ನನ್ನನ್ನು ಪೀಡಿಸುತ್ತಿದ್ದಾರೆ" ಎಂದು ಹೇಳಿದ.

ಇಷ್ಟು ಒಳ್ಳೆಯ ಕಲಾವಿಧ ಮೈಸೂರು ಬಿಟ್ಟು ಹೋಗುವನಲ್ಲಾ ಎಂದು ಮ್ಯಾನೇಜರವರಿಗೆ ಪಶ್ಚಾತ್ತಾಪವಾಯಿತು. ಅವರು ಯೋಚನೆಮಾಡಿ

"ಮಿಸ್ಟರ್ ಕುಮಾರ್, ನೀವು ಮದರಾಸಿಗೆ ಹೋಗಬೇಡಿ. ಇಲ್ಲೇ ಏನಾದರೂ ವ್ಯವಸ್ಥೆ ಮಾಡೋಣ. ಇಲ್ಲಿಯೂ ಈಗ 'ಭರತನಾಟ್ಯ' ಕಲಿಯುವವರ ಸಂಖ್ಯೆ ಬೆಳೆಯುತ್ತಿದೆ. ಮಲ್ಲೇಶ್ವರದಲ್ಲಿಯಂತೂ ಅದರ ಮೇಲೆ ಬಹಳ ಜನಗಳಿಗೆ ಒಲವಿದೆ. ಮಹಾರಾಜ ಮಿಲ್ಲಿನಲ್ಲಿ ನನ್ನ ಸ್ನೇಹಿತರೊಬ್ಬರು ದೊಡ್ಡ ಕೆಲಸದಲ್ಲಿದ್ದಾರೆ. ಅವರಿಗೂ ಅವರ ಹೆಂಡತಿಗೂ 'ಭರತನಾಟ್ಯ'ದ ಮೇಲೆ ತುಂಬ ಅಭಿಮಾನ. ನಾನು ಅವರಿಗೆ ಕಾಗದ ಕೊಡುತ್ತೇನೆ. ಅವರನ್ನು ಕಂಡು ಬನ್ನಿ—ಉಳಿದ ವಿಷಯ ತರುವಾಯ ಮಾತನಾಡೋಣ."

ಕುಮಾರನಿಗೆ ಪರಮಾನಂದವಾಯಿತು. ಅಂದೇ ಸಂಜೆ ಮ್ಯಾನೇಜರ ಕಾಗದ ತೆಗೆದುಕೊಂಡು ಸುಬ್ಬರಾಯ ಪೈಗಳವರ ಮನೆಗೆ ಹೋದ.

ಸುಬ್ಬರಾಯ ಪೈಗಳವರೂ ಅವರ ಹೆಂಡತಿ ಆನಂದೀಬಾಯಿಯವರೂ ಕಲಾಭಿಮಾನಿಗಳೆಂದೂ ಕಲಾಪೋಷಕರೆಂದೂ ಮಲ್ಲೇಶ್ವರದಲ್ಲಿ ಹೆಸರಾಗಿದ್ದರು. ಉತ್ತರಾದಿ ಸಂಗೀತವೆಂದರೆ ಅವರಿಗೆ ಪರಮ ವಿಶ್ವಾಸ. ಫಯಜ್ ಖಾನ್, ವಿಲಾಯತ್ ಖಾನ್, ಸವಾಯ್ ಗಂಧರ್ವ, ದಿಲೀಪ್‌ಚಂದ್ರವೇದಿ ಮೊದಲಾದ ಉತ್ತರಾದಿ ವಿದ್ವಾಂಸರು ಬೆಂಗಳೂರಿಗೆ ಬಂದಾಗ ತಮ್ಮ ಮನೆಯಲ್ಲಿ ಅವರ ಗಾಯನವೇರ್ಪಡಿಸಿ ಪ್ರಸಿದ್ಧರಾಗಿದ್ದರು.

ಕುಮಾರ ಹದಿನೆಂಟನೆಯ ಕ್ರಾಸಿನಲ್ಲಿದ್ದ ಅವರ ಭವ್ಯ ಭವನದೊಳಗೆ ಕಾಲಿಟ್ಟಾಗ ಅವನನ್ನು ಸ್ವಾಗತಿಸಿದವು ಭೂತದಂಥ ಎರಡು ಅಲ್‌ಸ್ಯಾಷಿಯನ್ ನಾಯಿಗಳು. ನಾಯಿಗಳ ಧ್ವನಿ ಕೇಳಿ ಮನೆಯೊಳಗೆ ತಬಲ ಬಾರಿಸುತ್ತಿದ್ದ ಸುಬ್ಬರಾಯ ಪೈಗಳವರ ಮಗಮೋಹನ ಪೈ ನಾಯಿಗಳನ್ನು ಕಟ್ಟಿಹಾಕಿ ಅತಿಥಿಯನ್ನು ಒಳಗೆ ಕರೆದೊಯ್ದ.

ಪೈಗಳವರ ಮನೆಯಲ್ಲಿ 'ಜಲಸಾ' ಸಾಗಿತ್ತು. ಆನಂದೀಬಾಯಿ ಸಿತಾರ್ ನುಡಿಸುತ್ತಿದ್ದರು. ಅವರ ಇಬ್ಬರು ಮಕ್ಕಳು ವಿಮಲಾ, ಕಮಲಾ ಹಾಡುತ್ತಿದ್ದರು, ಮೋಹನ್ ತಬಲ ನುಡಿಸುತ್ತಿದ್ದ. ಸುಬ್ಬರಾಯ ಪೈಗಳವರು ಆರಾಮ ಕುರ್ಚಿಯಮೇಲೆ ಮಲಗಿಕೊಂಡು ಸಿಗಾರ್ ಸೇವಿಸುತ್ತ 'ಜಲಸಾ' ಕೇಳಿ ಸುಖಿಸುತ್ತಿದ್ದರು.

ಕುಮಾರ ಕೈಗಿತ್ತ ಕಾಗದವನ್ನು ಒಡೆದು ನೋಡಿಕೊಂಡು, ಅದರ ತಾತ್ಪರ್ಯವನ್ನು ಪೈಗಳವರು ಹೆಂಡತಿಗೆ ಕೊಂಕಣಿಯಲ್ಲಿ ವಿವರಿಸಿದರು. ಆನಂದೀಬಾಯಿ ಸಂತೋಷ ಆಶ್ಚರ್ಯದಿಂದ

"ನೀವು ಭರತನಾಟ್ಯ ಪ್ರವೀಣರೇ?" ಎಂದು ಕೇಳಿದಳು.

"ಹೌದು ತಾಯಿ."

"ಬೆಂಗಳೂರಿಗೆ ಬಂದು ಎಷ್ಟು ದಿವಸವಾಯಿತು?"

"ನಿನ್ನೆ ತಾನೆ ಬಂದೆ. ಇವರು ತಮ್ಮ ಮಕ್ಕಳೇನೋ?"

" ಹೌದು. ಇವಳು ದೊಡ್ಡ ಮಗಳು ವಿಮಲಾ, ಇವಳು ಎರಡನೆಯವಳು ಕಮಲಾ, ಇಬ್ಬರೂ ಕಾಲೇಜಿನಲ್ಲಿ ಓದುತ್ತಿದ್ದಾರೆ. ಇವನು ನಮ್ಮ ದೊಡ್ಡ ಮಗ ಮೋಹನ, ಮಿಲ್‌ಗೂಡ್ಸ್ ಷಾಪಿನ ಮ್ಯಾನೇಜರಾಗಿದ್ದಾನೆ. "

" ಮನೆಯಲ್ಲಿ ಎಲ್ಲರೂ ಕಲಾವಿದರಾಗಿದ್ದೀರಿ. ಕಛೇರಿ ನಡೆದಿತ್ತೇನೋ–ಮಧ್ಯೆ ನಾನು ಬಂದು ತೊಂದರೆ ಮಾಡಿದಂತಾಯಿತು. "

" ಇಲ್ಲ ಇಲ್ಲ. ಕುಳಿತುಕೊಳ್ಳಿ. ಮೀನಾಕ್ಷಿಸುಂದರಂ ಪಿಳ್ಳೆ ಬಹಳ ದೊಡ್ಡ ನಾಟ್ಯಾಚಾರ್ಯರು ಎಂದು ಕೇಳಿದ್ದೇವೆ. "

ಎಂದು ಪೈಗಳವರು ಹೇಳಿದರು.

" ಹೌದು—ಅವರು ಸಾಕ್ಷಾತ್ ಸರಸ್ವತೀ ಪುತ್ರರು. "

ವಿಮಲಾ ತಾಯಿಯ ಕಿವಿಯಲ್ಲೇನೋ ಪಿಸುಗುಟ್ಟಿದಳು. ಪೈಗಳವರು ಹೆಂಡತಿಯ ಕಡೆ ನೋಡಿ

" ಏನದು " ಎಂದು ಕೇಳಿದರು.

" ಕುಮಾರರು ಸ್ವಲ್ಪ ಅಭಿನಯ ಮಾಡಿ ತೋರಿಸಲಿ ಎಂದು ವಿಮ್ಮಿ ಕೇಳುತ್ತಿದ್ದಾಳೆ. "

" ಅದಕ್ಕೇನು ಅವಶ್ಯಕವಾಗಿ ಆಗಬಹುದಾಗಿತ್ತು. ಆದರೆ ಗೆಜ್ಜೆ ಕೂಡ ನಾನು ತಂದಿಲ್ಲ. ಮೃದಂಗದ ನೆರವಿಲ್ಲದೆ ನೃತ್ಯ ಹೇಗೆ ತೋರಿಸುವುದು. "

" ಗೆಜ್ಜೆ ನಾನು ತಂದು ಕೊಡುತ್ತೇನೆ ಸಾರ್. " ಎಂದು ಮೋಹನ ಹೇಳಿದ.

" ನೀವು ನೃತ್ಯದ ತಾನಗಳನ್ನು ಹೇಳಿದರೆ ಮೋಹನ ಅನುಸರಿಸುತ್ತಾನೆ."

" ಇದೇ ಅವರು ಬರುತ್ತಿದ್ದಾರೆ. ಸುಮ್ಮನೇಕೆ ಹಿಂಸೆ ಮಾಡುವಿರಿ ? "

ಎಂದು ಪೈಗಳವರಂದರು. ಮೋಹನ್ ಗೆಜ್ಜೆ ತರಲು ಜಾರಿಬಿಟ್ಟಿದ್ದ. ಕುಮಾರ ನಸುನಗುತ್ತಾ

" ಚಿಂತೆಯಿಲ್ಲ ಸಾರ್. ತಾಯಿಯವರು ಹೇಳಿದ ಮೇಲೆ ಇಲ್ಲವೆನ್ನುವುದಕ್ಕಾಗುತ್ತದೆಯೇ ? " ಎಂದ.

ಮೋಹನ ಗೆಜ್ಜೆಯ ಸರ ತಂದು ಕುಮಾರನ ಕೈಯಲ್ಲಿಟ್ಟ. ಕುಮಾರ

ಅದನ್ನು ಕಾಲುಗಳಿಗೆ ಬಿಗಿದುಕೊಂಡು, ಮೋಹನನಿಗೆ ಯದುಕುಲ ಕಾಂಬೋದಿ ರಾಗದ ವರ್ಣವನ್ನು ರೂಪಕ ತಾಳದಲ್ಲಿ ಹಾಡಿ ತೋರಿಸಿದ. ಅವನು ತಕ್ಕ ಮಟ್ಟಿಗೆ ಅನುಸರಿಸಲೆತ್ನಿಸುತ್ತಿದ್ದ. ವಿಮಲಾ ತಂಬೂರಿ ಶ್ರುತಿ ಮಾಡಿಕೊಂಡು ಮೀಟಿದಳು. ಕುಮಾರ ವರ್ಣವನ್ನು ಕುಣಿದು ತೋರಿಸಿದ.

ಪೈಗಳವರು ಸಿಗಾರ್ ಒಗೆದು ಸಾಲಭಂಜಿಕೆಯಂತೆ ಕುಳಿತುಬಿಟ್ಟರು. ಆನಂದೀಬಾಯಿ ಮೃದುವಾಗಿ ತಾಳ ಹಾಕುತ್ತಿದ್ದರು. ಕಮಲಾ ಎವೆಯಿಕ್ಕದೆ ನೃತ್ಯ ನೋಡುತ್ತಿದ್ದಳು.

ನೃತ್ಯ ಮುಗಿಯಲು ಕುಮಾರ ಗೆಜ್ಜೆ ಬಿಚ್ಚುತ್ತಾ

" ಎಲ್ಲಾ ಪರಿಕರಣಗಳಿದ್ದರೇ ನೃತ್ಯ. " ಎಂದು ಹೇಳಿದ.

ತನ್ನ ಕಲಾಪ್ರಾವೀಣ್ಯತೆ ಪೈಗಳವರ ಮೇಲೂ ಅವರ ಹೆಂಡತಿ ಮಕ್ಕಳ ಮೇಲೂ ಚೆನ್ನಾಗಿ ಪ್ರಭಾವ ಮೂಡಿದುದನ್ನು ಕುಮಾರ ಕಂಡುಕೊಂಡು

" ಮದರಾಸಿಗೆ ಹೋಗಬೇಡವೆಂದು ಮ್ಯಾನೇಜರು ಒತ್ತಾಯ ಮಾಡುತ್ತಿದ್ದಾರೆ. " ಎಂದು ಹೇಳಿದ.

" ನೀವು ಹೋಗಬೇಡಿ ಕುಮಾರ್. ಇಲ್ಲೇ ಏನಾದರೂ ವ್ಯವಸ್ಥೆ ಮಾಡೋಣ. ನಾಳೆ ಸಂಜೆಗೆ ಬಂದುಬಿಡಿ " ಎಂದು ಹೇಳಿದರು.

ಕುಮಾರನ ಮನಸ್ಸು ಹಗುರವಾಯಿತು. ಹೊಟೇಲಿಗೆ ಬಂದವನೇ ಈ ಸಂತೋಷದ ಸುದ್ದಿಯನ್ನು ಮ್ಯಾನೇಜರಿಗೆ ತಿಳಿಸಿದ.

ಮಾರನೆಯ ಸಂಜೆ ಕುಮಾರ ಪೈಗಳವರ ಮನೆಗೆ ಹೋದಾಗ ಅವರೇ ಅವನನ್ನು ಸ್ವಾಗತಿಸಿದರು. ಮೋಹನ್ ತಿಂಡಿ ಕಾಫಿ ತಂದುಕೊಟ್ಟ. ಉಪಾಹಾರ ಮುಗಿದ ಮೇಲೆ ಆನಂದೀಬಾಯಿ ಅವರ ಮಕ್ಕಳೂ ಬಂದು ತೊಟ್ಟಿಯಲ್ಲಿ ಕುಳಿತರು.

" ನೀವು ಇಲ್ಲಿಯೇ ಇದ್ದುಬಿಡಿ ಮಿ|| ಕುಮಾರ್. ನಿಮಗೆ ಬೇಕಾದ ಎಲ್ಲಾ ವ್ಯವಸ್ಥೆ ನಾನು ಮಾಡುತ್ತೇನೆ. ನನ್ನ ಮನೆಯ ಔಟ್ ಹೌಸ್ (Out-house) ಖಾಲಿಯಿದೆ. ಅಲ್ಲಿಯೇ ನೀವು ವಾಸ ಮಾಡಬಹುದು. ನಮ್ಮ ಹುಡುಗರು ಭರತನಾಟ್ಯ ನಿಮ್ಮಲ್ಲಿ ಕಲಿಯುವುದಕ್ಕೆ ತುಂಬ ಆತುರ

ರಾಗಿದ್ದಾರೆ. ನಿಮ್ಮ ಖರ್ಚಿಗೆ ನೂರು ರೂಪಾಯಿ ಕೊಡುತ್ತೇನೆ ಆಗ ಬಹುದೋ ?"

" ಆಗಬಹುದು. ಒಂದು ವಿಷಯ ಈಗಲೇ ಸ್ಪಷ್ಟಮಾಡಿಕೊಂಡು ಬಿಡುತ್ತೇನೆ."

" ಹೇಳಿ."

" ನಾನು ಬೇರೆ ಕಡೆ ಪಾಠ ಒಪ್ಪಿಕೊಳ್ಳಬಹುದೋ ?"

" ಬೇಡವೆಂದವರು ಯಾರು ? ನಮ್ಮ ಮನೆಯ ಪಾಠಕ್ಕೆ ಒಂದು ಕಾಲ ಗೊತ್ತುಮಾಡಿಕೊಳ್ಳಿ, ಉಳಿದ ವೇಳೆಯಲ್ಲಿ ಬೇಕಾದಲ್ಲಿ ಪಾಠ ಹೇಳಿ."

" ತುಂಬ ಉಪಕಾರ ಮಾಡಿದಿರಿ ಸಾರ್."

" ಇಲ್ಲಿಗೆ ಯಾವಾಗ ಬರುತ್ತೀರಿ ?"

" ನಾಳೆಯೇ ಬರುತ್ತೇನೆ."

" ಬನ್ನಿ—ಮೋಹನ ಇರುತ್ತಾನೆ. ನಿಮಗೆ ಎಲ್ಲಾ ಅನುಕೂಲ ಮಾಡಿ ಕೊಡುತ್ತಾನೆ."

" ನಾಳೆ ದಿನ ಚೆನ್ನಾಗಿದೆ. ನಾಳೆಯೇ ಪಾಠ ಆರಂಭಿಸುತ್ತೇನೆ."

"ಹಾಗೇ ಮಾಡಿ." ಎಂದರು.

ಮಾರನೆಯ ಬೆಳಿಗ್ಗೆಯೇ ಕುಮಾರ ಮಲ್ಲೇಶ್ವರಕ್ಕೆ ಬಂದುಬಿಟ್ಟ. ಮನೆಯ ಸಮೀಪದಲ್ಲಿದ್ದ ಹೊಟೇಲೊಂದನ್ನ ಅವನ ಊಟ ತಿಂಡಿಗೆ ಮೋಹನ ಗೊತ್ತು ಮಾಡಿಕೊಟ್ಟ. ಮೂರು ರೂಮು ಇದ್ದ ಪೈಗಳವರ ಮನೆಯ ಔಟ್ ಹೌಸ್ ಕುಮಾರನದಾಯಿತು.

ಕುಮಾರ ಅಂದೇ ಪಾಠ ಆರಂಭಿಸಿ ಕ್ರಮವಾಗಿ ಪಾಠ ನಡೆಸಿಕೊಂಡು, ಬಂದ. ಕಾಲಕ್ರಮೇಣ ಅವನಿಗೆ ಬೆಂಗಳೂರಿನ ಸಂಗೀತಗಾರರು, ನರ್ತಕರು ಇತರ ಕಲಾವಿದರ ಪರಿಚಯವಾಗುತ್ತ ಬಂತು. ಮಲ್ಲೇಶ್ವರದಲ್ಲಿ ಎರಡು ಪಾಠ, ಗಾಂಧೀನಗರದಲ್ಲಿ ಒಂದು ಪಾಠ ಸಿಕ್ಕಿತು. ಕುಮಾರನ ಮೈಮೇಲೆ ಒಳ್ಳೊಳ್ಳೆಯ ಬಟ್ಟೆಗಳು, ಕೈಯಲ್ಲಿ ಉಂಗುರಗಳು ಮಿನುಗಾಡತೊಡಗಿದವು.

ಪುರಸತ್ತು ಸಿಕ್ಕಿದ ಸಂಜೆ ಕುಮಾರ ದೊಡ್ಡ ಪೇಟೆಯಲ್ಲಿದ್ದ ಮೋಹನನ

ಅಂಗಡಿಯಲ್ಲಿ ಬಂದು ಕೂಡುತ್ತಿದ್ದ. ಅಂಗಡಿ ಮುಚ್ಚಿಕೊಂಡು ಮನೆಗೆ ಹೋಗುವಾಗ ಮೋಹನ ಅವನನ್ನು ತನ್ನ ಕಾರಿನಲ್ಲಿ ಕರೆದೊಯ್ಯುತ್ತಿದ್ದ.

ಮೋಹನನ ಅಂಗಡಿಯಲ್ಲಿ ಕುಮಾರನಿಗೆ ನಂಜಪ್ಪನ ಪರಿಚಯವಾಯಿತು. ಪರಿಚಯವಾದ ಮೇಲೆ ನಂಜಪ್ಪನ ಅಂಗಡಿಯಲ್ಲಿಯೂ ಕುಮಾರ ಆಗಾಗ್ಗೆ ಹೋಗಿ ಕೂಡುತ್ತಿದ್ದ.

ಒಂದೆರಡು ತಿಂಗಳಲ್ಲಿ ಕುಮಾರನಿಗೂ ನಂಜಪ್ಪನಿಗೂ ವಿಶ್ವಾಸ ಬೆಳೆದು ನಿಕಟಸ್ನೇಹ ಏರ್ಪಟ್ಟಿತು. ಕುಮಾರ ಕೇಳಿದಾಗ ನಂಜಪ್ಪ ಅವನಿಗೆ ಐದು ಹತ್ತು ರೂಪಾಯಿ, ಬಟ್ಟೆಬರೆ ಕೊಡುತ್ತಿದ್ದ. ನಂಜಪ್ಪನಂಥ ಶ್ರೀಮಂತನ ಆಶ್ರಯ ಸಿಕ್ಕಿದುದು ಕುಮಾರನಿಗೆ ದೊಡ್ಡ ನಿಧಿ ಸಿಕ್ಕಿದಂತಾಯಿತು.

ನಂಜಪ್ಪನೂ ಆಗಾಗ್ಗೆ ಕುಮಾರನನ್ನು ಹುಡುಕಿಕೊಂಡು ಮಲ್ಲೇಶ್ವರಕ್ಕೆ ಬರುತ್ತಿದ್ದ. ಸಂಜೆ ಕುಮಾರನನ್ನು ಕರೆದುಕೊಂಡು ತಿರುಗಾಡುವುದಕ್ಕೊ ಸಿನಿಮಾಕ್ಕೊ ಹೋಗುತ್ತಿದ್ದ.

ಒಂದು ದಿನ ನಂಜಪ್ಪ ಕುಮಾರನೊಂದಿಗೆ ಮಾತನಾಡುತ್ತ ಕುಳಿತಿದ್ದಾಗ ವಿಮಲ ಅಲ್ಲಿಗೆ ಅಕಸ್ಮಾತ್ತಾಗಿ ಬಂದು ಹೊರಗಿನವರು ಯಾರೋ ಇದ್ದುದನ್ನು ಕಂಡು ಹಿಂದಿರುಗಿದಳು. ನಂಜಪ್ಪನ ಹದ್ದಿನ ಕಣ್ಣುಗಳು ಅರೆಕ್ಷಣದಲ್ಲಿ ವಿಮಲೆಯ ರೂಪರಾಶಿಯನ್ನು ತುಂಬಿಕೊಂಡವು.

ಕುಮಾರ ಎದ್ದು ಹೋಗಿ ಅವಳೊಂದಿಗೆ ಮಾತನಾಡಿಕೊಂಡು ಹಿಂದಿರುಗಿದ ಮೇಲೆ

"ಯಾರ್ರೀ ಅವರು, ಕುಮಾರರೇ ?" ಎಂದು ಕೇಳಿದ.

"ನಿಮಗೆ ಗೊತ್ತಿಲ್ಲವೇ ಸಾರ್. ಮೋಹನರಾಯರ ತಂಗಿ."

"ಇವರಿಗೋ ನೀವು ಡ್ಯಾನ್ಸ್ ಕಲಿಸುತ್ತಿರುವುದು."

"ಹೂ, ಇವರಿಗೆ ಮತ್ತು ಇವರ ತಂಗಿ ಒಬ್ಬರಿದ್ದಾರೆ, ಇಬ್ಬರಿಗೂ ಕಲಿಸುತ್ತಿದ್ದೇನೆ."

"ನಾವೇನು ಇವರ ಡ್ಯಾನ್ಸ್ ನೋಡಬಾರದೋ ?"

"ಯಾಕೆ ನೋಡಬಾರದು. ಸದ್ಯದಲ್ಲಿ ನಾನೊಂದು ಪ್ರದರ್ಶನ ಏರ್ಪ

ಡಿಸಬೇಕೆಂದಿದ್ದೇನೆ. ಅದರಲ್ಲಿ ಇಬ್ಬರೂ ನರ್ತಿಸುತ್ತಾರೆ."

"ನೀವೇನ್ರೀ ಕುಮಾರರೇ, ಹೆಸರಿಗೆ ಮಾತ್ರ ನನ್ನ ಸ್ನೇಹಿತರು, ಸ್ನೇಹ ಧರ್ಮವೇ ನಿಮಗೆ ಗೊತ್ತಿಲ್ಲ."

"ನಾನೇನು ಸಾರ್ ಅಪರಾಧ ಮಾಡಿದ್ದು?"

"ನಮಗಷ್ಟು ನಿಮ್ಮ ಶಿಷ್ಯರ ಪರಿಚಯ ಮಾಡಿಕೊಡಬಾರದೇನು?"

"ಎಲ್ಲಿಯಾವರೂ ಉಂಟೇ ಸಾರ್. ಅವರು ಮರ್ಯಾದಸ್ಥರ ಮನೆ ಮಕ್ಕಳು. ನಾಳೆ ಹೆಚ್ಚುಕಡಿಮೆಯಾದರೆ ನನ್ನ ಜೀವದೊರಸೆ ಬಿಟ್ಟಾರೇ? ಸುಬ್ಬರಾಯ ಪೈಗಳು ಸಹಾಯ ಮಾಡದಿದ್ದರೆ ನಾನು ಮದರಾಸು ಹುಡುಕಿ ಕೊಂಡು ಹೋಗಬೇಕಾಗಿತ್ತು."

"ಇವರ ಮನೆಯಲ್ಲಿ ಸೇರಿಕೊಂಡು ಪಾಠ ಹೇಳಿಕೊಂಡು ನೀವು ಕೊಳೆತರೆ ನಿಮ್ಮ ಕಲೆ ಅಭಿವೃದ್ಧಿಯಾಗುತ್ತದೇನ್ರೀ. ನಿಮ್ಮ ಹೆಸರು ಮುಂದಕ್ಕೆ ಬರುತ್ತದೆಯೇ?"

"ನನ್ನ ಹೆಸರು ಮುಂದಕ್ಕೆ ಬರುವ ವಿಷಯ ಹಾಗಿರಲಿ. ಸದ್ಯ ಮಾರಾಯರು ಎರಡು ಹೊತ್ತು ಕೂಳಿಗೆ ಮಾರ್ಗ ಮಾಡಿಕೊಟ್ಟರು."

"ಇದರಲ್ಲಿ ಏನ್ರೀ ಹೆಚ್ಚುಗಾರಿಕೆ, ಅವರ ಮಕ್ಕಳಿಗೆ ನೀವು ಪಾಠ ಹೇಳಿ ಕೊಡುತ್ತೀರಿ, ನಿಮಗೆ ಅವರು ಸಂಬಳ ಕೊಡುತ್ತಾರೆ."

ಇನ್ನು ಈ ವಿಷಯ ನಂಜಪ್ಪನ ಜತೆ ವಾದ ಮಾಡಿ ಪ್ರಯೋಜನವಿಲ್ಲ ವೆಂದು ಕುಮಾರ ಸುಮ್ಮನಾದ.

"ಊರೊಳಗೆ ದೊಡ್ಡ ಸ್ಕೂಲು ಸ್ಥಾಪಿಸಬೇಕು. ಮಲ್ಲೇಶ್ವರ ದೂರ ವಾಯಿತು ಇಲ್ಲಿಗೆ ಯಾರೂ ಬರುವುದಿಲ್ಲ. ನೂರಾರು ವಿದ್ಯಾರ್ಥಿಗಳಿಗೆ ಕಲಿಸಬೇಕು. ನೀವು ಬೊಂಬಾಯಿ, ಕಲ್ಕತ್ತೆ, ಡಿಲ್ಲಿಗಳಿಗೆಲ್ಲಾ ಹೋಗಿ ಪ್ರದರ್ಶನ ಕೊಟ್ಟು ಬರಬೇಕು."

"ನನಗೂ ಅಂಥ ಆಸೆಯಿದೆ ಸಾರ್. ಆದರೆ ಮಾರ್ಗವೆಲ್ಲಿದೆ ಹೇಳಿ. ಬಡವಾ ನೀ ಮಡಗಿದ ಹಾಗಿರು ಎನ್ನುವ ಗಾದೆ ನನಗೋಸ್ಕರವೇ ಹುಟ್ಟಿದ್ದು ಎಂತಾ ಕಾಣುತ್ತದೆ."

“ ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ. ”

“ ನನಗೂ ಸೋಮೇಶ್ವರನ ಕೃಪೆಯಾದ ಕಾಲಕ್ಕೆ ಆಗಬಹುದು. ”

“ ಆಗತ್ತೆ ಸುಮ್ಮನಿರಿ. ಅದಕ್ಕೂ ಕಾಲ ಬರುತ್ತದೆ. ”

ನಂಜಪ್ಪ ನಿರೀಕ್ಷಿಸಿದ್ದ ರೀತಿಯ ‘ ಸ್ನೇಹಧರ್ಮ ’ವನ್ನು ಕುಮಾರ ಪರಿಪಾಲಿಸಬೇಕಾಗಿತ್ತು. ಅದರಿಂದ ತನಗೆ ತುಂಬ ಲಾಭವಿದೆಯೆಂದು ತಿಳಿದ ಮೇಲಂತೂ ಕುಮಾರ ಸಂತೋಷದಿಂದ ನಂಜಪ್ಪನ ಸೇವೆ ಮಾಡಲಾರಂಭಿಸಿದ. ಕುಮಾರನ ಅನೇಕ ಶಿಷ್ಯಶಿಷ್ಯೆಯರ ಪರಿಚಯ ನಂಜಪ್ಪನಿಗೂ ಆಯಿತು.

೫

ಕುಮಾರನಿಗೆ ನಂಜಪ್ಪನ ಪರಿಚಯವಾದುದು, ಆ ಪರಿಚಯ ಸ್ನೇಹ ವಾಗಿ ಪರಿಣಮಿಸಿದುದನ್ನು ಮೋಹನ ಗಮನಿಸದಿರಲಿಲ್ಲ. ನಂಜಪ್ಪ ಇಲ್ಲದ ನೆಪಮಾಡಿಕೊಂಡು ಕುಮಾರನನ್ನು ಹುಡುಕಿಕೊಂಡು ಬರುತ್ತಿದ್ದುದೂ, ವಿಮಲಾ, ಕಮಲಾ ಅತ್ತ ಸುಳಿದಾಡಿದರೆ ಅವರನ್ನೇ ಎವೆಯಿಕ್ಕದೆ ನೋಡುತ್ತಿದ್ದುದೂ ಮೋಹನನ ಮನಸ್ಸಿಗೆ ಕಿರುಕುಳವನ್ನುಂಟುಮಾಡಿತ್ತು. ಆದರೆ ಯಾವ ಕಾರಣಕ್ಕೂ ಕುಮಾರನನ್ನು ಆಕ್ಷೇಪಿಸುವಂತಿರಲಿಲ್ಲ. ಅವನ ನಡತೆಯಲ್ಲಾಗಲಿ ಪಾಠದಲ್ಲಿಯಾಗಲಿ ಚ್ಯುತಿ ಬಂದಿರಲಿಲ್ಲ. ಮೋಹನ ಒಂದು ದಿನ ಈ ವಿಷಯ ವನ್ನು ತಾಯಿಯಲ್ಲಿ ಪ್ರಸ್ತಾಪ ಮಾಡಿದ.

" ನೀನು ಹೇಳುವುದು ನಿಜ, ಮೋಹನ್. ಆ ನಂಜಪ್ಪನ ಚರ್ಯೆಯನ್ನೂ ನಾನೂ ಗಮನಿಸಿದ್ದೇನೆ. ಇವಕ್ಕೇನು ಮಾಡುವುದು ಎಂದು ಯೋಚಿಸುತ್ತಿದ್ದೇನೆ. "

" ಕುಮಾರರನ್ನು ಮನೆ ಬಿಡಿಸುವುದೊಂದೇ ಉಪಾಯಮ್ಮ. ಅವರೇನೋ ಒಳ್ಳೆಯವರೇ, ಆದರೆ ಸಹವಾಸ ಚೆನ್ನಾಗಿಲ್ಲ. ನಾವು ಸುಮ್ಮನೆ ಕೆಟ್ಟ ಹೆಸರು ಕಟ್ಟಿಕೊಳ್ಳುವುದಕ್ಕಾಗುತ್ತದೆಯೇ ? "

" ಕುಮಾರರನ್ನು ಮನೆ ಬಿಡಿಸಿದರೆ ಪಾಠ ಅಪೂರ್ಣವಾಗುತ್ತದೆ. "

" ಅವರು ಪಾಠಕ್ಕೆ ಬಂದು ಹೋಗಲೇನು ಅಡ್ಡಿ. ಇದಕ್ಕೆ ನೀನು ಸುಳ್ಳು ಹೇಳಬೇಕಾಗುತ್ತದೆ. ಕುಮಾರರು ನಮ್ಮ ವಿಷಯ ಅನ್ಯಥಾ ಭಾವಿಸದಂತೆ ಉಪಾಯವಾಗಿ ಹೇಳಿ ಮನೆ ಬಿಡಿಸಬೇಕು. "

" ಆಗಲಿ ನಾನು ಯೋಚನೆ ಮಾಡುತ್ತೇನೆ " ಎಂದು ಹೇಳಿದರು.

ಯಜಮಾನರಿಗೂ ಈ ವಿಷಯ ತಿಳಿಸಿದರು. ಮಗನ ಸಲಹೆ ಯುಕ್ತವಾದುದೆಂದು ಪೈಗಳವರೂ ಒಪ್ಪಿಕೊಂಡರು.

ಒಂದು ದಿನ ಮಧ್ಯಾಹ್ನ ಆನಂದೀಬಾಯಿ ಕುಮಾರನನ್ನು ತೊಟ್ಟಿಗೆ

ಬರಮಾಡಿಕೊಂಡರು. ಕುಮಾರ ಬಂದು ಮೋಹನನ ಜತೆ ಮಾತನಾಡುತ್ತ ಕುಳಿತ.

ಆನಂದೀಬಾಯಿಯವರು ಬಂದು ಕುಳಿತು ಲೋಕಾಭಿರಾಮವಾಗಿ ಮಾತನಾಡಿ ತಮ್ಮ ಸಂಸಾರದ ತಾಪತ್ರಯಗಳನ್ನು ಹೇಳಿಕೊಳ್ಳಲಾರಂಭಿಸಿದರು. ಇವುಗಳನ್ನೆಲ್ಲಾ ಕುಮಾರನಿಗೇಕೆ ಹೇಳುತ್ತಿದ್ದಾರೆಂದು ಮೋಹನನಿಗೆ ಅರ್ಥವಾಗಲಿಲ್ಲ.

" ಸಂಸಾರವೆಂದರೆ ಕಷ್ಟಗಳ ಸರಮಾಲೆ ಕುಮಾರರೇ. "

" ಹೌದಮ್ಮ ಹೌದು. ಕಷ್ಟ ಯಾರನ್ನೂ ಬಿಟ್ಟಿದ್ದಲ್ಲ. "

" ನೋಡಿ ನನ್ನ ತಂಗಿ ಗಂಡ ಮಂಗಳೂರಿನಲ್ಲಿ ಒಂದು ಟೈಲ್ ಫ್ಯಾಕ್ಟರಿ ಮ್ಯಾನೇಜರಾಗಿದ್ದಾರೆ. ಅವಳಿಗೂ ನಾಲ್ಕು ಮಕ್ಕಳು. ಚಿನ್ನದಂಥ ಸಂಸಾರ! "

ಆನಂದೀಬಾಯಿಯವರ ಕಣ್ಣಲ್ಲಿ ನೀರು ಮಿಡಿದುದನ್ನು ಕಂಡು ಕುಮಾರ

" ಅವರಿಗೇನಾಯಿತಮ್ಮ? " ಎಂದು ಕೇಳಿದ.

" ಅವಳು ಆರೋಗ್ಯವಾಗಿದ್ದಾಳೆ. ಅವಳ ಯಜಮಾನರಿಗೆ ಮೈಯಲ್ಲಿ ಸರಿಯಾಗಿಲ್ಲವಂತೆ! "

" ಅದಕ್ಕೆ ನೀವಿಷ್ಟು ಯೋಚನೆಮಾಡಬೇಕೇ? ಗುಣವಾಗುತ್ತದೆ. "

" ಮಂಗಳೂರಿನಲ್ಲಿ ಗುಣವಾಗುವ ಸಂಭವವೇ ಇಲ್ಲ ಕುಮಾರರೇ, ಬೆಂಗಳೂರಿಗೆ ಹೋಗಿ ದಕ್ಷರಾದ ಡಾಕ್ಟರಿಗೆ ತೋರಿಸಿ ಎಂದು ಮಂಗಳೂರು ಡಾಕ್ಟರುಗಳೇ ಹೇಳಿದರಂತೆ. "

" ಅವರಿಗೆ ಏನಾಗಿದೆಯಂತಮ್ಮ? "

" ಟಿ. ಬಿ. ಸೂಚನೆಗಳು ಕಾಣುತ್ತಿವೆ ಎಂದು ಡಾಕ್ಟರು ಅನುಮಾನ ಪಡುತ್ತಿದ್ದಾರೆ. "

" ಅಯ್ಯೋ ಪಾಪವೇ. ಈ ಟಿ. ಬಿ. ಹಾವಳಿ ನಮ್ಮ ದೇಶದಲ್ಲಿ ವಿಪರೀತವಾಗಿ ಹೋಯಿತು. "

" ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ನಾನು ಮನೆಯಲ್ಲಿಟ್ಟು

ಕೊಳ್ಳಬೇಕು. ಟಿ. ಬಿ. ರೋಗಿಗಳನ್ನು ಮನೆಯಲ್ಲಿಟ್ಟುಕೊಳ್ಳುವುದು ಅಪಾಯ ಕರ. ಇಂಥ ಸಮಯದಲ್ಲಿ ಅಕ್ಕ ತಂಗಿ ಒಬ್ಬರಿಗೊಬ್ಬರು ನೆರವಾಗದಿದ್ದ ರಾಗುತ್ತದೆಯೇ ?"

"ಏನು ಮಾಡಬೇಕೆಂದು ಯೋಚಿಸಿರುವಿರಿ ?"

"ನಿಮಗೆ ತೊಂದರೆಯಾಗದಿದ್ದರೆ ಒಂದು ಉಪಕಾರ ಮಾಡಬೇಕು."

"ಹೇಳೀಮ್ಮ—ಅವಶ್ಯಕವಾಗಿ ಮಾಡುತ್ತೇನೆ."

"ಔಟ್ ಹೌಸ್ ಖಾಲಿ ಮಾಡಲು ಸಾಧ್ಯವೇ? ಅದಾದರೆ ಪ್ರತ್ಯೇಕ ವಾಗಿರುತ್ತದೆ. ಅವರು ಅಲ್ಲಿರಬಹುದು. ನೀವು ಪಾಠ ನಿಲ್ಲಿಸಬೇಕಾಗಿಲ್ಲ. ಎಂದಿನಂತೆ ಪಾಠಕ್ಕೆ ಬಂದು ಹೋಗುತ್ತಿರಬಹುದು."

ಕುಮಾರನಿಗೆ ಬರಸಿಡಿಲೆರಗಿದಂತಾಯಿತು. ಮಲ್ಲೇಶ್ವರದ ವಿಸ್ತರಣದಲ್ಲಿ ಅನುಕೂಲವಾಗಿ ಸಿಕ್ಕಿದ್ದ ಮನೆಯನ್ನು ಬಿಟ್ಟು ಹೋಗುವ ಚಿಂತೆ ಅವನ ಮನಸ್ಸಿಗೆ ಎಂದೂ ಬಂದಿರಲಿಲ್ಲ. ಕುಮಾರ ಮೌನ ತಾಳಿದುದನ್ನು ಕಂಡು ಆನಂದೀಬಾಯಿ

"ನಿಮಗೆ ತೊಂದರೆ ಮಾಡಲು ಇಷ್ಟವಿಲ್ಲ. ಆದರೇನು ಮಾಡುವುದು ಹೇಳಿ. ಸ್ಥಿತಿಗತಿ ನಿಮಗೇ ಗೊತ್ತಾಗಿದೆಯಲ್ಲ."

"ನಿಮ್ಮ ತಂಗಿಯವರು ಯಾವಾಗ ಬರುತ್ತಾರಂತಮ್ಮ?"

"ಕೂಡಲೆ ಬರಬೇಕೆಂದಿದ್ದಾರೆ. ಮನೆ ಖಾಲಿಯಾದುದನ್ನು ನಾವು ತಿಳಿಸಿದ ಕೂಡಲೆ ಹೊರಟು ಬರುತ್ತಾರೆ."

"ನನಗೆ ಎರಡು ಮೂರು ದಿವಸ ಕಾಲಾವಕಾಶ ಕೊಡಿ."

"ಹಾಗೇ ಮಾಡಿ ಕುಮಾರರೇ. ಮನಸ್ಸಿಗೆ ಅಸಮಾಧಾನಪಟ್ಟುಕೊಳ್ಳ ಬೇಡಿ" ಎಂದು ಹೇಳಿದರು.

ಕುಮಾರ ಅಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ನೇರವಾಗಿ ಹೊರಟು ನಂಜಪ್ಪನ ಅಂಗಡಿಗೆ ಬಂದ.

ಕುಮಾರನ ಸಪ್ಪೆಮೋರೆ ಕಂಡು ನಂಜಪ್ಪನಿಗೆ ಚಿಂತೆಯಾಯಿತು. ಕುಮಾರ ತನ್ನ ಪರಿಸ್ಥಿತಿಯನ್ನು ವಿವರಿಸಿದ. ನಂಜಪ್ಪ ಸಾವಧಾನವಾಗಿ

ಯೋಚಿಸಿ

"ಅವರ ತಂಗಿ ಬರುವುದು ನಿಜವೇ ಕುಮಾರರೇ ?" ಎಂದು ಕೇಳಿದ.

"ಅವರು ಸುಳ್ಳೇಕೆ ಹೇಳುತ್ತಾರೆ ಸ್ವಾಮಿ."

"ನಿಮ್ಮನ್ನು ಮನೆ ಬಿಡಿಸುವುದಕ್ಕೆ ತಂಗಿಯ ಗಂಡನ ಕಾಹಿಲೆಗಿಂತ ಹೆಚ್ಚಿನ ಕಾರಣವಿರಬೇಕೆಂದು ನನಗನಿಸುತ್ತಿದೆ."

"ಕಾರಣ ಬೆದಕಿಕೊಂಡು ಹೋಗುವುದರಲ್ಲಿ ಏನು ಪ್ರಯೋಜನ. ಮನೆ ಬಿಡಿ ಎಂದು ಅವರು ಹೇಳಿದ ಮೇಲೆ ಇನ್ನು ಅಲ್ಲಿರುವುದು ಗೌರವವಲ್ಲ. ನನ್ನ ಗತಿ ಏನು ಮಾಡುತ್ತೀರಿ ?"

"ಸ್ವತಂತ್ರವಾಗಿ ನೃತ್ಯಶಾಲೆ ತೆಗೆಯಬೇಕೆಂದು ನಾವು ಆಲೋಚಿಸುತ್ತಲೇ ಇದ್ದೆವಲ್ಲಾ. ಸರಿಯಾದ ಸ್ಥಳದಲ್ಲಿ ಮನೆ ಹುಡುಕಿ—ಒಳ್ಳೆ ದಿವಸ ನೋಡಿ ನೃತ್ಯಶಾಲೆ ಆರಂಭಿಸಿಬಿಡಿ. ಅಲ್ಲಿಯವರೆಗೆ ಹೋಟೇಲಿನಲ್ಲಿದ್ದರಾಯಿತು."

ಕುಮಾರನ ಸತತ ಪ್ರಯತ್ನದಿಂದ ಅನುಕೂಲವಾದ ಮನೆಯೇ ಲಾಲ್ ಬಾಗ್ ರಸ್ತೆಯಲ್ಲಿ ಸಿಕ್ಕಿತು. ವಿಶಾಲವಾದ ತೊಟ್ಟಿ, ಒಂದುಕಡೆ ರೂಮು, ಇನ್ನೊಂದು ಕಡೆ ವೆರಾಂಡಾ; ಹಿಂದುಗಡೆ ಸ್ನಾನಗೃಹ, ಅಡಿಗೆಯ ಮನೆ, ಭೋಜನ ಗೃಹ ಮತ್ತು ಇನ್ನೊಂದು ರೂಮು. ನಂಜಪ್ಪ ಮನೆ ಯಜಮಾನನ ಸಂಗಡ ಚೌಕಾಸಿ ಮಾಡಿ ವ್ಯಾಪಾರ ಐವತ್ತು ರೂಪಾಯಿಗೆ ಕುದುರಿಸಿದ.

ಮಲ್ಲೇಶ್ವರದ ಪಾಠಗಳನ್ನು ಕುಮಾರ ಬಿಡಲಿಲ್ಲ. ಸುಬ್ಬರಾಯ ಪೈಗಳವರ ಮನೆಯ ಪಾಠವನ್ನೂ ಅವನು ಕ್ರಮವಾಗಿ ನಡಸಿಕೊಂಡು ಹೋದ. ಒಂದು ತಿಂಗಳು ಕಳೆದರೂ ತಾನು ವಾಸವಾಗಿದ್ದ ಔಟ್‌ಹೌಸಿಗೆ ಯಾರೂ ಬಂದಿರಲಿಲ್ಲ. ಕುಮಾರನ ಮನಸ್ಸಿನಲ್ಲಿ ಇಲ್ಲಸಲ್ಲದ ಊಹೆ ಏಳಬಾರದೆಂದು ಆನಂದೀ ಬಾಯಿಯವರು

"ನನ್ನ ತಂಗಿ ಯಜಮಾನರೊಂದಿಗೆ ಮದನಪಲ್ಲಿಗೆ ಹೋದರು. ಬೆಂಗಳೂರು ಹವ ಕೂಡ ಅವರಿಗೆ ಒಗ್ಗುವುದಿಲ್ಲವೆಂದು ಡಾಕ್ಟರು ಅಭಿಪ್ರಾಯ ಪಟ್ಟರು" ಎಂದು ತಿಳಿಸಿದರು.

ಕುಮಾರ ಆ ಮಾತು ಬೆಳಸುವುದು ತನಗೆ ಶ್ರೇಯಸ್ಕರವಲ್ಲವೆಂದು ಸುಮ್ಮನಾದ.

ಕುಮಾರನ 'ಅರುಣೋದಯ ನಾಟ್ಯಶಾಲೆ'ಯಲ್ಲಿ ರಿಹರ್ಸಲ್ ಭರದಿಂದ ಸಾಗಿತು. ತನ್ನೆಲ್ಲ ಶಿಷ್ಯರಿಂದೊಡಗೂಡಿ ಒಂದು ಪ್ರದರ್ಶನವನ್ನಿತ್ತು ಶಾಲೆ ಬೆಳಸಬೇಕೆಂಬುದು ಅವನ ಆಶಯವಾಗಿತ್ತು. ಮೋಹನ್ ಮತ್ತು ಅವನ ಸೋದರಿಯರು ಸಹಕಾರ ನೀಡಲು ಒಪ್ಪಿಕೊಂಡಿದ್ದರು.

ಪ್ರದರ್ಶನದ ವ್ಯವಸ್ಥೆಯ ಸಮಸ್ತ ಜವಾಬುದಾರಿ ನಂಜಪ್ಪ ಹೊತ್ತುಕೊಂಡ. ವಾದ್ಯಮೇಳದ ಹೊಣೆಗಾರಿಕೆ ವಿದ್ವಾನ್ ರಾಘವಾಚಾರ್ಯರನ್ನು ಅವಲಂಬಿಸಿತು. ಮೋಹನ್ ಮತ್ತು ಅವನ ಸೋದರಿಯರು ಶಾಲೆಯಲ್ಲಿ ನಡೆಯುತ್ತಿದ್ದ ರಿಹರ್ಸಲ್‌ಗಳಿಗೆ ಬರುತ್ತಿರಲಿಲ್ಲ. ಕುಮಾರನೇ ಅವರ ಮನೆಗೆ ಹೋಗಿ ರಿಹರ್ಸಲ್ ಕೊಟ್ಟು ಬರುತ್ತಿದ್ದ.

ನಾಟ್ಯಶಾಲೆಯಲ್ಲಿ ಒಂದು ದಿನ ರಿಹರ್ಸಲ್ ಕಳೆದ ಮೇಲೆ ಕುಮಾರನ ಶಿಷ್ಯೆಯರಲ್ಲಿ ಒಬ್ಬಳಾದ ವನಜಾ ಗುರುಗಳನ್ನು ಕೇಳಿದಳು.

"ಸಾರ್. ನನ್ನ ಸ್ನೇಹಿತೆಯೊಬ್ಬಳಿಗೆ ನಾಟ್ಯ ಕಲಿಯಬೇಕೆಂದು ತುಂಬ ಇಚ್ಛೆಯಿದೆ. ನೀವು ಅನುಮತಿ ಕೊಟ್ಟರೆ ಅವಳನ್ನು ಕರೆದುಕೊಂಡು ಬರುತ್ತೇನೆ."

"ಶಾಲೆಗೆ ಬರುವುದಕ್ಕೆ ಯಾರದೇನು ಅಡ್ಡಿಯಮ್ಮ. ಅವಶ್ಯಕವಾಗಿ ಕರೆದುಕೊಂಡು ಬಾ."

ವನಜಾ ಮುಂದೆ ಮಾತನಾಡದೆ ಸಪ್ಪೆಮೋರೆ ಹಾಕಿಕೊಂಡು ನಿಂತಳು.

"ಯಾಕಮ್ಮ—ಏನು ಯೋಚನೆ?"

"ಅವಳು ತುಂಬ ಬಡವಳು ಮೇಷ್ಟ್ರೇ. ಫೀಸು ಕೊಡುವುದಕ್ಕೆ ಅವಳಿಗೆ ಸಾಧ್ಯವಿಲ್ಲ. ಸ್ಕೂಲ್ ಫೀಸ್ ಕೊಡಲಾರದೆ ಸ್ಕೂಲೂ ಬಿಟ್ಟುಬಿಟ್ಟಳು."

"ಮನೆಯಲ್ಲಿ ತಾಯಿ ತಂದೆ ಇಲ್ಲವೇ?"

"ತಂದೆಯಿಲ್ಲ—ತಾಯಿ ಇದ್ದಾರೆ."

"ಚಿಂತೆಯಿಲ್ಲ ಕರೆದುಕೊಂಡು ಬಾ. ಅವಳಿಗೆ ಸಂಗೀತ ಜ್ಞಾನ

ವಿದೆಯೇ ? ”

“ ಅಲ್ಪ ಸ್ವಲ್ಪ ಇದೆ. ನಾನು ಒಂದು ಕೆಲಸ ಮಾಡಿದ್ದೀನಿ ಮೇಷ್ಟ್ರರೇ–ನೀವು ಕೋಪ ಮಾಡಿಕೊಳ್ಳದಿದ್ದರೆ ಹೇಳುತ್ತೇನೆ. ”

“ ಹೇಳು—ಕೋಪ ಮಾಡಿಕೊಳ್ಳುವುದಿಲ್ಲ. ”

“ ನನಗೆ ಕುಂತಳನನ್ನು ಕಂಡರೆ ತುಂಬ ಪ್ರೀತಿ ಮೇಷ್ಟ್ರರೇ. ಅವಳು ಏನು ಕೇಳಿದರೂ ಇಲ್ಲವೆನ್ನುವುದು ನನಗೆ ಸಾಧ್ಯವಿಲ್ಲ. ನಾನು ಮನೆಯಲ್ಲಿ ಅಭ್ಯಾಸ ಮಾಡಿಕೊಳ್ಳುತ್ತಿದ್ದೆ. ತಾನೂ ಕಲಿಯಬೇಕೆಂದು ಆಸೆಪಟ್ಟಳು. ಅವಳು ಶಾಲೆಗೆ ಬಂದು ಫೀಸು ಕೊಟ್ಟು ಕಲಿಯುವುದು ಸಾಧ್ಯವಿಲ್ಲವೆಂದು ನನಗೆ ಗೊತ್ತಿತ್ತು. ನಾನು ಒಂದು ಉಪಾಯ ಹುಡುಕಿದೆ—ದಿನವೂ ನೀವು ಹೇಳಿಕೊಡುವುದನ್ನು ಅವಳಿಗೆ ಪಾಠ ಹೇಳುತ್ತ ಬಂದೆ. ಈಗವಳು ನನ್ನ ಜತೆಗೂ ಕುಣಿಯಬಲ್ಲಳು. ನಿಮಗೆ ಕೋಪ ಬಂತೇ ಮೇಷ್ಟರೇ. ”

“ ಪರವಾಯಿಲ್ಲ. ನನ್ನ ಶಿಷ್ಯರು ಏನೋಂತಿದ್ದೆ. ಚಿಂತೆಯಿಲ್ಲ, ಕರೆದುಕೊಂಡು ಬಾ ” ಎಂದು ಹೇಳಿದ.

ಮಾರನೆಯ ದಿನವೇ ವನಜಾ ಕುಂತಳನನ್ನು ಕರೆದುಕೊಂಡು ಬಂದಳು.

‘ ಅರುಣೋದಯ ನಾಟ್ಯಶಾಲೆ ’ಯೊಳಗೆ ಕುಂತಳ ಪ್ರವೇಶಿಸಿದ ಕೂಡಲೆ ಚಂದ್ರೋದಯವಾದಂತಾಯಿತು. ಅವಳ ನಿಲುವು, ಗಾಂಭೀರ್ಯ, ಚೆಲುವು, ಮುಖಕಾಂತಿ ಕುಮಾರನನ್ನು ಬೆರಗುಗೊಳಿಸಿದವು. ತನ್ನ ಸುದೈವವೇ ಕುಂತಳನನ್ನು ಕರೆತಂದಿತೆಂದುಕೊಂಡ. ಅವಳನ್ನು ಸಂತೋಷವಾಗಿ ಶಿಷ್ಯಳನ್ನಾಗಿ ಪರಿಗ್ರಹಿಸಿ ಪಾಠ ಹೇಳಲುಪಕ್ರಮಿಸಿದ.

ಎರಡು ಮೂರು ದಿವಸದಿಂದ ನಂಜಪ್ಪ ಶಾಲೆಯ ಕಡೆ ಸುಳಿದಿರಲಿಲ್ಲ. ವಾರ್ಷಿಕ ಲೆಕ್ಕದ ಗಲಾಟೆ ಮುಗಿಸಿಕೊಂಡು ಅವನು ಶಾಲೆಗೆ ಒಂದು ದಿನ ಸಂಜೆ ಬಂದ. ಕುಮಾರನ ಶಿಷ್ಯ ಶಿಷ್ಯೆಯರ ಗಣದಲ್ಲಿ ತನ್ನದೇ ಶೋಭೆಯಿಂದ ಪ್ರಕಾಶಿಸುತ್ತಿದ್ದ ಕುಂತಳನನ್ನು ನೋಡಿ ಅಲ್ಲಿಯೇ ಕುಳಿತುಬಿಟ್ಟ. ಶಾಲೆ ಮುಗಿಯಿತು, ಕುಮಾರನ ಶಿಷ್ಯಬಳಗ ಮನೆಗಳಿಗೆ ಹೊರಟರು. ಶಾಲೆ ಬೇಗ ಮುಗಿದೀತೇ ಎಂದು ಜಪಿಸುತ್ತಿದ್ದ ನಂಜಪ್ಪ

“ ಆ ಹೊಸಬಳು ಯಾರು ಕುಮಾರರೇ ” ಎಂದು ಕೇಳಿದ.

“ ನನ್ನ ಶಿಷ್ಯಳು, ವನಜಾ ಕರೆದುಕೊಂಡು ಬಂದಳು.. ”

“ ಬಡ ಹುಡುಗಿಯ ಹಾಗೆ ಕಾಣುತ್ತಾಳೆ. ”

“ ಹೌದು ತುಂಬ ಬಡವಳು. ನಾನು ಉಚಿತವಾಗಿ ಪಾಠ ಹೇಳಲು ಒಪ್ಪಿಕೊಂಡಿದ್ದೇನೆ. ”

“ ಹುಡುಗಿಗೆ ತಂದೆ ತಾಯಿ ಇದ್ದಾರೇನು ? ”

“ ತಾಯಿ ಇದ್ದಾಳಂತೆ. ತಂದೆ ಇಲ್ಲ. ”

“ ಮಾತನಾಡಿಸಿ ನೋಡುವಿರೇನು ? ”

“ ಏನೆಂದು ? ”

“ ಏನೆಂದು ಎಂದು ಕಣಿ ಕೇಳುವಿರಲ್ಲಾ. ಅವಳನ್ನು ನೋಡಿದ ಕ್ಷಣ ದಿಂದ ನನಗೆ ಬುದ್ಧಿಭ್ರಮಣೆಯಾಗಿ ಹೋಗಿದೆ. ”

“ ಶಾಲೆಗೆ ಬರುವ ಹುಡುಗಿಯರನ್ನೆಲ್ಲಾ ಹೀಗೆ ನಾವು ಕೆಣಕುತ್ತ ಬಂದರೆ ನಮ್ಮ ಶಾಲೆ ಬಹಳ ದಿವಸ ಬದುಕುವುದಿಲ್ಲ. ”

“ ಹುಡುಗಿಯ ತಾಯಿಯನ್ನು ಬರಮಾಡಿಕೊಂಡು ಮಾತನಾಡಿ. ಅವರು ಒಪ್ಪಿದರೆ ನಾನು ಬೇಕಾದದ್ದು ಮಾಡಲು ಸಿದ್ಧನಾಗಿದ್ದೇನೆ. ”

“ ಆಗಲಿ. ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ನಾಳೆ ನಾಡಿದ್ದರಲ್ಲಿ ಹುಡುಗಿಯ ತಾಯಿಗೆ ಹೇಳಿ ಕಳಿಸುತ್ತೇನೆ. ”

“ ನನಗೆ ಈ ಕೆಲಸ ನೀವು ಮಾಡಿಕೊಡಲೇ ಬೇಕು. ”

“ ನಾನು ಹೇಗೆ ವಾಗ್ದಾನ ಮಾಡಲಿ. ಹುಡುಗಿಯ ತಾಯಿಯನ್ನು ನೋಡಿದ ಮೇಲೆ ನಿರ್ಧರವಾಗುವ ವಿಷಯವಿದು. ”

“ ಏನಾದರೂ ಮಾಡಿ. ಈ ಕಾರ್ಯದಲ್ಲಿ ನೀವು ಜಯಶೀಲರಾದರೆ ಸಂತೋಷ. ಖರ್ಚು ಎಷ್ಟಾದರೂ ಯೋಜನೆ ಮಾಡಬೇಡಿ. ಎಂದು ಹೇಳಿದ.”

ಬೆಳಿಗ್ಗೆ, ಸಂಜೆ ಎರಡು ಹೊತ್ತೂ ನಂಜಪ್ಪ ಶಾಲೆಗೆ ಬಂದು ಕುಮಾರನಿಗೆ ನೆನಪು ಕೊಡುತ್ತಿದ್ದ.

ಒಂದು ದಿನ ಕುಮಾರ ರಿಹರ್ಸಲ್ ಮುಗಿದ ಮೇಲೆ ಕುಂತಳನನ್ನು ಹತ್ತಿರ

ಕರೆದು

" ನಿನಗೆ ನಾಟ್ಯಕಲೆಯಲ್ಲಿ ಒಳ್ಳೆಯ ಭವಿಷ್ಯವಿದೆ ಕುಂತಳ. ನೀನು ಕಷ್ಟ ಪಟ್ಟು ರೂಢಿಸಿಕೊಂಡರೆ ಒಳ್ಳೆಯ ನರ್ತಕಿಯಾಗುವೆ. ರುಕ್ಮಿಣಿ, ಸಾಧನಾ ಬೋಸ್, ಮೇನಕಾ ಇವರನ್ನೆಲ್ಲಾ ಮೀರಿಸಿಬಿಡುವೆ."

" ನಿಮ್ಮ ಆಶೀರ್ವಾದ."

" ನೃತ್ಯಾಭ್ಯಾಸಕ್ಕೆ ನನ್ನ ಆಶೀರ್ವಾದವೊಂದೇ ಸಾಲದು ಕುಂತಳ. ಮೈಮುರಿಯ ದುಡಿಯಬೇಕು. ದಿನಕ್ಕೆ ಎಂಟು ಗಂಟೆ ಹತ್ತು ಗಂಟೆ ಅಭ್ಯಾಸ ಮಾಡಬೇಕು."

" ಕಷ್ಟಪಡುವುದಕ್ಕೆ ನಾನು ಸಿದ್ಧಳಾಗಿದ್ದೇನೆ."

" ಹೇಗೆ ಸಾಧ್ಯ ಹೇಳು. ದಿನವೂ ಸಂಜೆ ಒಂದು ಗಂಟೆ ಬಂದು ರಿಹರ್ಸಲ್ ಮಾಡಿದರೆ ಸಾಕೇ ? ಅಲ್ಲದೆ ಸಂಜೆಯ ಗುಂಪಿನಲ್ಲಿ ನಾನು ನಿನಗೆ ಏನು ಹೇಳಿ ಕೊಡಲು ಸಾಧ್ಯ ? ಇನ್ನೊಂದು ಕೆಲಸ ಮಾಡು, ನಾಳೆ ನಿಮ್ಮ ತಾಯಿಯನ್ನು ಕರೆದುಕೊಂಡು ಬಾ. ನಾನು ಎಲ್ಲಾ ಮಾತನಾಡುತ್ತೇನೆ. ಬೆಳಿಗ್ಗೆಯೇ ಬಾ, ಸಂಜೆಗೆ ಜನ ಬಂದುಬಿಡುತ್ತಾರೆ."

" ಹಾಗೇ ಆಗಲಿ. ಬೆಳಿಗ್ಗೆ ಹತ್ತು ಗಂಟೆಗೆ ಬರುತ್ತೇನೆ."

ಕುಮಾರನ ಮುನ್ನಡೆಯನ್ನು ಕೇಳಿ ನಂಜಪ್ಪನಿಗೆ ಪರಮಾನಂದ ವಾಯಿತು. ಬೆಳಿಗ್ಗೆ ತಾನು ಹತ್ತು ಗಂಟೆಗೆ ಶಾಲೆಗೆ ಬರುವುದಾಗಿ ಕುಮಾರನಿಗೆ ತಿಳಿಸಿದ.

ಮಾರನೆಯ ಬೆಳಿಗ್ಗೆ ಹತ್ತು ಗಂಟೆಗೆ ಸರಿಯಾಗಿ ನಂಜಪ್ಪ ಬಂದ. ಕುಂತಳ ಇನ್ನೂ ಬಂದಿರಲಿಲ್ಲ. ಹತ್ತೂವರೆಯಾಯಿತು. ಅವಳು ಬರುವ ಸುಳಿವು ಕಾಣಲಿಲ್ಲ.

" ಏನು ಕುಮಾರರೇ " ಎಂದು ಕೇಳಿದ.

" ಬರಬಹುದು ನೋಡೋಣ "

ಎಂದು ಕುಮಾರ ಸಮಾಧಾನ ಹೇಳಿದ.

ಹನ್ನೊಂದು ಗಂಟೆಯ ವೇಳೆಗೆ ಕುಂತಳ ತನ್ನ ತಾಯಿ ರಾಮುಲಕ್ಷ್ಮನ್ನು

ನನ್ನ ಕರೆದುಕೊಂಡು ಬಂದಳು.

ಕುಮಾರ ಅವರನ್ನು ಸ್ವಾಗತಿಸಿ ತೊಟ್ಟಿಗೆ ಕರೆದುಕೊಂಡು ಹೋಗಿ ಕೂಡಿಸಿದ.

" ನನ್ನ ಬಾ ಎಂದು ಹೇಳಿದರಂತೆ, ಕುಂತಳ ಹೇಳಿದಳು. "

" ಹೌದಮ್ಮ, ಕುಂತಳನ ವಿಷಯ ಸ್ವಲ್ಪ ಮಾತನಾಡುವುದಿತ್ತು. "

" ಫೀಜು ಕೇಳದೆ ಅವಳಿಗೆ ಪಾಠ ಹೇಳಲು ನೀವು ಒಪ್ಪಿಕೊಂಡದ್ದು ದೊಡ್ಡ ಉಪಕಾರ. ಡ್ಯಾನ್ಸ್ ಕಲಿಯಬೇಕೆಂದು ಅವಳಿಗೆ ತುಂಬ ಆಶೆ. "

" ನಿಮ್ಮ ಹೆಸರೇನಮ್ಮ? "

" ರಾಮಲಕ್ಷಮ್ಮ. "

" ಮನೆಯೆಲ್ಲಿ? "

" ಕಾನಕಾನಹಳ್ಳಿ ರೋಡಿನ ಕೊನೆಯಲ್ಲಿ—ಒಂದು ಗುಡಿಸಲು. "

" ಅಲ್ಲಿಂದ ಇಲ್ಲಿಯವರೆಗೆ ಹುಡುಗಿ ನಡೆದುಕೊಂಡು ಬಂದು, ಹೋಗುವುದು ತುಂಬ ಪ್ರಯಾಸ. "

" ಅದಕ್ಕೇನು ಮಾಡುವುದು ಸ್ವಾಮಿ? "

" ದಿನವೂ ಒಂದು ಗಂಟೆ ಪಾಠದಲ್ಲಿ ನಾಟ್ಯ ಬರುವುದಿಲ್ಲ ರಾಮಲಕ್ಷಮ್ಮ. ಒಳ್ಳೆಯ ನರ್ತಕಿಯಾಗಿ ಲೋಕಪ್ರಸಿದ್ಧಿಗಳಿಸುವ ಯೋಗ್ಯತೆ ಕುಂತಳನಿಗಿದೆ. ಅದು ಸುಮ್ಮನೆ ಹಾಳಾಗಿ ಹೋಗಬಾರದೆಂದು ನಾನು ಚಿಂತಿಸುತ್ತಿದ್ದೇನೆ. "

" ಅದಕ್ಕೆ ಬೇರೆ ದಾರಿ ಯಾವುದಿದೆ ಸ್ವಾಮಿ. "

" ದಾರಿ ಇದೆ. ನನ್ನ ಶಾಲೆಯ ಸಮಸ್ತ ಖರ್ಚು ವೆಚ್ಚ ನೋಡಿಕೊಳ್ಳುತ್ತಿರುವವರು ನನ್ನ ಸ್ನೇಹಿತರು ಸಾಹುಕಾರ ನಂಜಪ್ಪನವರು. ಅವರೂ ಕುಂತಳನ ನಾಟ್ಯ ನೋಡಿದರು. ತುಂಬ ಸಂತೋಷಪಟ್ಟುಕೊಂಡು ಕುಂತಳನನ್ನು ಮುಂದಕ್ಕೆ ತರುವುದಕ್ಕೆ ಬೇಕಾದ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ. ಇಲ್ಲಿ ನೋಡಿ. ಈ ಮನೆ ತುಂಬ ದೊಡ್ಡದಾಗಿದೆ. ನಾನಿರುವವನು ಒಬ್ಬ. ನಿಮಗೆ ಅಭ್ಯಂತರವಿಲ್ಲದಿದ್ದರೆ ಇಲ್ಲಿಗೆ ಬಂದು ಬಿಡಿ. ನನಗೆ ಪುರಸತ್ತು

ಸಿಕ್ಕಿದಾಗ ಕುಂತಳನಿಗೆ ಪಾಠ ಹೇಳಲು ಅನುಕೂಲವಾಗುತ್ತದೆ. ಬನ್ನಿ, ನಮ್ಮ ಸಾಹುಕಾರರ ಪರಿಚಯ ಮಾಡಿಕೊಡುತ್ತೇನೆ."

ಎಂದು ರಾಮಲಕ್ಷ್ಮಮ್ಮನನ್ನು ನಂಜಪ್ಪ ಕುಳಿತಿದ್ದ ರೂಮಿಗೆ ಕರೆತಂದು ಪರಿಚಯ ಮಾಡಿಕೊಟ್ಟು ತಾನು ಕುಂತಳನಿಗೆ ರಿಹರ್ಸಲ್ ಕೊಡುವುದಕ್ಕೆ ತೊಟ್ಟಿಗೆ ಹಿಂದಿರುಗಿದ.

ರಾಮಲಕ್ಷ್ಮಮ್ಮ ನಿಂತೇ ಇದ್ದಳು.

"ಕುಳಿತುಕೊಳ್ಳಮ್ಮ."

ಎಂದು ನಂಜಪ್ಪ ಹೇಳಲು ರಾಮಲಕ್ಷ್ಮಮ್ಮ ಬಾಗಿಲು ಬಳಿ ನೆಲದ ಮೇಲೆ ಕುಳಿತುಕೊಂಡಳು.

"ಕುಮಾರರು, ಎಲ್ಲಾ ಹೇಳಿದ್ದಾರೆ. ನಾನೂ ಕುಂತಳನ ನಾಟ್ಯ ನೋಡಿದೆ. ಅವಳ ಯೋಗ್ಯತೆ ಪ್ರಕಾಶಕ್ಕೆ ಬರುವಂತೆ ಸಹಾಯ ಮಾಡಬೇಕೆಂದು ಮನಸ್ಸಾಯಿತು. ಅದಕ್ಕೆ ನಿನ್ನನ್ನು ಬರಮಾಡಿಕೊಂಡದ್ದು."

"ಇಲ್ಲಿಗೇ ವಾಸಕ್ಕೆ ಬಂದುಬಿಡಿ ಎಂದು ಡ್ಯಾನ್ಸ್ ಮೇಷ್ಟ್ರು ಹೇಳಿದರು."

"ಹಾಗೇ ಮಾಡಬಹುದಲ್ಲ."

ರಾಮಲಕ್ಷ್ಮಮ್ಮ ಉತ್ತರ ಕೊಡಲಿಲ್ಲ.

"ನೀನು ಬಹು ಕಷ್ಟದಲ್ಲಿದ್ದೀಯೆಂದು ಗೊತ್ತಾಯಿತು."

ರಾಮಲಕ್ಷ್ಮಮ್ಮ ಅದಕ್ಕೂ ಉತ್ತರ ಕೊಡಲಿಲ್ಲ.

"ನಿನ್ನ ಸಂಸಾರದ ಭಾರ ನನಗಿರಲಿ."

ರಾಮಲಕ್ಷ್ಮಮ್ಮ ಕತ್ತೆತ್ತಿ ನಂಜಪ್ಪನನ್ನು ನೋಡಿದಳು.

"ಸುಮ್ಮನೆ ಸುತ್ತಿ ಸುಳಿದು ಮಾತನಾಡುವುದೇಕೆ, ನೇರವಾಗಿ ಮಾತನಾಡಿಬಿಡುತ್ತೇನೆ ಕೇಳಮ್ಮ. ಕುಂತಳನನ್ನು ನೋಡಿದಾರಭ್ಯ ಅವಳಲ್ಲಿ ನನ್ನ ಮನಸ್ಸು ನೆಟ್ಟದೆ. ನಿನ್ನ—ಅವಳ ಸಮಸ್ತ ಜವಾಬ್ದಾರಿಯೂ ನನಗಿರಲಿ."

"ನಿಮಗೆ ಸಂಸಾರವಿಲ್ಲವೇ?"

"ಸಂಸಾರ, ಅದರ ಪಾಡಿಗೆ ಅದಿದೆ."

"ನನಗೆ ಇರುವವಳು ಒಬ್ಬಳೇ ಮಗಳು. ಅವಳ ಬಾಳು ಚೆನ್ನಾಗ

ಬೇಕೆಂದು ನನ್ನ ಬಯಕೆ."

"ನಿನ್ನ ಬಯಕೆ ಸಾಧುವಾದದ್ದೇ."

"ನನ್ನ ಆಯಸ್ಸು ಶಾಶ್ವತವಾದುದಲ್ಲ. ಮಗುವನ್ನು ಯಾರಾದರೂ ಒಳ್ಳೆಯವರ ಕೈಗೆ ಹಾಕಿ ಕಣ್ಣು ಮುಚ್ಚಿಕೊಳ್ಳಬೇಕೆಂದು ಬಯಸುತ್ತಿದ್ದೇನೆ."

"ನಿಮಗೆ ಯಾವುದಕ್ಕೂ ನಾನು ಕಡಿಮೆ ಮಾಡುವುದಿಲ್ಲ. ಮನೆಯ ಖರ್ಚು ಬಟ್ಟೆಬರೆ, ಒಡವೆ ಎಲ್ಲಾ ನಿರ್ವಹಿಸಿಕೊಂಡು ಹೋಗುತ್ತೇನೆ."

"ನೀವು ಎಂದಿಗೂ ಅವಳ ಕೈಬಿಡುವುದಿಲ್ಲವೇ?"

"ನನ್ನ ವಿಷಯ ನಿನಗೆ ಗೊತ್ತಿಲ್ಲ. ದೊಡ್ಡಪೇಟೆಯಲ್ಲಿ ನನ್ನದು ದೊಡ್ಡ ಬಟ್ಟೆ ಅಂಗಡಿಯಿದೆ. ಯಾರನ್ನು ಬೇಕಾದರೂ ವಿಚಾರಿಸಿ ನೋಡು. ನನ್ನ ಗುಣ ಎಂಥದು ಎಂದು ನಿನಗೇ ಗೊತ್ತಾಗುತ್ತದೆ."

"ನನಗೆ ನಾಲ್ಕು ದಿವಸ ಅವಕಾಶ ಕೊಡಿ. ಅವಳನ್ನೂ ಕೇಳಿ ನೋಡಿ ತಿಳಿಸುತ್ತೇನೆ."

"ಹಾಗೇ ಮಾಡು." ಎಂದು ನಂಜಪ್ಪ ಹೇಳಿದ.

ಮೂರು ದಿವಸ ಕುಂತಳನಾಗಲಿ, ರಾಮಲಕ್ಷ್ಮಮ್ಮನಾಗಲಿ 'ನಾಟ್ಯ ಶಾಲೆ'ಯ ಕಡೆ ತಿರುಗಿ ನೋಡಲಿಲ್ಲ. ಕುಮಾರನಿಗೂ ನಂಜಪ್ಪನಿಗೂ ಒಂದೇ ಸಮನಾಗಿ ಆತಂಕವಾಯಿತು. ವನಜನನ್ನು ಕೇಳಿದಾಗ

"ಕುಂತಳ ಮನೆಯಲ್ಲಿಯೇ ಇದ್ದಳು. ಇವತ್ತು ಪಾಠಕ್ಕೆ ಬರುವುದಕ್ಕಾಗುವುದಿಲ್ಲವೆಂದು ಹೇಳಿದಳು." ಎಂದು ತಿಳಿಸಿದಳು.

ಇನ್ನೂ ಒಂದೆರಡು ದಿವಸ ಅವರಿಗಾಗಿ ಕಾಯುವುದು, ಅವರು ಬರದಿದ್ದರೆ ಕುಮಾರನೇ ರಾಮಲಕ್ಷ್ಮಮ್ಮನ ಮನೆಗೆ ಹೋಗಿ ವಿಚಾರಿಸಿಕೊಂಡು ಬರುವುದೆನ್ನು ನಿಶ್ಚಯವಾಯಿತು.

ಐದನೆಯ ದಿವಸ ರಾಮಲಕ್ಷ್ಮಮ್ಮ ತಾನಾಗಿಯೇ ಬಂದಳು. ಅವಳನ್ನು ಶಾಲೆಯಲ್ಲಿ ಕೂಡಿಸಿ ಕುಮಾರ ಗಾಡಿ ಮಾಡಿಕೊಂಡು ಹೋಗಿ ನಂಜಪ್ಪನನ್ನು ಕೂಡಲೆ ಕರೆದುಕೊಂಡು ಬಂದ.

"ಏನಮ್ಮ, ನಾಲ್ಕು ದಿವಸವಾದರೂ ನೀನಾಗಲಿ ಕುಂತಳ ಆಗಲಿ ಇತ್ತ

5

ಸುಳಿಯಬೇಡವೆ ? ನಿಮಗೆ ಅಸಮಾಧಾನವಾಯಿತು ಎಂದು ನಾವು ತಿಳಿದು ಕೊಂಡೆವು. ”

“ ಹಾಗೇನಿಲ್ಲ. ಕುಂತಳನನ್ನು ಒಪ್ಪಿಸಬೇಕಾದ ಕೆಲಸವಿತ್ತಲ್ಲ. ”

“ ಏನಾಯಿತು ? ”

“ ಅವಳು ಮೊದಲು ಒಪ್ಪಲಿಲ್ಲ. ಕೊನೆಗೆ ನನ್ನ ಸ್ಥಿತಿಗತಿ ನೋಡಲಾರದೆ ಒಪ್ಪಿಕೊಂಡಳು. ಅವಳನ್ನು ಒಲಿಸಿಕೊಂಡು ಸಂತೋಷವಾಗಿಟ್ಟುಕೊಳ್ಳುವುದು ನಿಮ್ಮ ಕೆಲಸ. ”

“ ಆ ವಿಷಯದಲ್ಲಿ ನೀನು ಯೋಚನೆ ಮಾಡಬೇಕಾದ ಕಾರಣವೇ ಇಲ್ಲ. ಹಾಗಾದರೆ ಇಲ್ಲಿಗೆ ಯಾವಾಗ ಬರುವಿರಿ ? ”

“ ಅಲ್ಲಿ ಸುತ್ತಮುತ್ತ ಸ್ವಲ್ಪ ಸಾಲವಾಗಿದೆ. ಎರಡು ತಿಂಗಳು ಮನೆ ಬಾಡಿಗೆ ಕೊಟ್ಟಿಲ್ಲ. ಅಲ್ಲಿನ ರಗಳೆ ಹರಿಸಿಕೊಂಡು ಬರಬೇಕು.”

ನಂಜಪ್ಪ ರಾಮಲಕ್ಷಮ್ಮನ ಕೈಗೆ ಇನ್ನೂರು ರೂಪಾಯಿ ಹಾಕಿ

“ ಎಲ್ಲಾ ಬಗೆಹರಿಸಿಕೊಂಡು ಬಿಡು. ಸಾಲವೆ ಬಂದರೆ ಕೇಳು ಕೊಡುತ್ತೇನೆ. ”

ಎಂದು ಅವಳನ್ನು ಒಳಕ್ಕೆ ಕರೆದುಕೊಂಡು ಹೋಗಿ ಮನೆಯನ್ನು ತೋರಿಸಿ

“ ಮನೆಗೆ ಏನು ಸಾಮಾನು ಬೇಕಾದರೂ ತಂದುಬಿಡು. ”

ತನ್ನ ರಗಳೆ ಬಗೆಹರಿಸಿಕೊಳ್ಳಲು ರಾಮಲಕ್ಷಮ್ಮನಿಗೆ ಒಂದೆರಡು ದಿನಗಳು ಹಿಡಿದವು. ಶನಿವಾರ ದಿನ ಚೆನ್ನಾಗಿದೆಯೆಂದು, ಮಗಳನ್ನು ಕರೆದುಕೊಂಡು, ‘ ...ವೈಶಾಲಿ ’ಗೆ ವಾಸಕ್ಕೆ ಬಂದಳು. ಶನಿವಾರವೆಲ್ಲಾ ಮನೆಗೆ ಬೇಕಾದ ಸಾಮಾನು, ಪಾತ್ರೆ, ಬಟ್ಟೆಬರೆ ಹೊಂದಿಸಿಕೊಳ್ಳುವುದರಲ್ಲಿಯೇ ಆಗಿಹೋಯಿತು. ನಂಜಪ್ಪ ಕುಮಾರ ಅವಳ ಸಹಾಯಕ್ಕೆ ನಿಂತರು. ಮಾರನೆಯ ದಿನದಿಂದ ಅಲ್ಲಿಯೇ ಅಡಿಗೆ ಮಾಡುವುದೆಂದು ನಿಶ್ಚಯವಾಯಿತು. ಕುಮಾರನಿಗೆ ಊಟದ ಯೋಚನೆಯೂ ತಪ್ಪಿತು. ನಂಜಪ್ಪ ರಾಮಲಕ್ಷಮ್ಮನ ಮನೆಯಲ್ಲಿಯೇ ಊಟ ಮಾಡಿ ನಿಂತ.

ನಂಜಪ್ಪ ಮಾಡಿದ ವ್ಯವಸ್ಥೆಯಿಂದ ಅವನ ಸಮಸ್ಯೆ, ಕುಮಾರನ ಸಮಸ್ಯೆ, ರಾಮಲಕ್ಷ್ಮಮ್ಮನ ತಾಪತ್ರಯ ಎಲ್ಲವೂ ಪರಿಹಾರವಾದಂತಾಯಿತು.

ನಂಜಪ್ಪನಿಗೆ ದ್ವಿತೀಯ ಸಂಸಾರದ ಸುಖ ಬೇಕಾಗಿತ್ತು. ಅದರ ಖರ್ಚು ವೆಚ್ಚಿನ ಜವಾಬ್ದಾರಿ ಅವನು ಹೊರಲು ಸಿದ್ಧವಾಗಿದ್ದ. ಆದರೆ ಲೋಕಾಪವಾದಕ್ಕೆ ಅವನು ಹೆದರುತ್ತಿದ್ದ. ಈಗ ಕುಂತಳೆ ಕುಮಾರನ ಆಶ್ರಯದಲ್ಲಿ ನಿಂತುದರಿಂದ ಯಾರೂ ನಂಜಪ್ಪನ ಮೇಲೆ ಅನುಮಾನ ತಳೆಯುವ ಕಾರಣವಿರಲಿಲ್ಲ.

ಕುಮಾರನಿಗೆ ಹೋಟೇಲು ಕೂಳು ಸಾಕಾಗಿತ್ತು. ಎರಡು ಹೊತ್ತು ಸರಿಯಾದ ಊಟ ಕಂಡರೆ ಸಾಕಲ್ಲಾ ಎಂದವನು ತಹತಹಪಡುತ್ತಿದ್ದ. ನಂಜಪ್ಪನ ಪ್ರೋತ್ಸಾಹ, ಸಹಾಯ ಅವನ ಜೀವನಕ್ಕೆ ಭದ್ರತೆಯನ್ನೊದಗಿಸಿ ಕಲಾಸೇವೆಯ ದಾರಿಯನ್ನು ನಿಷ್ಕಂಟಕ ಮಾಡಿತ್ತು.

ರಾಮಲಕ್ಷ್ಮಮ್ಮನಿಗೆ ಇದ್ದುದು ಒಂದೇ ಚಿಂತೆ—ದೊಡ್ಡ ಚಿಂತೆ. ಕುಂತಳೆಯ ಗತಿಯೇನಾಗುವುದೋ ಎನ್ನುವ ಕಳವಳ ಅವಳ ಮನಸ್ಸನ್ನು ಕೀಟದಂತೆ ಒಂದೇ ಸಮನಾಗಿ ಕೊರೆಯುತ್ತಿತ್ತು. ಕುಮಾರ,ನಂಜಪ್ಪ ತನ್ನ ಭಾಗ್ಯದ ದೇವತೆಗಳಂತೆ ಬಂದು ಕಾಪಾಡಿದರಲ್ಲಾ ಎಂದು ಅವಳ ಮನಸ್ಸು ಕೃತಜ್ಞತೆ ಶಾಂತಿಯಿಂದ ತುಂಬಿತು.

ಕುಮಾರ ತನ್ನ 'ಅರುಣೋದಯ ನಾಟ್ಯಶಾಲೆ'ಯ ಕೆಲಸ ಮುಗಿಸಿಕೊಂಡು ಮಲ್ಲೇಶ್ವರದ ಪಾಠಗಳು, ಸರಸ್ವತಮ್ಮನ ಮನೆಯ ಪಾಠಕ್ಕೆ ಗಮನ ಕೊಡುತ್ತಿದ್ದ. ನಾಟ್ಯ ಪ್ರಪಂಚದಲ್ಲಿ ಕುಮಾರ ಮಹಾಕ್ರಾಂತಿಯನ್ನೆಬ್ಬಿಸಿ ಬಿಡುತ್ತಾನೆಂದು ಅವನ ಶಿಷ್ಯಶಿಷ್ಯೆಯರು ಊರಿನಲ್ಲಿ ಪ್ರಚಾರ ಮಾಡುತ್ತಿದ್ದರು. ಕ್ರಾಂತಿಯ ಮಾತು ಹಾಗಿರಲಿ—ಸದ್ಯ ಒಂದು ಪ್ರದರ್ಶನ ಕೊಟ್ಟು ಊರಿನಲ್ಲಿ ಸೈ ಎನಿಸಿಕೊಂಡರೆ ಸಾಕು ಎಂದು ಕುಮಾರ ಹಾಹಾಕಾರಪಡುತ್ತಿದ್ದ.

ಸರಸ್ವತಮ್ಮನ ಮನೆಯಲ್ಲಿ ಕುಮಾರ ಸರ್ವತಂತ್ರ ಸ್ವತಂತ್ರನಾಗುವುದಕ್ಕೆ ಬಹಳ ದಿನಗಳು ಹಿಡಿಯಲಿಲ್ಲ. ರಿಹರ್ಸಲ್ ಇಲ್ಲದಿದ್ದ ವೇಳೆಯಲ್ಲಿಯೂ ಕುಮಾರ ಅವಳ ಮನೆಗೆ ಬಂದು ಕುಳಿತು ಹರಟೆ ಕೊಚ್ಚುತ್ತಿದ್ದ. ಕುಮಾರ ಹೊರಗಿನವನು ಎಂಬ ಭಾವನೆಯೇ ಕಾಲಕ್ರಮೇಣ ಅಳಿಸಿಹೋಗುತ್ತ ಬಂತು.

ಒಂದು ದಿನ ಸರಸ್ವತಮ್ಮ ಕುಮಾರನನ್ನು ಆಕ್ಷೇಪಿಸುವಂತೆ

" ಏನು ಮೇಷ್ಟ್ರೇ–ನಮ್ಮ ಮನೆಯಲ್ಲಿ ಊಟಮಾಡಬಾರದೆಂದು ಪ್ರಮಾಣ ಮಾಡಿರುವಿರೇನು " ಎಂದು ಕೇಳಿದಳು.

ಅವಳ ಆಕ್ಷೇಪಣೆ ಕ್ಷಣಕಾಲ ಕುಮಾರನನ್ನು ಚಕಿತನನ್ನಾಗಿ ಮಾಡಿತು.

" ಇದೇನಮ್ಮ ಹೀಗೆ ಕೇಳುತ್ತೀರಿ. ನಿಮ್ಮ ಮನೆಯಲ್ಲಿ ಎಷ್ಟು ಕಾಫಿ ಕುಡಿದಿದ್ದೇನೆ. ಎಷ್ಟು ತಿಂಡಿ ತಿಂದಿದ್ದೇನೆ. ಇಲ್ಲಿ ನನಗೆ ಸಂಕೋಚವೇ ಇಲ್ಲವಲ್ಲ. "

" ಊಟ ಯಾವತ್ತು ಮಾಡಿದ್ದೀರಿ ಹೇಳಿ ? "

" ನೀವು ಊಟಕ್ಕೆ ಕರೆದಿದ್ದರೆ ಬರುತ್ತಿದ್ದೆ. "

" ಇವತ್ತು ಕರೆಯುತ್ತೇನೆ ಬನ್ನಿ. "

" ನಿಮ್ಮ ಯಜಮಾನರು. "

" ಅವರು ಊರಿನಲ್ಲಿಲ್ಲ–ಉಡುಪೀಗೆ ಹೋಗಿದ್ದಾರೆ. ಹಿಂದಿರುಗುವುದಕ್ಕೆ ಇನ್ನೂ ಒಂದು ವಾರವಾಗಬಹುದು. ಯಜಮಾನರಿದ್ದರೇನಂತೆ–ನೀವು ಊಟಕ್ಕೆ ಬರಬಾರದೇ ? "

" ಅವರು ಏನೋ ವಿಚಿತ್ರವಾಗಿ ನನ್ನ ನೋಡುತ್ತಾರಮ್ಮಾ. ' ಇವನೇಕೆ ಇಲ್ಲಿ ಬರುತ್ತಾನೆ ' ಎಂದು ಕೆಣಕಿ ಕೇಳುವ ಹಾಗಿರುತ್ತದೆ ಅವರ ನೋಟ. "

" ಸರಿ. ಅವರು ಯಾವಾಗಲೂ ಹಾಗೇ ಬಿಡಿ. ಮನೆಗೆ ಒಬ್ಬರು ಬರುವುದಕ್ಕಾಗದು. ಮನೆಯೆಂದ ಮೇಲೆ ನಾಲ್ಕುಜನ ಬಂದು ಹೋಗಿ ಮಾಡದಿದ್ದರಾಗುತ್ತದೆಯೇ ?—ಇವತ್ತು ಸಂಜೆ ಪಾಠಕ್ಕೆ ಬರುತ್ತೀರಲ್ಲಾ—ಪಾಠ ಮುಗಿದ ಮೇಲೆ ಇಲ್ಲೇ ಊಟ ಮುಗಿಸಿ. "

" ಆಗಬಹುದು. " ಎಂದು ಕುಮಾರ ಒಪ್ಪಿಕೊಂಡ.

ಸಂಜೆಯ ಪಾಠ ಸ್ವಲ್ಪ ವಿಸ್ತಾರವಾಗಿಯೇ ಸಾಗಿತು. ಕುಮಾರನ ಜೊತೆಗೆ ಮಂಜುಳಾ ವೀಣೆ ನುಡಿಸಿದಳು. ಮೇಷ್ಟ್ರು ಮಕ್ಕಳು ಪಾಠದಲ್ಲಿ ನಿಮಗ್ನರಾಗಿದ್ದಾಗ ಸರಸ್ವತಮ್ಮ ಸಣ್ಣ ಹಬ್ಬದ ಅಡಿಗೆ ಮಾಡಿಟ್ಟಳು.

ಪಾಠ ಮುಗಿದ ಕೂಡಲೆ ಮಂಜುಳಾ, ಸುಧಾ ಊಟ ಮುಗಿಸಿ ತಾಯಿಗೂ ಮೇಷ್ಟ್ರರಿಗೂ ಎಲೆ ಹಾಕಿ ಬಡಿಸಿದರು. ಅವರ ಊಟ ಮುಗಿದ ಮೇಲೆ ಮಕ್ಕಳು ತಮ್ಮ ಕೋಣೆಗೆ ತೆರಳಿದರು. ಸರಸ್ವತಮ್ಮ, ಮೇಷ್ಟ್ರರು ತೊಟ್ಟಿಯಲ್ಲಿ ತಾಂಬೂಲ

ಸವಿಯುತ್ತ ಕುಳಿತರು.

ತಾಂಬೂಲ ಚರ್ವಣ ಮುಗಿದ ಮೇಲೆ ಮೇಷ್ಟ್ರು ಮನೆಗೆ ಹೊರಡಲು ಎದ್ದು ನಿಂತರು. ಸರಸ್ವತಮ್ಮ ಹೊರಬಾಗಿಲು ತೆಗೆದು ನೋಡಿದಳು. ಸಣ್ಣ ಮಳೆ ಆರಂಭವಾಯಿತು.

" ಮಳೆ ಬರುತ್ತಿದೆಯಲ್ಲಾ ಮೇಷ್ಟ್ರರೇ. "

ಮೇಷ್ಟ್ರು ಹೊರಗೆ ಕೈಯಿಟ್ಟು ನೋಡಿ

" ಸಣ್ಣ ಮಳೆ. ಚಿಂತೆಯಿಲ್ಲ ಹೊರಟುಬಿಡುತ್ತೇನೆ. "

" ನೀವು ಮನೆ ಸೇರುವುದರಲ್ಲಿ ನೆನೆದು ತೊಪ್ಪೆಯಾಗಿಬಿಡುತ್ತೀರಿ. "

" ಛತ್ರಿಯಿಲ್ಲವೇ ? "

" ಇಲ್ಲ ! ಮಳೆಯಲ್ಲಿ ನೆನೆದುಕೊಂಡಾದರೂ ಹೋಗಬೇಕಾದುದೇಕೆ? ಇಲ್ಲೇ ಮಲಗಿಬಿಡಿ. ಬೆಳಿಗ್ಗೆ ಹೋದರಾಯಿತು. " ಎಂದಳು.

ಅವಳ ಸಲಹೆ ಕುಮಾರನಿಗೂ ಸೂಕ್ತವಾಗಿ ಕಂಡಿತು.

ಸರಸ್ವತಮ್ಮ ತೊಟ್ಟಿಯಲ್ಲಿ ಕುಮಾರನಿಗೆ ಹಾಸಿಗೆ ಹಾಸಿ ಕೊಟ್ಟು

" ಕುಡಿಯುವುದಕ್ಕೆ ನೀರು ಬೇಕೇ ಮೇಷ್ಟ್ರರೇ ? "

" ಹೂ ಬೇಕಾಗಿತ್ತು. ಊಟ ಸ್ವಲ್ಪ ಬಲವಾಯಿತು, ಬಾಯಾರಿಕೆ. "

" ಇದೇನು ಮಹಾ ಊಟ ! "

ಎಂದು ಸರಸ್ವತಮ್ಮ ಒಂದು ತಂಬಿಗೆಯಲ್ಲಿ ನೀರು, ಒಂದು ಲೋಟಾ ತಂದು ಕುಮಾರನ ಕೈಗಿತ್ತಳು.

ನೀರು ಕುಡಿದು ಕುಮಾರ ಮಲಗಿದ. ಸರಸ್ವತಮ್ಮ ತೊಟ್ಟಿಯ ದೀಪ ಆರಿಸಿ ತನ್ನ ರೂಮು ಸೇರಿದಳು. ರೂಮಿನ ಬಾಗಿಲನ್ನು ಮುಂದಕ್ಕೆ ತಳ್ಳಿದಳು—ಆದರೆ ಚಿಲುಕ ಹಾಕಲಿಲ್ಲ.

ಸರಸ್ವತಮ್ಮನ ರೂಮಿನ ಸ್ವಿಚ್ಚು ' ಟಿಕ್ ' ಎಂದಿತು. ಅವಳು ಅರೆಕ್ಷಣ ಮಲಗಿದವಳೇ ಎದ್ದು ಹೊರಗೆ ಹೋಗಿ ಬಂದು ಮತ್ತೆ ಮಲಗಿದಳು. ನಿದ್ರೆ ಹತ್ತಲಿಲ್ಲ. ಪುನಃ ಎದ್ದು ಹೊರಗೆ ಹೋಗಿ ಒಂದು ಗ್ಲಾಸು ನೀರು ಕುಡಿದು ಬಂದಳು.

"ಏಕಮ್ಮ—ನಿದ್ದೆ ಬರುತ್ತಿಲ್ಲವೇ?" ಎಂದು ಕುಮಾರ ಕೇಳಿದ.

"ಇಲ್ಲ ಮೇಸ್ಟ್ರೇ—ಏನೋ ಮುಗ್ಗು ಶೆಖೆ!"

"ಹೌದಮ್ಮ. ಮದರಾಸ್ ಇದ್ದ ಹಾಗಿದೆ."

ಸರಸ್ವತಮ್ಮ ಹಾಸಿಗೆಯ ಮೇಲೆ ಪವಡಿಸಿ, ಅತ್ತಿತ್ತ ಹೊರಳಾಡಿದಳು. ಅವಳ ಮನಸ್ಸಿನಲ್ಲಿ ಮಹಾಯುದ್ಧವಾಗುತ್ತಿತ್ತು. ಎದ್ದು ಹಾಸಿಗೆಯ ಮೇಲೆ ಕುಳಿತು

"ಮೇಸ್ಟ್ರೇ" ಎಂದು ಕೂಗಿದಳು.

"ಏನಮ್ಮ!"

"ನಿದ್ರೆ ಬಂತೇ?"

"ಇಲ್ಲ—ನನಗೂ ಶೆಖೆ."

"ಇಲ್ಲಿಯೇ ಬನ್ನಿ, ಸ್ವಲ್ಪ ಹೊತ್ತು ಮಾತನಾಡುತ್ತ ಕುಳಿತು ಕೊಳ್ಳೋಣ."

ಕುಮಾರ ಎದ್ದು ಬರುವನೆಂದು ಸರಸ್ವತಮ್ಮ ನಿರೀಕ್ಷಿಸುತ್ತ ಕುಳಿತಳು. ಅವಳಿಗೆ ಗಡಿಯಾರದ ಒಂದೊಂದು ಟಿಕ್‌ಟಿಕ್ ಶಬ್ದವೂ ಒಂದೊಂದು ಯುಗ ವನ್ನು ನಿರ್ದೇಶಿಸುತ್ತಿದ್ದವು. ಕುಮಾರ ಎದ್ದು ಬರುವ ಸಂಭವ ಕಾಣಲಿಲ್ಲ. ಸರಸ್ವತಮ್ಮ ಶಬ್ದಮಾಡದೆ ಮಂಚದಿಂದ ಕೆಳಗಿಳಿದು ನಿಂತಳು. ಆಗಾಗ್ಗೆ ಚಟಕಿನಂತೆ ಹೊಡೆಯುತ್ತಿದ್ದ ಮಿಂಚಿನ ವಿದ್ಯುತ್ ಪ್ರಕಾಶದಲ್ಲಿ ಕುಮಾರನ ಮುಖ ಕಾಣುತ್ತಿತ್ತು, ಅವನು ಕಣ್ಣು ಬಿಟ್ಟುಕೊಂಡು ಎದೆಯ ಮೇಲೆ ಕೈಹೊತ್ತು ಗಂಭೀರವಾಗಿ ಮಲಗಿದ್ದ.

ಸರಸ್ವತಮ್ಮ ನಾಲ್ಕೈದು ನಿಮಿಷ ಕುಮಾರನಿಗೆ ಕಾದು ನೋಡಿದಳು. ಅವನು ಅಲುಗಾಡಲಿಲ್ಲ.

ಕುಮಾರ ಕಣ್ಣು ಬಿಟ್ಟುಕೊಂಡು ಮಲಗೇ ಇದ್ದ. ಸರಸ್ವತಮ್ಮ ನಿಶ್ಶಬ್ದ ವಾಗಿ ಅವನ ಬಳಿ ಸಾರಿ ಅವನ ಎದೆಯ ಮೇಲೆ ಎದೆಯಿಟ್ಟು, ಕವರಿಗೆ ಸ್ಟಾಂಪ್ ಅಂಟಿಸುವಂತೆ ಅವನ ತುಟಿಗಳಿಗೆ ತುಟಿ ಕೂಡಿಸಿದಳು. ಕುಮಾರ ಝುಗ್ಗನೆದ್ದು ಕುಳಿತ. ತಲೆಯಿಂದ ಕಾಲಿನವರೆಗೆ ಅವನ ಮೈ ಬೆವರಲಾರಂಭಿಸಿತು.

ಸರಸ್ವತಮ್ಮ ಅವನನ್ನು ಬಿಗಿಯಾಗಿ ಅಪ್ಪಿ ಹಿಡಿದಿದ್ದಳು.

"ಇದೇನಮ್ಮ?"

"ಏನು ಎಂದು ನಾನು ಪಾಠ ಹೇಳಿಕೊಡಬೇಕೇನು. ನಾನು ಕರೆದಾಗ ನೀವು ಏಕೆ ಬರಲಿಲ್ಲ."

"ಎಲ್ಲಿಯಾದರೂ ಉಂಟೇ?"

"ಯಾವದು?"

"ಇದು—ನಿಮ್ಮ ಯಜಮಾನರು ಇರುವಾಗ!"

"ಅವರಿಗೆ ನನ್ನನ್ನು ನಾನು ಮಾರಿಕೊಂಡಿಲ್ಲ."

ಕುಮಾರನ ಮನಸ್ಸು ಅಲ್ಲಕಲ್ಲೋಲವಾಯಿತು. ಸರಸ್ವತಮ್ಮನಿಗೆ ಏನು ಹೇಳಬೇಕು ಅವನಿಗೆ ತೋರದಾಯಿತು. ಸರಸ್ವತಮ್ಮನ ಉದ್ವೇಗ ಕ್ಷಣ ಕ್ಷಣಕ್ಕೆ ಮಲೇರಿಯಾ ಜ್ವರದಂತೆ ಏರುತ್ತ ಹೋಯಿತು. ಕುಮಾರನ ಕೈಯನ್ನು ತೆಗೆದುಕೊಂಡು ತನ್ನ ಎದೆಯ ಮೇಲಿಟ್ಟುಕೊಂಡಳು. ಅವನ ಮೈಯನ್ನೆಲ್ಲಾ ನೇವರಿಸಿದಳು. ಕುಮಾರ ಕಲ್ಲು ಕಂಬದಂತೆ ಕುಳಿತಿದ್ದ. ಸರಸ್ವತಮ್ಮನ ದೇಹಾದ್ಯಂತವೂ ಕಂಪಿಸಿತು. ಕೋಪ ಅವಳನ್ನು ಹಿಡಿದಲುಗಿಸಿತು.

"ನೀವೇನು ಮನುಷ್ಯರೋ ಮರದ ತುಂಡೋ?"

ಕುಮಾರ ಅವಳಿಗೆ ಉತ್ತರ ಕೊಡಲಿಲ್ಲ.

"ನೀವು ಹೀಗೆ ಮಾಡಿದರೆ ನಾನು ಬದುಕಲಾರೆ. ಕೆರೆ ಭಾವಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ."

"ಅಮ್ಮಾ...."

"ಅಮ್ಮಾ . . ಅಮ್ಮಾ . . ನಿಮ್ಮ ಅಮ್ಮನನ್ನು ಸುಟ್ಟರು. ನಿಮಗೆ ಏನಿ ಬಂದಿರುವುದು ಕೇಡು?"

ಸರಸ್ವತಮ್ಮ ಕೆಣಕಿದ ಫಣಿಯಂತಾದಳು. ಕುಮಾರನನ್ನು ಉದ್ರೇಕ ಗೊಳಿಸಲು ತನ್ನ ಪೂರ್ಣ ಸಾಮರ್ಥ್ಯ ಪ್ರಯೋಗಿಸಿದಳು. ಕುಮಾರ ಶುಕ ಮುನಿಯಂತೆ ನಿರ್ವಿಕಾರ ಸಮಾಧಿಯಲ್ಲಿದ್ದ. ತನ್ನೆಲ್ಲ ಕಾಮಾನುಸಂಧಾನಕ್ಕೆ ಕಿಂಚಿತ್ತಾದ ಪ್ರತಿಕ್ರಿಯೆ—ಪ್ರತಿಸ್ಪಂದನ ಬಾರದಿದ್ದುದನ್ನು ಕಂಡು ಸರಸ್ವತಮ್ಮ

ಚಕಿತಳಾದಳು.

"ಕುಮಾರ್, ನಿಮ್ಮ ಮೈಯಲ್ಲಿ ಆರೋಗ್ಯವಿಲ್ಲವೇ ?"

"ಆರೋಗ್ಯವಾಗಿಯೇ ಇದ್ದೇನಲ್ಲಾ."

"ಹೆಣ್ಣು ಮೈತೆರೆದುಕೊಂಡು ಬಂದಿರುವಾಗಲೂ ನೀವು ಹೀಗಿರುವುದು...."

ಕುಮಾರ ಕತ್ತು ಬಗ್ಗಿಸಿದ. ಅವನ ಕಣ್ಣುಗಳಿಂದ ಜಾರಿದ ಬಿಸಿ ಹನಿಗಳು ಸರಸ್ವತಮ್ಮನ ಕೈಮೇಲೆ ಉರಿಯುವ ಕೊಳ್ಳಿಗಳಂತೆ ಬಿದ್ದವು.

"ಕುಮಾರ್, ನೀವು ಅಳುತ್ತಿರುವಿರಿ."

ಕುಮಾರನಿಗೆ ದುಃಖ ಉಮ್ಮಳಿಸಿ ಬಂತು. ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

"ಏನಾಗಿದೆ. ಏಕೆ ಹೀಗೆ ದುಃಖಪಡುತ್ತಿರುವಿರಿ ?"

ಕುಮಾರ ತಡೆತಡೆದು ಬಹು ಕಷ್ಟದಿಂದ ಹೇಳಿದ

"ಹೆಣ್ಣಿಗೆ ಗಂಡಾಗುವುದು ನನ್ನ ಹಣೆಯಲ್ಲಿ ಬರೆದಿಲ್ಲ."

ಕುಮಾರನ ಸ್ಪಷ್ಟೋಕ್ತಿ ಸರಸ್ವತಮ್ಮನ ಎದೆಯನ್ನಿರಿಯಿತು. ಅಲ್ಲಿ ಕೂಡಲಾಗದೆ ಎದ್ದು ಬಂದು ತನ್ನ ಹಾಸಿಗೆಯ ಮೇಲೆ ಪವಡಿಸಿದಳು. ಅವಳಿಗೂ ದುಃಖ ಉಕ್ಕಿ ಬಂತು.

ಬೆಳಿಗ್ಗೆ ಬೇಗ ಎದ್ದ ಸರಸ್ವತಮ್ಮನ ಮೈಯಲ್ಲಿ ಲವಲವಿಕೆ ಉಳಿದಿರಲಿಲ್ಲ. ರಾತ್ರಿ ನಿದ್ರೆ ಬಾರದೆ ಅವಳ ಕಣ್ಣುಗಳು ಕೆಂಪಗಾಗಿದ್ದವು, ಹೃದಯ ಭಾರವಾಗಿತ್ತು. ಹಾಸಿಗೆ ಬಿಟ್ಟೆದ್ದು ಮುಖ ತೊಳೆದುಕೊಂಡು ಕಾಫಿ ಒಲೆ ಹೊತ್ತಿಸಿದಳು. ಹಾಲಿನವನು ಕೊಟ್ಟು ಹೋದ ಹಾಲನ್ನು ಒಳಗೆ ಒಯ್ಯುತ್ತಾ ಒಮ್ಮೆ ಕುಮಾರನ ಮುಖವನ್ನು ದಿಟ್ಟಿಸಿ ನೋಡಿದಳು. ಯಾವ ಚಿಂತೆಯೂ ಇಲ್ಲದೆ ಮಗುವಿನಂತೆ ನಿದ್ರಿಸುತ್ತಿದ್ದ ಅವನ ಪ್ರಶಾಂತ ಮುಖ ನೋಡಿ ಸರಸ್ವತಮ್ಮನ ಕರುಳು ಮಿಡಿಯಿತು.

ಕಾಫಿಗೆ ಡಿಕಾಕ್ಷನ್ ಹಾಕಿ, ಒಲೆಯ ಮೇಲೆ ಹಾಲು ಕಾಯಲಿಟ್ಟು ಚಿಂತಿಸುತ್ತ ಕುಳಿತಳು. ಅವಳ ಮನಸ್ಸಿನ ಮಂಕು ಥಟ್ಟನೆ ಬಗೆಹರಿದಂತಾಯಿತು.

“ ಎಂಥ ಹುಚ್ಚಿ ನಾನು ! ಗಂಡುರೂಪ ಹೊತ್ತಿರುವವರೆಲ್ಲಾ ಗಂಡಸರು ಎಂದು ಭಾವಿಸುತ್ತೇನಲ್ಲಾ ” ಎಂದುಕೊಂಡು ಗಹಗಹಿಸಿ ನಕ್ಕಳು.

ಕುಮಾರನಿಗೆ ತಾನೇ ಸಮಾಧಾನ ಹೇಳಿ, ಅವನಿಗೆ ಕಾಫಿಕೊಟ್ಟು ಕಳುಹಿಸಿಕೊಟ್ಟಳು.

ಸರಸ್ವತಮ್ಮ, ಕುಮಾರ ಇಬ್ಬರೂ ಆ ಪ್ರಕರಣವನ್ನು ಮರೆತುಬಿಟ್ಟರು. ಕುಮಾರ ಎಂದಿನಂತೆ ರಿಹರ್ಸಲ್ ಕೊಡಲು ಬರುತ್ತಿದ್ದ. ಸರಸ್ವತಮ್ಮ ಎಂದಿನಂತೆ ಅವನೊಂದಿಗೆ ಸಲಿಗೆಯಿಂದಲೇ ಇರುತ್ತಿದ್ದಳು. ಆದರೂ ಒಂದು ತಂತು, ಅವರ ಸಂಬಂಧದಲ್ಲಿ ಕಡಿದುಬಿದ್ದಿತ್ತು.

೬

'ಅರುಣೋದಯ ನಾಟ್ಯಶಾಲೆ'ಯಲ್ಲಿ ರಿಹರ್ಸಲ್‌ಗಳು ಒಳ್ಳೆಯ ಭರದಲ್ಲಿ ಸಾಗಿದವು. ಪ್ರದರ್ಶನಕ್ಕೆ ಬೇಕಾದ ವ್ಯವಸ್ಥೆ, ವಸ್ತ್ರ ಉಡುಪುಗಳನ್ನು ಕುಮಾರ ಹೊಂದಿಸಿಕೊಳ್ಳುತ್ತಿದ್ದ. ನಂಜಪ್ಪನೂ ಪ್ರದರ್ಶನದ ವಿಷಯದಲ್ಲಿ ತುಂಬ ಉತ್ಸುಕನಾಗಿದ್ದ.

ವಾದ್ಯಮೇಳ ವಿದ್ವಾನ್ ರಾಘವಾಚಾರ್ಯರ ನಾಯಕತ್ವದಲ್ಲಿರಬೇಕೆಂದು ನಿಶ್ಚಯವಾಗಿತ್ತು. ರಾಘವಾಚಾರ್ಯರೂ ಅವರ ಶಿಷ್ಯರೂ ಕೆಲವು ದಿನಗಳು ರಿಹರ್ಸಲ್ಲಿಗೆ ಬಂದು ಇದ್ದಕ್ಕಿದ್ದಂತೆ ನಿಂತುಹೋದರು. ಕುಮಾರನಿಗೆ ದಿಕ್ಕೇ ತೋರದಂತಾಯಿತು. ಆಚಾರ್ಯರ ಬಳಿ ಓಡಿಹೋಗಿ ಅವರನ್ನು ಮರೆ ಹೊಕ್ಕು, ಈ ಪ್ರದರ್ಶನಕ್ಕೆ ಸಹಕಾರ ನೀಡಿ ತನ್ನ ಮರ್ಯಾದೆ ಉಳಿಸಬೇಕೆಂದು ಬೇಡಿಕೊಂಡ. ಕುಮಾರನ ಮರ್ಯಾದೆಯೇ ತಮ್ಮ ಮರ್ಯಾದೆಯೆಂದೂ, ಕುಮಾರ ಹಿಂದೆ ತಮಗೆ ಮಾಡಿದ್ದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕಾದುದು ತಮ್ಮ ಕರ್ತವ್ಯವೆಂದೂ ಆಚಾರ್ಯರು ಬಾಯಿತುಂಬ ಮಾತನಾಡಿದರು. ಆಚಾರ್ಯರ ಸಹಕಾರದ ವಿಷಯದಲ್ಲಿ ಅಪೋಹ ಬರುವುದಿಲ್ಲವೆಂದು ಕುಮಾರ ನಂಬಿಕೊಂಡ. ಒಂದೆರಡು ದಿನ ಆಚಾರ್ಯರು ರಿಹರ್ಸಲ್ಲಿಗೆ ತಾವೊಬ್ಬರೇ ಬಂದರು. 'ಮೇಳವೆಲ್ಲಿ' ಎಂದು ಕುಮಾರ ಕೇಳಿದುದಕ್ಕೆ 'ಬರುತ್ತಾರೆ' ಎಂದು ಆಚಾರ್ಯರು ಹೇಳಿದರು. ಮೂರನೆಯ ದಿನ ಆಚಾರ್ಯರೂ 'ಅರುಣೋದಯ ನಾಟ್ಯಶಾಲೆ'ಯ ಕಡೆ ಸುಳಿಯಲಿಲ್ಲ.

ಪ್ರದರ್ಶನದ ತಾರೀಕೂ ನಿಶ್ಚಯವಾಯಿತು. ನಂಜಪ್ಪ 'ಟೌನ್‌ಹಾಲ್' ನಿಶ್ಚಯ ಮಾಡಿಕೊಂಡು, ಮುಂಗಡ ಹಣವನ್ನು ಕೊಟ್ಟು ಬಂದ. ಪ್ರದರ್ಶನದ ಕಾರ್ಯಕ್ರಮ ವಿವರವೂ ಸಿದ್ಧವಾಯಿತು. ಕುಮಾರನ ಎದೆ ಹೊಡೆದುಕೊಳ್ಳಲಾರಂಭಿಸಿತು. ಆಚಾರ್ಯರನ್ನು ಹುಡುಕಿಕೊಂಡು ಅವರ ಮನೆಯ ಬಾಗಿಲಿಗೆ ಅಲೆದ. ಆಚಾರ್ಯರೂ ಮನೆಯಲ್ಲಿಯೇ ಇದ್ದವರು ಇಲ್ಲವೆನಿಸಿಕೊಂಡರು. ಸರಸ್ವತಮ್ಮನ ಮನೆಯಲ್ಲಿ ಆಚಾರ್ಯರು ಸಿಕ್ಕಬಹುದೆಂದು ಅಲ್ಲಿಗೆ ಅವರನ್ನು

ಹುಡುಕಿಕೊಂಡು ಹೋದ. ಆಚಾರ್ಯರು ಪಾಠ ಹೇಳಿಕೊಡುತ್ತಿದ್ದರು.

“ನೀವು ಹೀಗೆ ಮಾಡಬಹುದೇ ಮೇಷ್ಟರೇ” ಎಂದು ಕೇಳಿದ.

ಕಣ್ಣಿನಿಂದ ನೀರು ಬರುವಂತಿತ್ತು. ಅವನ ಧ್ವನಿಯಲ್ಲಿ ದುಃಖ ಒಡೆದು ಕಾಣುತ್ತಿತ್ತು.

“ಆ ಕಡೆ ಬಂದು ಹೇಳಿ ಹೋಗೋಣವೆಂದರೆ ಪುರಸತ್ತೇ ಆಗಲಿಲ್ಲ ಕುಮಾರರೇ. ನಾನೇನು ಮಾಡಲಪ್ಪಾ—ಸಂಗೀತಗಾರರ ವಿಷಯ ನಿಮಗೆ ಗೊತ್ತೇ ಇದೆ. ವಾದ್ಯಮೇಳಕ್ಕೆ ಬರುತ್ತೇವೆಂದು ಒಪ್ಪಿಕೊಂಡಿದ್ದವರು ಈಗ ಕೈಕೊಟ್ಟಿದ್ದಾರೆ. ಈ ಜನಗಳನ್ನು ನಂಬುವುದೇ ಕಷ್ಟ ಕಾಣ್ರೀ.”

“ಸರಿ—ಈಗ ನಮ್ಮ ಗತಿಯೇನು? ಪ್ರದರ್ಶನದ ಎಲ್ಲ ಸಿದ್ಧತೆಯೂ ಆಗಿದೆಯಲ್ಲ. ಟೌನ್‌ಹಾಲ್ ಗೊತ್ತುಮಾಡಿದ್ದೇವೆ. ಪಬ್ಲಿಸಿಟಿಗೆ ೩೦೦-೪೦೦ ರೂಪಾಯಿ ಖರ್ಚಾಗಿದೆ.”

“ನಾನು ಬರುವುದಕ್ಕೆ ಸಿದ್ಧನಾಗಿದ್ದೇನೆ.”

“ವಾದ್ಯಮೇಳ.”

“ಎಲ್ಲಾ ವಾದ್ಯಗಾರರನ್ನು ಹೊಸದಾಗಿ ಕೂಡಿಸಬೇಕಾದರೆ ವಿಪರೀತ ಖರ್ಚಾಗುತ್ತದೆ. ನನಗೇನೂ ಕೊಡಬೇಡಿಯಪ್ಪ. ನಾನು ಸುಮ್ಮನೆ ಕೆಲಸ ಮಾಡುತ್ತೇನೆ. ಉಳಿದವರಿಗೆ ಕೊಡುವ ಹಾಗಿದ್ದರೆ ವ್ಯವಸ್ಥೆ ಮಾಡಲು ಸಾಧ್ಯ ವಾಗುತ್ತದೆ.”

“ಎಲ್ಲಾ ಎಷ್ಟಾಗಬಹುದು.”

“ಮುನ್ನೂರು ರೂಪಾಯಿಗೆ ಕಡಿಮೆಯಂತೂ ಸಾಧ್ಯವಿಲ್ಲ.”

“ಪಾಠ ಮುಗಿಸಿಕೊಂಡು ನೀವು ಮನೆಗೆ ತಾನೆ ಹೋಗುವಿರಿ.”

“ಹೂ. ಏತಕ್ಕೆ?”

“ನಾನು ಸಂಜಪ್ಪನವರನ್ನು ಒಂದು ಮಾತು ಕೇಳಿಕೊಂಡು ನಿಮ್ಮ ಮನೆಗೆ ಬಂದು ನಿಮ್ಮನ್ನು ಕಾಣುತ್ತೇನೆ.”

ಎಂದು ಅಲ್ಲಿ ನಿಲ್ಲದೆ ಹೊರಟುಬಿಟ್ಟ.

ಆಚಾರ್ಯರ ‘ನಮ್ಮಕ್‌ಹರಾಮ್’ ವಿದ್ಯೆ ಕೇಳಿದ ಮೇಲೆ ಅವರನ್ನು

ಸಿಗಿದು ಹಾಕಿಬಿಡಬೇಕೆನ್ನುವಷ್ಟು ಕೋಪ ನಂಜಪ್ಪನಿಗೆ ಬಂತು. ಆದರೆ ಈಗ ಕೋಪ ಮಾಡಿಕೊಂಡರೆ ಪ್ರಯೋಜನವಿಲ್ಲವೆಂದು, ತಾನೇ ಕುಮಾರನ ಜತೆಯಲ್ಲಿ ಆಚಾರ್ಯರ ಮನೆಗೆ ಹೋಗಿ ಅವರ ವಾದ್ಯಮೇಳವನ್ನು ಇನ್ನೂರೈವತ್ತು ರೂಪಾಯಿಗಳಿಗೆ ಕುದುರಿಸಿಕೊಂಡು ಬಂದ. ಅಂದೇ ಸಂಜೆ ಆಚಾರ್ಯರು ತಮ್ಮ ವಾದ್ಯಮೇಳದೊಂದಿಗೆ 'ರಿಹರ್ಸಲ್'ಗೆ ಬಂದರು.

'ಅರುಣೋದಯ ನಾಟ್ಯಶಾಲೆ' ಪ್ರದರ್ಶನದ ಕೊನೆಯ ಎರಡು ರಿಹರ್ಸಲ್‌ಗಳಿಗೆ ಮೋಹನ ತನ್ನ ತಂಗಿಯರನ್ನು ಕರೆದುಕೊಂಡು ಬಂದು, ರಿಹರ್ಸಲ್ ಆಗುವವರೆಗೆ ಕಾದಿದ್ದು ತಾನೇ ಅವರನ್ನು ಮನೆಗೆ ಕರೆದೊಯ್ಯುತ್ತಿದ್ದ.

ಮಂಜುಳಾ, ಸುಧಾ ಜತೆಯಲ್ಲಿ ಅವರ ತಾಯಿ ಬರುತ್ತಿದ್ದಳು.

ಉಳಿದ ಶಿಷ್ಯೆಯರ ಸಂಗಡ ಅವರವರ ಮನೆಯ ಯಾರಾದರೂ ಹಿರಿಯರು ಬರುತ್ತಿದ್ದರು.

ರಿಹರ್ಸಲ್ ಭರದಲ್ಲಿ ಉತ್ಸಾಹದಿಂದ ಸಾಗಿತು. ಬೆಂಗಳೂರು ಇದುವರೆಗೆ ನೋಡದೆ ಇರುವಂಥ 'ನಾಟ್ಯಪ್ರದರ್ಶನ' ತೋರಿಸಿ ತನ್ನ ಜಯಭೇರಿ ಹೊಡೆಸುವುದಾಗಿ ಕುಮಾರ ಜಂಬ ಕೊಚ್ಚಿಕೊಂಡ.

ಮೇಳನೃತ್ಯಗಳು, ತನಿನೃತ್ಯಗಳು, ಮಧ್ಯೆ ಮಧ್ಯೆ ಒಂದೆರಡು ಸಲ ವಾದ್ಯವಾದನ. ಕೊನೆಯಲ್ಲಿ 'ರಾಸಲೀಲೆ' ನೃತ್ಯನಾಟಕ. 'ರಾಜಪುತ್ರನ ಪ್ರಣಯ ಪ್ರಸಂಗ' ಮತ್ತು 'ಹಳ್ಳಿಯ ದಂಪತಿಗಳು' ಎರಡು ನೃತ್ಯಗಳು ಕುಮಾರ–ಕುಂತಳ ಇವರಿಗಾಗಿಯೇ ನಿಯೋಜಿಸಲ್ಪಟ್ಟಿದ್ದವು. 'ಮಂಗಳೂರು ಸೋದರಿಯರು' (Mangalore Sisters) ತಿಲ್ಲಾನ ಮಾಡುವುದೆಂದೂ, ಸುಧಾ, ವನಜಾ ಮತ್ತು ಮಂಗಳೂರು ಸೋದರಿಯರು ಕೂಡಿ 'ಸ್ವರಜತಿ' ಅಭಿನಯಿಸುವುದೆಂದು ನಿರ್ಣಯವಾಗಿತ್ತು. ಕುಮಾರ ತನ್ನ ಕಲಾ ಪ್ರದರ್ಶನಕ್ಕಾಗಿ ಕಥಕ್ಕಳಿ ಸಂಪ್ರದಾಯದಲ್ಲಿ 'ಬೇಟೆಗಾರ' ನೃತ್ಯ ಹಾಕಿಕೊಂಡಿದ್ದ.

ರಿಹರ್ಸಲ್ ಬಗ್ಗೆ ಕುಮಾರ ತೋರುತ್ತಿದ್ದ ಶ್ರದ್ಧೆ, ಸಹಿಷ್ಣುತೆ, ಕರ್ತವ್ಯದಕ್ಷತೆ ಎಲ್ಲರನ್ನೂ ಹುರುಪುಗೊಳಿಸುತ್ತಿತ್ತು. ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ಅವನು ಮೂರು ಗಂಟೆ ಕಾಲ ಸತತವಾಗಿ ರಿಹರ್ಸಲ್‌ಗೆ ನಿಲ್ಲುತ್ತಿದ್ದ.

ಈ ಪ್ರದರ್ಶನದಿಂದ ಕೈತುಂಬ ಹಣ ಬರುವುದೆಂಬ ಆಸೆ ಅವ್ಯಕ್ತವಾಗಿ ನಂಜಪ್ಪನಲ್ಲಿ ಮನೆ ಮಾಡಿಕೊಂಡಿತ್ತು.

ಸರಸ್ವತಮ್ಮ ಕುಮಾರನ ಬಳಗದವರಿಗೆಲ್ಲಾ ಸುಪರಿಚಿತೆಯಾದಳು. ಚಿಕ್ಕ ದೊಡ್ಡವರನ್ನೆಲ್ಲಾ ವಿಶ್ವಾಸವಾಗಿ ಮಾತನಾಡಿಸಿ ಅವರನ್ನು ತನ್ನ ಮನೆಗೆ ಆಮಂತ್ರಿಸಿದಳು. ನಂಜಪ್ಪನ ಕೈಯಲ್ಲಿಯೂ ಲೋಕಾಭಿರಾಮವಾಗಿ ಮಾತಾಡುತ್ತಿದ್ದಳು. ಅವಳ ಜತೆ ಸಂಭಾಷಣೆ ಬೆಳಸುವ ಯಾವ ಅವಕಾಶವನ್ನೂ ನಂಜಪ್ಪ ಕಳೆದುಕೊಳ್ಳುತ್ತಿರಲಿಲ್ಲ. ನಂಜಪ್ಪ ಮಾತನಾಡಿಸಿದರೆ ಸರಸ್ವತಮ್ಮ ಮುಗುಳ್ನಗೆ ನಗುತ್ತಿದ್ದುದೂ, ಬಹು ಸೂಕ್ಷ್ಮವಾಗಿ ಹಾವಭಾವ ಮೆರೆಸುತ್ತಿದ್ದುದೂ ಕುಂತಳ, ರಾಮಲಕ್ಷಮ್ಮ ಇವರ ಕಣ್ಣಿಗೆ ಬೀಳದೆ ಹೋಗಲಿಲ್ಲ.

ತಾಯಿಯಿಂದ ಪ್ರೇರಿತಳಾದ ಕುಂತಳ ಒಂದು ರಾತ್ರಿ ಈ ವಿಷಯ ನಂಜಪ್ಪನಲ್ಲಿ ಪ್ರಸ್ತಾಪಿಸಿ ತನ್ನ ಅಸಮಾಧಾನ ವ್ಯಕ್ತಪಡಿಸಿದಳು. ನಂಜಪ್ಪ ಅವಳ ಮಾತನ್ನು ಕೇಳಿ ನಕ್ಕು

" ನಿನಗೇನು ಭ್ರಾಂತಿಯೇ ಕುಂತಳಾ. ಸರಸ್ವತಮ್ಮ ಎರಡು ಮಕ್ಕಳ ತಾಯಿ. ನನ್ನಷ್ಟೇ ಅವಳಿಗೂ ವಯಸ್ಸಾಗಿದೆ. ಅವಳನ್ನು ಬಯಸುವುದಕ್ಕೆ ನಾನು ಕುರುಡನೇ. "

ಎಂದು ಮಾತು ಹಾರಿಸಿಬಿಟ್ಟ.

ಪ್ರದರ್ಶನ ಅತ್ಯಂತ ವೈಭವದಿಂದ ನಡೆದರೂ, ನಂಜಪ್ಪ ಕುಮಾರ ನಿರೀಕ್ಷಿಸಿದ ಹಣ ಕೊಡಲಿಲ್ಲ. ಆದಾಯ ಖರ್ಚು ಒಂದೇ ಆಯಿತು.

ಕುಮಾರ ಈ ಅವಕಾಶವನ್ನು ಸ್ವಪ್ರಭಾವ ಪ್ರಕಾಶಕ್ಕೆ ಚೆನ್ನಾಗಿ ಉಪಯೋಗಿಸಿಕೊಂಡ. ಪತ್ರಿಕೆಗಳಲ್ಲೆಲ್ಲಾ ಅವನ ಭಾವಚಿತ್ರ, ಪ್ರದರ್ಶನದ ಮೇಲೆ ಉದ್ದುದ್ದ ಬರೆಹಗಳು ಪ್ರಕಟವಾದವು. ' ಜನ್ಮಭೂಮಿ ' ಪತ್ರಿಕೆಯ ಕಲಾ ವಿಮರ್ಶಕರಾದ ನಾಟ್ಯಲೋಲರು ಕುಮಾರನನ್ನು ಉದಯಶಂಕರನಿಗೆ ಹೋಲಿಸಿದರು. ' ಕಿರಣ ಕರ್ನಾಟಕ ' ಪತ್ರಿಕೆಯ ಸಂಪಾದಕರು ' ಕನ್ನಡ ಕಲೆಗಳ ಉದ್ಧಾರ ನಾಟ್ಯಕಲಾವಿಭೂತಿಗಳಾದ ಕುಮಾರರಿಂದಲೇ ಸಾಧ್ಯ ' ಎಂದು ಬರೆದರು. ಕುಮಾರನ ಮೈಯುಬ್ಬಿಹೋಯಿತು. ಆನಂದದ ಜತೆಗೆ ಅಹಂ

ಕಾರವೂ ಅವನ ದೇಹಾದ್ಯಾಂತವನ್ನೂ ವ್ಯಾಪಿಸಿತು.

ನಂಜಪ್ಪ ಹಣದವಿಷಯದಲ್ಲಿ ತನಗೆ ಬಿದ್ದ ಪೆಟ್ಟನ್ನು ಜ್ಞಾಪಿಸಿಕೊಂಡು ಕುಮಾರನ ಮುಂದೆ ಗೋಳು ಸುರಿದುಕೊಂಡ.

" ಅಲ್ಲಾ ಸ್ವಾಮಿ. ಮೊದಲನೆಯ ಪ್ರದರ್ಶನಕ್ಕೆ ಏಳುನೂರು ರೂಪಾಯಿ ಕಲೆಕ್ಷನ್ ತೆಗೆದುಕೊಂಡಿದ್ದೀವಲ್ಲಾ ಇದೇನು ಬೆಂಗಳೂರಿನಲ್ಲಿ ಸಾಮಾನ್ಯವೇ ? "

" ಅರ್ಧಕ್ಕರ್ಧ ನಿನ್ನ ರಾಘವಾಚಾರೀನೇ ತಿಂದುಬಿಟ್ಟನಲ್ಲಯ್ಯಾ. "

" ನಂಬಿದವರ ಕುತ್ತಿಗೆ ರಾಘವಾಚಾರ್ಯರು ಇಷ್ಟು ಚೆನ್ನಾಗಿ ಕೊಯ್ಯುವ ರೆಂದು ನನಗೆ ಗೊತ್ತಿರಲಿಲ್ಲ. ನಾನೇ ವಾದ್ಯಮೇಳ ಕೂಡಿಸಿ ಈ ಆಚಾರೀಗೆ ಬುದ್ಧಿ ಕಲಿಸುತ್ತೇನೆ. "

" ಏನು ಮಾಡುತ್ತೀಯೋ ಮಾಡಪ್ಪ. ಕುಮಾರ್, ನಿನ್ನ ಒಂದು ವಿಷಯ ಕೇಳಬೇಕೂಂತಿದ್ದೆ...."

ಕುಮಾರನ ಎದೆ ಹೊಡೆದುಕೊಳ್ಳುವುದಕ್ಕಾರಂಭಿಸಿತು. ನಂಜಪ್ಪನ ಹದ್ದಿನಕಣ್ಣು ಯಾವುದೋ ಪಶುವಿನ ಮೇಲೆ ಬಿದ್ದಿದೆ ಎಂದು ಅವನ ಅಂತ ರ್ವಾಣಿ ಹೇಳಿತು.

" ಕೇಳಿ ಸ್ವಾಮಿ. "

" ಸರಸ್ವತಮ್ಮ ಯಾರಯ್ಯ ? "

" ನಿಮಗೆ ಗೊತ್ತಿಲ್ಲವೇ ಸ್ವಾಮಿ. ಮಂಜುಳಾ ಸುಧಾ ಇವರ ತಾಯಿ. "

" ಅದು ಗೊತ್ತಯ್ಯ. ಏನು ಅವಳ ಸಮಾಚಾರ ಎಂದು ಕೇಳಿದೆ. "

ಕುಮಾರ ಅವಳ ಕಥೆಯನ್ನೆಲ್ಲಾ ಬಿಡಿಸಿ ಹೇಳಿ

" ಮಂಜಯ್ಯ ಅವಳ ಮೇಲೆ ಸರ್ಪಕಾವಲು ಹಾಕಿದ್ದಾನೆ ನಂಜಪ್ಪ ನವರೇ. ಪಾಠಕ್ಕೆ ನಾನು ಹೋದರೇ ಅವನು ಗುರುಗುಟ್ಟುತ್ತಾನೆ. "

" ಇರಲಿ ಬಿಡೋ—ಇಪ್ಪತ್ತುನಾಲ್ಕು ಗಂಟೆ ಅವನು ಕಾವಲು ಬಿದ್ದಿರು ತ್ತಾನೇನು ? ಸರಸ್ವತಮ್ಮನ ಹತ್ತಿರ ಮಾತಾಡಿ ನೋಡು. "

" ಅವರ ಮನೆಗೆ ನೀವು ಬರುವುದಕ್ಕಾಗುವುದಿಲ್ಲ ನಂಜಪ್ಪನವರೇ. "

" ನೀನು ಮಾತನಾಡು. ನಾನು ಸ್ಥಳ ಗೊತ್ತು ಮಾಡುತ್ತೇನೆ."

" ಇಲ್ಲಿಗೇ ಬರಮಾಡಿಕೊಳ್ಳುತ್ತೀರೇನು ? "

" ಎಲ್ಲಿಯಾದರೂ ಉಂಟೇ ? ಕುಂತಳ ನನ್ನ ಜೀವದೊರಸೆ ಬಿಡು ತ್ತಾಳೆಯೇ ? "

" ಹಾಗಾದರೆ..."

" ಅದು ಮುಂದಿನ ಮಾತು. ನನಗಿರಲಿ. ನೀನು ಸರಸ್ವತಮ್ಮನನ್ನು ಒಪ್ಪಿಸುವ ಕೆಲಸ ಮೊದಲು ಮಾಡು." ಎಂದು ಹೇಳಿದ.

ಕುಮಾರ ನಿರ್ವಾಹವಿಲ್ಲದೆ ಒಪ್ಪಿಕೊಳ್ಳಬೇಕಾಗಿ ಬಂತು.

ನಂಜಪ್ಪನಿಗೆ ಸ್ಥಳ ವ್ಯವಸ್ಥೆ ಮಾಡುವ ಕೆಲಸವೇ ದೊಡ್ಡ ಕೆಲಸವಾಯಿತು. ಒಂದು ಸಂಜೆಯೆಲ್ಲಾ ಧರ್ಮ, ಗಣೇಶ, ನಾಗರಾಜ ಇವರನ್ನು ಹುಡುಕಿ ಕೊಂಡು ಅರುಣ ಥಿಯೇಟರ್, ಮೆಜೆಸ್ಟಿಕ್ ಥಿಯೇಟರ್, ವಿಜಯ ಥಿಯೇಟರ್ ಮುಂಭಾಗಗಳಲ್ಲಿಯೂ, ಶಾಸ್ತ್ರಿ ಹೊಟೇಲ್, ಮಾಡರ್ನ್ ಹಿಂದೂ ಹೊಟೇಲ್, ಆನಂದಭವನ್ ಮುಂಭಾಗಗಳಲ್ಲಿಯೂ ಕಾದು ನೋಡಿದ. ಯಾರ ದರ್ಶನ ಲಾಭವೂ ದೊರೆಯಲಿಲ್ಲ. ಬೇಸರಪಟ್ಟುಕೊಂಡು ಮಾರ್ಕೆಟ್ ಬಳಿ ಬರುತ್ತಿದ್ದಾಗ ಬಸ್ ಸ್ಟಾಂಡಿನಲ್ಲಿ ಗಣೇಶ ನಿಂತಿದ್ದುದು ಕಂಡುಬಂತು. ನಂಜಪ್ಪನ ಮನಸ್ಸಿನ ದುಗುಡ ಪರಿಹಾರವಾಯಿತು. ಅವನನ್ನು ಕರೆದು

" ಎಲ್ಲೋ ಕಾಣಲಿಲ್ಲ ಇಷ್ಟು ದಿವಸ " ಎಂದು ಕೇಳಿದ.

" ನೀವೇ ಕಾಣಲಿಲ್ಲ. ನಾನು ಮಾಮೂಲಾಗಿ ಇಲ್ಲೇ ಇರ್ತೇನಲ್ಲಾ ಸ್ವಾಮಿ."

" ನಾಗರಾಜ ಏನಾದ-ಅವನೂ ಕಾಣಲಿಲ್ಲ."

" ಈಗವನು ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಕೆಲಸಕ್ಕಿದ್ದಾನೆ ಸ್ವಾಮಿ. ಈ ಕಸುಬು ಬಿಟ್ಟುಬಿಟ್ಟ."

" ಏನು ಸಮಾಚಾರ ? "

" ಬರುತ್ತೀರೇನು ? "

" ಎಲ್ಲೀಗೆ ಹೋಗಬೇಕು."

" ಮೈಸೂರು ರೋಡಿನಲ್ಲಿ ಇಬ್ಬರಿದ್ದಾರೆ. ಹೊಸದಾಗಿ ಸೇಲಮ್ಮಿನಿಂದ ಬಂದಿದ್ದಾರೆ. "

" ಇವತ್ತು ಬೇಡ-ಸಾಳೆ ನೋಡೋಣ. "

" ನೀವು ಹೀಗೇ-ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳೋದು ! "

" ಗಣೇಶಾ, ಆ ಭಾಗ್ಯಮ್ಮ ಏನಾದಳೋ ? "

" ಯಾರು ಸ್ವಾಮಿ-ಕಮಲನ ಅಮ್ಮನೇ ? "

" ಹೂ ಕಣೋ ಅವಳೇ ! "

" ಕಮಲ ಸತ್ತು ಹೋದಳು. "

" ಅದು ಗೊತ್ತಾಯಿತು. ಅವರಮ್ಮ. "

" ಮುತ್ತಮ್ಮನ ಮನೆ ಸೇರಿಕೊಂಡಿದ್ದಾಳೆ. "

" ಮುತ್ತಮ್ಮ ಎಲ್ಲಿದ್ದಾಳೆ. "

" ಮೊದಲಿದ್ದ ಮನೆಯಲ್ಲಿಯೇ ! ಈಗಲ್ಲಿ ಏನೂ ಸಾಧ್ಯವಿಲ್ಲ ಸ್ವಾಮಿ. ಅವಳೂ ಕಸುಬು ಬಿಟ್ಟುಬಿಟ್ಟಿದ್ದಾಳೆ. "

" ಏನು ಮಾಡುತ್ತಿದ್ದಾಳೆ. "

" ಎಮ್ಮೆ ಕಟ್ಟಿಕೊಂಡು ಹಾಲು ಮಾರುತ್ತಿದ್ದಾಳೆ. "

" ಹಾಲಿನಲ್ಲಿ ಎಷ್ಟಾಗುತ್ತೋ ?-ನಿನಗೆ ಅವರು ಯಾರಾದರೂ ಸಿಕ್ಕುತ್ತಿರುತ್ತಾರೆಯೇ ? "

" ಭಾಗ್ಯಮ್ಮ ದಿನಾ ಸಿಕ್ಕುತ್ತಾಳೆ ಸ್ವಾಮಿ. ಪಾಪಕ್ಕನ ಮನೆಗೆ ಅವಳು ಹೋಗಿ ಬರುತ್ತಿರುತ್ತಾಳೆ. "

" ಭಾಗ್ಯಮ್ಮ ಸಿಕ್ಕಿದರೆ ನಮ್ಮ ಅಂಗಡಿ ಹತ್ತಿರ ಕಳಿಸು. "

ಎಂದು ಹೇಳಿ ಗಣೇಶನ ಕೈಗೆ ಒಂದು ರೂಪಾಯಿ ಹಾಕಿದ. ಗಣೇಶ ಕೊಟ್ಟ ಸುದ್ದಿಯಿಂದ ನಂಜಪ್ಪನ ಮನಸ್ಸಿನಲ್ಲಿ ಆಶಾಂಕುರವಾಯಿತು.

ಮಾರನೆಯ ದಿನವೇ ಸಂಜೆ ಭಾಗ್ಯಮ್ಮ ತಪ್ಪದೆ ನಂಜಪ್ಪನನ್ನು ಅವನ ಅಂಗಡಿಯಲ್ಲಿ ಕಂಡಳು. ನಂಜಪ್ಪ ಅವಳಿಗೆ ಸಂಜ್ಞೆಮಾಡಿ ದೂರದಲ್ಲಿದ್ದ ಪ್ರದೇಶಕ್ಕೆ ಕರೆದೊಯ್ದ.

ಭಾಗ್ಯಮ್ಮ ತನ್ನ ಗೋಳಿನ ಕತೆಯನ್ನುಸರಿ ಕಣ್ಣೀರು ಹಾಕಿಕೊಂಡಳು. ಕಮಲಾ ತೀರಿಕೊಂಡುದಕ್ಕೆ ನಂಜಪ್ಪ ತನ್ನ ಸಂತಾಪ ವ್ಯಕ್ತಪಡಿಸಿ

"ನಿನ್ನಿಂದ ನನಗೊಂದು ಕೆಲಸವಾಗಬೇಕಲ್ಲಾ ಭಾಗ್ಯಮ್ಮ."

"ಹೇಳಿ ಸ್ವಾಮಿ."

"ನೀನು ಮುತ್ತಮ್ಮನ ಮನೆಯಲ್ಲಿಯೇ ಇದ್ದೀಯಂತೆ."

"ಹೂ.!"

"ಅವಳಿಗೂ ನಿನಗೂ ಚೆನ್ನಾಗಿದೆ ತಾನೆ."

"ಇದೆ. ಯಾಕೆ ಸ್ವಾಮಿ?"

"ನಾನು ಅಲ್ಲಿಗೆ ಬರಬಹುದಷ್ಟೇ."

"ಅವಳು ಕಸುಬು ಬಿಟ್ಟುಬಿಟ್ಟಿದ್ದಾಳೆ. ಮನೆಗೆ ಈಗ ಯಾರೂ ಬರುವುದಿಲ್ಲ."

"ಯಾರೂ ಬೇಕಾಗಿಲ್ಲ. ನಾನೇ ಕರೆದುಕೊಂಡು ಬರುತ್ತೇನೆ. ಅವಳು ಸ್ವಲ್ಪ ಸ್ಥಳ ಕೊಟ್ಟರೆ ಸಾಕು."

"ಕೇಳಿ ನೋಡಬೇಕು ಸ್ವಾಮಿ. ಮುತ್ತಮ್ಮನ ಬಾಯಿ ನಿಮಗೆ ಗೊತ್ತೇ ಇದೆಯಲ್ಲಾ."

"ಅವಳನ್ನು ಕೇಳಿ ನೀನು ನನಗೆ ಯಾವಾಗ ತಿಳಿಸುತ್ತೀ?"

"ನಾಳೆ ಅಂಗಡಿ ಹತ್ತಿರ ಬರುತ್ತೇನೆ."

"ಹಾಗೇ ಮಾಡು."

"ನನಗೇನು ಬಟ್ಟೆಬರೆ ಕೊಡುವುದಿಲ್ಲವೇ ಸಾವುಕಾರರೇ."

"ನನ್ನ ಕೆಲಸ ಮಾಡಿಕೊಡು—ನೋಡೋಣ."

ಎಂದು ಅವಳ ಖರ್ಚಿಗೆ ಐದುರೂಪಾಯಿ ಕೊಟ್ಟ. ಭಾಗ್ಯಮ್ಮನ ಸಂತೋಷಕ್ಕೆ ಮೇರೆಯೇ ಇರಲಿಲ್ಲ.

ಭಾಗ್ಯಮ್ಮ ಸೇರವಾಗಿ ಮಿಲ್ಟ್ರಿ ಹೊಟೇಲಿಗೆ ಬಂದು 'ಬಿರಿಯಾನಿ' ಕಟ್ಟಿಸಿಕೊಂಡು, ಮೊಟ್ಟೆಗಳನ್ನು ತೆಗೆದುಕೊಂಡು, ಒಂದು ಭರ್ತಿ ಶೀಷಾಯಿ ಕೊಂಡು ಮನೆಗೆ ಹೋದಳು.

ಮುತ್ತಮ್ಮ ಬಾಯಿತೆರೆಯುವ ಮುನ್ನವೇ ಭಾಗ್ಯಮ್ಮ ತಾನು ತಂದಿದ್ದ ಸಾಮಾನುಗಳನ್ನು ತೊಟ್ಟಿಯಲ್ಲಿ ಹರಡಿದಳು.

" ಇದೇನಮ್ಮ ಇವತ್ತು ನಿನಗೆ ಐಶ್ವರ್ಯ ಬಂದ ಹಾಗೆ ಕಾಣುತ್ತದೆ. "

" ಹಳೆ ಸ್ನೇಹಿತರು ಯಾರೋ ಸಿಕ್ಕಿದ್ದರು. "

ಮುತ್ತಮ್ಮ ತಾನೇ ಒಲೆಹೊತ್ತಿಸಿ ಮೊಟ್ಟೆಗಳ ದೋಸೆ ಮಾಡಿದಳು. ಇಬ್ಬರೂ ಊಟಕ್ಕೆ ಕುಳಿತರು. ಬಿರಿಯಾನಿ, ಬ್ರಾಂದಿ ಸಿಕ್ಕಿದುದಕ್ಕೆ ಮುತ್ತಮ್ಮ ಹಿಗ್ಗಿ ಹೋಗಿದ್ದಳು. ಅವಳ ಮುಖ ಪ್ರಸನ್ನವಾಗಿತ್ತು. ಭಾಗ್ಯಮ್ಮ ಇದೇ ಅವಕಾಶವೆಂದುಕೊಂಡು

" ಸಾವಕಾರ ಸಂಜಪ್ಪನ್ನ ನೀನು ಕಾಣೆಯಾ ಮುತ್ತಮ್ಮ. "

" ಯಾರೋಮ್ಮ. ಎಲ್ಲಿ ನೆಪ್ಪು ಇರತೈತೆ ಹೇಳು. "

" ದೊಡ್ಡಪೇಟೆಯಲ್ಲಿ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದಾನೆ. "

" ಓಹೋ ! ಅವನೇ ! ಆಯಪ್ಪ ಮೊದಲು ಬಲೇ ಬರ್ತಿದ್ದ. ಈಚೆಗೆ ಕಾಣ್ಲೇ ಇಲ್ಲ. "

" ನೀನು ಎಲ್ಲಾರ್ನ ಒದ್ಕೊಂಡು ಬಿಟ್ಟೆ, ಯಾರೂ ಬರಾಕಿಲ್ಲ. "

" ನಿಂಗೆ ಸಿಕ್ಕಿದ್ದನೇನು ? "

" ಹೂ ! "

" ಏನು ಹೇಳಿದಾ ? "

" ನಿನ್ನ ಯೋಗಕ್ಷೇಮ ತುಂಬ ವಿಚಾರಿಸಿದ—ಕಷ್ಟದಲ್ಲಿದ್ದಾಳೆ ಎಂದು ಹೇಳಿದೆ—ನೋಡಿ ಬಹಳ ದಿವಸವಾಯ್ತು ಎಂದ. "

" ಮನೆತಾವ ಬಾ ಅನ್ನಬೇಕಾಗಿತ್ತು. "

" ನೀನೇನು ಹೇಳ್ತೀಯೋಂತ ನನಗೆ ಭಯ. "

" ನಿನ್ನೇನಂತೇನೇ ಭಾಗ್ಯಮ್ಮ. ಏನೋ ನನ್ನ ಸಂಕಟ ಹೆಚ್ಚಾದರೆ ಒಸಿ ಬಾಯಿ ಮಾಡ್ಕೋತೀನಿ. "

" ನೀನು ನನ್ನ ಅಂದೆಯಂದ್ರೆ ಬಾಯಲ್ಲಿ ಹುಳ ಬೀಳತ್ತೆ. ದಿಕ್ಕಿಲ್ಲ ದೋಳಿಗೆ ದಿಕ್ಕು ತೋರಿಸ್ದೆ. "

“ನಾನೇನು ಮಾಡ್ದೆ ಬಿಡು. ಎಲ್ಲಾರ್ನೂ ಕಾಪಾಡೋ ಭಗವಂತ ಇರೋವಾಗ.”

“ಹೀಗೆ ಎಷ್ಟು ದಿವಸ ನಡೆಯುತ್ತೇ ಮುತ್ತಮ್ಮ.”

“ಭಗವಂತ ನಡಸೋವರೆಗೆ — ಆಮೇಲೆ ಇದ್ದೇ ಇವೆ ಕೆರೆಯೋ ಭಾವಿಯೋ!”

“ನೀನು ಅಷ್ಟು ಅಧೈರ್ಯಪಡೋ ಕಾರಣವಿಲ್ಲ.”

“ಯಾಕೆ ಹಾಗಂತೀ?”

“ನಿನ್ನ ಹತ್ತಿರ ಎಂಥಾ ಗುಟ್ಟು. ನಂಜಪ್ಪ ಮನೆಗೆ ಬರಲೇ ಎಂದು ಕೇಳಿದ.”

“ಕರೆಯಬೇಕಾಗಿತ್ತು ಎಂದು ನಾನೇ ಹೇಳಲಿಲ್ಲವೇ?”

“ಜತೇಲಿ ಯಾರನ್ನೋ ಕರ್ಕೊಂಡು ಬರ್ತಾನಂತೆ.”

ಮುತ್ತಮ್ಮನ ಮುಖ ಸ್ವಲ್ಪ ಗಂಭೀರವಾಯಿತು. ಅವಳು ಯೋಚಿಸುತ್ತ ಕುಳಿತಳು. ಭಾಗ್ಯಮ್ಮನ ಮುಖ ನೋಡಿ

“ಮತ್ತೆ ಅದೇ ಷುರುವಾಗಬೇಕಾ ಭಾಗ್ಯಮ್ಮ.”

“ಅದು ನಮ್ಮ ಕಸುಬಲ್ಲವೇ?”

“ನೀನೂ ಸಾಕಷ್ಟು ದುಕ್ಕ ಅನುಭವಿಸಿರೋಳು.”

“ನಮ್ಮ ಬದುಕು ಯಾವ ಶಾಶ್ವತ ಮುತ್ತಮ್ಮ. ಇರೋವರೆಗೆ ಚೆನ್ನಾಗಿ ತಿನ್ನೋದೂ ಬ್ಯಾಡವಾ?”

“ಈಗ ಉಪಾಸ ಇಲ್ಲವಲ್ಲಾ.”

“ವಾರವಾದರೂ ಮಾಂಸದ ಮುಕ ಕಾಣೋದಿಲ್ಲ. ರೊಟ್ಟಿ ಸಿಕ್ಕಿದ ದಿವಸವೇ ನಮ್ಗೆ ಹಬ್ಬ. ಸಪ್ಪೆಕೂಳು ತಿಂದೂ ತಿಂದೂ ನಂಗೆ ಬೇಸರ ವಾಗಿದೆಯಮ್ಮ.”

“ನನಗೆ ಆಗಿಲ್ಲ ಅನ್ಕೊಂಡಿದ್ದೀಯಾ? ವಿಧಿಯಿಲ್ದೆ ಹಲ್ಲುಮುಡಿ ಕಚ್ಚಿ ಕೊಂಡು ಇದ್ದೀನಿ.”

“ಹೊಸ್ತೆ ಸಂಕಟ ಸಿಕ್ಕಿದಳು. ಬಡ್ಕೊಂಡಳು. ಯಾಕೇ ಸಂಕಟ

ಹೇಗಿದ್ದೀ ಎಂತಾ ಕೇಳಿದೆ. ಅತ್ಕೊಂಡು ಬಿಡಮ್ಮ ಮುತ್ತಮ್ಮನ ಮನೆಯಾಗಿನ ಮರ್ಯಾದೆ ಹೊರಗೆಲ್ಲಿ ಬತ್ತೈತೆ ಎಂದಳು. ನಿನ್ನ ನಂಬ್ಕೊಂಡಿದ್ದ ಹುಡುಗೀರು ದಿಕ್ಕಾಪಾಲಾದರು. "

ದುಃಖದಿಂದಲೋ ಉದ್ವೇಗದಿಂದಲೋ ಅತಿಪಾನ ಮಾಡಿದುದರ ಫಲವಾಗಿಯೋ ಮುತ್ತಮ್ಮನ ಕಣ್ಣುಗಳಿಂದ ನೀರು ಹರಿಯಿತು.

" ವೆಂಕಟಿ ಹಂಗೆ ಅಂದಳಾ ? "

" ಹೂಕಣಮ್ಮ. ನಂಜಪ್ಪಂಗೆ ಏನು ಹೇಳಲಿ ಮುತ್ತಮ್ಮ. "

" ಬಾ ಅನ್ನಮ್ಮ—ಅಂಗೇ ವೆಂಕಟಿ ಸಿಕ್ಕಿದರೆ ಅವಳನ್ನೂ ಬಾ ಅನ್ನು "

ಎಂದು ಮುತ್ತಮ್ಮ ಹೇಳಿದಳು.

ಭಾಗ್ಯಮ್ಮನಿಗೆ ಮಹದಾನಂದವಾಯಿತು. ಬೆಳಗಾದೀತೆ ಎಂದು ಕಾದಿದ್ದಳು. ಅಡಿಗೆ ಕೆಲಸ ಬೇಗ ಮುಗಿಸಿಕೊಂಡು ಪೇಟೆಯಕಡೆ ಹೊರಟಳು. ಸುಮಾರು ಹತ್ತು ಗಂಟೆಗೊಮ್ಮೆ ನಂಜಪ್ಪನ ಅಂಗಡಿಯ ಕಡೆ ಇಣಿಕಿಹಾಕಿದಳು. ಜನ ತುಂಬಿದ್ದರು. ಹನ್ನೆರಡು ಗಂಟೆಯವರೆಗೆ ಪಾಪಕ್ಕನ ಮನೆಯಲ್ಲಿ ಕಾಲ ತಳ್ಳಿಕೊಂಡು ಬಂದು ನಂಜಪ್ಪನಿಗೆ ಮುಖ ತೋರಿಸಿದಳು.

" ನಿಮ್ಮ ಕೆಲಸ ಮಾಡ್ಕೊಂಡು ಬಂದಿದೀನಪ್ಪ. ಮುತ್ತಮ್ಮನನ್ನು ಒಪ್ಪಿಸಬೇಕಾದರೆ ಸಾಕುಸಾಕಾಯ್ತು. "

" ಉಪಕಾರ ಮಾಡಿದೆಯಮ್ಮ. "

" ಯಾವಾಗ ಬರುತ್ತೀ ? "

" ನಾಳೆ ಬೇಡ, ನಾಡಿದ್ದು ಬೆಳಿಗ್ಗೆ ಈ ಕಡೆ ಬಾ, ಹೇಳುತ್ತೇನೆ. "

" ಹಾಗೇ ಮಾಡು. "

ನಂಜಪ್ಪ ಅವಳನ್ನು ಅಂಗಡಿಗೆ ಕರೆದೊಯ್ದು ಎರಡು ಮಿಲ್ ಸೀರೆ, ಒಂದು ಜೊತೆ ಟವಲು ಕೊಟ್ಟು ಕೈಗೆ ಐದು ರೂಪಾಯಿ ಹಾಕಿ ಕಳಿಸಿದ.

ತಾನು ಭಾಗ್ಯಮ್ಮನ ಜತೆಮಾಡಿಕೊಂಡಿದ್ದ ವ್ಯವಸ್ಥೆಯನ್ನು ಅಂದೇ ನಂಜಪ್ಪ ಕುಮಾರನಿಗೆ ಹೇಳಿ ಕೆಲಸ ತ್ವರೆಗೊಳಿಸಬೇಕೆಂದು ಸೂಚಿಸಿದ.

" ಅವರು ಒಪ್ಪದಿದ್ದರೆ ಏನು ಮಾಡಲಿ ಸಾಹುಕಾರರೇ ? "

" ಎಲ್ಲಾ ಒಪ್ಪುತ್ತಾಳೆ, ನೀನು ಮಾತಾಡು ಕುಮಾರ್. "

ಕುಮಾರ ಸರಸ್ವತಮ್ಮನ ಮನೆಗೆ ಬಂದಾಗ ಅವಳು ನೆರೆಹೊರೆಯವರ ಕೈಯ್ಯಲ್ಲಿ ಮಾತಾಡಿಕೊಂಡು ಬಿಸಿಲು ಕಾಯುತ್ತ ಕುಳಿತ್ತಿದ್ದಳು. ಕುಮಾರ ಬಂದ ಕೂಡಲೆ ಎದ್ದು ' ಬನ್ನಿ ' ಎಂದು ಸ್ವಾಗತಿಸಿ ಮನೆಯೊಳಗೆ ಬಂದಳು.

ಕುಮಾರ ತೊಟ್ಟಿಯಲ್ಲಿದ್ದ ಚಾಪೆಯಮೇಲೆ ಕುಳಿತ. ಸರಸ್ವತಮ್ಮ ಅವನ ಆಯಾಸ ನೋಡಿ

" ಇದೇನು ಇವತ್ತು ಇಷ್ಟುಹೊತ್ತಿಗೆ ಬಂದಿರಿ? "

" ಬರಬಾರದಾಗಿತ್ತೇನು ? "

" ಬೇಡ ಎಂದು ನಿಮಗೆ ನಾನು ಯಾವತ್ತು ಹೇಳಿದ್ದೇನೆ. "

" ಯಜಮಾನರು ಊರಿಗೆ ಬಂದರೋ ? "

" ಇಲ್ಲ—ಕಾಗದ ಬರೆದಿದ್ದಾರೆ. "

" ಯಾವಾಗ ಬರುತ್ತಾರಂತೆ ? "

" ಇನ್ನೂ ನಾಲ್ಕೈದು ದಿವಸವಾಗಬಹುದು ಎಂದು ಬರೆದಿದ್ದಾರೆ. "

" ನನಗೆ ನಿಮ್ಮಿಂದ ಒಂದು ಉಪಕಾರವಾಗಬೇಕು. "

" ನನ್ನಿಂದ ಉಪಕಾರವೇ ? ಬಡವಳ ಕೈಯಲ್ಲಿ ಏನಾಗತ್ತೆ. "

" ಅದನ್ನು ನಾನು ಹೇಳುತ್ತೇನೆ. ಮಾಡಿಕೊಡುತ್ತೇನೆಂದು ನೀವು ಮಾತು ಕೊಡಬೇಕು. "

" ದುಡ್ಡಿನ ವಿಷಯ ಒಂದು ಬಿಟ್ಟು ನೀವು ಏನು ಕೇಳಿದರೂ ಮಾಡಿ ಕೊಡುತ್ತೇನೆ. "

" ಖಂಡಿತವೋ ? "

" ಆಡಿದ ಮಾತಿಗೆ ನಾನು ತಪ್ಪುತ್ತೇನೆಯೇ ? "

" ನಮ್ಮ ಧಣಿಗಳನ್ನು ಬಲ್ಲಿರಷ್ಟೇ ? "

" ಸಾಹುಕಾರ ನಂಜಪ್ಪನವರನ್ನು ! "

" ಹೌದು—ಅವರನ್ನೇ. "

" ಕಾಣದೆ ಏನು ? "

"ಅವರೇ ನನ್ನನ್ನು ಕಳುಹಿಸಿಕೊಟ್ಟಿದ್ದಾರೆ."

"ಕುಂತಳ ಇದ್ದಾಳಲ್ಲಾ."

"ನಿಮ್ಮ ಮೇಲೆ ಅವರಿಗೆ ಮನಸ್ಸಾಗಿದೆ—ಒಂದೇ ಸಮನೆ ನನ್ನನ್ನು ಪೀಡಿಸುತ್ತಿದ್ದಾರೆ."

"ನಮ್ಮ ಯಜಮಾನರ ವಿಷಯ ನಿಮಗೆ ಗೊತ್ತಿಲ್ಲವೇ?"

"ಗೊತ್ತಿದೆ, ಮನೆಗೆ ಬರುವುದು ಸಾಧ್ಯವಿಲ್ಲವೆಂದು ನಾನು ಖಂಡಿತವಾಗಿ ಹೇಳಿದೆ."

"ನನಗೆ ಪುರಸೊತ್ತೆಲ್ಲಿದೆ?"

"ಮಧ್ಯಾಹ್ನ ಒಂದೆರಡು ಗಂಟೆ ಬಿಡುವು ಮಾಡಿಕೊಳ್ಳಬಹುದು."

"ಯಜಮಾನರಿಗೆ ಗೊತ್ತಾದರೆ ಉಣ್ಣೋ ಅನ್ನಕ್ಕೆ ಮಣ್ಣು ಬೀಳುತ್ತದೆ."

"ಬೀಳದ ಹಾಗೆ ನೋಡಿಕೊಳ್ಳೋಣ. ಒಂದು ವೇಳೆ ಗೊತ್ತಾದರೆ ನಂಜಪ್ಪನವರು ನೋಡಿಕೊಳ್ಳುತ್ತಾರೆ."

"ಇದರಿಂದ ನನಗೇನು ಪ್ರಯೋಜನ?"

"ಸಾಹುಕ್ಕಾರರಿಗೆ ಮನಸ್ಸು ಬಂದರೆ ಧಾರಾಳವಾಗಿರಬಲ್ಲರು."

"ನಿಮಗಾಗಿ ನಾನು ಒಪ್ಪಿಕೊಳ್ಳಬೇಕಾಗಿದೆ."

"ಹಾಗೆ ಆಗಲಿ. ನಾಡಿದ್ದು ಪುರಸತ್ತಿದೆ ತಾನೆ."

"ಎಷ್ಟು ಹೊತ್ತಿಗೆ?"

"ಮಧ್ಯಾಹ್ನ."

"ಆಗಲಿ."

"ನಾನು ಬಂದು ಕರೆದುಕೊಂಡು ಹೋಗುತ್ತೇನೆ."

"ಎಲ್ಲಿಗೆ ಹೋಗುವುದು."

"ಅದನ್ನು ಸಾಹುಕಾರರು ತಿಳಿಸುತ್ತಾರೆ."

ನಂಜಪ್ಪನಿಗೆ ಕೂಡಲೆ ಸುದ್ದಿ ಮುಟ್ಟಿತು. ಹೇಳಿದ ದಿನ ತಪ್ಪದೆ ಬಂದ ಭಾಗ್ಯಮ್ಮನ ಕೈಯ್ಯಲ್ಲಿ ನಂಜಪ್ಪ ಸುದ್ದಿ ಮುತ್ತಮ್ಮನಿಗೆ ಮುಟ್ಟಿಸಿದ. ಗೊತ್ತು

ಮಾಡಿದ ದಿನ ಕುಮಾರ ಸರಸ್ವತಮ್ಮನ ಮನೆಗೆ ಹೋಗಿ ಗಾಡಿ ಮಾಡಿಕೊಂಡು ಅವಳನ್ನು ಅಂಗಡಿಯ ಹತ್ತಿರ ಕರೆದುಕೊಂಡು ಬರುವುದೆಂದೂ, ನಂಜಪ್ಪ ಜತೆಯಲ್ಲಿ ಬರುವುದಾಗಿಯೂ ನಿಶ್ಚಯವಾಯಿತು.

೭

ಬೆಳಿಗ್ಗೆಯಿಂದ ನಂಜಪ್ಪನಿಗೆ ಅಂಗಡಿಯಲ್ಲಿ ಬುದ್ಧಿ ಸ್ಥಿಮಿತವೇ ಇಲ್ಲ. ಗಳಿಗೆಗೊಮ್ಮೆ ಕಣ್ಣೆತ್ತಿ ಬಾಗಿಲುಕಡೆ ನೋಡುವನು. ಉದ್ವೇಗದಿಂದ ಮೈಯಲ್ಲಿ ಜ್ವರಬಂದಂತಾಗಿತ್ತು. ವ್ಯಾಪಾರಕ್ಕೆ ಬಂದ ಗಿರಾಕಿಗಳು ಒಂದು ಕೇಳಿದರೆ ಒಂದು ಹೇಳುವನು. ಅರ್ಧರ್ಧ ಗಂಟೆಗೊಮ್ಮೆ ಅಂಗಡಿ ಆಳನ್ನು ಕಳುಹಿಸಿ ಹೊಟೇಲಿನಿಂದ ಕಾಫಿ ತರಿಸಿಕೊಂಡು ಕುಡಿಯುವನು.

ಅಂಗಡಿಯಿಂದ ಅಲುಗಾಡದೆ ಮಧ್ಯಾನ್ಹದವರೆಗೆ ಕಾಲ ತಳ್ಳಬೇಕಾದರೆ ನಂಜಪ್ಪನಿಗೆ ಸಾಕುಸಾಕಾಗಿ ಹೋಯಿತು. ಹನ್ನೆರಡು ಹೊಡೆದ ಸ್ವಲ್ಪಹೊತ್ತಿಗೆ ಕುಮಾರ ಏಕಾಂಗಿಯಾಗಿ ಬಂದ. ಅವನೊಬ್ಬನನ್ನೇ ಕಂಡ ನಂಜಪ್ಪನ ಮುಖ ಪೆಚ್ಚಾಯಿತು.

ನಂಜಪ್ಪ ಕೋಟು, ಟೋಪಿ ಧರಿಸಿಕೊಂಡು ಮ್ಯಾನೇಜರಿಗೆ ಅಂಗಡಿ ಯನ್ನೊಪ್ಪಿಸಿ ಕುಮಾರನ ಜತೆಗೆ ಹೊರಬಿದ್ದ. ದಾರಿಯಲ್ಲಿ ಮೆಲ್ಲನೆ

" ಇದೇನಯ್ಯಾ ಒಬ್ಬನೆ ಬಂದೇ ? " ಎಂದ.

" ಅವರೂ ಬಂದಿದ್ದಾರೆ ಸ್ವಾಮಿ. ಗಾಡಿ ದೂರ ನಿಲ್ಲಿಸಿದ್ದೀನಿ. "

" ಒಳ್ಳೆಯ ಕೆಲಸಮಾಡಿದೆ. ಏನಂದರು ? "

" ಏನೂ ಅನ್ನಲಿಲ್ಲ. ನಾನು ಹೋಗುವ ಹೊತ್ತಿಗೆ ಸಿದ್ಧವಾಗಿದ್ದರು. "

ಇಬ್ಬರೂ ಗಾಡಿಯ ಸಮೀಪಕ್ಕೆ ಹೋದರು. ಒಳಗೆ ಸರಸ್ವತಮ್ಮ ಇದ್ದುದನ್ನು ಕಂಡು ನಂಜಪ್ಪನಿಗೆ ತೃಪ್ತಿಯಾಯಿತು. ತಾನು ಮೊದಲು ಗಾಡಿ ಹತ್ತಿ ಗಾಡಿಯವನ ಹಿಂದೆ ಕುಳಿತ. ಸರಸ್ವತಮ್ಮನನ್ನು ಮರೆಮಾಡಿಕೊಂಡು ಕೂಡುವಂತೆ ಕುಮಾರನಿಗೆ ಆಜ್ಞಾಪಿಸಿದ.

ಗಾಡಿಯನ್ನು ನಾಗಾಲೋಟದಲ್ಲಿ ಓಡಿಸುವಂತೆ ಗಾಡಿಯವನಿಗೆ ನಂಜಪ್ಪ ತಿಳಿಸಿದ. ಗಾಡಿ ಮಾರ್ಕೆಟ್ ದಾಟಿ, ಬ್ರಿಯಾಂಡ್ ಸರ್ಕಲ್ ದಾಟಿ, ಶಂಕರ ಪುರ ದಾಟಿ ಬಸವನಗುಡಿಯ ಕಡೆಗೆ ತಿರುಗಿದಾಗ ನಂಜಪ್ಪನ ಬಾಯಲ್ಲಿ ಮಾತು

ಹೊರಟಿತು. ಅವನು ನಸುನಗುತ್ತ ಸರಸ್ವತಮ್ಮನ ಕಡೆ ತಿರುಗಿ

"ಊಟವಾಯಿತೇ ?" ಎಂದು ಕೇಳಿದ.

"ಆಯಿತು. ನಿಮ್ಮದು ?"

"ನನ್ನದೇನು ಆಗತ್ತೆ. ತಿಂಡಿ ತಿಂದಿದ್ದೇನೆ."

ಗಾಡಿಯಲ್ಲಿ ಕೈಯೂರಿ ಕುಳಿತುಕೊಂಡಿದ್ದ ಸರಸ್ವತಮ್ಮನ ಕೈಯಮೇಲೆ ನಂಜಪ್ಪ ತನ್ನ ಕೈಯಿಟ್ಟ. ಸರಸ್ವತಮ್ಮ ಅದನ್ನು ಮೆಲ್ಲನೆ ಅದುಮಿದಳು. ಇಬ್ಬರ ಮುಖದಲ್ಲಿಯೂ ಒಂದೇ ಕಾಲದಲ್ಲಿ ನಗೆ ಚಿಮ್ಮಿತು.

ಮುತ್ತಮ್ಮನ ಮನೆ ಸಮೀಪಿಸುವ ವೇಳೆಗೆ ನಂಜಪ್ಪ ಕುಮಾರನಿಗೆ

"ಬಾಡಿಗೆ ಎಷ್ಟು ಗೊತ್ತುಮಾಡಿದ್ದೀಯಯ್ಯಾ" ಎಂದು ಕೇಳಿದ.

"ಎರಡು ರೂಪಾಯಿ ಎಂದು ಹೇಳಿದ್ದೆ."

ನಂಜಪ್ಪ ಮೂರು ರೂಪಾಯಿ ತೆಗೆದು ಗಾಡಿಯವನ ಕೈಗೆ ಹಾಕಿದ. ಗಾಡಿಯವನು ಕೃತಜ್ಞತೆಯಿಂದ

"ಕಾದಿರಲೇ ಸ್ವಾಮಿ" ಎಂದ.

"ಬೇಡ—ಹೋಗು" ಎಂದು ನಂಜಪ್ಪ ಹೇಳಿದ.

ಮನೆಯ ಬಾಗಿಲಲ್ಲೇ ಭಾಗ್ಯಮ್ಮ ಕಾದಿದ್ದಳು. ಎಲ್ಲರೂ ಒಳಗೆ ಹೋಗಿ ತೊಟ್ಟಿಯಲ್ಲಿ ಕುಳಿತರು. ಸ್ವಲ್ಪ ಅನುಮಾನಿಸುತ್ತ ಬಾಗಿಲಲ್ಲಿ ನಿಂತ ಸರಸ್ವತಮ್ಮನನ್ನು ನೋಡಿ ಮುತ್ತಮ್ಮ

"ಒಳಗೆ ಬಂದು ಬಿಡಮ್ಮ. ಹಾಗೆ ಬಾಗಿಲಲ್ಲಿ ನಿಂತುಕೊಳ್ಳಬಾರದು." ಎಂದಳು.

ನಂಜಪ್ಪ, ಕುಮಾರ ಮುತ್ತಮ್ಮನ ಮುರುಕು ಮಂಚದಮೇಲೆ ಕುಳಿತರು. ಸರಸ್ವತಮ್ಮ ಕೆಳಗೆ ಚಾಪೆಯಮೇಲೆ ಕುಳಿತಳು. ಮುತ್ತಮ್ಮ ನಂಜಪ್ಪನನ್ನು ನೋಡಿ

"ಏನಪ್ಪಾ, ಭಾಳ ದಿವಸಕ್ಕೆ ಬಂದುಬಿಟ್ಟೆ ?" ಎಂದಳು

"ನೀನೇ ಮಾಯವಾಗಿಬಿಟ್ಟಿದ್ದೆ. ನಾವು ಬರುವುದು ಹೇಗೆ ಹೇಳು."

"ಬಡವಳ ಜ್ಞಾಪಕ ಬಂತಲ್ಲಾ."

"ಭಾಗ್ಯಮ್ಮ ಸಿಕ್ಕದಿದ್ದರೆ ನೀನು ಇರುವುದು ಇಲ್ಲದಿರುವುದು ಒಂದೂ ಗೊತ್ತಾಗುತ್ತಿರಲಿಲ್ಲ."

"ಊಟ ಆಯಿತೇನು ?"

"ಆಗಿಲ್ಲ. ನಂಗೇನೂ ಬೇಕಿಲ್ಲ."

"ಹೋಗಲಿ—ನಮಗಷ್ಟು ಕಾಪಿಗೀಪಿ ತರಿಸು."

ನಂಜಪ್ಪ ಕುಮಾರನ ಕೈಗೆ ಹಣವಿತ್ತು ಕಾಫಿ, ತಿಂಡಿ, ಹಣ್ಣು ತರಲು ಹೇಳಿದ. ಕಾಫಿ ತರಲು ಭಾಗ್ಯಮ್ಮ ಒಂದು ಪಾತ್ರೆ ತಂದುಕೊಟ್ಟಳು.

ಕುಮಾರ ಎದ್ದು ಹೋದಮೇಲೆ ನಂಜಪ್ಪ ಭಾಗ್ಯಮ್ಮನಿಗೆ ಕಣ್ಸನ್ನೆ ಮಾಡಿದ. ಅವಳು ಎದ್ದುಹೋಗಿ ರೂಮಿನಲ್ಲಿ ವ್ಯವಸ್ಥೆಮಾಡಿಬಂದಳು.

ಮುತ್ತಮ್ಮ ಸಾವಕಾಶವಾಗಿ

"ನನಗೇನು ಬಟ್ಟೆಬರೆ ಕೊಡಲ್ಲವೇನಪ್ಪಾ" ಎಂದಳು.

"ನಿನಗೆ ಕೊಡದೆ ಉಂಟೇ ?"

ಎನ್ನುತ್ತಾ ನಂಜಪ್ಪ ಎದ್ದು ರೂಮಿನ ಒಳಕ್ಕೆ ನಡೆದ. ಸರಸ್ವತಮ್ಮ ಅವನನ್ನು ಹಿಂಬಾಲಿಸಿ ರೂಮಿನ ಒಳಕ್ಕೆ ಬಂದಳು. ಅವಳು ಬಂದೊಡನೆಯೇ ನಂಜಪ್ಪ ಬಾಗಿಲು ಹಾಕಿ ಸರಸ್ವತಮ್ಮನನ್ನು ಬಲವಾಗಿ ಅಪ್ಪಿ ಮುದ್ದಿಟ್ಟ.

"ಇದು ಯಾರದೂಂದ್ರೆ ಮನೆ."

"ಏಕೆ ? ನಾವಿರುವತನಕ ನಮ್ಮ ಮನೆ ಎಂದು ತಿಳಿದುಕೊಂಡುಬಿಡು."

"ನನಗೆ ಭಯವಾಗುತ್ತೆ."

"ಭಯಕ್ಕೇನೂ ಕಾರಣವಿಲ್ಲ. ನಾನಿದ್ದೇನಲ್ಲಾ ?"

"ಈ ಮುದುಕಿಯರು ಯಾರು ?"

"ನನಗೆ ಬಹಳ ದಿವಸಗಳಿಂದ ತಿಳಿದವರು."

"ನಾನು ಬಂದಿದ್ದುದು ಯಾರಿಗಾದರೂ ಗೊತ್ತಾದರೆ...."

"ಅವರು ತುಟಿಯೆರಡು ಮಾಡುವರಲ್ಲ. ನೀನು ಇವತ್ತು ಬರುತ್ತೀಯೋ ಇಲ್ಲವೋ ಎಂದು ನನಗೆ ತುಂಬ ಅನುಮಾನವಾಗಿತ್ತು."

" ಬರುತ್ತೇನೆಂದು ಮಾತು ಕೊಟ್ಟಿದ್ದೆನಲ್ಲಾ. "

" ಸರಿ. ಆದರೂ ಮನಸ್ಸಿಗೆ ಆತಂಕ. "

" ಈಗ ಆತಂಕ ಪರಿಹಾರವಾಯಿತೇ ? "

" ಪರಿಹಾರ ಮಾಡುವುದಕ್ಕೇ ನೀನು ಬಂದಿದ್ದೀಯಲ್ಲಾ. "

ಎಂದು ನಂಜಪ್ಪ ಅವಳನ್ನು ತನ್ನ ತೋಳತೆಕ್ಕೆಗೆ ಬರಮಾಡಿಕೊಂಡ.

" ಕಾಪಿ ಬಂದಿದೆಯಪ್ಪಾ—ಆರಿಹೋಗುತ್ತೆ "

ಎಂದು ಭಾಗ್ಯಮ್ಮ ಹೊರಗಿನಿಂದ ಕೂಗಿದಾಗಲೇ ಇಬ್ಬರಿಗೂ ಎಚ್ಚರ. ಆಗಲೇ ಎರಡು ಗಂಟೆ ಹೊಡೆದಿದ್ದುದನ್ನು ಕಂಡು ನಂಜಪ್ಪ ಆಶ್ಚರ್ಯ ಚಕಿತನಾದ.

ಇಬ್ಬರೂ ಹೊರಗೆ ಬಂದು ಮುಖ ತೊಳೆದುಕೊಂಡು ಉಳಿದವರೊಂದಿಗೆ ಉಪಾಹಾರಕ್ಕೆ ಕುಳಿತರು. ಉಪಾಹಾರ ಮುಗಿದಮೇಲೆ ಸರಸ್ವತಮ್ಮ ನಂಜಪ್ಪನಿಗೆ ತಾಂಬೂಲ ಮಡಿಸಿಕೊಟ್ಟಳು. ಮುತ್ತಮ್ಮ ಉಪಾಹಾರ ಸೇವಿಸುತ್ತಾ

" ಈ ಕಸುಬು ನಾನು ಬಿಟ್ಟುಬಿಟ್ಟಿದ್ದೇನಪ್ಪಾ. ನೀನು ಬರುತ್ತೀ ಎಂದು ಭಾಗ್ಯಮ್ಮ ಹೇಳುವ ಹೊತ್ತಿಗೆ ಒಪ್ಪಿಕೊಂಡೆ. "

" ತುಂಬ ಉಪಕಾರಮಾಡಿದೆ ಮುತ್ತಮ್ಮ. "

" ಬಾಯಿ ಉಪಚಾರ ಹೇಳಿದರೆ ಆಗೋದಿಲ್ಲಪ್ಪ. ನನಗೊಂದು ಎಮ್ಮೆ ಕೊಡಿಸಬೇಕು ನೀನು. "

" ಆಗಲಮ್ಮ....ಅದೇನು ದೊಡ್ಡ ವಿಷಯ. "

ನಂಜಪ್ಪನಿಗೆ ಒಂದೊಂದು ಕ್ಷಣವೂ ಅತ್ಯಮೂಲ್ಯವಾಗಿತ್ತು. ' ಈ ಮುದುಕಿ ಜತೆ ಮಾತಾಡಿಕೊಂಡು ವೃಥಾ ಕಾಲಹರಣ ಮಾಡುತ್ತಿದ್ದೇನಲ್ಲಾ ' ಎಂದು ಅವನ ಮನಸ್ಸಿನಲ್ಲಿ ಚಿಂತೆ. ಮೆಲ್ಲನೆದ್ದು ಒಂದು ಸಿಗರೇಟ್ ಹಚ್ಚಿಕೊಂಡು, ತೊಟ್ಟಿಯಲ್ಲಿ ಸುಳಿದಾಡಿ ಮತ್ತೆ ರೂಮು ಸೇರಿದ.

ಸರಸ್ವತಮ್ಮ ಅವನ ಹಿಂದೆಯೇ ರೂಮಿಗೆ ಬರಲಿಲ್ಲ. ಮುತ್ತಮ್ಮ ತಿಂಡಿ ಮುಗಿಸುವವರೆಗೆ ಅಲ್ಲಿಯೇ ಕುಳಿತಿದ್ದು ಮೆಲ್ಲನೆದ್ದು ಬಂದಳು.

“ ಏಕಿಷ್ಟು ತಡಮಾಡಿದೆ. ನನ್ನ ಹಿಂದೆ ಬರಬಾರದಾಗಿತ್ತೇ ? ”

“ ಸರಿ. ಆಕೆ ತಿಂಡಿ ತಿನ್ನುತ್ತಾ ಇದ್ದಳು. ಬಿಟ್ಟುಬಂದರೆ ಏನೆಂದು ಕೊಳ್ಳುತ್ತಾಳೆ. ”

“ ಅಂದುಕೊಳ್ಳೋದೇನು ? ಅವಳ ಮುದ್ದು ಮುಖ ನೋಡುವುದಕ್ಕೆ ನಾವಿಲ್ಲಿಗೆ ಬಂದಿದ್ದೇವೆಯೇ ? ”

ನಂಜಪ್ಪನ ಮನದ ಉಮ್ಮಳ ಪರಿಹರಿಸಲು ಸರಸ್ವತಿ ಅವನ ಕುತ್ತಿಗೆಯ ನ್ನಪ್ಪಿದಳು. ಇಬ್ಬರೂ ಹಾಸಿಗೆಯಮೇಲೆ ಕುಳಿತಮೇಲೆ

“ ನೋಡು ಇಲ್ಲಿಗೆ ಬಂದು ಹೋಗುವುದು ಎಷ್ಟು ಕಷ್ಟ ? ”

“ ಹೌದು ! ನನಗೆ ಪ್ರಾಣವೇ ಹೋಗುತ್ತದೆ. ”

“ ಇಲ್ಲಿಗೆ ಬರದೆ ಏನು ಮಾಡುವುದು ? ಇಂಥ ಮನೆಗೆ ನಿನ್ನನ್ನು ಕರೆದು ಕೊಂಡು ಬರುವುದಕ್ಕೆ ನನಗೆ ಸ್ವಲ್ಪವೂ ಮನಸ್ಸಿಲ್ಲ. ನಿನ್ನ ಮನೆಗೆ ನಾನು ಬರಬಾರದೆಂದು ಆಜ್ಞೆವಿಧಿಸಿರುವೆ ? ”

“ ಬರಬಾರದೂಂತಲ್ಲ. ನನ್ನ ಯಜಮಾನ ತುಂಬ ಮುಂಗೋಪಿ. ಅವನಿಗೂ ನಿಮಗೂ ವ್ಯಾಜ್ಯವಾದರೆ ಚೆನ್ನಾಗಿರುತ್ತದೆಯೇ ? ಅಲ್ಲದೆ ನಾನು ಸಂಪೂರ್ಣವಾಗಿ ಅವನ ಅಧೀನಳಾಗಿದ್ದೇನೆ. ”

“ ಹಾಗಂದರೇನು ? ”

ತನ್ನ ಮನೆಯ ಕಥೆಯನ್ನು ಸೂಕ್ಷ್ಮವಾಗಿ ನಿರೂಪಿಸಿ ಮಂಜಯ್ಯನಿಗೆ ಗಂಡ ಬರೆದುಕೊಟ್ಟಿದ್ದ ಕಾಗದದ ವಿಷಯ ಪ್ರಸ್ತಾಪಿಸಿದಳು.

“ ನಿನ್ನ ಯಜಮಾನ ಕಾಗದ ಹಿಂದಿರುಗಿಸಿದನೇ ? ”

“ ಇಲ್ಲ. ನಾನೂ ಕೇಳಲಿಲ್ಲ, ”

“ ಕಾಲಸ್ಥಿತಿ ಒಂದೇ ರೀತಿಯಿರುವುದಿಲ್ಲ. ನೀನು ಮೊದಲು ಆ ಕಾಗದ ಹಿಂದಕ್ಕೆ ವಸೂಲ್ಮಾಡಿಕೋ. ”

“ ಒಂದುವೇಳೆ ನನಗೆ ಕಷ್ಟಕಾಲ ಬಂದರೆ ನನ್ನ ಕೈಹಿಡಿದು ಕಾಪಾಡು ತ್ತೀರಾ ? ”

“ ನಿನ್ನ ಕೈ ನಾನು ಬಿಡುತ್ತೇನೆಯೇ ? ”

" ಕುಂತಳನ ಸಂಸಾರ ಒಂದು ನಿಮುಗಿದೆ. "

" ಸರಿ—ಅದೊಂದು ಮಗು. ಅವಳು ಕುಮಾರನ ಹತ್ತಿರ ನೃತ್ಯ ಕಲಿಯಬೇಕೆಂದು ಆಸೆಪಟ್ಟಳು. ಆದಕ್ಕೆ ಒಂದು ವ್ಯವಸ್ಥೆಮಾಡಬೇಕಾಯಿತು. "

" ಗಂಡಸರು ನಿಮ್ಮನ್ನು ನಂಬುವುದೇ ಕಷ್ಟ. "

" ಸರಸೂ, ನೀನು ನನ್ನ ಬುದ್ಧಿ ಕೆಡಿಸಿಬಿಟ್ಟಿರುವೆ ? "

" ಏಕೆ ? "

" ಆದನ್ನು ಬಿಡಿಸಿ ಹೇಳುವುದಕ್ಕೆ ಪರಮೇಶ್ವರನಿಗೂ ಸಾಧ್ಯವಿಲ್ಲ. ನಾಳೆ ನಾನು ನಿನ್ನ ನೋಡಲೇಬೇಕು. "

" ನಿಮ್ಮ ಅಂಗಡಿ ಗತಿಯೇನು ? "

" ಮ್ಯಾನೇಜರ್ ನೋಡಿಕೊಳ್ಳುತ್ತಾನೆ—ನಾಳೆ ನಾನು ನಿಮ್ಮ ಮನೆಗೆ ಬರಬಾರದೇ ?—ನಿಮ್ಮ ಯಜಮಾನರು ಊರಿನಲ್ಲಿಲ್ಲವಂತೆ ! "

" ಅವರು ಬರುವುದಕ್ಕೆ ಇನ್ನೂ ಮೂರು ನಾಲ್ಕು ದಿವಸವಾಗುತ್ತದೆ. "

" ಈ ಮೂರು ನಾಲ್ಕು ದಿವಸವಾದರೂ ನನ್ನದು ಮಾಡಬಾರದೇ ? "

" ಮಾಡಬಹುದು. ಅವರು ಊರಿಗೆ ಬಂದಮೇಲೆ ನೀವು ಬರುವುದಕ್ಕಾಗುವುದಿಲ್ಲ. "

" ಆ ಮೇಲೆ ಇಲ್ಲಿಗೆ ಬರೋಣ. ನಾನು ಬೇಗನೆ ಬೇರೆ ವ್ಯವಸ್ಥೆ ಮಾಡುತ್ತೇನೆ. "

" ನೀವು ಯಾವಾಗ ಬರುವಿರಿ ? "

" ಬೆಳಿಗ್ಗೆ ಎಂಟು ಗಂಟೆಗೆ ಬರಲೇ ? "

" ಬೇಡ—ಮಕ್ಕಳು ಸ್ಕೂಲಿಗೆ ಹೋದಮೇಲೆ ಬನ್ನಿ. "

" ಹನ್ನೊಂದು ಗಂಟೆಗೆ ಬರುತ್ತೇನೆ. "

" ನಿಮ್ಮ ಊಟ—ಇವತ್ತೂ ನಿಮಗೆ ಊಟವಿಲ್ಲ. "

" ಊಟದ್ದೇನು ದೊಡ್ಡ ವಿಷಯ. ತಿಂಡಿ ತಿಂದರಾಯಿತು. "

" ನಾಳೆ ಅಲ್ಲಿಯೇ ಊಟಮಾಡಿ. "

“ ಆಗಬಹುದು. ”

“ ನನಗೇನು ತಂದುಕೊಡುತ್ತೀರಿ ? ”

“ ನಿನಗೇನು ಬೇಕು. ”

“ ಕೈಗಡಿಯಾರವಿಲ್ಲದೆ ಬಹಳ ತೊಂದರೆಯಾಗಿದೆ. ”

“ ಸೀರೆ ತರೋಣ ಎಂದಿದ್ದೆ. ”

“ ಎರಡನ್ನೂ ತಂದರೆ ನಾನು ಬೇಡವೆನ್ನುವುದಿಲ್ಲ. ”

ನಂಜಪ್ಪ ಕ್ಷಣಕಾಲ ಆಲೋಚಿಸಿ ‘ ಹಾಗೇ ಆಗಲಿ ’ ಎಂದ.

“ ನನ್ನದು ಅತ್ಯಾಸೆ ಎನ್ನಿಸತ್ತೇನು ? ”

“ ನಿನಗೆ ಸಂತೋಷವಾದರೆ ಸಾಕು. ಸರಸೂ—ಒಂದೇ ದಿನದಲ್ಲಿ ನೀನು ನನ್ನನ್ನು ಕೈದಿಯನ್ನಾಗಿ ಮಾಡಿಬಿಟ್ಟೆ. ”

“ ನನ್ನ ಪಾಡು ಏನಾಗಿದೆ ಎಂದು ತಿಳಿಮಕೊಂಡಿರುವಿರಿ ? ”

“ ಏನಾಗಿದೆ ? ”

“ ಈ ಹೋಟಲಿನವನನ್ನು ವಿಧಿ ಯಾಕೆ ಗಂಟುಹಾಕಿತು ಎಂದು ಯೋಚನೆಯಾಗಿದೆ. ”

“ ಅವನನ್ನು ನೀನು ಪ್ರೀತಿಸುವುದಿಲ್ಲವೇ ? ”

“ ಪ್ರೀತಿ—ಅದು ಅಷ್ಟು ಅಗ್ಗವಾದ ವಸ್ತು ಎಂದು ತಿಳಿದುಕೊಂಡಿರುವಿರಾ ? ”

“ ನನ್ನನ್ನು ಪ್ರೀತಿಸುವೆಯಾ ? ”

“ ನೀವು ಹೇಳಿಕಳಿಸಿದ ಕೂಡಲೆ ನಾನೇಕೆ ಬಂದೆ ಯೋಚಿಸಿ. ನನಗೂ ಬಹಳ ದಿವಸಗಳಿಂದ ಮನಸ್ಸಿತ್ತು. ಹೆಣ್ಣು ಜನ್ಮ—ತನಗೆ ಬೇಕಾದುದನ್ನು ಬಾಯಿಬಿಟ್ಟು ಹೇಳಿಕೊಳ್ಳಲು ಸಾಧ್ಯವೇ ? ”

ನಂಜಪ್ಪ, ತಾನು ಎಂಟನೆಯ ಸ್ವರ್ಗದಲ್ಲಿರುವುದಾಗಿ ಭಾವಿಸಿದ. ಅವನ ಸಂತೋಷಕ್ಕೆ ಮೇರೆಯೇ ಇರಲಿಲ್ಲ.

ನಂಜಪ್ಪ, ಸರಸ್ವತಮ್ಮ ರೂಮುಬಿಟ್ಟು ಹೊರಗೆ ಬರುವ ವೇಳೆಗೆ ನಾಲ್ಕೂವರೆಯಾಯಿತು. ನಂಜಪ್ಪ ನೇರವಾಗಿ ಸ್ನಾನಗೃಹಕ್ಕೆ ಹೋಗಿ ಮುಖ

ತೊಳೆದುಕೊಂಡು ಬಂದ.

ಸರಸ್ವತಮ್ಮ ಸ್ನಾನಗೃಹ ಪ್ರವೇಶಿಸಿದಳು. ಹಂಡೆಯಲ್ಲಿ ನೀರಿರಲಿಲ್ಲ. ನಲ್ಲಿ ತಿರುಗಿಸಿ ನೋಡಿದಳು. ನೀರು ನಿಂತುಹೋಗಿತ್ತು. ಮುತ್ತಮ್ಮನೇ ಎದ್ದು ಹೋಗಿ ಭಾವಿಯಲ್ಲಿ ಒಂದು ಬಿಂದಿಗೆ ನೀರುಸೇದಿ ತಂದುಕೊಟ್ಟಳು. ಸರಸ್ವತಮ್ಮ ಮುಖಮಾರ್ಜನೆ ಮಾಡಿಕೊಳ್ಳುತ್ತಿದ್ದಾಗ ಪಿಸುಮಾತಿನಲ್ಲಿ

" ಯಾವಾಗಲಾದರೂ ಬಂದು ಹೋಗುತ್ತಿರಮ್ಮ " ಎಂದಳು.

" ಆಗಲಿ ಬರುತ್ತೇನೆ. "

" ಬರುತ್ತೇನೆಂದು ತಪ್ಪಿಸಕೂಡದು. ಆಯಪ್ಪನಿಗೆ ಹೇಳಬೇಡ. "

" ನಾನು ಏಕೆ ಹೇಳಲಿ? "

ಸರಸ್ವತಮ್ಮ ಸ್ನಾನಗೃಹದಿಂದ ಬಂದಮೇಲೆ ನಂಜಪ್ಪ ಕಿಸೆಯಿಂದ ಹತ್ತು ರೂಪಾಯಿ ತೆಗೆದು ಮುತ್ತಮ್ಮನ ಕೈಯಲ್ಲಿಟ್ಟ. ಅವಳು ಅದನ್ನು ನೋಡುತ್ತಾ

" ಇರಲಿ, ಇನ್ನೊಂದು ಹತ್ತು ಕೊಟ್ಟಿರಪ್ಪಾ. "

" ಕೊಡುತ್ತೇನೆ. ಇವತ್ತಿಗೇ ಮುಗಿದುಹೋಯಿತೇ? "

" ನನಗಷ್ಟು ಬಟ್ಟೆ ಕೊಡುತ್ತೀಯೋ ಇಲ್ಲಪ್ಪಾ. "

" ನಾಳೆ ಭಾಗ್ಯಮ್ಮನನ್ನು ಅಂಗಡಿ ಹತ್ತಿರ ಕಳಿಸು. ಕೊಡುತ್ತೇನೆ. "

" ತಿರುಗಿ ಯಾವಾಗ ಬರುವುದು? "

" ನಾನು ಹೇಳಿಕಳಿಸುತ್ತೇನೆ. ಗಾಡಿ ಬೇಕಾಗಿತ್ತಲ್ಲ. "

" ಬಸವಣ್ಣನ ಗುಡಿತನಕ ನಡೆದು ಹೋದರೆ ಗಾಡಿ ಸಿಕ್ಕತ್ತೆ, ಮೂವರೂ ಜತೆಯಲ್ಲೇ ಹೊರಟುಬಿಡಿ. ನೋಡಿದವರಿಗೂ ಅನುಮಾನ ಬರುವುದಿಲ್ಲ. "

ಮೂವರೂ ಜತೆಯಾಗಿ ಬಸವಣ್ಣನ ಗುಡಿಯ ಬಳಿಗೆ ಬಂದರು. ಗಾಡಿ ಯಾವುದೂ ಇರಲಿಲ್ಲ. ಗಾಡಿ ಕಾಯುತ್ತ ನಿಂತರು. ಕುಮಾರ ಕೇಳಿದ

" ಸಾಹುಕಾರರು ಯಾವ ಕಡೆಗೆ? "

" ನೀನು ಗಾಡಿಮಾಡಿಕೊಂಡು ಇವರನ್ನು ಮನೆ ತಲುಪಿಸು—ನಾನು ಅಂಗಡಿಗೆ ಹೋಗಿ ನಾಟ್ಯಶಾಲೆಗೆ ಬರುತ್ತೇನೆ. "

ಗಾಡಿ ಬಂದಿತು. ಸರಸ್ವತಮ್ಮ, ಕುಮಾರ ಗಾಡಿಯಲ್ಲಿ ಕುಳಿತರು. ನಂಜಪ್ಪ ಅವರನ್ನು ಬೀಳ್ಕೊಡುತ್ತಾ ಸರಸ್ವತಮ್ಮನ ಕಡೆ ತಿರುಗಿ

" ನಾಳೆ—ಹನ್ನೊಂದು ಗಂಟೆಗೆ ! " ಎಂದ.

ಸರಸ್ವತಮ್ಮ ನಸುನಕ್ಕು ಒಪ್ಪಿಗೆ ಸೂಚಿಸಿದಳು.

ಸರಸ್ವತಮ್ಮ ಮನೆ ತಲುಪುವ ಹೊತ್ತಿಗೆ ಸರಿಯಾಗಿ ಅವಳ ಎರಡನೆಯ ಮಗಳು ಸುಧಾ ಸ್ಕೂಲಿನಿಂದ ಬಂದಳು.

ಮನೆಯೊಳಗೆ ಬಂದ ಮೇಲೆ ಸುಧಾ ತಾಯಿಯನ್ನು ಕೇಳಿದಳು

" ಎಲ್ಲಿಗೆ ಹೋಗಿದ್ದೆಯೇ ಅಮ್ಮ. "

" ಮೇಷ್ಟ್ರು ಸ್ಕೂಲಿಗೆ ಕರೆದುಕೊಂಡು ಹೋಗಿದ್ದರು. ಸುಧಾ ಬೇಗ ಸ್ವಲ್ಪ ಕಾಫಿ ಮಾಡು. " ಎಂದಳು.

ಸುಧಾ ಒಲೆ ಹೊತ್ತಿಸಿ ಕಾಫಿ ಮಾಡುವುದಕ್ಕೆ ಹೊರಟಳು. ಕುಮಾರನನ್ನು ಕೂಡ ಹೇಳಿ ಸರಸ್ವತಮ್ಮ ಮುಖ ತೊಳೆದುಕೊಂಡು ಬಂದಳು. ಅವಳ ಮುಖದ ವರ್ಚಸ್ಸು ನೋಡಿ ಕುಮಾರ

" ಮುಖಕ್ಕೆ ಕಳೆ ಬಂದಿದೆ ? "

" ಹೂ ! ತೃಪ್ತಿಯಾಯಿತು. "

" ಹೋಗಲಿಬಿಡಿ. ನನ್ನ ಮೇಲಿನ ಕೋಪ ಉಪಶಮನವಾಯಿತಲ್ಲಾ ! "

" ನಿಮ್ಮ ಮೇಲೇಕೆ ಕೋಪ ? "

" ಪ್ರಣಯ ಭಂಗವಾದುದಕ್ಕೆ. "

ಸರಸ್ವತಮ್ಮ ಗಹಗಹಿಸಿ ನಕ್ಕು

" ಸಾಹುಕಾರರಿಗೂ ಕುಂತಳನಿಗೂ ಹೇಗಿದೆ ? "

" ಏಕೆ ಚೆನ್ನಾಗಿಯೇ ಇದೆ. "

" ಅದು ಶುದ್ಧ ಮೊದ್ದು ಹೆಣ್ಣಿನ ಹಾಗೆ ಕಾಣುತ್ತದೆ. "

" ಆ ವಿಷಯ ನನಗೇನು ಗೊತ್ತು. ಸಾಹುಕಾರರನ್ನು ಕೇಳಿ ನೋಡಬೇಕು. "

ಸುಧಾ ಕಾಫಿ ತಂದುಕೊಟ್ಟಳು. ಕುಮಾರ, ಸರಸ್ವತಮ್ಮ ಕಾಫಿ

ಕುಡಿದ ಮೇಲೆ

" ಮೇಷ್ಟ್ರೇ, ಇವತ್ತು ಪಾಠ ಹೇಳಲ್ಲವೇನು ? "

" ಇವತ್ತು ಬೇಡಮ್ಮ. ನಾನು ನಾಟ್ಯಶಾಲೆಗೆ ಹೋಗಬೇಕಾಗಿದೆ. "

ಎಂದು ಹೇಳಿ ಎದ್ದು ನಿಂತು

" ನಾಳೆ ಇಲ್ಲಿಗೇ ಬರುತ್ತಾರೇನು ? "

" ಹೂ ! "

" ಹುಷಾರಾಗಿರಿ. ನಿಮ್ಮ ಯಜಮಾನರಿಗೆ ತಿಳಿದರೆ ಎಲ್ಲರಿಗೂ ಗ್ರಹಚಾರ. " ಎಂದು ಎಚ್ಚರಿಕೆ ಕೊಟ್ಟು ಹೋದ.

ಸುಮಾರು ಎಂಟುಗಂಟೆಯ ವೇಳೆಗೆ ನಂಜಪ್ಪ ಶಾಲೆಗೆ ಬಂದ. ಒಳಗೆ ಹೋಗಿ ಕುಂತಳನನ್ನು ಮಾತನಾಡಿಸಿದ ಶಾಸ್ತ್ರ ಮುಗಿಸಿ ಬಂದು ಕುಮಾರನ ಜತೆ ಕುಳಿತು

" ಸರಸೂ ಏನು ಹೇಳಿದಳು ಕುಮಾರ ? "

" ಅವರಿಗೇನೋ ಮಕಮಲ್ ಟೋಪಿ ಹಾಕಿಬಿಟ್ಟಿದ್ದೀರಿ ? "

" ಏಕೆ ? "

" ಏನು ಅವರ ಸಂತೋಷ. ನೀವು ಹೂ ಎಂದರೆ ಇವತ್ತೇ ಅವರು ಯಜಮಾನರಿಗೆ ನೋಟೀಸ್ ಕೊಟ್ಟುಬಿಡುತ್ತಾರೆ. "

" ಹಾಗೆಂದಳೇನು ? "

" ಸೂಕ್ಷ್ಮವಾಗಿ ಅಂದರು. ನಾಳೆ ಸಾಹುಕಾರರು ಅಲ್ಲಿಗೇ ದಯಮಾಡಿಸುವ ಹಾಗೆ ಕಾಣುತ್ತದೆ. "

" ಹೂ! ಆ ಯಜಮಾನ ಇನ್ನೂ ಮೂರು ನಾಲ್ಕು ದಿವಸ ಬರುವುದಿಲ್ಲವಂತೆ ! "

" ಕುಂತಳನ ಗತಿ ಏನುಮಾಡುತ್ತೀರಿ ಸ್ವಾಮಿ. "

" ಗತಿಯೇನು. ಇರ್ತ್ತಾಳೆ. "

" ಅಲ್ಲಾ ಸ್ವಾಮಿ. ಕುಂತಳ ಪಾಪ ಹುಡುಗಿ. ನಿಮ್ಮನ್ನ ನೋಡೋವರೆಗೆ ಗಂಡಿನ ಮುಖ ಕಂಡಿದ್ದಿಲ್ಲ. ಇವನ್ನು ಬಿಟ್ಟು ಸರಸ್ವತಮ್ಮನೋರನ್ನ

ಮೋಹಿಸಿದ್ದೀರಲ್ಲಾ. ಅವರಿಗೆ ಸಾಕಷ್ಟು ವಯಸ್ಸಾಗಿದೆ, ಮೂರು ನಾಲ್ಕು ಮಕ್ಕಳ ತಾಯಿಬೇರೆ. "

ಕುಮಾರನ ಅಜ್ಞಾನಕ್ಕೆ ನಂಜಪ್ಪ ನಸುನಕ್ಕು

" ನಿನ್ನ ಬುದ್ಧಿಗೆ ಏನು ಹೇಳಲೋ ಕುಮಾರ. "

" ಏಕೆ ಸ್ವಾಮಿ. "

" ದೋರೆಗಾಯಿಯೂ ಒಂದೇ ಮಾಗಿದ ಹಣ್ಣೂ ಒಂದೇನೆ? "

" ಕವಿಗಳ ಹಾಗೆ ಮಾತಾಡ್ತೀರಲ್ಲಾ ಸಾಹುಕಾರರೇ. "

" ಸ್ಕೂಲಿಗೆ ನಾನೂ ಸ್ವಲ್ಪ ಮಣ್ಣು ಹೊತ್ತಿದ್ದೇನಯ್ಯಾ. ಪ್ರೇಮಕ್ಕೆ ಕಣ್ಣಿಲ್ಲ ಎಂದು ಯಾವನೋ ಕವಿ ಹೇಳಿದ್ದಾನಂತೆ. ಅವನು ನಿನ್ನ ಹಾಗೆ ಅನನುಭವಿ. ಪ್ರೇಮಕ್ಕೆ ಕಣ್ಣೂ ಇದೆ. ಬುದ್ಧಿಯೂ ಇದೆ. "

" ಸಾಹುಕಾರರು ಇವತ್ತು ಬಹಳ ಖುಷಿಯಾಗಿದ್ದಾರೆ. "

" ಕುಮಾರ, ಸಂಕೋಚವಿಲ್ಲದೆ ನಿನ್ನ ಹತ್ತಿರ ಹೇಳುತ್ತೇನೆ ಕೇಳು. ಹೆಂಗಸರ ವಿಷಯ ನಾನು ತಿಳಿಯದ ಅಜ್ಞಾನಲ್ಲ. "

" ನಿಮಗೆ ಆ ಮಾತು ಹೇಳೋಕೆ ಸಾಧ್ಯವೇ. ಮಹಾರಾಯರು ಆ ವಿಷಯದಲ್ಲಿ ದೊಡ್ಡ ಗುರುಗಳು. "

" ನಾನೂ ನೂರಾರು ಹೆಂಗಸರ ಸಹವಾಸ ಮಾಡಿದ್ದೇನೆ. ಆದರೆ ಸರಸ್ವತಮ್ಮನ ಜಾತಿ ಎಲ್ಲೂ ನೋಡಲಿಲ್ಲವಯ್ಯಾ? "

" ಅದೇನು ಸ್ವಾಮಿ ಅಂಥ ಹೆಚ್ಚುಗಾರಿಕೆ. "

" ನನ್ನ ಆಸೆಯಿದ್ದಷ್ಟೂ ಅವಳಿಗೂ ಆಸೆಯಿದೆ. ಅವಳಿಗೆ ಆಯಾಸ ಎನ್ನುವದೇ ಇಲ್ಲ ಕಣೋ ಕುಮಾರ. ಅವಳ ದೇಹದ ಅಂಗಾಂಗವೂ ನಾಡಿ ಮಿಡಿದ ಹಾಗೆ ಮಿಡಿಯುತ್ತದೆ. "

" ನಿಮ್ಮ ತಲೆ ಪೂರಾ ಕೆಟ್ಟುಹೋಗಿದೆ. "

" ನಿಸ್ಸಂದೇಹವಾಗಿ. "

" ಸ್ವಾಮಿ. ಈಗಾಗಲೇ ನಿಮಗೆ ಎರಡು ಸಂಸಾರವಿದೆ. ಸ್ವಲ್ಪ ಎಚ್ಚರವಾಗಿರಿ. ಮೂರನೆಯದೂ ಗಂಟು ಬಿದ್ದರೆ ಮುಂದೆ ನಿಮಗೇ ಕಷ್ಟವಾಗುತ್ತದೆ.

ಅಡಿಗೆ ಮಂಜಯ್ಯನಿಗೆ ಗೊತ್ತಾದರೆ ಎಲ್ಲಾರಿಗೂ ಫಜೀತಿ. ”

“ ಯಾರು ಏನು ಹೇಳಿದರೂ ನಾನು ಸರಸುವನ್ನು ಮರೆಯುವ ಹಾಗಿಲ್ಲ ಕುಮಾರ. ”

“ ನನಗೊಳ್ಳೆಯ ಪೀಕಲಾಟ ತಂದಿಟ್ಟೆಯಲ್ಲಾ ? ”

” ನಿನಗೇನು ಪೀಕಲಾಟ ? ”

“ ಈ ವಿಷಯ ರಾಮಲಕ್ಷ್ಮಮ್ಮನ ಕಿವಿಗೆ ಬಿದ್ದರೆ ನನ್ನ ಜೀವದೊರಸೆ ಬಿಡುತ್ತಾಳೆಯೇ ? ”

“ ನಾನಿದ್ದೀನಿ ಸುಮ್ಮನಿರು ಯೋಚನೆ ಮಾಡಬೇಡ. ಇನ್ನು ಮೂರು ದಿವಸ ಯೋಚನೆಯಿಲ್ಲ. ಮುಂದೆಕ್ಕೆ ? ”

“ ಮುತ್ತಮ್ಮನ ಮನೆ. ”

“ ತುಂಬ ದೂರ. ಅಲ್ಲದೆ ಮುತ್ತಮ್ಮ, ಭಾಗ್ಯಮ್ಮ ಕಬ್ಬಿಣದ ಕಾಗೆಗಳ ಹಾಗೆ ಕಿತ್ತುಕೊಂಡು ತಿನ್ನುತ್ತಾರೆ. ”

“ ಕುಂತಳನಿಗೆ ಟಿಕೆಟ್ ಕೊಡೋ ಆಲೋಚನೆ ಮಾಡುತ್ತಿಲ್ಲವಲ್ಲಾ ! ”

“ ಛಿ! ಛಿ ! ಎಲ್ಲಿಯಾದರೂ ಉಂಟೇ ? ”

ನಂಜಪ್ಪನ ಮಾತಿನಲ್ಲಿ ಕುಮಾರನಿಗೆ ನಂಬಿಕೆ ಬರಲಿಲ್ಲ. ‘ ದೇವರು ಮಾಡಿಸಿದ್ದಾಗಲಿ ’ ಎಂದು ಧೈರ್ಯ ತಂದುಕೊಳ್ಳಲೆತ್ನಿಸಿದ.

ಬೆಳಿಗ್ಗೆ ಹಾಲಿನವನು ತಂದುಕೊಟ್ಟ 'ವರ್ತನೆ ಹಾಲ'ನ್ನು ಹಾಕಿಸಿ ಕೊಂಡು ಸರಸ್ವತಮ್ಮ

"ಮೂರು ಪಾವು ಹಾಲು ಹೆಚ್ಚು ಬೇಕಲ್ಲಪ್ಪ" ಎಂದಳು.

"ಈಗೆಲ್ಲಿ ಸಿಕ್ತೈತ್ರಮ್ಮಣ್ಣಿ. ನಿನ್ನೆ ಏಳಿದ್ರೆ ತಂದ್ಕೊಡ್ತಿದ್ದೆ."

"ನೋಡು—ಹೇಗಾದರೂ ಮಾಡು."

"ನೀರಾಲು ಬೇಕಾದ್ರೆ ಸಿಕ್ತೈತ್ರಮ್ಮ."

"ಒಳ್ಳೆಯ ಹಾಲು ಬೇಕಲ್ಲಪ್ಪ. ಕೈಮೇಲೆ ದುಡ್ಡು ಬೇಕಾದ್ರೆ ತೊಗೋ."

"ಒಂದ್ರೂಪಾಯಿ ಆಗ್ತೈತ್ರವ್ವ. ಕೊಟ್ರೆ ತಂದ್ಕೊಡ್ತೀನಿ."

ಸರಸ್ವತಮ್ಮ ಒಳಗೆ ಹೋಗಿ ಒಂದು ರೂಪಾಯಿ ತಂದು ಹಾಲಿನವನ ಕೈಯಲ್ಲಿಟ್ಟಳು.

ಹಾಸಿಗೆ ಬಿಟ್ಟೆದ್ದು ಮುಖ ತೊಳೆಯುವುದಕ್ಕೆ ಸ್ನಾನಗೃಹಕ್ಕೆ ಹೋಗಿದ್ದ ಸುಧೆಯ ಕಿವಿಯ ಮೇಲೆ ಈ ಸಂಭಾಷಣೆ ಬಿತ್ತು. ಕಾಫಿ ಕುಡಿಯುವುದಕ್ಕೆ ಅವಳು ಅಡಿಗೆಯ ಮನೆಗೆ ಬಂದು ಕುಳಿತಾಗ ತಾಯಿಯನ್ನು ಕೇಳಿದಳು

"ಅಷ್ಟೊಂದು ಹಾಲು ಯಾಕಮ್ಮ—ಯಾರು ಬರ್ತಾರೆ?"

"ಕುಮಾರರ ಗುರುಗಳು ಮದರಾಸಿನಿಂದ ಬಂದಿದ್ದಾರಂತೆ. ಅವರನ್ನೂ ಇಲ್ಲೇ ಊಟಕ್ಕೆ ಕರೆದಿದ್ದೇನೆ. ನೀನು ಕಾಫಿ ಕುಡಿದು ಸ್ವಲ್ಪ ಪೇಟೆಯ ಕಡೆ ಹೋಗಿ ಬರಬೇಕು."

"ನಾನು ಓದಿಕೊಳ್ಳುವುದಿತ್ತಲ್ಲಮ್ಮ."

"ಹೋಗಿ ಬೇಗ ಬಂದು ಬಿಡು."

ಸುಧಾ ಪೇಟೆಯಿಂದ ಬರುವ ವೇಳೆಗೆ ಸರಸ್ವತಮ್ಮ ಅಡಿಗೆಯಾರಂಭಿಸಿದ್ದಳು. ಸ್ಕೂಲಿಗೆ ಹೋಗುವ ಮಕ್ಕಳಿಗಾಗಿ ಅನ್ನ ಸಿದ್ಧವಾಗಿತ್ತು.

ಸುಧಾ ತರಕಾರಿ, ಹೂವು, ಹಣ್ಣು, ವೀಳೆಯದೆಲೆ ತಂದು ತಾಯಿಯ

ಮುಂದಿಟ್ಟಳು. ತಾಯಿಯೊಬ್ಬಳನ್ನೇ ಕೆಲಸಕ್ಕೆ ಬಿಟ್ಟು ಪಾಠಕ್ಕೆ ಹೋಗಿ ಕೂಡುವುದಕ್ಕೆ ಸುಧೆಯ ಮನಸ್ಸು ಒಪ್ಪಲಿಲ್ಲ. ತಾನೂ ಕೆಲಸಕ್ಕೆ ನೆರವಾಗಿ ಸೌತೆಯ ಕಾಯಿ ಹೆಚ್ಚಿಕೊಟ್ಟು, ತೆಂಗಿನಕಾಯಿ ತುರಿದು ಕೊಟ್ಟಳು.

ಸ್ಕೂಲಿಗೆ ಹೊರಡುವ ವೇಳೆಯಾಯಿತು. ಸರಸ್ವತಮ್ಮ ಮಕ್ಕಳಿಗೆ ಉಪ್ಪಿನಕಾಯಿ ರಸ, ಮೊಸರು ಬಡಿಸಿ ಊಟಕ್ಕಿಕ್ಕಿದಳು.

ಅಡಿಗೆ ಕೆಲಸ ಮುಗಿಯಲು ಸರಸ್ವತಮ್ಮ ಮನೆಯನ್ನೊಮ್ಮೆ ಶುಚಿಮಾಡಿ, ರೂಮಿನಲ್ಲಿ ಅಣಿಮಾಡಬೇಕಾದ ವಸ್ತುಗಳನ್ನೆಲ್ಲಾ ಅಣಿಮಾಡಿ, ಅಡಿಗೆಯ ಮನೆಯಲ್ಲೇ ಎರಡು ತಟ್ಟೆಹಾಕಿ ಸ್ನಾನಮಾಡಿ ಬಂದಳು.

ಒಲೆಯ ಮೇಲೆ ಕುದಿಯುತ್ತಿದ್ದ ನೀರನ್ನು ಕೆಳಗಿಳಿಸಿ ಕಾಫಿ ಡಿಕಾಕ್ಷನ್ ಹಾಕಿ ಬಿಸಿ ನೀರಿನಲ್ಲಿ ಡಿಕಾಕ್ಷನ್ ಮುಚ್ಚಿಟ್ಟು ಅಲಂಕಾರ ಮಾಡಿಕೊಳ್ಳುವುದಕ್ಕೆ ತನ್ನ ರೂಮು ಸೇರಿದಳು. ಗಂಟೆ ಹನ್ನೊಂದಾಗಿತ್ತು.

ಸರಸ್ವತಮ್ಮ ದೊಡ್ಡ ಎಲೆಗಳ ಚಿತ್ರಗೆಲಸದಿಂದ ಕೂಡಿದ್ದ ಬಂಗಾಳಾ ಸಿಲ್ಕ್ ಸೀರೆ ಧರಿಸಿದಳು. ಪಾಂಡ್ ಪೌಡರ್ ಡಬ್ಬ ತೆಗೆದು ಅದನ್ನು ಮೈಮೇಲೆ ಧಾರಾಳವಾಗಿ ಉಪಯೋಗಿಸಿದಳು. 'ಈವನಿಂಗ್ ಇನ್ ಪ್ಯಾರಿ' ಸೆಂಟ್ ಕುತ್ತಿಗೆಗೆ, ಎದೆಗೆ, ಕಂಕಳುಗಳಿಗೆ, ದೇಹದ ಇನ್ನಿತರ ಭಾಗಗಳಿಗೆ ಹಚ್ಚಿದಳು, ತಲೆಯನ್ನು ಓರಣವಾಗಿ ಬಾಚಿಕೊಂಡು, ಕುಟಿಲ ಕುಂತಳಗಳನ್ನು ತಿದ್ದಿ ಕೊಂಡಳು. ಮುಖಕ್ಕೆ ಅಂದವಾಗಿ ಪೌಡರ್ ಹಚ್ಚಿಕೊಂಡು, ಭ್ರೂಮಧ್ಯೆ ಕುಂಕುಮದ ಬೊಟ್ಟಿಟ್ಟು ಮುಡಿಗೆ ಒಂದೆಳೆ ಮಲ್ಲಿಗೆ ಹೂ ಸುತ್ತಿದಳು. ನಸು ಗೆಂಪಾಗುವಂತೆ ತುಟಿಗೆ ಲಿಪ್‌ಸ್ಟಿಕ್ ಬಳಿದುಕೊಂಡಳು. ಕುಪ್ಪಸ ಧರಿಸಲು ಬಟ್ಟೆಯ ರಾಶಿಗೆ ಕೈಚಾಚಿ ಬಾಡಿಯನ್ನೂ ಸ್ಯಾಟಿನ್ ಕುಪ್ಪಸವೊಂದನ್ನೂ ಕೈ ಗೆತ್ತಿಕೊಂಡು ಕ್ಷಣಕಾಲ ಆಲೋಚಿಸಿದಳು. ತಕ್ಷಣವೇ ಮನಸ್ಸು ಬದಲಾಯಿಸಿ ಅವೆರಡನ್ನೂ ಮೂಲೆಗೊಗೆದು ತೆಳುವಾದ ಬಂಗಾಳಾ ಸಿಲ್ಕ್ ಕುಪ್ಪಸವನ್ನು ಧರಿಸಿದಳು. ಕನ್ನಡಿಯ ಮುಂದೆ ನಿಂತು ಕುಪ್ಪಸದ ಕೊನೆಗಳನ್ನು ನೇರವಾಗಿ ಸೀರೆಯೊಳಗೆ ಸೇರಿಸಿ, ಕುಪ್ಪಸ ಮೈಗೆ ಹತ್ತಿಕೊಳ್ಳುವಂತೆ ಮಾಡಿದಳು. ಅಲಂಕಾರ ಮುಗಿಯುವ ವೇಳೆಗೆ ಹನ್ನೊಂದೂವರೆಯಾಯಿತು. ಕಿಟಕಿಯಾಚೆ

ನೋಡಿದಳು. ನಂಜಪ್ಪ ಎರಡು ಕೈಯಲ್ಲಿಯೂ ಎರಡು ಚೀಲ ಹೊತ್ತು ಬರುವುದು ಕಾಣಿಸಿತು. ಉದ್ವೇಗ, ಸಂತೋಷದಿಂದ ಸರಸ್ವತಮ್ಮನ ಎದೆ ಬಡಿದುಕೊಳ್ಳಲಾರಂಭಿಸಿತು.

ಮನೆಯೊಳಗೆ ಕಾಲಿಟ್ಟ ನಂಜಪ್ಪ ತನ್ನ ಇನಿಯಳನ್ನು ಎವೆಯಿಕ್ಕದೆ ನೋಡಿದ. ಚೀಲಗಳನ್ನು ನೆಲದ ಮೇಲಿಟ್ಟು ಭರದಿಂದ ಸರಸ್ವತಮ್ಮನನ್ನಪ್ಪಿದ. ಎಡದ ಕೈಯಿಂದ ಅವಳು ಮೆಲ್ಲನೆ ಹೊರಬಾಗಿಲನ್ನು ಮುಚ್ಚಿದಳು. ನಂಜಪ್ಪನ ಕೈ ಅನೈಚ್ಛಿಕವಾಗಿ ಸರಸ್ವತಮ್ಮನ ಎದೆಯಮೇಲೆ ಸರಿದು ಅವಳ ತುಂಬಿದ ಸ್ತನಗಳನ್ನು ಮರ್ದಿಸಿತು. ಅವನು ಚೂಚುಕವನ್ನು ಮುಟ್ಟಿದಾಗಲೆಲ್ಲಾ ಸರಸ್ವತಮ್ಮನಿಗೆ ರೋಮಾಂಚವಾಗುತ್ತಿತ್ತು.

ಸಮಾಗಮದ ಉದ್ವೇಗ ತುಸು ಕಡಿಮೆಯಾದಮೇಲೆ ಸರಸ್ವತಮ್ಮ

“ ರೂಮಿನಲ್ಲಿ ಕೂಡಿ. ನಾನು ಬೇಗ ಬರುತ್ತೇನೆ ” ಎಂದಳು.

ನಂಜಪ್ಪ ರೂಮಿನಲ್ಲಿ ಕುಳಿತು ಸಿಗರೇಟ್ ಹಚ್ಚಿ ಸುತ್ತ ತನ್ನ ದೃಷ್ಟಿ ಚೆಲ್ಲಿದ. ಸರಸ್ವತಮ್ಮ ಎರಡು ಕಫ್ ಕಾಫಿ ಹಿಡಿದು ಬಂದಳು. ಇಬ್ಬರೂ ಕಾಫಿ ಸೇವಿಸಿದಮೇಲೆ ಅವಳನ್ನು ಕಣ್ಣುಮುಚ್ಚಿಕೊಳ್ಳಲು ಹೇಳಿ, ಕಿಸೆಯಿಂದ ಕೈಗಡಿಯಾರ ತೆಗೆದು ಅವಳ ಕೈಗೆ ಕಟ್ಟಿದ.

ಸರಸ್ವತಮ್ಮ ಕಣ್ಣುಬಿಟ್ಟು ನೋಡಿದಳು.

“ ಎಷ್ಟು ಚೆನ್ನಾಗಿದೆ. ನಾನು ತಮಾಷೆಗೆ ಹೇಳಿದರೆ ಅದನ್ನೇ ನಿಜವೆಂದು ಕೊಂಡು ಗಡಿಯಾರ ತಂದೇಬಿಟ್ಟರಲ್ಲಾ. ”

“ ಗಡಿಯಾರ ಒಪ್ಪಿಗೆಯಾಯಿತಷ್ಟೇ ? ”

“ ನೀವು ಏನು ತಂದುಕೊಟ್ಟರೂ ಅದು ನನಗೆ ಒಪ್ಪಿಗೆಯೇ. ”

“ ಚೀಲದಲ್ಲಿ ಇನ್ನೂ ಏನೋ ಇದೆ. ”

“ ಏನೂಂದ್ರೆ ? “

“ ನೀನೇ ನೋಡು. ”

ಸರಸ್ವತಮ್ಮ ಎರಡು ಚೀಲಗಳಲ್ಲಿದ್ದುದನ್ನೂ ತೆಗೆದು ಕೆಳಗೆ ಹರಹಿದಳು. ಒಂದರಲ್ಲಿ ಹಣ್ಣು, ಹೂವು, ವೀಳೆಯದೆಲೆ; ಇನ್ನೊಂದರಲ್ಲಿ ಎರಡು ಥರ್ಮಾಸ್

ರದ ಸೀರೆಗಳು, ನಾಲ್ಕು ಕುಪ್ಪಸದ ಕಣಗಳು, ಎರಡು ಜತೆ ಟವಲು, ಒಂದು ಜತೆ ಕರ್‌ಟಿಕ್ಸ್ ಮಗ್ಗಲು ಹಾಸಿಗೆ.

" ಎಷ್ಟೊಂದು ತಂದುಬಿಟ್ಟಿರಿ. ಇವುಗಳನ್ನೆಲ್ಲಾ ತನ್ನಿ ಎಂದು ನಾನು ಹೇಳಿದೆನೇ ? "

" ನಿನ್ನ ಕೈಯಲ್ಲಿ ಹೇಳಿಸಿಕೊಂಡು ತರುವುದರಲ್ಲಿ ಏನು ಸೊಗಸಿದೆ. "

ಎನ್ನುತ್ತಾ ಸರಸ್ವತಮ್ಮನನ್ನು ಎಳೆದುಕೊಂಡ. ' ಸ್ವಲ್ಪ ತಡೆಯಿರಿ ' ಎಂದು ಹೇಳಿ ಸರಸ್ವತಮ್ಮ ಎದ್ದುಹೋಗಿ ಹೊರಬಾಗಿಲು ಚಿಲಕ ಹಾಕಿ ಬಂದು ಕಿಟಕಿಯ ಮೇಲಿದ್ದ ತೆರೆಯನ್ನು ಮುಂದಕ್ಕೆ ಎಳೆದಳು.

ನಂಜಪ್ಪ, ಸರಸ್ವತಮ್ಮ ಎದ್ದುಹೋಗಿ ಊಟಕ್ಕೆ ಕೂಡುವ ವೇಳೆಗೆ ಒಂದೂವರೆ ಗಂಟೆಯಾಗಿತ್ತು.

" ಗಂಟೆ ಒಂದೂವರೆಯಾಯಿತು. ನಿಮಗೆಷ್ಟು ಹಸಿವಾಗಿದೆಯೋ ? "

" ಹಸಿವಾಗಿತ್ತು. ಈಗ ಅಷ್ಟಿಲ್ಲ. "

ಎಂದು ನಂಜಪ್ಪ ಮಾರ್ಮಿಕವಾಗಿ ನುಡಿದ.

ಸರಸ್ವತಮ್ಮ ಅವನನ್ನು ಅಡಿಗೆಯ ಮನೆಗೇ ಕರೆದೊಯ್ದಳು. ಎರಡು ತಟ್ಟೆ ಹಾಕಿದ್ದುದನ್ನೂ ನೋಡಿ ನಂಜಪ್ಪ

" ಒಂದೇ ತಟ್ಟೆ ಸಾಲದೇನು ? " ಎಂದು ಕೇಳಿದ.

" ನಿಮಗೆ ಬೇಕೇನೋ ಎಂದು ಎರಡು ತಟ್ಟೆ ಹಾಕಿದೆ. "

ಎಂದು ಸರಸ್ವತಮ್ಮ ಹೇಳುತ್ತಾ ಒಂದು ತಟ್ಟೆಯನ್ನು ಗೋಡೆಯ ಬಳಿಗೆ ಸರಿಸಿದಳು. ಇಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮುಗಿಸಿದರು.

ಅಡಿಗೆ ಮನೆಯ ಕೆಲಸ ಮುಗಿಸಿಕೊಂಡು ಸರಸ್ವತಮ್ಮ ಒಳಗೆ ಬಂದಾಗ

" ಔತಣವೇ ಮಾಡಿಬಿಟ್ಟೆ. "

" ನನ್ನ ಮೋಹದರಸರಿಗೆ ನಾನು ಇಷ್ಟು ಮಾಡುವುದು ಹೆಚ್ಚೆ ? "

ಹಣ್ಣು ಸೇವಿಸಿ, ಇಬ್ಬರೂ ತಾಂಬೂಲ ಹಾಕಿಕೊಂಡರು. ತಾಂಬೂಲ ರಸ ಬಾಯಿಂದ ಬಾಯಿಗೆ ಹರಿದಾಡಿತು. ನಂಜಪ್ಪ ಖಿನ್ನನಾಗಿ

" ಇದೆಲ್ಲಾ ಎರಡು ದಿವಸ ಸೌಭಾಗ್ಯ. "

" ಅದೇಕೆ ಹಾಗೆ ಹೇಳುವಿರಿ ? "

" ಎರಡು ದಿವಸದ ಮೇಲೆ ನಿನ್ನ ಪ್ರಾಣಗಂಡ ಬರುತ್ತಾನಲ್ಲಾ. "

" ಬರಲಿ ಬಿಡಿ—ಅವರಿಂದ ನಮಗೇನು ಅಡ್ಡಿ. "

" ಅವನು ಬಂದು ಇಲ್ಲಿ ಝಾಂಡಾ ಊರಿದರೆ ನಾನು ಹೇಗೆ ಬರುವುದು ?"

" ಅದಕ್ಕೇನಾದರೂ ಉಪಾಯ ಹುಡುಕಿದರಾಯಿತು. "

"ದಿನಕ್ಕೊಮ್ಮೆಯಾದರೂ ನಿನ್ನನ್ನು ನೋಡದೆ ನಾನು ಇರಲಾರೆ ಸರಸೂ."

" ನಿಮ್ಮನ್ನು ನೋಡದೆ, ಅವರನ್ನು ನೋಡಿಕೊಂಡು ನಾನಿರಬಲ್ಲೆ ಎಂದು ತಿಳಿದಿರುವಿರಾ ? "

" ಇವನನ್ನು ಏಕೆ ಗಂಟು ಹಾಕಿಕೊಂಡೆ ಹೇಳು ? "

" ನಾನೇನು ಮಾಡಲಿ—ನನ್ನ ಕರ್ಮ ಹಾಗಿತ್ತು. ಸ್ವಲ್ಪ ದಿನಗಳ ಮುಂಚೆ ನಿಮ್ಮ ಪರಿಚಯವಾಗಬಾರದಾಗಿತ್ತೇ ? "

" ಮಂಜಯ್ಯ ರಾತ್ರಿ ಹೊತ್ತು ಬರುತ್ತಾನೆಯೇ ? "

" ಅವರದು ಯಾವದೂ ನಿಶ್ಚಯವಿಲ್ಲ. ಒಂದೊಂದು ದಿನ ಮಧ್ಯಾಹ್ನ ಬರುತ್ತಾರೆ; ಒಂದೊಂದು ದಿನ ಸಂಜೆ ಬಂದು ಹೋಗಿ ಬಿಡುತ್ತಾರೆ; ಒಂದೊಂದು ದಿನ ರಾತ್ರಿ ಬರುತ್ತಾರೆ. "

" ರಾತ್ರಿ ಬಂದರೆ ಎಷ್ಟು ಹೊತ್ತಿಗೆ ಹೋಗುತ್ತಾನೆ. "

" ಏನೇ ಆದರೂ ಒಂಭತ್ತೂವರೆಯ ಮೇಲೆ ಇಲ್ಲಿ ನಿಲ್ಲುವುದಿಲ್ಲ. "

ಮೋಡ ಮುಸುಕಿದ ನಂಜಪ್ಪನ ಅಂತರಂಗದ ಮೇಲೆ ಆಶಾಕಿರಣ ಸುಳಿದಂತಾಯಿತು.

" ನಾನು ರಾತ್ರಿ ಹತ್ತು ಗಂಟೆಗೆ ಬಂದರೆ.... "

" ಬರಬಹುದು—ಆದರೆ ನೀವು ಮನೆಗೆ ಹೋಗುವುದು ? "

" ಬೆಳಿಗ್ಗೆ ಹೋದರಾಯಿತು. "

" ಮನೆಯಲ್ಲಿ ಆಕ್ಷೇಪಣೆ ಮಾಡುವುದಿಲ್ಲವೇ ? "

" ಮನೆಯವರಿಗೆ ನಾನು ಅಷ್ಟು ಸ್ವಾತಂತ್ರ್ಯ ಕೊಟ್ಟಿಲ್ಲ. ಆದರೆ ಮಂಜಯ್ಯ ಇಲ್ಲಿಂದ ಹೋದುದು ನನಗೆ ಗೊತ್ತಾಗುವುದು ಹೇಗೆ ? "

" ಅವರಿದ್ದರೆ ಕಿಟಕಿಗೆ ತೆರೆ ಹಾಕಿರುತ್ತೇನೆ. ಕಿಟಕಿಗೆ ತೆರೆಯಿಲ್ಲದಿದ್ದರೆ ಅವರು ಹೋಗಿದ್ದಾರೆ ಎಂದು ನೀವು ತಿಳಿಯಬಹುದು. ನೀವೂ ಅವರೂ ಇಲ್ಲಿ ಭೆಟ್ಟಿಯಾಗದಂತೆ ನೋಡಿಕೊಳ್ಳಿ. "

" ಅವಶ್ಯಕವಾಗಿ. ಅವನು ಎಂಥವನು ಸರಸೂ. "

" ತುಂಬ ಒಳ್ಳೆಯವರು. ಕಾಸಿನ ವಿಷಯದಲ್ಲಿ ಸ್ವಲ್ಪ ಹಿಡಿತ. ಕೇಳಿದರೆ ಇಲ್ಲವೆನ್ನುವುದಿಲ್ಲ, ಆದರೆ ಎಲ್ಲದಕ್ಕೂ ಲೆಕ್ಕ ಒಪ್ಪಿಸಬೇಕು, ಇದೇ ನನಗೆ ಬೇಜಾರು. "

" ಅವನಿಗೆ ಟಿಕೆಟ್ ಕೊಡುವುದಕ್ಕಾಗುವುದಿಲ್ಲವೇ ? "

" ಹೇಗೆ ಕೊಡಲಿ? ಒಳ್ಳೆಯ ಸಮಯದಲ್ಲಿ ನನಗೆ ಉಪಕಾರ ಮಾಡಿದ್ದಾರೆ. "

" ಆ ಉಪಕಾರ ನಾನು ಮಾಡುತ್ತಿರಲಿಲ್ಲವೇ ? "

" ನಾನು ಇಲ್ಲವೆನ್ನಲಿಲ್ಲ. ಆ ವೇಳೆಗೆ ನಿಮ್ಮ ಗುರುತಾಗಿರಲಿಲ್ಲವಲ್ಲ. ಅವರನ್ನು ನಾನಾಗಿಯೇ ' ಬರಬೇಡಿ ' ಎಂದು ಹೇಳುವುದಿಲ್ಲ ; ಅವರಾಗಿಯೇ ಬರುವುದನ್ನು ನಿಲ್ಲಿಸಿದರೆ ನಾನು ಬೇಡವೆನ್ನುವುದಿಲ್ಲ. "

" ನಿನಗೆ ನಿಜವಾಗಿ ಅವನ ಮೇಲೆ ವಿಶ್ವಾಸವಿದೆಯೇ ? "

" ಆ ವಿಷಯ ಅವತ್ತೇ ಹೇಳಿದೆನಲ್ಲ. ಪ್ರೀತಿ ಅಗ್ಗದ ವಸ್ತುವಲ್ಲ ಎಂದು ನಾನು ಹೇಳಲಿಲ್ಲವೇ ? "

" ನನ್ನನ್ನು ಪ್ರೀತಿಸುವೆಯಾ ? "

" ಮಕ್ಕಳಿಗೆ ಪಾಠ ಹೇಳಿದ ಹಾಗೆ, ಗಂಡಸರು—ನಿಮಗೆ ಎಲ್ಲಾ ಬಿಚ್ಚಿ ಬಿಚ್ಚಿ ಹೇಳಬೇಕು. ಪ್ರೀತಿಯಿಲ್ಲದಿದ್ದರೆ ನಿಮ್ಮನ್ನು ಮನೆಗೆ ಬರಮಾಡಿಕೊಳ್ಳುತ್ತಿದ್ದೆನೇ ? ಒಂದು ವಿಷಯ ನಿಮಗೆ ಬಿಡಿಸಿ ಹೇಳಿಬಿಡುತ್ತೇನೆ—ಅಗಲಾದರೂ ನಿಮ್ಮ ಮನಸ್ಸಿಗೆ ನಂಬಿಕೆಯಾಗಬಹುದು—ಆದರೆ ನನ್ನನ್ನು ನಾಚಿಕೆಗೆಟ್ಟವಳೆಂದು ಭಾವಿಸುವಿರೋ ಏನೋ ? "

" ಇಲ್ಲ ಸರಸೂ—ಹೇಳು—ಹೇಳು. "

" ಗಂಡಸು ಹೆಂಗಸಿನಿಂದ ಸೌಖ್ಯ ಬಯಸುವಂತೆ ಹೆಂಗಸೂ ಗಂಡಸಿನಿಂದ

ಬಯಸುತ್ತಾಳಲ್ಲವೇ ? ”

“ ಅದರಲ್ಲಿ ಸಂದೇಹವೇನು ? ಎರಡು ಕೈ ಸೇರಿದರೇ ಚಪ್ಪಾಳೆ. ”

“ ನನ್ನ ಗಂಡ ನನಗೆ ಸಾಸವೆಯಷ್ಟೂ ಸೌಖ್ಯ ಕೊಡಲಿಲ್ಲ. ಮಕ್ಕಳಾದವು ನಿಜ—ಹೇಗಾದವೋ ನನಗೇ ಸಂದೇಹ. ಅಲ್ಲಿಂದ ವಿಧಿ ನನಗೆ ಒಬ್ಬಿಬ್ಬರ ಸಹವಾಸ ಮಾಡಿಸಿತು—ಕೊನೆಗೆ ಮಂಜಯ್ಯನವರನ್ನು ಗಂಟು ಹಾಕಿತು. ಯಾರೂ ನನ್ನನ್ನು ತೃಪ್ತಿಪಡಿಸಲಿಲ್ಲ. ನಿಮ್ಮ ಸ್ನೇಹವಾಗುವವರೆಗೆ ನನಗೆ ಗಂಡು ಹೆಣ್ಣಿನ ಸಂಬಂಧ ಹೀಗೆ ಎನ್ನುವ ವಿಷಯವೇ ಗೊತ್ತಿರಲಿಲ್ಲ. ”

ನಂಜಪ್ಪನಿಗೆ ಸರಸ್ವತಿಯ ಮಾತು ಅಮೃತಪ್ರಾಯವಾಯಿತು. ಅವಳ ನುಡಿಯಲ್ಲಿ ಎಳ್ಳಮೊನೆಯಷ್ಟೂ ಉತ್ಪ್ರೇಕ್ಷೆಯಿಲ್ಲವೆಂಬುದನ್ನು ಅವನೇ ಅನುಭವದಿಂದ ಮನಗಂಡಿದ್ದ.

“ ನನಗೆ ಸದ್ಯ ಯಾವ ಚಿಂತೆಯೂ ಇಲ್ಲ ನೋಡಿ. ”

“ ನಿನಗೆ ಯಾವಾಗಲೂ ಚಿಂತೆಯಿರಬಾರದೆಂಬುದೇ ನನ್ನ ಆಶಯ. ”

“ ನನ್ನ ಎರಡು ಮಕ್ಕಳಿಗೆ ದಾರಿಯಾದರೆ ಸಾಕು. ಗಂಡು ಮಕ್ಕಳಾಗಿದ್ದರೆ ನಾನು ಯೋಚನೆ ಮಾಡುತ್ತಿರಲಿಲ್ಲ. ”

“ ನಿನ್ನ ನನ್ನ ಸಂಬಂಧ ಇಷ್ಟು ಬಲಪಟ್ಟಿರುವಾಗ ನಿನ್ನ ಮಕ್ಕಳ ಯೋಗಕ್ಷೇಮ ನಾನು ಮರೆಯುತ್ತೇನೆಯೇ ? ಮಂಜುಳನಿಗೆಷ್ಟು ವಯಸ್ಸು ಈಗ ? ”

“ ಅವಳಿಗೂ ಹತ್ತೊಂಭತ್ತು ತುಂಬಿತು. ಮದುವೆಯ ವಿಷಯ ಅವಳು ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ. ”

“ ನಿಮ್ಮ ಅಣ್ಣ ಇದ್ದಾರಂತಲ್ಲಾ. ಅವರು ಗಂಡು ನೋಡಿ ಮದುವೆ ಪ್ರಯತ್ನ ಮಾಡಬಾರದೇನು ? ”

“ ಅಕ್ಕ, ಅಣ್ಣ ಎಲ್ಲಾ ಇದ್ದಾರೆ. ಈ ಕಾಲದಲ್ಲಿ ಯಾರಿಗೆಯಾರು ಆಗುತ್ತಾರೆ ಹೇಳಿ. ಅವರವರ ಸಂಸಾರ ತಾಪತ್ರಯವೇ ಅವರಿಗೆ ದೊಡ್ಡದು. ನನ್ನ ಯಜಮಾನರು ಸತ್ತಾಗ ಬಂದಿದ್ದ ನಮ್ಮಣ್ಣ ಹೋಗುವಾಗ ನನ್ನ ಕೈಗೆ ನೂರು ರೂಪಾಯಿ ಹಾಕಿ ಹೋದ. ಸಾವು ಸಂಚಯನದ ಖರ್ಚು, ಇಷ್ಟು

ದಿವಸ ಸಂಸಾರ ಖರ್ಚು ಎಲ್ಲಾ ನೂರು ರೂಪಾಯಿಯಲ್ಲಿ ನಡೆಯುತ್ತದೆಂದು ಅವನು ಭಾವಿಸಿಕೊಂಡನೋ ಏನೋ ? "

" ಯಜಮಾನರು ಏನೂ ಆಸ್ತಿ ಮಾಡಲಿಲ್ಲವೇ ? "

" ಯಾಕೆ ಮಾಡಲಿಲ್ಲ. ಅವರು ಮಾಡಿಹೋದ ಆಸ್ತಿಯ ಫಲವೇ ಮಂಜಯ್ಯನವರು. "

" ಹೋಗಲಿ ಬಿಡು. ಸತ್ತವರನ್ನು ನಿಂದಿಸಿ ಏನು ಫಲ ? ಮಂಜುಳನಿಗೆ ಗಂಡು ಗೊತ್ತುಮಾಡು. ಮದುವೆ ವ್ಯವಸ್ಥೆಮಾಡು—ನನ್ನ ಕೈಯಲ್ಲಾಗುವ ಸಹಾಯ ನಾನು ಮಾಡುತ್ತೇನೆ. "

" ನೋಡಿ ನನಗೆ ದಿಕ್ಕು ಯಾರೂ ಇಲ್ಲ. ಎಲ್ಲರೂ ನನ್ನ ಕಿತ್ತುಕೊಂಡು ತಿನ್ನುವವರೇ ವಿನಾ ನನ್ನ ಕಷ್ಟಸುಖಕ್ಕೆ ಒಬ್ಬರೂ ಆಗುವುದಿಲ್ಲ. ನಾನು ಕೆಟ್ಟರೆ ನಗುತ್ತಾರೆ—ಕಲ್ಲೆಸೆಯುತ್ತಾರೆ. "

" ಪ್ರಪಂಚವೇ ಹಾಗೆ. ಅದಕ್ಕೇನು ಮಾಡುವುದಕ್ಕಾಗುತ್ತದೆ. "

" ನೀವೂ ನನ್ನ ವಿಷಯ ತಪ್ಪು ತಿಳಿದುಕೊಳ್ಳಬಾರದು ಎಂದು ಹೇಳಿದೆ. ನನ್ನ ಮನೆಗೆ ಬಂದು ಹೋಗುವವರ ಸಂಖ್ಯೆ ವಿಪರೀತ. ಎಲ್ಲರಿಗೂ ಸೊಬಗಸ್ತಾಗಿ ಊಟ, ಉಪಚಾರ ಆಗಬೇಕು, ನನ್ನ ಮನೆಗೆ ಬಂದು, ತಿಂದು, ಹೊರಗೆ ಹೋಗಿ ನನ್ನನ್ನೇ ದೂರುತ್ತಾರೆ. "

" ಅದಕ್ಕೇನು ಮಾಡುವುದಕ್ಕಾಗುತ್ತದೆ. ಮನೆ ಎಂದ ಕಡೆ ನಾಲ್ಕು ಜನ ಬರುತ್ತಾರೆ— ಹೋಗುತ್ತಾರೆ. ಮನೆಗೆ ಬಂದವರನ್ನು ಉಪವಾಸ ಕಳಿಸುವುದಕ್ಕಾಗುತ್ತದೆಯೇ ? "

ಸರಸ್ವತಮ್ಮ ಮೆಲ್ಲನೆ ನಂಜಪ್ಪನ ಬಳಿಸರಿದು, ಅವನ ಭುಜದಮೇಲೆ ಕುತ್ತಿಗೆಯನ್ನಿಟ್ಟು ಇನಿದನಿಯಲ್ಲಿ

" ನನ್ನ ದೊರೆ ನನ್ನನ್ನು ಪ್ರೀತಿಸುತ್ತಿದ್ದರೆ ಸಾಕು. ನನಗೆ ಏನೂ ಬೇಕಿಲ್ಲ. "

" ಸರಸೂ—ಹೃದಯ ಹೇಗೆ ಬಿಚ್ಚಿ ತೋರಿಸಲಿ. "

ಸರಸ್ವತಮ್ಮ ಮೆಲ್ಲನೆದ್ದು ಕಿಟಕಿಯ ತೆರೆಯನ್ನು ಮುಂದಕ್ಕೆಳೆದಳು.

ನಂಜಪ್ಪನನ್ನು ಮುಖಮಾರ್ಜನೆಗೆ ಸ್ನಾನಗೃಹಕ್ಕೆ ಕರೆದೊಯ್ದು ಅವನಿಗೆ ನೀರು ತುಂಬಿಕೊಟ್ಟು ಸರಸ್ವತಮ್ಮ ಕಾಫಿ ಮಾಡಿ ತರಲು ಅಡಿಗೆಯ ಮನೆಗೆ ಬಂದಳು.

ನಂಜಪ್ಪ ರೂಮಿಗೆ ಬಂದು ಬಟ್ಟೆ ಧರಿಸಿ, ಕಿಸೆಯಿಂದ ಗಡಿಯಾರ ತೆಗೆದು ನೋಡಿದ. ಐದು ಗಂಟೆಯಾಗಿ ಹೋಗಿತ್ತು ಸರಸ್ವತಮ್ಮ ತಂದು ಕೊಟ್ಟ ಕಾಫಿ ಕುಡಿದು ಆವಳನ್ನು ಹತ್ತಿರ ಕರೆದು ಕೂರಿಸಿಕೊಂಡು ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಒಂದು ಕಾಗದದ ಸುರುಳಿಯಿತ್ತ. ಸರಸ್ವತಮ್ಮ ನೋಡಿಕೊಂಡು

"ಇದೇಕೆ ಕೊಡುತ್ತಿರುವಿರಿ? ಕಳ್ಳ ಹೊಕ್ಕ ಮನೆಗೆ ಎಣ್ಣೆ ದಂಡ ಎಂದ ಹಾಗೆ."

"ನಿನಗೇನು ಕೊಟ್ಟರೂ ನನ್ನ ಮನಸ್ಸಿಗೆ ತೃಪ್ತಿಯಿಲ್ಲ."

"ಪುನಃ ಯಾವಾಗ ದರ್ಶನ."

"ನಾಳೆ ಬರುತ್ತೇನೆ."

"ನಾಳೆಯೇ! ರಾತ್ರಿಗೇಕೆ ಬರಬಾರದು?"

ನಂಜಪ್ಪನ ಚಿತ್ತಫಲಕದಮೇಲೆ ಅಂಗಡಿ, ಮನೆ, ಕುಂತಳ ಸುಳಿದು ಹೋದರು. ಸರಸ್ವತಮ್ಮನ ಕರೆಯ ವಿದ್ಯುದಾಕರ್ಷಣೆ ಅವನ ಸ್ಮೃತಿಪಟಲ ದಿಂದ ಉಳಿದೆಲ್ಲವುಗಳನ್ನು ಅಳಿಸಿ ಹಾಕಿದವು.

"ರಾತ್ರಿಗೆ ಬರುತ್ತೇನೆ. ಸ್ವಲ್ಪ ಹೊತ್ತಾಗಬಹುದು."

"ಎಷ್ಟು ಹೊತ್ತಿಗೆ ಬೇಕಾದರೂ ಬನ್ನಿ—ನಾನು ಕಾದಿರುತ್ತೇನೆ."

ನಂಜಪ್ಪ ಹೊರಡಲನುವಾದ. ಹೊರಗೆ ಹೋಗಲು ಕಾಲೇ ಬಾರವು. ಮನಸ್ಸು ಸ್ಥಿರವಾಗಿ ಸರಸ್ವತಮ್ಮನ ಮನೆಯಲ್ಲಿ ನಿಂತಿತ್ತು; ಕರ್ತವ್ಯ ಹೊರಗೆ ಬಾರೆಂದು ಅವನನ್ನೆಳೆಯುತ್ತಿತ್ತು.

ಸರಸ್ವತಮ್ಮ ಅವನನ್ನು ಕಳಿಸಿಕೊಟ್ಟು ಒಳಕ್ಕೆ ಬಂದಳು. ಅವಳ ಮನಸ್ಸು ಹಿಗ್ಗಿನಿಂದ ತುಂಬಿ ಹೋಗಿತ್ತು.

ಮಂಜುಳಾ, ಸುಧೆ ಶಾಲೆಯಿಂದ ಬಂದರು. ಅವರಿಗೆ ತಿಂಡಿ, ಕಾಫಿ

ಯನ್ನಿತ್ತಳು. ಮಕ್ಕಳು ಉಪಾಹಾರ ಮುಗಿಸಿದ ಮೇಲೆ ರೂಮಿಗೆ ಕರೆದು ಮೇಜಿನ ಮೇಲಿದ್ದ ಸೀರೆ, ಕುಪ್ಪಸಗಳನ್ನು ಅವರಿಗೆ ತೋರಿಸಿದಳು. ಮಂಜುಳಾ ಆಶೆಬರುಕತನದಿಂದ ಅವುಗಳನ್ನು ನೋಡುತ್ತಾ

" ಯಾರಿಗಮ್ಮಾ ಇವು—ನನಗೇ ! "

" ಒಂದು ನಿನಗೆ—ಒಂದು ಸುಧೆಗೆ. "

ಮಂಜುಳಾ ನೀಲಿ ಸೀರೆ, ಎರಡು ಕಣಗಳನ್ನಾಯ್ದುಕೊಂಡು ತನ್ನ ರೂಮಿಗೆ ಹೋದಳು. ಸುಧಾ ಉಳಿದಿದ್ದ ಆನಂದವರ್ಣದ ಸೀರೆ ನೋಡುತ್ತಾ

" ಎಲ್ಲಿತ್ತಮ್ಮ ಇಷ್ಟೊಂದು ಸೀರೆ " ಎಂದು ಕೇಳಿದಳು.

" ಯಾರೋ ಪುಣ್ಯಾತ್ಮರು ತಂದುಕೊಟ್ಟರು. "

" ಮಂಜಯ್ಯ ಊರಿಗೆ ಬಂದರೇ ? "

" ಇಲ್ಲ ಸುಧಾ. ಇಷ್ಟು ಬೇಗ ಅವರು ಎಲ್ಲಿ ಬರುತ್ತಾರೆ ಹೇಳು. "

" ಅವರಿಗೆ ಗೊತ್ತಾದರೆ ಸುಮ್ಮನಿರುತ್ತಾರೆಯೇ ? "

" ಕೇಳಿದರೆ ನಮ್ಮ ಸೋದರಮಾವ ತಂದು ಕೊಟ್ಟರೆಂದು ಹೇಳು. "

ಸುಧಾ ಮಾತನಾಡದೆ ಸೀರೆ ಕುಪ್ಪಸ ಹೊತ್ತುಕೊಂಡು ರೂಮಿಗೆ ಹೋದಳು. ಅವಳ ಮನಸ್ಸು ಅಷ್ಟು ಸಂತೋಷಗೊಳ್ಳಲಿಲ್ಲವೆಂದು ಸರಸ್ವತಮ್ಮ ಕಂಡುಕೊಳ್ಳದಿರಲಿಲ್ಲ.

ಸರಸ್ವತಮ್ಮನ ಮನೆಬಿಟ್ಟ ನಂಜಪ್ಪ ನೇರವಾಗಿ ಅಂಗಡಿಗೆ ಹೋದ. ಅಂದಿನ ವ್ಯಾಪಾರದ ವಿವರ ಪರಿಶೀಲಿಸಿದ. ಮ್ಯಾನೇಜರ್ ನಾಗಣ್ಣ

" ಇನ್‌ಕಮ್ ಟ್ಯಾಕ್ಸ್ ಲೆಕ್ಕ ಸಿದ್ಧವಾಗಲೇ ಇಲ್ಲ " ಎಂದ.

" ಅವರು ಇವತ್ತು ಬಂದಿದ್ದರೇನು ? "

" ಹೂ. ಬಂದಿದ್ದರು. "

" ನಾಳೆ ನಾಡಿದ್ದು ಕುಳಿತುಕೊಂಡು ಲೆಕ್ಕ ಸಿದ್ಧಮಾಡೋಣ. ಇನ್ನು ಯಾರಾದರೂ ಬಂದಿದ್ದರೆ ? "

" ಒಬ್ಬ ಮುದುಕಮ್ಮ ಬಂದಿದ್ದಳು. ಏನೂ ತಿಳಿಸಲಿಲ್ಲ. ತಿರುಗಿ ಬಂದು ಕಾಣುತ್ತೇನೆ ಎಂದು ಹೇಳಿ ಹೋದಳು. "

"ಸರಿ."

ಎಂದು ಬೇಸರಪಟ್ಟುಕೊಂಡು ನಂಜಪ್ಪ ಎದ್ದು ನಿಂತು

"ಬೆಳಿಗ್ಗೆ ನಾನು ಬೇಗ ಬಂದುಬಿಡುತ್ತೇನೆ. ನೀನೂ ಎಂಟು ಗಂಟೆಯ ಹೊತ್ತಿಗೆ ಬಂದು ಅಂಗಡಿ ಬಾಗಿಲು ತೆಗಿ"

ಎಂದು ಹೇಳಿ 'ಅರುಣೋದಯ ನಾಟ್ಯಶಾಲೆ'ಯ ಕಡೆ ಹೊರಟ. ರಿಹರ್ಸಲ್ ನಡೆದಿತ್ತು. ಗುಂಪಿನಲ್ಲಿ ಕುಂತಳನನ್ನು ಕಾಣಲಿಲ್ಲ. ಅವಳನ್ನರಸಿಕೊಂಡು ನಂಜಪ್ಪ ಮನೆಯೊಳಗೆ ಪ್ರವೇಶಿಸಿದ. ಕುಂತಳ ನೆಪಮಾತ್ರಕ್ಕೆ ಕೈಯಲ್ಲಿ ಯಾವುದೋ ಕಸೂತಿ ಹಿಡಿದು ಕುಳಿತಿದ್ದಳು. ಅತ್ತು ಅತ್ತು ಅವಳ ಕಣ್ಣುಗಳು ಕೆಂಪಗಾಗಿದ್ದವು. ನಂಜಪ್ಪ ಅವಳ ಸಮೀಪಕ್ಕೆ ಹೋಗಿ ಮೃದುವಾಗಿ ತಲೆನೇವರಿಸಿದ. ಕುಂತಳ ಅವನ ಕೈಕಿತ್ತು ಎಸೆದಳು.

"ಬಹಳ ಕೋಪ ಬಂದಿರುವ ಹಾಗಿದೆ."

ಕುಂತಳ ಉತ್ತರ ಕೊಡಲಿಲ್ಲ.

"ಕೋಪವಾರಲಿ—ನಿಧಾನವಾಗಿ ಬರುತ್ತೇನೆ."

ಎಂದು ಹೇಳಿ ಮುಂದೆ ಅಡಿಯಿಟ್ಟ. ಕುಂತಳ ಕತ್ತೆತ್ತಿ ಅವನನ್ನು ನೋಡಿ

"ಇಲ್ಲಿ ಬನ್ನಿ" ಎಂದಳು.

ನಂಜಪ್ಪ ಅವಳ ಪಕ್ಕದಲ್ಲಿ ಹೋಗಿ ಕುಳಿತ. ಕುಂತಳ ಅವನನ್ನಪ್ಪಿಕೊಂಡು ಬಿಕ್ಕಿಬಿಕ್ಕಿ ಅತ್ತುಬಿಟ್ಟಳು.

"ಏಕೆ ಕುಂತಳೂ—ಏನಾಯಿತು—ಯಾರು ಏನೆಂದರು?"

"ನೀವೇಕೆ ಹೀಗೆ ಮಾಡುತ್ತೀರಿ?"

"ನಾನೇನು ಮಾಡಿದೆ."

"ನನ್ನ ವಿಚಾರಿಸುವುದೇ ಬಿಟ್ಟುಬಿಟ್ಟರಲ್ಲ."

"ಅಂಗಡಿ ಕೆಲಸ ವಿಪರೀತವಾಗಿದೆ. ಸ್ವಲ್ಪವೂ ಪುರಸತ್ತಿಲ್ಲ. ಈ ಇನ್‌ಕಮ್‌ಟ್ಯಾಕ್ಸ್ ಡಿಪಾರ್ಟಮೆಂಟಿನವರು ಬೇರೆ ಜೀವ ಹಿಂಡುತ್ತಿದ್ದಾರೆ."

"ಅಮ್ಮ ಆ ಕಡೆಯೇ ಬಂದಳಂತೆ. ಅಂಗಡಿಯಲ್ಲಿ ನೀವು ಕಾಣಲಿಲ್ಲ

ಎಂದು ಹೇಳಿದಳು."

"ಪುಸ್ತಕಗಳು ಹೊತ್ತುಕೊಂಡು ಇನ್‌ಕಮ್ ಟ್ಯಾಕ್ಸ್ ಕಛೇರಿಗೆ ಹೋಗಿದ್ದೆನೆಂದು ಕಾಣುತ್ತದೆ."

ಕುಂತಳೆಯ ಮುಗ್ಧ ಮನಸ್ಸಿಗೆ ನಂಜಪ್ಪ ಸುಳ್ಳು ಹೇಳುತ್ತಿದ್ದಾನೆಂದು ಭಾಸವಾಗಲಿಲ್ಲ.

"ಇಷ್ಟು ಸಣ್ಣ ವಿಷಯಕ್ಕೆ ನೀನು ಕೋಪಮಾಡಿಕೊಂಡು ರಿಹರ್ಸಲ್ಲಿಗೂ ಹೋಗದೆ ಮುರುತು ಕೂತುಕೊಳ್ಳುವುದೇ ?"

"ನನ್ನದು ತಪ್ಪಾಯಿತು. ಕ್ಷಮಿಸಿ."

"ಹೋಗಲಿ ಬಿಡು ಚಿಂತೆಯಿಲ್ಲ" ಎಂದದ್ದೇ ಎದ್ದ.

ನಂಜಪ್ಪನ ವರ್ತನೆ ಕಂಡು ಕುಂತಳನ ಮನಸ್ಸು ವ್ಯಥೆಗೊಂಡಿತು.

"ಹೊರಟುಬಿಟ್ಟರೇನು ?"

"ಹೋಗಬೇಕಾಗಿದೆ. ಬೆಳಿಗ್ಗೆಯಿಂದ ಮನೆಗೇ ಹೋಗಿಲ್ಲ. ರಾತ್ರಿ ಕೂತುಕೊಂಡು ಲೆಕ್ಕ ಸಿದ್ಧಮಾಡಬೇಕಾಗಿದೆ."

ಕುಂತಳನಿಗೆ ದುಃಖ ತುಂಬಿಬಂತು. ಅವಳು ಮಾತನಾಡಲಿಲ್ಲ.

ಕುಮಾರ ರಿಹರ್ಸಲ್ ಮುಗಿಸಿ ಸಾಹುಕಾರರಿಗಾಗಿ ಕಾದಿದ್ದ.

"ಏನು ಸಮಾಚಾರ ಕುಮಾರ್"

ಎಂದು ನಂಜಪ್ಪ ಕೇಳಿದ. ಅವನ ಮಾತಿನ ಧೋರಣೆ ನೋಡಿ ಕುಮಾರ

"ನೀವು ಹೇಳಬೇಕು ಸ್ವಾಮಿ. ನನಗೇನು ಗೊತ್ತಿದೆ."

"ಇವತ್ತು ಅಲ್ಲೇ ಊಟವಾಯಿತಯ್ಯಾ."

"ಸಂತೋಷ. ಕುಂತಳ ಬಡ್ಕೊಳ್ಳೋಕೆ ಷುರು ಮಾಡಿದ್ದಾಳೆ. ಕೋತಿ ತಿಂದು ಮೇಕೆ ಬಾಯಿಗೆ ಒರಸಿದಹಾಗೆ ಮಾಡಿರುವಿರಿ ?"

"ಏನಾಯಿತು ಪ್ರಮಾದ ?"

"ಇನ್ನೂ ಪ್ರಮಾದವಾಗಿಲ್ಲ. ನೀವು ಇಲ್ಲಿಗೆ ಬರದೇ ಇದ್ದರೆ ಕುಂತಳ ನನ್ನನ್ನು ಆಕ್ಷೇಪಿಸುತ್ತಾಳೆ."

" ಬಂದಿದ್ದೀನಲ್ಲಾ."

" ಹೀಗೆ ಬಂದು ಹಾಜರಿ ಹಾಕಿ ಹೋದರೆ ಅವಳಿಗೆ ಸಮಾಧಾನವಾಗುತ್ತದೆಯೇ ? ಈ ಪಡ್ಡೆ ಹುಡುಗಿ ಬಿಟ್ಟು ಆ ಮುದುಕಿಯಲ್ಲಿ ಏನು ಕಾಣುತ್ತೀರಿ ಸ್ವಾಮಿ."

ಕುಮಾರನ ಅಗಾಧ ಮೌಢ್ಯವನ್ನು ಕಂಡು ನಂಜಪ್ಪನಿಗೆ ವಿಷಾದವಾಯಿತು.

" ಹುತ್ತದಲ್ಲಿರುವ ಹಾವಿನ ವಿಷಯ ಹಾವಾಡಿಗನಿಗೆ ಮಾತ್ರ ಗೊತ್ತು ಕುಮಾರ್. ನಿನಗೆ ಹೇಗೆ ಗೊತ್ತಾಗುವುದಕ್ಕೆ ಸಾಧ್ಯ ?"

" ಹುತ್ತದಲ್ಲಿ ಹಾವಿದೆಯೆನ್ನುವ ವಿಶಯ ಮಾತ್ರ ನನಗೆ ಗೊತ್ತು ಸ್ವಾಮಿ."

" ಇವತ್ತು ಸರಸೂ ಒಂದು ಮಾತು ಹೇಳಿದಳು ಕುಮಾರ್."

" ಅನೇಕ ಮಾತುಗಳು ಹೇಳಿರಬೇಕು."

" ಅವೆಲ್ಲಾ ಮುಖ್ಯವಲ್ಲ. ಇದು ಕೇಳು – ನೀವೊಬ್ಬರೇ ನನಗೆ ತೃಪ್ತಿ ಕೊಟ್ಟವರು ಎಂದು ಹೇಳಿದಳು."

" ಈ ಮಾತು ಅವಳು ಇನ್ನೂ ಎಷ್ಟು ಜನಕ್ಕೆ ಹೇಳಿದ್ದಾಳೋ ?"

" ಛೆ ! ಛೆ ನೋಡಿದರೆ ಗೊತ್ತಾಗುವುದಿಲ್ಲವೇ ? "

" ನಿಮ್ಮನ್ನು ನೋಡಿದರೆ ನನಗೆ ಭಯವಾಗುತ್ತದೆ ಸ್ವಾಮಿ. ಈ ಸಂಬಂಧ ನಿಮ್ಮನ್ನು ಎಲ್ಲಿಗೆ ಒಯ್ಯುತ್ತದೆಯೋ ಏನೋ! ನಾನು ಹೇಳುವ ವಿಷಯ ನಮ್ಮಿಬ್ಬರಲ್ಲಿಯೇ ಇರುವ ಹಾಗಿದ್ದರೆ ನಿಮಗೊಂದು ರಹಸ್ಯ ತಿಳಿಸುತ್ತೇನೆ. "

" ಸರಸೂ ವಿಷಯವೇ ? "

" ಹೂ ! ನೀವು ಅವರ ಹತ್ತಿರ ಪ್ರಸ್ತಾಪಿಸಕೂಡದು. "

" ಇಲ್ಲ—ಹೇಳು. "

" ಸರಸ್ವತಮ್ಮ ಒಂದು ದಿನ ನನ್ನನ್ನೂ ಮೋಹಿಸಿದ್ದರು. "

ಎಂದು ತನ್ನ ಅನುಭವದ ಕತೆಯನ್ನು ಕೂಲಂಕಷವಾಗಿ ನಿರೂಪಿಸಿ

" ಅದು ಶುದ್ಧ ಗೇಂದಿ ಹೆಂಗಸು ಸ್ವಾಮಿ. ನಿಮ್ಮ ವಿಷಯದಲ್ಲಿ ಸತ್ಯ

ವಾಗಿರುತ್ತಾಳೆ ಎನ್ನುವ ನಂಬಿಕೆ ನನಗಿಲ್ಲ."

"ಆ ರಾತ್ರಿ ನೀನೇಕೆ ಸುಮ್ಮನಿದ್ದೆ?"

"ಭಗವಂತ ನನ್ನನ್ನು ನಿತ್ಯ ಬ್ರಹ್ಮಚಾರಿ ಮಾಡಿರುವ ವಿಷಯ ನಿಮಗೆ ಗೊತ್ತಿಲ್ಲವೇ?"

"ಅನುಮಾನವಿತ್ತು—ಈಗ ದೃಢಪಟ್ಟ ಹಾಗಾಯಿತು. ಹೋಗಲಿ ಬಿಡು. ಅವರ ಧರ್ಮಕರ್ಮ ಅವರದು—ನಾವು ಅದಕ್ಕೆ ಹೊಣೆಯೇ? ಹೊತ್ತಾಯಿತಯ್ಯಾ—ಮನೆಗೆ ಹೋಗುತ್ತೇನೆ."

"ನೇರವಾಗಿ ಮನೆಗೇ ಹೋಗುತ್ತೀರಾ ಸಾಹುಕಾರರೇ?"

"ಬಹಳ ತನಿಖೆ ಮಾಡಬಾರದು ಕುಮಾರ್."

ಎಂದು ನಂಜಪ್ಪ ಸ್ವಲ್ಪ ಬಿರುಸಾಗಿ ನುಡಿದ.

"ಹೋಗಲಿ ಬಿಡಿಸ್ವಾಮಿ. ನಿಮಗೇಕೆ ಕೋಪ"

ಎಂದು ಕುಮಾರ್ ಸಮಾಧಾನ ಮಾಡಲೆತ್ನಿಸಿದ.

ನಂಜಪ್ಪ ಮನೆಗೇ ಹೋದ. ಹೆಂಡತಿಯನ್ನು ಮಾತನಾಡಿಸುವ ಶಾಸ್ತ್ರ ಮುಗಿಸಿ ತಟ್ಟೆ ಹಾಕಿಕೊಂಡು ಊಟಕ್ಕೆ ಕುಳಿತ. ಗಂಡನಿಗೆ ಬಡಿಸುತ್ತಾ ಸ್ವರ್ಣಮ್ಮ ಮೆಲ್ಲನೆ ಕೇಳಿದಳು

"ಮಧ್ಯಾಹ್ನ ಊಟಕ್ಕೆ ಬರಲಿಲ್ಲ."

"ಹೂ! ಬರುವುದಕ್ಕಾಗಲಿಲ್ಲ. ಇನ್‌ಕಮ್ ಟ್ಯಾಕ್ಸ್ ಲೆಕ್ಕ ತಲೆ ತಿನ್ನುತ್ತಾ ಇದೆ. ನಮ್ಮ ಲೆಕ್ಕ ಸುಳ್ಳು ಎಂದು ಸರ್ಕಾರದವರು ತಕರಾರು ಮಾಡುತ್ತಿದ್ದಾರೆ."

"ಇದು ಬಗೆಹರಿಯುವುದು ಯಾವಾಗ?"

"ಲೆಕ್ಕ ಒಪ್ಪಿಕೊಂಡರೆ ಒಂದೆರಡು ದಿವಸಗಳಲ್ಲಿ ಮುಗಿದುಹೋಗುತ್ತದೆ. ಅವರು ಒಪ್ಪಿಕೊಳ್ಳದಿದ್ದರೆ ತಿಂಗಳುಗಟ್ಟಳೆ ಎಳೆಯುತ್ತದೆ. ನೋಡು—ಈಗ ಅನ್ನ ತಿಂದವನೇ ಅಂಗಡಿಗೆ ಓಡಬೇಕು."

"ಬೆಳಿಗ್ಗೆ ಹೋದರೆ ಆಗುವುದಿಲ್ಲವೇ?"

"ಬೆಳಿಗ್ಗೆ ಎಂಟು ಗಂಟೆಗೆ ಹಾಳು ಇನ್ಸ್‌ಪೆಕ್ಟರ್ ಬರುತ್ತಾನಂತೆ.

ಅವನೇನಾದರೂ ಹೆಚ್ಚುಕಡಿಮೆ ಮಾಡಿಬಿಟ್ಟರೆ ನಾನು ಜೈಲ್ ಮುಖ ನೋಡ ಬೇಕಾಗುತ್ತದೆ. ”

ಸ್ವರ್ಣಮ್ಮ ನಡುಗಿ ಹೋದಳು. ಗಂಡ ಕೋಟು ಧರಿಸಿಕೊಂಡು ಹೊರಡಲು ಸಿದ್ಧವಾದಾಗ ‘ ಬೇಡ ’ ವೆಂದು ಹೇಳಲು ಅವಳಿಗೆ ಬಾಯಿ ಬರಲಿಲ್ಲ.

ಹೆಂಡತಿಯ ಕೈಯ್ಯಿಂದ ಬೇಗ ಬಿಡುಗಡೆ ಹೊಂದಿದುದಕ್ಕೆ ನಂಜಪ್ಪನಿಗೆ ಸಂತೋಷವಾಯಿತು. ಆದರೆ ತಾನು ಹೇಳಿದ ಸುಳ್ಳನ್ನು ಕೂಡಲೇ ನಂಬಿದ ಹೆಂಡತಿಯ ಸರಳತೆಯನ್ನು ಕಂಡು ದುಃಖವೂ ಆಯಿತು. ದಾರಿಯಲ್ಲಿ ಬರುತ್ತಾ ‘ ಛೆ ! ಈಗಲೂ ಮನೆಗೆ ಹೋಗಿ ಬಿಡಲೇ ’ ಎಂದುಕೊಂಡ. ಮನೆಯ ಧ್ಯಾನ ಮಾಡುತ್ತಲೇ ಮುನ್ನಡೆದ. ಅವನ ಕಾಲುಗಳು ಮಾವಳ್ಳಿಯತ್ತ ಸಾಗಿದವು.

ರಸ್ತೆಯಲ್ಲಿ ಯಾರೂ ಜನ ಓಡಿಯಾಡುತ್ತಿರಲಿಲ್ಲ. ಅಲ್ಲಿ ಇಲ್ಲಿ ಒಂದೊಂದು ಮನೆಯಲ್ಲಿ ಪರೀಕ್ಷೆಗೆ ಓದುವ ಹುಡುಗರು ದೀಪ ಉರಿಸುತ್ತಿದ್ದರು. ನಂಜಪ್ಪ ಸರಸ್ವತಮ್ಮನ ಮನೆಯ ಮುಂದೆ ಬಂದ. ಆವಳ ಮನೆಯಲ್ಲಿ ದೀಪ ಕಾಣ ಲಿಲ್ಲ. ‘ ಮಲಗಿ ಬಿಟ್ಟಿರಬಹುದು ’ ಎಂದುಕೊಂಡು ‘ ಮನೆಗೆ ಹಿಂದಿರುಗಲೇ ’ ಎಂದು ತನ್ನನ್ನು ತಾನು ಪ್ರಶ್ನಿಸಿಕೊಂಡ. ಮರುಕ್ಷಣವೇ ‘ ಛೆ ! ಇಷ್ಟುದೂರ ಇಲ್ಲಿಯವರೆಗೆ ಬಂದು ಈಗ ಮನೆಗೆ ಹಿಂದಿರುಗುವುದೇ ’ ಎನ್ನುವ ನಿರ್ಧಾರ ಮೂಡಿತು.

ಮೆಲ್ಲನೆ ಸರಸ್ವತಮ್ಮನ ರೂಮಿನ ಕಿಟಕಿಯ ಬಳಿ ಬಂದು ಶಬ್ದ ಮಾಡಿದ. ಉತ್ತರ ಬರಲಿಲ್ಲ. ಧ್ವನಿಯನ್ನು ಆದಷ್ಟು ಅಡಗಿಸಿಕೊಂಡು ‘ ಸರಸೂ— ಸರಸೂ ’ ಎಂದು ಕೂಗಿದ.

ಒಳಗಿನಿಂದ ಸರಸ್ವತಮ್ಮ ‘ ಯಾರು ? ’ ಎಂದಳು.

“ ನಾನು ಸರಸೂ—ನಾನು. ಬಾಗಿಲು ತೆಗೆ. ”

ಸರಸ್ವತಮ್ಮ ಎದ್ದು ರೂಮಿನ ದೀಪ ಹಚ್ಚಿ ಕಿಟಕಿಯಲ್ಲಿ ನಂಜಪ್ಪನ ಮುಖ ನೋಡಿ ‘ ನಂಜಪ್ಪನೆ ಹೌದು ’ ಎಂದು ಧೈರ್ಯಮಾಡಿಕೊಂಡು

ತೊಟ್ಟಿಯ ಬಾಗಿಲು ತೆಗೆದಳು. ನಂಜಪ್ಪ ಅವಳನ್ನು ಅಲ್ಲಿಯೇ ಭರದಿಂದ ಅಪ್ಪಿದ.

"ಎಷ್ಟು ಗಂಟೆ ?"

"ಹನ್ನೊಂದಿರಬಹುದು."

"ಇಷ್ಟು ಹೊತ್ತು ಕಾದೆ. ನೀವು ಬರುವುದಿಲ್ಲವೆಂದುಕೊಂಡು ಇದೇ ಹೋಗಿ ಮಲಗಿದೆ."

"ನಿದ್ರೆ ಬಂದಿತ್ತೇ ?"

"ಇಲ್ಲ—ಕಣ್ಣು ಹತ್ತುವುದಕ್ಕಾರಂಭಿಸಿತ್ತು. ಇದೇಕೆ ಇಷ್ಟು ತಡ ಮಾಡಿದಿರಿ ?"

"ಅಂಗಡಿ, ನಾಟ್ಯಶಾಲೆ, ಮನೆ ಮೂರು ಕಡೆಗೂ ಹೋಗಿ ಬಂದೆ."

"ಊಟವೆಲ್ಲಿ ಮಾಡಿದಿರಿ ?"

"ಮನೆಯಲ್ಲಿ."

"ಬೆಳಿಗ್ಗೆ ಏಕೆ ಬರಲಿಲ್ಲವೆಂದು ಮನೆಯಲ್ಲಿ ಕೇಳಿದರೇನು !"

"ಕೇಳಿದಳು—ಅಂಗಡಿಯಲ್ಲಿ ತುಂಬ ಕೆಲಸವೆಂದು ಹೇಳಿಬಿಟ್ಟೆ."

"ರೂಮಿಗೆ ನಡೆಯಿರಿ. ನಾನು ಕಾಲು ತೊಳೆದುಕೊಂಡು ಬರುತ್ತೇನೆ."

ನಂಜಪ್ಪ ರೂಮಿಗೆ ಬಂದು ನೋಡಿದ. ಅವನು ಬೆಳಿಗ್ಗೆ ತಂದು ಕೊಟ್ಟಿದ್ದ ಕರ್ ಟೆಕ್ಸ್ ಮಗ್ಗಲಾಸಿಗೆ ಹಾಸಿಗೆಯ ಮೇಲೆ ಹಾಸಲ್ಪಟ್ಟಿತ್ತು. ಮೇಜಿನ ಮೇಲೆ ಸಿಪ್ಪೆ ತೆಗೆದ ಕಿತ್ತಳೆಯ ಕುಸುಮಗಳು, ಸುಣ್ಣಹಾಕಿದ ಎಲೆ, ಕಾಸಿದ ಹಾಲು.

"ಪಾಪ! ನನಗಾಗಿ ಎಷ್ಟು ಕಾದಳೋ ಏನೋ."

ಎಂದು ನಂಜಪ್ಪ ಪಶ್ಚಾತ್ತಾಪಪಟ್ಟುಕೊಂಡ.

ಸರಸ್ವತಮ್ಮ ಒಳಗೆ ಬಂದವಳೇ ನಂಜಪ್ಪನ ಕಡೆ ಮುಗಳ್ನಗೆ ಬೀರಿ

"ಹಾ! ಅಂತೂ ಬಂದಿರಲ್ಲಾ !" ಎಂದಳು.

"ಏಕೆ ? ನಾನು ಬರುವುದಿಲ್ಲ ಎಂದುಕೊಂಡಿದ್ದೆಯಾ ?"

"ಇವತ್ತು ನೀವು ಬರದೇ ಇರಬೇಕಾಗಿತ್ತು. ನಾಳೆ ನಿಮ್ಮನ್ನು ನಾನು

ಮಾತೇ ಆಡಿಸುತ್ತಿರಲಿಲ್ಲ."

ನಂಜಪ್ಪ ಸರಸ್ವತಮ್ಮನ ಕೈ ಹಿಡಿದೆಳೆದುಕೊಂಡು ತೊಡೆಯಮೇಲೆ ಕುಳ್ಳಿರಿಸಿಕೊಂಡು ಅವಳ ಬಾಯಿಗೆ ಕಿತ್ತಳೆಯ ಕುಸುಮವನ್ನಿಟ್ಟ. ಸರಸ್ವತಿ ಅದನ್ನು ಅವನ ಬಾಯಿಗೆ ಸಾಗಿಸಿದಳು. ನಂಜಪ್ಪ ಕೆಣಕುವ ಧ್ವನಿಯಲ್ಲಿ

"ಬೆಳಿಗ್ಗೆ ಬಂದಿದ್ದೆನಲ್ಲಾ—ಈಗ ಬರದಿದ್ದರೇನಂತೆ!" ಎಂದ.

"ಬೆಳಿಗ್ಗೆ ಊಟಮಾಡುತ್ತೇವಲ್ಲಾ—ಈಗ ಮಾಡದಿದ್ದರೇನಂತೆ!"

ಸರಸ್ವತಿ ಬಲವಂತಮಾಡಿ ನಂಜಪ್ಪನಿಗೆ ಲೋಟದಲ್ಲಿದ್ದ ಹಾಲು ಕುಡಿಸಿದಳು.

"ಎಲ್ಲಾ ನನಗೆ ಕುಡಿಸಿಬಿಟ್ಟೆಯಲ್ಲಾ!"

"ಹೂ. ಕಷ್ಟಪಡುವವರು ನೀವು ತಾನೆ."

ಅವಳ ಒಂದೊಂದು ಮಾತೂ ನಂಜಪ್ಪನನ್ನು ಉದ್ರಿಕ್ತನನ್ನಾಗಿ ಮಾಡುತಿತ್ತು.

"ಮಕ್ಕಳಿಗೆ ಗಡಿಯಾರ ತೋರಿಸಿದೆಯಾ?"

"ತೋರಿಸಿದೆ."

"ಏನಂದರು?"

"ಯಾರು ಕೊಡಿಸಿದರು ಎಂದು ಕೇಳಿದರು. ನನ್ನ ಪ್ರೀತಿಯ ಗಂಡ ಕೊಡಿಸಿದರು ಎಂದು ಹೇಳಿದೆ."

"ನಿಜವಾಗಿ ನನ್ನನ್ನು ಪ್ರೀತಿಯ ಗಂಡ ಎಂದು ಭಾವಿಸಿಕೊಂಡಿರುವೆಯಾ?"

"ನೀವು ನನ್ನ ರಾಜರು ಎಂದು ಭಾವಿಸಿಕೊಂಡಿದ್ದೇನೆ."

"ಸರಸಾ, ಎಂಥಾ ಜೇನು ಸವಿಯಿದೆಯೇ ನಿನ್ನ ಮಾತಿನಲ್ಲಿ."

"ರಾಜೂ, ರಾತ್ರಿಯೆಲ್ಲಾ ಹೀಗೇ ಮಾತಿನಲ್ಲಿ ಕಳೆಯೋಣವೇ?"

ನಂಜಪ್ಪ ಎದ್ದು ಕೋಟು ಕಳಚಿದ. ಸರಸ್ವತಿ ಅಡಿಕೆ ತುಂಬಿದ ಎಲೆಯನ್ನು ಅವನ ಬಾಯಿಗೆ ತುಂಬಿ, ತಾನೂ ಎಲೆ ಅಡಿಕೆ ಹಾಕಿಕೊಂಡಳು. ದೀಪ ಆರಿತು.

ಯಾವದೋ ಹೊತ್ತಿನಲ್ಲಿ ನಂಜಪ್ಪ ಕುಡಿಯುವುದಕ್ಕೆ ನೀರು ಕೇಳಿದ. ಸರಸ್ವತಿ ಎದ್ದು ನೀರನ್ನು ಗ್ಲಾಸಿಗೆ ಬಗ್ಗಿಸಿಕೊಟ್ಟಳು. ನಂಜಪ್ಪ ನೀರು ಕುಡಿದು ಮಲಗಿದ. ಸರಸೂ ಅವನ ಮೈ ಬಳಸಿ

" ನಿದ್ರೆ ಮಾಡಬೇಡಿ. ತುಂಬ ಮಾತನಾಡಿ, "

" ಕಂಠಪೂರ್ತಿ ಹೊಡೆದವನನ್ನು ಹಾಡು ಎಂದು ಹೇಳಿದ ಹಾಗಾಯಿತು"

" ಮಾತಾಡಿ ರಾಜೂ—"

" ನಿನಗೆ ಸಂತೋಷವಾಯಿತೇ ? "

" ಆಗಿರುವ ಹೊತ್ತಿಗೇ ನಿದ್ರೆ ಮಾಡಬೇಡಿ ಎಂದು ಹೇಳಿದ್ದು. "

" ಸರಸಾ, ಈ ಸಂತೋಷದಲ್ಲಿ ನಾಳೆ ನಿನಗೆ...."

" ಆದರಾಗಲಿ. ನಿಮ್ಮ ಮಗುವನ್ನು ನಾನು ತಿಪ್ಪೆಗೆ ಬಿಸಾಡುತ್ತೇನೆಯೇ ? "

" ಕೇಳಿದವರಿಗೆ ಏನು ಹೇಳುತ್ತೀ ? "

" ನನ್ನದಲ್ಲ ಎಂದು ನೀವು ಹೇಳುವುದಿಲ್ಲವಷ್ಟೆ ? "

" ಛೆ ! ನಾನು ಹೇಳುವೆನೇ ? "

" ಇನ್ನು ನನಗೇನು ಭಯ ? "

" ಸರಸೂ, ನಿನ್ನನ್ನೊಂದು ಮಾತು ಕೇಳುತ್ತೇನೆ. ಬೇಸರಪಟ್ಟುಕೊಳ್ಳಬೇಡ. "

" ಇಲ್ಲ—ಕೇಳಿ. "

" ಕುಮಾರ ಒಂದು ದಿನ ಇಲ್ಲಿ ಮಲಗಿದ್ದನೇ? "

" ಅದೇ ! "

ಎಂದು ಸರಸ್ವತಮ್ಮ ಗಹಗಹಿಸಿ ನಕ್ಕಳು.

" ಅದರ ವಿಷಯ ಹೇಳಿದರೆ ನೀವು ನಗುವಿರೇನೋ ? "

" ಇಲ್ಲ ಹೇಳು. "

" ಕುಮಾರನ ಬಗ್ಗೆ ನನಗೆ ಅನುಮಾನ ಬಂದಿತ್ತು. ಒಂದು ದಿನ ಪರೀಕ್ಷೆಮಾಡಿದೆ. "

" ಪರೀಕ್ಷೆಯ ಫಲಿತಾಂಶ. "

" ಅದೊಂದು ಮರದ ತುಂಡು ಎಂಬುದು ನಿರ್ಧಾರವಾಯಿತು. ನಿಮಗೆ ಈ ವಿಷಯ ಯಾರು ಹೇಳಿದರು ? "

" ಕುಮಾರನೇ ಹೇಳಿದ. "

" ಅವನು ಇಷ್ಟು ನಾಚಿಗೆಗೆಟ್ಟವ ಎಂದು ನಾನು ತಿಳಿದಿರಲಿಲ್ಲ. "

" ಸರಸಾ, ನನ್ನಲ್ಲಿ ನಿನಗೆ ತೃಪ್ತಿಯಾಗುವುದೇ ? "

" ನನಗೆ ತೃಪ್ತಿಯಾದರೆ ನಿಮ್ಮಲ್ಲಿಯೇ...."

" ನಿನ್ನ ಮನಸ್ಸು ಬೇರೆ ಕಡೆಗೆ ಎಳಸುವುದಿಲ್ಲವಷ್ಟೆ? "

" ಮೈ ಕೆಡಿಸಿಕೊಳ್ಳಲೇ ? "

" ಮೈ ಮಾತ್ರವೇ ಅಲ್ಲ—ಮನಸ್ಸೂ ಕೆಡಿಸಿಕೊಳ್ಳಬಾರದು. "

" ಹಾಗೇ ಆಗಲಿ. ನಾಳೆ ನಾನು ಮಂಜಯ್ಯನವರಿಂದ ಬಿಡುಗಡೆಯಾದ ಮೇಲಾದರೂ ನಾವು ಜತೆಯಲ್ಲಿರಲು ಸಾಧ್ಯವೇ ? "

" ಏಕೆ ಸಾಧ್ಯವಿಲ್ಲ. "

" ಕುಂತಳನನ್ನು ಏನುಮಾಡುವಿರಿ ?"

" ಅವಳದ್ದು ಯಾವ ದೊಡ್ಡ ವಿಷಯ ಹೇಳು. "

" ಹಾಗಂದರಾಗುತ್ತದೆಯೇ "—ಅವಳೂ ಹೆಂಗಸು. "

" ಕುಮಾರನೂ ಗಂಡಸು. "

" ಅಷ್ಟೇ ಏನು ? "

" ಇನ್ನೇನು ತಿಳಿದುಕೊಂಡಿರುವೆ. "

" ಹುಡುಗಿ ತುಂಬಾ ಚಲುವೆ. "

" ನಿಜ—ಸೊಗಸಾದ ಕಾಗದದ ಹೂವು. "

" ರಾಜೂ—ನನ್ನ ಕೈಬಿಡಬೇಡಿ. "

" ನನ್ನ ಅಂತರಂಗದ ಸ್ಥಿತಿ ಪರಮಾತ್ಮನಿಗೆ ಗೊತ್ತು. ಸರಸಾ, ನಮ್ಮಿಬ್ಬರ ಮಧ್ಯೆ ಮಂಜಯ್ಯ ಒಬ್ಬನಿದ್ದಾನೆಂಬುದು ನನಗೆ ಮರೆಯಲು ಸಾಧ್ಯವೇ ಆಗುವುದಿಲ್ಲ. "

" ಅವರನ್ನು ಲೆಕ್ಕಕ್ಕೇ ಇಟ್ಟುಕೊಳ್ಳಬೇಡಿ. "

" ಹೇಗೆ ಸಾಧ್ಯ ಹೇಳು—ನಾಡಿದ್ದು ಒಕ್ಕರಿಸುತ್ತಾನಲ್ಲಾ. "

" ನಾಳೆ—ನಾಳಿದ್ದು ಪೂರ್ಣವಾಗಿ ನಿಮ್ಮದು. "

" ಆದರೆ ಮೂರನೆಯ ದಿವಸ—ಒಂದು ಕೆಲಸವೇಕೆ ಮಾಡಬಾರದು? "

" ಏನು ಹೇಳಿ. "

" ಮದರಾಸ್ ನೋಡಿರುವೆಯಾ? "

" ಇಲ್ಲ. "

" ಆಚೆನಾಡಿದ್ದು ನಾವಿಬ್ಬರೂ ಹೊರಟು ನಾಲ್ಕುದಿವಸ ಮದರಾಸಿನಲ್ಲಿ ಏಕೆ ಇದ್ದು ಬರಬಾರದು. "

" ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವವರು ಯಾರು? "

" ಗುರುತಿನವರು ಯಾರೂ ಇಲ್ಲವೇ? "

" ಇದ್ದಾರೆ. ಅವರಿಗೆ ಮೊದಲೇ ತಿಳಿಸಬೇಕು. ಅಚೆ ನಾಡಿದ್ದು ಬೇಡಿ–ಒಂದೆರಡು ದಿನ ತಡೆದು ಹೋಗೋಣ. "

" ಏಕೆ? "

" ಅವರು ಊರಿಗೆ ಬರುವುದನ್ನು ತಿಳಿದು ನಾನು ಹೋಗುವುದು ಚೆನ್ನಲ್ಲ. "

" ನಿನಗಿನ್ನೂ ಅವನ ಮೇಲಿನ ವ್ಯಾಮೋಹ ಹೋಗಿಲ್ಲ. "

" ಖಂಡಿತವಾಗಿ ವ್ಯಾಮೋಹವಲ್ಲ. ನಿಮ್ಮ ನಿಮ್ಮಲ್ಲಿ ಕಿತ್ತಲಾಟ ಆರಂಭವಾಗುವುದು ಒಳ್ಳೆಯದಲ್ಲ. ನಿಷ್ಕಾರಣವಾಗಿ ಎಲ್ಲರ ಹೆಸರೂ ಬೀದಿಗೆ ಬರುತ್ತದೆ. "

" ಅವನಿಗಷ್ಟು ಗೈರತ್ತಿದೆಯೇ? "

" ಅದನ್ನೇಕೆ ಪರೀಕ್ಷೆ ಮಾಡಬೇಕು. "

ತಾನು ಹೇಳಿದ ತಾರೀಖಿಗೆ ಹೊರಡಲು ಸರಸ್ವತಿ ಒಪ್ಪಲಿಲ್ಲವೆಂದು ನಂಜಪ್ಪನ ಮನಸ್ಸು ತುಸು ಅಸಮಾಧಾನಗೊಂಡಿತು. ಅವಳು ಒಪ್ಪಿಕೊಂಡು ದಕ್ಕೆ ಅವನ ಮನಸ್ಸು ಸಂತೋಷಿಸಿತು. ಅವನ ಮನಸ್ಸಿನ ತುಯ್ಯಲಾಟವನ್ನು

ಸರಸ್ವತಿ ಗ್ರಹಿಸಿ, ಲಲ್ಲೆಗರೆಯುತ್ತಾ, ನಂಜಪ್ಪನ ಮುಖಕ್ಕೆ ಮುಖವಿಟ್ಟು

" ನಾನು ನಿಮ್ಮವಳು ರಾಜೂ, ಎಂದಿಗೂ ನಿಮ್ಮವಳೇ. ನೀವು ಕರೆದ ಕಡೆಗೆ ಬರುತ್ತೇನೆ. ಮುತ್ತಮ್ಮನ ಮನೆಗೆ ನಿಮ್ಮ ಜತೆ ಬರಲಿಲ್ಲವೇ? " ಎಂದಳು.

ಅವಳ ಮಾತಿನಲ್ಲಿ ಸತ್ಯವಿದೆಯೆಂದು ಭಾವಿಸಿಕೊಂಡು ನಂಜಪ್ಪ ಸಮಾಧಾನ ತಂದುಕೊಂಡ.

ಬೆಳಿಗ್ಗೆ ಮಕ್ಕಳು ಏಳುವ ಮುನ್ನವೇ ನಂಜಪ್ಪನನ್ನು ಎಬ್ಬಿಸಿ ಕಳಿಸಬೇಕೆಂದು ಸರಸ್ವತಿ ಯೋಚಿಸಿಕೊಂಡಳು. ಆದರದು ಸಾಧ್ಯವಾಗಲಿಲ್ಲ. ಸರಸ್ವತಿ ಎದ್ದು ನೋಡಿದಾಗ ನಂಜಪ್ಪನಿಗೆ ಚೆನ್ನಾಗಿ ನಿದ್ರೆ ಹತ್ತಿತ್ತು, ಅವನನ್ನು ಎಬ್ಬಿಸಲು ಅವಳಿಗೆ ಮನಸ್ಸಾಗಲಿಲ್ಲ.

ತಾಯಿ ಏಳುವ ಹೊತ್ತಿಗೆ ಏಳುತ್ತಿದ್ದವಳು ಸುಧಾ. ಮಂಜುಳನನ್ನು ತಿವಿದು ಎಬ್ಬಿಸಬೇಕಾಗಿತ್ತು. ಸುಧಾ ಯಥಾಪ್ರಕಾರ ಎದ್ದು ಬಂದು ಅಡಿಗೆಯ ಮನೆಯಲ್ಲಿ ಕುಳಿತಳು. ನಂಜಪ್ಪ ತಾಯಿಯ ರೂಮಿನಿಂದ ಹೊರಟದ್ದುದನ್ನು ಕಂಡಳು. ಸರಸ್ವತಮ್ಮ ಅವನಿಗೆ ಮುಖಕ್ಕೆ ನೀರು ಕೊಟ್ಟುದೂ, ಕಾಫಿ ತೆಗೆದುಕೊಂಡುಹೋಗಿ ಕೊಟ್ಟುದೂ, ಸ್ವಲ್ಪ ಹೊತ್ತು ಇಬ್ಬರೂ ಬಾಗಿಲು ಮುಂದಕ್ಕೆ ಮಾಡಿದುದೂ, ನಂಜಪ್ಪ ಸರಸ್ವತಮ್ಮನಿಗೆ ಹೇಳಿ ಹೊರಟದ್ದು ಎಲ್ಲವನ್ನೂ ಸುಧಾ ನೋಡಿದಳು, ತಾಯಿ ನಂಜಪ್ಪನನ್ನು ಕಳುಹಿಸಿಕೊಟ್ಟು ಅಡಿಗೆಯ ಮನೆಗೆ ಹಿಂದಿರುಗಿದ ಮೇಲೆ ಸುಧಾ ತಾಯಿಯನ್ನೊಮ್ಮೆ ದಿಟ್ಟಿಸಿ ನೋಡಿ ಕತ್ತು ತಗ್ಗಿಸಿದಳು.

ಒಬ್ಬಳ ಮನಸ್ಸಿನಲ್ಲಾಗುತ್ತಿದ್ದುದು ಇನ್ನೊಬ್ಬಳಿಗೆ ಚೆನ್ನಾಗಿ ಅರ್ಥವಾಗುತ್ತಿತ್ತು. ಇಬ್ಬರೂ ಮಾತನಾಡಲಿಲ್ಲ.

" ನಿನ್ನ ಮನಸ್ಸಿನಲ್ಲೇನಿದೆ ಹೇಳಬಿಡು ಸುಧಾ "

ಎಂದು ಕೇಳಬೇಕೆಂದು ಸರಸ್ವತಿಯ ಮನಸ್ಸು ತವಕಗೊಂಡಿತು. ಸುಧೆಯೇ ಬಾಯಿಬಿಟ್ಟಳು.

" ಇನ್ನುಮೇಲೆ ಇವರೂ ಬಂದು ಹೋಗುತ್ತಾರೇನೋ? "

"ಬರದಿದ್ದರೆ ಆಗುತ್ತದೆಯೇ ಸುಧಾ. ಸಂಸಾರ ನಡೆಯುವುದು ಹೇಗೆ? ಅವರು ಸರಿಯಾಗಿದ್ದಿದ್ದರೆ ಇಷ್ಟಕ್ಕೆಲ್ಲಾ ಏಕೆ ಅವಕಾಶವಾಗುತ್ತಿತ್ತು ?"

ಸುಧೆ ಒಂದೇ ಗುಟುಕಿಗೆ ಕಾಫಿ ಮುಗಿಸಿ ಅಲ್ಲಿಂದ ಎದ್ದು ಹೋದಳು. ಸರಸ್ವತಮ್ಮನ ಕಣ್ಣುಗಳಿಂದ ನಾಲ್ಕು ಹನಿಗಳು ತೊಟ್ಟಿಕ್ಕಿದ್ದವು.

೯

ಉಡುಪಿಗೆ ಹೋಗಿದ್ದ ಮಂಜಯ್ಯ ನಿರೀಕ್ಷಣೆ ಮೀರಿ ಅಲ್ಲಿ ನಿಲ್ಲಬೇಕಾಯಿತು. ಅವನು ಹಿಂದೆ ಹೋದಾಗಲೇ ಒಂದು ಜಮೀನು ಮಾತನಾಡಿ ಬಂದಿದ್ದ. ಅಣ್ಣತಮ್ಮಂದಿರಲ್ಲಿ ಸ್ವಲ್ಪ ತಕರಾರು ಇದ್ದುದರಿಂದ ಕೂಡಲೆ ಖರೀದಿಯ ವ್ಯವಸ್ಥೆಮಾಡಲಿಲ್ಲ. ತನ್ನ ಲಾಯರು ಬೈಲೂರು ರಾಮಕೃಷ್ಣ ರಾಯರಿಗೆ ವಹಿಸಿ ಬಂದಿದ್ದ. ರಾಮಕೃಷ್ಣರಾಯರು ಜಗಳ ಪರಿಹರಿಸಿ, ಮಂಜಯ್ಯನಿಗೆ ಕಾಗದ ಬರೆದಿದ್ದರು. ಖರೀದಿ ಪತ್ರ ಮಾಡಿಕೊಂಡು ಬರುವುದಕ್ಕೆ ಮಂಜಯ್ಯ ಹಣ ಗಂಟು ಕಟ್ಟಿಕೊಂಡು ಹೋದ. ಕಾಗದ ಪತ್ರದ ಕೆಲಸ ತಡವಾಗಲಿಲ್ಲ. ಮಂಜಯ್ಯ ಹೊರಡುವ ಸಿದ್ಧತೆಯಲ್ಲಿರುವ ವೇಳೆಗೆ ಅವನ ವಯಸ್ಸಾದ ತಾಯಿ ಹಾಸಿಗೆ ಹತ್ತಿ ಮಲಗಿಬಿಟ್ಟಳು. ತಾಯಿಯ ಗತಿ ಅತ್ತಲೋ ಇತ್ತಲೋ ಎಂದಿದ್ದಾಗ ಮಂಜಯ್ಯ ಪ್ರಯಾಣ ಮಾಡುವುದು ಅನುಚಿತವಾಗಿ ಕಂಡುಬಂದಿತು. ಬೆಂಗಳೂರು ಹೊಟೇಲಿನ ಚಿಂತೆ ಮಂಜಯ್ಯನನ್ನು ಬಹಳ ಬಾಧಿಸುತ್ತಿತ್ತು. ಯಜಮಾನಿಕೆಯನ್ನು ತನ್ನ ಅಣ್ಣನ ಮಗ ಸೂರ್ಯನಾರಾಯಣಪ್ಪನಿಗೆ ವಹಿಸಿ ಬಂದಿದ್ದರೂ ಅವನ ಮನಸ್ಸಿಗೆ ನೆಮ್ಮದಿಯಿರಲಿಲ್ಲ.

ನಾಲ್ಕೈದು ದಿನಗಳ ದಕ್ಷ ಚಿಕಿತ್ಸೆಯಿಂದ ಮಂಜಯ್ಯನ ತಾಯಿ ಗಂಡಾಂತರದಿಂದ ಪಾರಾದಳು. ಮಂಜಯ್ಯ ಹೊಟೇಲಿಗೆ ಬೇಕಾಗುವ ಸಾಮಾನುಗಳನ್ನು ಉಡುಪಿಯಲ್ಲಿ ಸಂಗ್ರಹಿಸಿಕೊಂಡು ಬೆಂಗಳೂರಿಗೆ ಪ್ರಯಾಣ ಬೆಳಸಿದ.

ಸಂಜೆ ಬೆಂಗಳೂರಿನಲ್ಲಿ ಇಳಿದೊಡನೆಯೇ ತನ್ನ ಹೊಟೇಲಿಗೆ ಹೋಗಿ ಒಂದು ವಾರದ ಆದಾಯ ವೆಚ್ಚ ಪರಾಮರ್ಶಿಸಿದ. ತಾನು ಇಲ್ಲದ ವೇಳೆಯಲ್ಲಿ ಯಾವ ಗಡಿಬಿಡಿಯೂ ಆಗದಿದ್ದುದಕ್ಕೆ ಮಂಜಯ್ಯನ ಮನಸ್ಸಿಗೆ ಸಮಾಧಾನವಾಯಿತು. ಹೊಟೇಲ್ ಕೆಲಸ ಕಾರ್ಯ ಮುಗಿಯುವ ವೇಳೆಗೆ ರಾತ್ರಿ ಹನ್ನೆ

ರಡು ಹೊಡೆದಿತ್ತು. ಸರಸ್ವತಿಯನ್ನು ನೋಡಬೇಕೆಂದು ಮಂಜಯ್ಯನ ಮನಸ್ಸು ಮೊರೆಯುತ್ತಿತ್ತು. ಊರಿನಿಂದ ಬಂದವನು ಮನೆಗೂ ಹೋಗಿರಲಿಲ್ಲ. ಇಲ್ಲದ ರಾದ್ಧಾಂತವಾಗಬಾರದೆಂದು ಮನೆಯ ಕಡೆ ಸಪ್ಪೆಮೋರೆ ಹಾಕಿಕೊಂಡು ಹೊರಟ.

ಬೆಳಿಗ್ಗೆ ಎಂಟು ಗಂಟೆಯ ಸಮಯ: ಸರಸ್ವತಿ ಮನೆಯ ಹೊರಗೆ ಸಾರಿಸುತ್ತಿದ್ದಳು. ಮಂಜಯ್ಯನ ಹೊಟೇಲ್ ಮಾಣಿಯೊಬ್ಬ ಒಂದು ಗಂಟು, ಒಂದು ಬುಟ್ಟಿ ಹೊತ್ತುಕೊಂಡು ಬಂದ.

ಸರಸ್ವತಮ್ಮ ಅವನನ್ನು ಕೇಳಿದಳು

" ಯಜಮಾನರು ಊರಿಗೆ ಬಂದರೇನೋ ? "

" ಬಂದರಮ್ಮ—ನಿನ್ನೆ ರಾತ್ರಿ. ಇದನ್ನು ಕೊಟ್ಟು ಬಾರೆಂದರು. "

ಸರಸ್ವತಿ ಗಂಟುಬಿಚ್ಚಿ ಅದರಲ್ಲಿದ್ದ ಅವಲಕ್ಕಿ, ಗೋಡಂಬಿ, ಸಕ್ಕರೆಯ ಪೊಟ್ಟಣವನ್ನೂ, ಬುಟ್ಟಿಯಲ್ಲಿದ್ದ ಸೌತೇಕಾಯಿಗಳನ್ನೂ ಒಳಗೆ ತೆಗೆದಿಟ್ಟಳು.

ಮಂಜಯ್ಯ ಊರಿಗೆ ಬಂದ ಸಮಾಚಾರ ಕೇಳಿ ಸರಸ್ವತಿಗೆ ತಳಮಳವುಂಟಾಯಿತು. ಮಂಜಯ್ಯ, ನಂಜಪ್ಪ ಪರಸ್ಪರ ಭೇಟಿಯಾಗದಂತೆ ಅವರವರ ಕಾಲ ನಿರ್ಧರಿಸುವ ವಿಷಯ ಚಿಂತಿಸುತ್ತ ಕುಳಿತಳು.

ವ್ಯಾಪಾರ ನಡೆಯುತ್ತಿದ್ದಂತೆ, ಸೂರ್ಯನಾರಾಯಣಪ್ಪನನ್ನು ' ಗಲ್ಲದ ' ಮೇಲೆ ಕೂಡಿಸಿ ಮಂಜಯ್ಯ ಹನ್ನೊಂದು ಗಂಟೆಯ ಸುಮಾರಿಗೆ ಸರಸ್ವತಿಯ ಮನೆಗೆ ಬಂದ. ಸರಸ್ವತಿ ನಗೆಯ ಬೆಳುದಿಂಗಳು ಪಸರಿಸುತ್ತಾ ಅವನನ್ನು ಸ್ವಾಗತಿಸಿ

" ನಿನ್ನೆ ಸಂಜೆಯೇ ಬಂದಿರಂತೆ ! "

" ಹೌದು. "

" ಇಲ್ಲಿಗೆ ಬಂದು ಹೋಗುವುದಕ್ಕೆ ಆಗಲಿಲ್ಲವೇನೋ ? "

" ಹೋಟ್ಲ್ ಗತಿಯೇನಾಯಿತು ನೋಡೋಣವೆಂದು ಹೋದೆ—ಅಲ್ಲೇ ಹನ್ನೆರಡು ಗಂಟೆಯಾಯಿತು. "

" ಊರಿಗೆ ಹೋದವರು ನಮ್ಮನ್ನು ಮರೆತೇ ಬಿಡೋದೆ? "

" ಏನು ಮಾಡಲಿ ಹೇಳು. ನನ್ನ ತಾಯಿಗೆ ಸಖತ್ ಖಾಯಿಲೆಯಾಯಿತು. "

" ಈಗ ಹೇಗಿದ್ದಾರೆ. "

" ಪ್ರಾಣಭಯ ತಪ್ಪಿದೆ. "

" ತುಂಬ ವಯಸ್ಸಾಗಿದೆಯೆಂದು ಕಾಣುತ್ತದೆ. "

" ವಯಸ್ಸೂ ಆಗಿದೆ. ನಿಶ್ಶಕ್ತಿ. "

" ನೀವು ಊರಿಗೆ ಬರುವ ವೇಳೆಗೆ ನಾನು ಹೋಗಿ ಬಿಡಬಾರದೆಂದು ನಿಮ್ಮನ್ನು ಕಾಯುತ್ತಾ ಕುಳಿತಿದ್ದೇನೆ. ಅದಕ್ಕೋಸ್ಕರ ನಾನು ಎಷ್ಟು ಮಾತು ಕೇಳಬೇಕಾಯಿತು ಬಲ್ಲಿರಾ ? "

" ಯಾರಿಂದ? "

" ನಮ್ಮಣ್ಣನಿಂದ. ನೀವು ಊರಿಗೆ ಹೋದ ಎರಡು ದಿವಸದ ಮೇಲೆ ಅವನು ಮೈಸೂರಿನಿಂದ ಬಂದ. ಈಗಲೇ ಹೊರಡು ಎಂದು ಒತ್ತಾಯ ಮಾಡಿದ. "

" ಏನು ಸಮಾಚಾರ. "

" ಅವನ ಹೆಂಡತಿಗೆ ಬಳೆ ತೊಡಿಸುತ್ತಾರಂತೆ. ಇದೇ ಸಂದರ್ಭದಲ್ಲಿ ಮಂಜುಳನಿಗೆ ಗಂಡನ್ನೂ ನೋಡಿದಂತಾಗುತ್ತದೆ ಎಂದು ಹೇಳಿದ. "

" ನೀನು ಹೋದರೆ ಬರುವುದು. "

" ನಾಲ್ಕೈದು ದಿವಸದಲ್ಲಿ ಬಂದು ಬಿಡುತ್ತೇನೆ. ಮಕ್ಕಳ ಮೇಲೆ ಮನೆ ಬಿಟ್ಟು ಎಷ್ಟು ದಿವಸ ಹೊರಗೆ ನಿಲ್ಲುವುದು. ಪಾಪ! ಅವರಿಗೆ ಸ್ಕೂಲು ಬೇರೆ ಇರುತ್ತದೆ. "

" ಮನೆಯಲ್ಲಿ ಯಾರಿರುತ್ತಾರೆ. "

" ನನ್ನ ಗುರುತಿನ ಒಂದು ಮುದುಕಿ ಇದೆ. ಅದು ಬಂದು ಇಲ್ಲೇ ಇರುತ್ತದೆ. ನೀವೂ ವಿಚಾರಿಸಿಕೊಳ್ಳುತ್ತಿರಬೇಕು. "

" ನೀನು ಹೊರಡುವುದು. "

" ನಾಡಿದ್ದು ಬೆಳಿಗ್ಗೆ. "

" ನಾನು ಊರಿಗೆ ಬರುವವರೆಗೆ ದೊಡ್ಡ ಮನಸ್ಸುಮಾಡಿ ಇದ್ದೆಯಲ್ಲಾ—ಅಷ್ಟೇ ಸಂತೋಷ. "

" ನಿಮ್ಮ ಮಾತು ಯಾವದು ನಾನು ತೆಗೆದುಹಾಕುತ್ತೇನಂದ್ರೆ. "

ಮಂಜಯ್ಯ ಗಡಿಯಾರ ನೋಡಿಕೊಂಡು ಹೊರಡಲು ಎದ್ದುನಿಂತ. ಸರಸ್ವತಿ ಉಪಚರಿಸುತ್ತಾ

" ಇದೇನು, ಈಗ ತಾನೆ ಬಂದಿರಿ. ಹೊರಟೇ ಬಿಟ್ಟಿರಿ. ಕಾಫಿಯಾದರೂ ಮಾಡಿಕೊಡುತ್ತೇನೆ. "

" ಬೇಡ—ಈಗೇಕೆ ಕಾಫಿ. "

" ಪುನಃ ದರ್ಶನ. "

" ಸಂಜೆ ಏಳು ಗಂಟೆಗೆ ಬರುತ್ತೇನೆ. "

ಮಂಜಯ್ಯ ಹೋದ ಅರ್ಧ ಗಂಟೆಯಲ್ಲಿ ನಂಜಪ್ಪನ ಸವಾರಿ ಚಿತ್ತೈಸಿತು. ಸರಸ್ವತಿಯ ಮುಖ ಗಂಭೀರವಾಗಿದ್ದುದನ್ನು ನೋಡಿ ನಂಜಪ್ಪ

" ಯಜಮಾನ ಊರಿಗೆ ಬಂದಹಾಗೆ ಕಾಣುತ್ತದೆ. "

" ನಿನ್ನೆ ಸಂಜೆ ಬಂದರಂತೆ. ಇದೇ ಇಲ್ಲಿಗೆ ಬಂದುಹೋದರು. "

" ನೀನು ಪ್ರಯಾಣಮಾಡುವ ವಿಷಯ ತಿಳಿಸಿದೆಯಾ ? "

" ತಿಳಿಸಿದೆ. ನಾಡಿದ್ದು ಬೆಳಿಗ್ಗೆ ಪ್ರಯಾಣವೆಂದು ಹೇಳಿದೆ. "

" ಏತಕ್ಕೆ ಹೋಗಬೇಕು ಎಂದು ಕೇಳಲಿಲ್ಲವೇ ? "

" ಕೇಳಿದರು. ನನ್ನ ಅಣ್ಣನ ಹೆಂಡತಿಗೆ ಬಳೆ ತೊಡಿಸುತ್ತಾರೆ ಎಂದು ಹೇಳಿದೆ. "

" ಇವತ್ತು ಎಷ್ಟು ಹೊತ್ತಿಗೆ ಒಕ್ಕರಿಸುತ್ತದೆ ಪ್ರಾರಬ್ಧ. "

" ಅವರ ಮೇಲೆ ಏಕಷ್ಟು ಕೋಪಾಂದ್ರೆ ನಿಮಗೆ. ಅವರೇನು ಮಾಡಿದರು ? "

" ಆ ವಿಷಯ ಜ್ಞಾಪಿಸಬೇಡ ಸರಸೂ—ನನ್ನ ಮೈಯುರಿದು ಹೋಗುತ್ತದೆ. "

" ರಾತ್ರೀಗೆ ಬರುತ್ತೀರಾ? "

" ಅವನು ಇರುತ್ತಾನೇನೋ ? "

" ಅವರು ಏಳು ಗಂಟೆಗೆ ಬರುತ್ತಾರೆ. ಒಂಭತ್ತು ಗಂಟೆಗೆಲ್ಲಾ ಹೋಗಿ ಬಿಡುತ್ತಾರೆ. "

" ನಾನು ಒಂಭತ್ತೂವರೆಗೆ ಬರುತ್ತೇನೆ. ಅವನು ಹೋದುದನ್ನು ತಿಳಿಸು. "

" ಕಿಟಕಿ ತೆರೆ ತೆಗೆದಿರುತ್ತೇನೆ. "

" ನಾಡಿದ್ದು ಬೆಳಿಗ್ಗೆ ಪ್ರಯಾಣ ಖಂಡಿತ ತಾನೆ. "

" ನೀವು ಅನುಮಾನಿಸುತ್ತಿರುವ ಹಾಗಿದೆಯಲ್ಲ. "

" ನನಗೇನೂ ಅನುಮಾನವಿಲ್ಲ. ಹೊರಡುವುದಕ್ಕೆ ಏನು ಸಿದ್ಧತೆಬೇಕೋ ಮಾಡಿಕೋ. ಮನೆಯ ಖರ್ಚಿಗೆ ಮಕ್ಕಳ ಕೈಗೆ ಸ್ವಲ್ಪ ದುಡ್ಡುಕೊಟ್ಟು ಬಾ. "

" ರಾತ್ರಿ ಬರುವುದನ್ನು ಮರೆಯುವುದಿಲ್ಲ ತಾನೇ. "

" ನಾನೇ ಮರೆಯುವುದು ! ಇಲ್ಲಿಂದ ಹೋಗುವುದಕ್ಕೆ ನನಗೆ ಮನಸ್ಸಿಲ್ಲ."

ಆದರೆ ಕರ್ತವ್ಯ ನಂಜಪ್ಪನನ್ನು ಎಳೆಯುತ್ತಿತ್ತು. ಊರಿಗೆ ಪ್ರಯಾಣ ಮಾಡುವ ಮುನ್ನ ಇನ್‌ಕಮ್ ಟ್ಯಾಕ್ಸ್ ಲೆಕ್ಕ ಮುಗಿಸಬೇಕಾಗಿತ್ತು. ಸರಸ್ವತಿಯ ಮನೆಯಿಂದ ನೇರವಾಗಿ ತನ್ನ ಮನೆಗೆ ಹೋದ.

ರಾತ್ರಿ ಎಂಟು ಗಂಟೆಗೆ ಸರಿಯಾಗಿ ಮಂಜಯ್ಯ ಸರಸ್ವತಿಯ ಮನೆಗೆ ಬಂದ. ಮಕ್ಕಳು ರೂಮಿನಲ್ಲಿ ಓದಿಕೊಳ್ಳುತ್ತಿದ್ದರು. ಮಂಜಯ್ಯ ಬಂದುದನ್ನು ನೋಡಿ ಅವರೆದ್ದು ತಮ್ಮ ರೂಮಿಗೆ ಹೋದರು.

ಮಂಜಯ್ಯನ ಮನಸ್ಸನ್ನು ಪ್ರಫುಲ್ಲಗೊಳಿಸಲು ಸರಸ್ವತಿ ಪ್ರಯತ್ನಿಸಿದಳು. ಅವಳು ಊರಿಗೆ ಹೊರಡುವ ವಿಷಯ ಅವನನ್ನು ಖಿನ್ನನನ್ನಾಗಿ ಮಾಡಿತು.

" ನಾನು ದೇಶಾಂತರ ಹೋಗುತ್ತೇನೆಂದು ತಿಳಿದುಕೊಂಡಿರುವಿರಾ ? "

" ಇಲ್ಲ. ನಾನು ಊರಿಗೆ ಬಂದಕೂಡಲೆ ನೀನು ಹೊರಡಬೇಕಾಗಿವೆಯಲ್ಲಾ ಎಂದು ವಿಷಾದವಾಯಿತು. "

" ನಿಮ್ಮದು ಬಹಳ ಅನುಮಾನ ಪ್ರಕೃತಿ. "

" ಅನುಮಾನವಿದ್ದಿದ್ದರೆ ನಿನ್ನನ್ನು ಬಿಟ್ಟು ಊರಿಗೆ ಹೋಗುತ್ತಿದ್ದೆನೇ ?"

" ಖಂಡಿತವಾಗಿಯೂ ಯಾವ ಅನುಮಾನವೂ ಇಲ್ಲವೇ ? "

" ಮಂಜುನಾಥಸ್ವಾಮಿಯ ಆಣೆಗೂ ಇಲ್ಲ. "

" ಒಂದು ವಿಷಯ ನಿಮ್ಮನ್ನು ಕೇಳಬೇಕೆಂದು ಬಹಳ ದಿವಸಗಳಿಂದ ಕಾಯುತ್ತಿದ್ದೇನೆ. "

" ಕೇಳು. "

" ನೀವು ತಪ್ಪು ತಿಳಿದುಕೊಳ್ಳಬಾರದು. "

" ಇಲ್ಲ—ಹೇಳು. "

" ನಮ್ಮ ಯಜಮಾನರ ಸಾಲದ ಪತ್ರ ನೀವು ಹಿಂದಿರುಗಿಸಿಲ್ಲ. "

" ಆ ವಿಷಯವನ್ನೇ ನಾನು ಮರೆತು ಬಿಟ್ಟಿದ್ದೇನೆ. ಈಗ ಏಕೆ ಅದರ ಪ್ರಸ್ತಾಪ. "

" ಈ ಸಾಲದ ತೂಗುಕತ್ತಿ ನನ್ನ ಕುತ್ತಿಗೆಯ ಮೇಲಿದ್ದರೆ ನನಗೆ ಯಾವ ಸಮಾಧಾನವಿರುತ್ತದೆ. "

" ನಾನು ಆ ವಿಷಯ ಮಾತಾಡಿಯೇ ಇಲ್ಲವಲ್ಲ. "

" ನೀವು ಆಡಿಲ್ಲ—ಆದರೆ ನನ್ನ ಮನಸ್ಸಿನಲ್ಲಿ ಆ ಅಳುಕು ಇದ್ದೇಇದೆ. "

" ಇಷ್ಟೇತಾನೆ—ನಾಳೆ ಕಾಗದ ತಂದು ನಿನ್ನ ಮುಂದೆ ಹರಿದು ಹಾಕಿ ಬಿಡುತ್ತೇನೆ. ಆಗ ನಿನಗೆ ನಿರಾತಂಕವಾಗುವುದೋ ? "

" ನಿಮ್ಮದು ದೊಡ್ಡ ಮನಸ್ಸೆಂಬುದನ್ನು ನಾನು ಬಲ್ಲೆ. "

" ಅತ್ತಿಗೆಗೆ ಬಳೆ ತೊಡಿಸಿದರೆ ನೀನು ಏನಾದರೂ ಕೊಡಬೇಕು. "

" ಕೊಡುವುದು ಸಂಪ್ರದಾಯ. ಈಗ ನಾನೇನೂ ಕೊಡುವುದಕ್ಕೆ ಹೋಗುವುದಿಲ್ಲ. ಹೋಗಿಬರುವ ಗಾಡಿಯ ಖರ್ಚೇ ಸಾಕಾಗುತ್ತದೆ. "

" ಹಾಗೆ ಮಾಡಬೇಡ. ಮುಂದೆ ನಿಮ್ಮಣ್ಣನಿಂದ ನಿನಗೆ ಬಹಳ ಕೆಲಸವಾಗಬೇಕಾಗಿದೆ. ಅವನ ಹೆಂಡತಿಯನ್ನು ಈಗ ಸಂತೋಷಪಡಿಸುವುದು ಒಳ್ಳೆಯದು."

ಎಂದು ಹೇಳಿ ಸರಸ್ವತಿಯ ಕೈಗೆ ನೂರು ರೂಪಾಯಿ ಹಾಕಿದ. ಸರ

ಸ್ವತಿ ಹಣವನ್ನು ಮೇಜಿನ ಡ್ರಾಯರಿನಲ್ಲಿಟ್ಟು ಮಂಜಯ್ಯನ ಕಡೆ ತಿರುಗಿ ನಸು ನಗೆ ಬೀರಿದಳು. ಅವಳ ನಗೆಯಲ್ಲಿ ಹಲವು ಅರ್ಥ ಒಡಮೂಡಿದ್ದುದು ಮಂಜಯ್ಯನ ಮಂದಮತಿಗೆ ಭಾಸವಾಗಲಿಲ್ಲ.

ಮಂಜಯ್ಯ ಮನೆಬಿಟ್ಟು ಹೊರಗೆ ಹೋಗುವುದನ್ನೆ ನಂಜಪ್ಪ ಕಾಯುತ್ತಿದ್ದ. ಕಿಟಕಿಯ ತೆರೆ ಸರಿದುದು ಕಣ್ಣಿಗೆ ಬಿತ್ತು. ನಂಜಪ್ಪ ಒಳಗೆ ಪ್ರವೇಶ ಮಾಡಿದ.

ಸರಸ್ವತಿಯ ಮನಸ್ಸು ಪ್ರಸನ್ನವಾಗಿದ್ದುದನ್ನು ಕಂಡು ನಂಜಪ್ಪನ ಮುಖ ಗಂಟಿಕ್ಕಿತು. ' ಮಂಜಯ್ಯನಲ್ಲಿ ತನಗೇನೂ ಸುಖವಿಲ್ಲವೆಂದು ಇವಳು ಹೇಳುತ್ತಿರುವುದು ನಿಜವೇ ' ಎನ್ನುವ ಸಂಶಯ ಅವನನ್ನು ಬಾಧಿಸತೊಡಗಿತು.

ಮುಗುಳ್ನಗೆಯ ಜಾಲ ಬೀಸುತ್ತ ಸರಸ್ವತಿ ಬಂದು ನಂಜಪ್ಪನ ತೊಡೆಯೇರಿ ಕುಳಿತು ಅವನ ಕೋಟು ತೆಗೆಯುತ್ತಾ

" ನೀವು ಹೇಳಿದ ಕೆಲಸ ಮಾಡಿದೆ."

" ಏನದು ?"

" ಅವರ ಸಾಲಪತ್ರದ ವಿಷಯ. ಮಂಜಯ್ಯನವರು ನಾಳೆ ಅದನ್ನು ತಂದು ನನ್ನ ಮುಂದೆ ಹರಿದು ಬಿಸುಡಲು ಮಾತು ಕೊಟ್ಟಿದ್ದಾರೆ."

" ಹೋಗಲಿ ಬಿಡು. ಒಂದು ಗ್ರಹಚಾರ ಹರಿದಹಾಗಾಯಿತು. ಹೊಟೇಲ್ ಭಟ್ಟ ಇನ್ನೇನು ಹೇಳಿದ ? "

" ಏನೂ ಹೇಳಲಿಲ್ಲ. ನಮ್ಮ ಅತ್ತಿಗೆಗೆ ಉಡುಗೊರೆ ಕೊಳ್ಳುವುದಕ್ಕೆ ನೂರು ರೂಪಾಯಿ ಕೊಟ್ಟು ಹೋದರು.

ಆ ಸನ್ನಿವೇಶದ ವಿಕಟಸ್ಥಿತಿ ನಂಜಪ್ಪನಿಗೂ ನಗೆ ಬರಿಸಿತು.

" ಅದು ನಮ್ಮ ಪ್ರಯಾಣದ ಖರ್ಚಿಗೆ ಎಂದು ನೀನು ಮಂಜಯ್ಯನಿಗೆ ಹೇಳಬೇಕಾಗಿತ್ತು. "

" ಹೋಗಿಯಂದ್ರೆ. ನೀವು ಅವರನ್ನು ಬಲು ಕಳಪೆಮಾಡುತ್ತೀರಿ. "

" ಅನ್ನ ಮಾರಿಕೊಂಡು ಜೀವಿಸೋನ ದುಡ್ಡು ನನಗೇಕೆ ಹೇಳು. ಸುಮ್ಮನೆ ತಮಾಷೆಗಂಡೆ. ಹಿಡಿ—ನಿನ್ನ ಪ್ರಯಾಣಸಿದ್ಧತೆ ಚೆನ್ನಾಗಿ ಮಾಡಿಕೋ. "

ಎಂದು ಸರಸ್ವತಿಯ ಕೈಗೆ ನೂರು ರೂಪಾಯಿ ಹಾಕಿದ.

"ನಾಡಿದ್ದು ಬೆಳಿಗ್ಗೆ ನನ್ನನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗುವವರು ಯಾರು ?"

"ನಾನು ಕುಮಾರನನ್ನು ಕಳಿಸಿಕೊಡುತ್ತೇನೆ."

"ನೀವು...."

"ನಾನು ಸ್ಟೇಷನ್ನಿನಲ್ಲಿ ನಿನಗಾಗಿ ಕಾದಿರುತ್ತೇನೆ."

"ನಾಳೆ ನೀವು ಇಲ್ಲಿಗೆ ಬಂದು ಹೋಗುವಿರಿ ತಾನೆ."

"ಬರದೆ ಇರುತ್ತೇನೆಯೇ! ನಾಳೆ ರಾತ್ರಿ ಬರುವುದಕ್ಕಾಗುವುದಿಲ್ಲ. ಮಧ್ಯಾಹ್ನ ಬರುತ್ತೇನೆ."

ಅಂದು ನಂಜಪ್ಪ ರಾತ್ರಿಯೆಲ್ಲಾ ಸರಸ್ವತಿಯ ಮನೆಯಲ್ಲಿ ಕಳೆಯಲಿಲ್ಲ. ಎರಡು ಗಂಟೆಯ ವೇಳೆಗೆದ್ದು ತನ್ನ ಮನೆಗೆ ಹೊರಟ.

ಸರಸ್ವತಿಯ ದೇಹಕ್ಕೆ ಆಯಾಸವಾಗಿತ್ತು. ಆದರೆ ಮನಸ್ಸು ಆನಂದ ತುಂದಿಲವಾಗಿತ್ತು. ಎರಡು ವ್ಯಾಘ್ರಗಳ ಜೊತೆಯಲ್ಲಿ ತಾನಾಡುತ್ತಿದ್ದ ಚೆಲ್ಲಾಟ ಕಂಡು ಅವಳಿಗೇ ಆಶ್ಚರ್ಯವಾಯಿತು. ನಂಜಪ್ಪ, ಮಂಜಯ್ಯ ಇಬ್ಬರೂ ಶನಗಾಗಿ ಪಡುತ್ತಿದ್ದ ಧಾವತಿ ಕಂಡು ಅವಳು ನಕ್ಕಳು. ಅವಳ ನಗೆಯಲ್ಲಿ ತಿರಸ್ಕಾರ, ಅಣಕ ಸ್ಪಷ್ಟವಾಗಿ ಒಡಮೂಡಿದ್ದವು.

೧೦

ಬೆಳಿಗ್ಗೆ ಏಳು ಗಂಟೆಯ ವೇಳೆಗೇ ನಂಜಪ್ಪ ಸ್ಟೇಷನ್ನಿಗೆ ಗಾಡಿಯಲ್ಲಿ ಸಾಮಾನು ಹಾಕಿಸಿ ಹೊರಗಡೆ ಸರಸ್ವತಿಯನ್ನು ನಿರೀಕ್ಷಿಸುತ್ತ ನಿಂತ. ರೈಲು ಹೊರಡುವುದಕ್ಕೆ ಇನ್ನೂ ಒಂದು ಗಂಟೆಯ ಅವಧಿಯಿದ್ದರೂ ಅವನ ಮನಸ್ಸಿನಲ್ಲಿ ಹೇಳಲಾಗದಷ್ಟು ದುಗುಡ. 'ಬರುವಳೋ—ಬರುವುದಿಲ್ಲವೋ.'— 'ಹೊರಡುವ ವೇಳೆಗೆ ಏನಾದರೂ ಒದಗಿ ಪ್ರಯಾಣ ನಿಲ್ಲಿಸಿ ಬಿಡುತ್ತಾಳೆಯೋ ಏನೋ'–'ಮಂಜಯ್ಯ ಅಡ್ಡಿ ಬಂದಿದ್ದರೇನು ಮಾಡುವುದು' ಮೊದಲಾದ ನೂರಾರು ಚಿಂತೆಗಳು. ಅವನ ಕಣ್ಣುಗಳ ಪಾಪಗಳ ಮೇಲೆ ಗಡಿಯಾರದ ಡಯಲ್ ಕೆತ್ತಿದಂತಾಗಿತ್ತು. ನಿಮಿಷ ನಿಮಿಷಕ್ಕೂ ಗಡಿಯಾರ ನೋಡುವನು. ಸ್ಟೇಷನ್ನಿನ ಕಡೆ ಬರುತ್ತಿದ್ದ ಗಾಡಿಗಳನ್ನು ದಿಟ್ಟಿಸಿ ನೋಡುತ್ತಿದ್ದನು. ಗಾಡಿಯಿಂದ ಜನ ಇಳಿಯುತ್ತಿದ್ದುದನ್ನು ನೋಡಿದಂತೆಲ್ಲ ಅವನ ಎದೆ ಹೊಡೆದುಕೊಳ್ಳುತ್ತಿತ್ತು. ಏಳೂವರೆಯಾದರೂ ಸರಸ್ವತಿಯ ಸುಳಿವಿಲ್ಲ. ತಪ್ಪುಮಾಡಿದೆ. ನಾನೇ ಒಂದು ಟ್ಯಾಕ್ಸಿ ಮಾಡಿಕೊಂಡು ಹೋಗಿ ಅವಳನ್ನು ಕರೆದುಕೊಂಡು ಬರಬೇಕಾಗಿತ್ತು ಎಂದುಕೊಂಡ. ಮರುಕ್ಷಣವೇ 'ಈಗಲೂ ಒಂದು ಟ್ಯಾಕ್ಸಿ ಮಾಡಿಕೊಂಡು ಹೋಗಿ ಏಕೆ ನೋಡಿಕೊಂಡು ಬರಬಾರದು.' ತನ್ನ ಆತುರ ನೋಡಿ ಅವನಿಗೇ ತಿರಸ್ಕಾರ ಹುಟ್ಟಿತು. 'ನಾನು ಟ್ಯಾಕ್ಸಿ ಮಾಡಿಕೊಂಡು ಅತ್ತ ಹೋಗುವುದು–ಅವಳು ಗಾಡಿಯಲ್ಲಿ ಇತ್ತ ಬರುವುದು, ಹೀಗೆ ತಪ್ಪುಗಂಟಾಗಿ ಒಬ್ಬರನ್ನೊಬ್ಬರು ಕಾಣದಂತಾದರೆ ಏನು ಮಾಡುವುದು' ಎಂದು ಸಮಾಧಾನ ತಂದುಕೊಂಡ. ಹತ್ತು ನಿಮಿಷಗಳ ತರುವಾಯ ಒಂದು ಗಾಡಿ, ತೋಟದಪ್ಪನವರ ಛತ್ರದ ಪಕ್ಕದಲ್ಲಿ ತಿರುಗಿದಂತಾಯಿತು. 'ಅವಳೇ! ಅವಳೇ!' ಎಂದು ನಂಜಪ್ಪ ತನ್ನಷ್ಟಕ್ಕೆ ತಾನೇ ಹೇಳಿಕೊಂಡ. ಗಾಡಿ ಸ್ಟೇಷನ್ನಿಗೆ ಸಮೀಪಿಸಿದಂತೆ ಒಳಗಿದ್ದವರು ಕಂಡು ಬಂದರು.

ಈ ಬಾರಿಗೆ ನಂಜಪ್ಪನಿಗೆ ನಿರಾಶೆಯಾಗಲಿಲ್ಲ. ಗಾಡಿಯಿಂದ ಕುಮಾರ, ಸರಸ್ವತಮ್ಮ ಇಳಿದರು. ತನ್ನ ಉದ್ವೇಗ ತಡೆಯಲಾಗದೆ ನಂಜಪ್ಪ ಅಲ್ಲಿಯೇ ಕೇಳಿದ.

" ಏಕಿಷ್ಟು ಹೊತ್ತಾಯಿತು ? "

" ಮುದುಕಿ ಬರುವುದು ತಡವಾಯಿತು. " ಎಂದಳು.

ಸರಸ್ವತಿಯದು ಎರಡೇ ಸಾಮಾನು. ಒಂದು ಸಣ್ಣ ಪೆಟ್ಟಿಗೆ, ಒಂದು ಬುಟ್ಟಿ. ಅವಳು ಕೈಯಲ್ಲಿ ಒಂದು ಸಣ್ಣ ರೈಲುಚೆಂಬು ಹಿಡಿದಿದ್ದಳು. ಕೂಲಿಯವನು ಆ ಸಾಮಾನುಗಳನ್ನು ಹೊತ್ತುಕೊಂಡು ಸ್ಟೇಷನ್ ಒಳಗೆ ನಡೆದ. ಕುಮಾರ ಒಂದು ಪ್ಲ್ಯಾಟ್‌ಫಾರಂ ಟಿಕೆಟ್ ಕೊಂಡು ಜತೆಯಲ್ಲಿ ಬಂದ.

ನಂಜಪ್ಪ ಮೊದಲೇ ಸೆಕೆಂಡ್ ಕ್ಲಾಸ್ ರಿಸರ್ವೇಷನ್ ತೆಗೆದುಕೊಂಡಿದ್ದುದರಿಂದ ಸ್ಥಳಕ್ಕೆ ತೊಂದರೆಯಾಗಲಿಲ್ಲ. ಸಾಮಾನನ್ನು ಒಳಗಿಡಿಸಿ ಸರಸ್ವತಿ ಗಾಡಿಯಲ್ಲಿ ಕಿಟಕಿಯ ಬಳಿ ಕುಳಿತಳು. ಅವಳ ಕಿಟಕಿಯ ಬಳಿಯಲ್ಲೇ ಕುಮಾರ, ನಂಜಪ್ಪ ಮಾತನಾಡುತ್ತ ನಿಂತರು.

" ಯಾವಾಗ ಬರುತ್ತೀರಿ ಸ್ವಾಮಿ. " ಎಂದು ಕುಮಾರ ಕೇಳಿದ.

" ಒಂದು ವಾರವೆಂದು ಇಟ್ಟುಕೋ. "

" ವಾರವೇ ! " ಎಂದು ಸರಸ್ವತಿ ಆಶ್ಚರ್ಯ ವ್ಯಕ್ತಮಾಡಿದಳು.

ನಂಜಪ್ಪ ಕುಮಾರನ ಬಳಿಗೆ ಸರಿದು ಅವನಿಗೆ ಗೋಪ್ಯವಾಗಿ

" ಈ ವಿಷಯ ನಮ್ಮಲ್ಲಿಯೇ ಇರಲಿ. ಯಾರಿಗೂ ಬಾಯಿಬಿಡಬೇಡ. "

" ಎಲ್ಲಾದರೂ ಉಂಟೆ ಸ್ವಾಮಿ. "

" ಕುಮಾರರೇ, ಸ್ವಲ್ಪ ಆಗಾಗ್ಗೆ ನಮ್ಮ ಮನೆ ಕಡೆ ಹೋಗಿ ವಿಚಾರಿಸಿಕೊಳ್ಳುತ್ತಿರಿ. ಯಾರಾದರೂ ಕೇಳಿದರೆ ಮೈಸೂರಿಗೆ ಹೋಗಿದ್ದೇನೆಂದು ತಿಳಿಸುವಂತೆ ಮಕ್ಕಳಿಗೆ ಹೇಳಿ. "

" ಆಗಲಿ—ತಿಳಿಸುತ್ತೇನೆ. "

" ನಾವು ಬರುವದಿವಸ ತಂತೀ ಕೊಡುತ್ತೇನೆ. ಸ್ಟೇಷನ್ನಿಗೆ ಬಾ ಕುಮಾರ." ಎಂದು ನಂಜಪ್ಪ ಹೇಳಿದ.

ರೈಲು ಐದೇ ನಿಮಿಷ ತಡಮಾಡಿ ಬೆಂಗಳೂರು ನಿಲ್ದಾಣ ಬಿಟ್ಟಿತು. ನಂಜಪ್ಪ ಕುಳಿತುಕೊಂಡು ದೀರ್ಘವಾಗಿ ಉಸಿರುಬಿಟ್ಟ. ಅವನ ದೃಷ್ಟಿ ಸರಸ್ವತಿ ತಂದಿದ್ದ ಬುಟ್ಟಿಯ ಮೇಲೆ ಹೋಯಿತು.

ಬುಟ್ಟಿಯಲ್ಲೇನು ತಂದಿದ್ದೀ ? "

" ಮಕ್ಕಳಿಗೆ ಸ್ವಲ್ಪ ತಿಂಡಿ ಮಾಡಿಸಿಟ್ಟೆ. ನಮಗೂ ದಾರಿಗಾಗಲಿ ಎಂದು ಸ್ವಲ್ಪ ತಂದೆ. ಕಾಫಿ ತಂದಿದ್ದೇನೆ, ಕೊಡಲೇನು. "

" ಕೊಡು ಕೊಡು. ನನ್ನ ಧಾವಂತದಲ್ಲಿ ನಾನು ಬೆಳಿಗ್ಗೆ ಕಾಫಿಯೇ ಕುಡಿದಿಲ್ಲ. "

ಸರಸ್ವತಿ ತನ್ನ ಟ್ರಂಕಿನಿಂದ ಎರಡು ಬೆಳ್ಳಿ ಲೋಟಗಳನ್ನು ಹೊರಗೆ ತೆಗೆದು ಅವುಗಳಿಗೆ ಕಾಫಿ ಬಗ್ಗಿಸಿದಳು.

" ನೀವೂ ಒಂದು ಬುಟ್ಟಿ ತಂದಿರುವಿರಿ? "

" ಸಂಜೆಯವರೆಗೆ ನಾವು ಪ್ರಯಾಣ ಮಾಡಬೇಕು. ಸ್ವಲ್ಪ ಹಣ್ಣು ತಂದಿದ್ದೇನೆ. ಬುಟ್ಟಿಯಲ್ಲಿ ಬಿಸ್ಕತ್ತಿದೆ—ತೆಗೆದುಕೊ."

ಸರಸ್ವತಿ ಬಿಸ್ಕತ್ತು ಡಬ್ಬ ತೆಗೆದು ಒಡೆದು ಸಂಜಪ್ಪನಿಗೂ ಕೊಟ್ಟು ತಾನೂ ಒಂದೆರಡು ತಿಂದಳು.

ನಂಜಪ್ಪನ ಮನಸ್ಸು ಸುಪ್ರಸನ್ನವಾಗಿತ್ತು. ಅವನ ಕಣ್ಣುಗಳಲ್ಲಿ ಆನಂದ ಸೂಸುತ್ತಿತ್ತು.

" ಹಾ ! ಅಂತೂ ಬಂದೆಯಲ್ಲ. ಏಳೂ ಸಲವತ್ತಾಯಿತು, ನಿನ್ನ ಕಾಣ ಲಿಲ್ಲ. ನನ್ನ ಬುದ್ಧಿಯೇ ಕೆಟ್ಟುಹೋಗಿತ್ತು. "

" ಬರುತ್ತೇನೆಂದು ಮಾತು ಕೊಟ್ಟ ಮೇಲೆ ತಪ್ಪಿಸುತ್ತೇನೆಯೇ ? "

" ನೀನು ತಪ್ಪಿಸಲ್ಲ. ಆ ಪ್ರಾರಬ್ಧ ಎಲ್ಲಿ ಒಕ್ಕರಿಸಿತೋ ಎಂದು ಭಯ ವಾಗಿತ್ತು. "

" ಹಾಗೆಲ್ಲಾ ಅವರು ಬರುವುದಿಲ್ಲಾಂಪ್ರೆ. "

" ಅವನನ್ನು ವಹಿಸಿಕೊಂಡು ಮಾತನಾಡುವುದನ್ನು ನೀನು ಬಿಡುವುದಿಲ್ಲ."

ಮಾತಿನ ಜಾಡು ಬದಲಾಯಿಸಲು ಸರಸ್ವತಿ

" ನಿನ್ನೆ ಕಾಗದ ತಂದುಕೊಟ್ಟರು. "

" ರಾತ್ರಿ ಎಷ್ಟು ಹೊತ್ತಿಗೆ ಹೋದ."

" ಸುಮಾರು ಹತ್ತು ಗಂಟೆ. "

ನಂಜಪ್ಪನ ಮುಖ ಕಂಗೆಟ್ಟಿದನ್ನು ಕಂಡು, ಸರಸ್ವತಿ ಅವನ ಬಳಿ ಸರಿದು

" ರಾಜೂ, ನೀವೂ ಅವರೂ ಇಬ್ಬರೂ ಒಂದೇನೆ ? "

" ಹೋಗಲಿ-ಈ ಹಾಳು ಮಾತು ಬೇಡ. ಬೇರೆ ಏನಾದರೂ ಆಡು. ನಮ್ಮ ಸಂಬಂಧ ನಿನ್ನ ಮಕ್ಕಳಿಗೆ ಗೊತ್ತಾಗಿದೆಯೇ ? "

" ಗೊತ್ತಾಗದೆ ಇರುತ್ತದೆಯೇ? ಅವರೇನು ಎಳೆಯ ಮಕ್ಕಳೇ ? "

" ಮಂಜುಳಾ ಏನಂದಳು. "

" ಅವಳು ಶುದ್ಧ ಮುಖೇಡಿ. ಇಷ್ಟು ವಯಸ್ಸಾದರೂ ಅದಕ್ಕೆ ಏನು ಆಡಬೇಕೆನ್ನುವುದೇ ತೋರುವುದಿಲ್ಲ."

" ಸುಧಾ...."

" ಅವಳಿಗೆ ನಿಮ್ಮನ್ನು ಕಂಡರೆ ತುಂಬ ಪ್ರೀತಿ."

" ನಾನವಳನ್ನು ಸರಿಯಾಗಿ ಮಾತನಾಡಿಸಿಯೇ ಇಲ್ಲ. "

" ಇಲ್ಲದಿದ್ದರೇನು—ಅದುತುಂಬ ಚೂಟಿ. "

" ಅವಳು ಏನಂದಳು ? "

" ಅಡಿಗೆಯವರೆಲ್ಲಾ ನಮ್ಮ ಮನೆಗೆ ಏಕೆ ಬರಬೇಕಮ್ಮ ಎಂದಳು. "

" ಶಹಬಾಸ್! ನನ್ನ ಪಕ್ಷ ವಹಿಸುವವರು ಒಬ್ಬರಾದರೂ ಇದ್ದಾರಲ್ಲಾ."

" ನಾನು ನಿಮ್ಮ ಪಕ್ಷ ವಹಿಸುವುದಿಲ್ಲವೇನೋ ? "

" ಇಲ್ಲ—ನೀನು ಶತ್ರುಪಕ್ಷದವಳು. "

ನಂಜಪ್ಪನ ದೃಷ್ಟಿ ಸರಸ್ವತಿಯ ಕುತ್ತಿಗೆಯಲ್ಲಿದ್ದ ಒಂದೆಳೆ ಚೈನಿನ ಕಡೆಗೆ ಹೋಯಿತು.

" ಇದು ಯಾವದು—ನಾನು ನೋಡಿಯೇ ಇರಲಿಲ್ಲ. ನಿನ್ನ ಕುತ್ತಿಗೆ ಯಲ್ಲೇನೂ ಇರಲಿಲ್ಲ. "

" ನನ್ನದೇ ಅಡುವಿಟ್ಟದ್ದೆ—ನಿನ್ನೆ ಬಿಡಿಸಿಕೊಂಡೆ. "

" ದುಡ್ಡು ಅವನು ಕೊಟ್ಟನೋ ? "

" ನನ್ನಕುತ್ತಿಗೆ ನೋಡಿ ಈಸ್ಥಿತಿಯಲ್ಲಿ ಅಣ್ಣನ ಮನೆಗೆ ಹೇಗೆ ಹೋಗುತ್ತೀ ಎಂದು ಕೇಳಿದರು. ನಿಜಸ್ಥಿತಿ ಹೇಳಬೇಕಾಗಿ ಬಂತು. ಕೂಡಲೇ ದುಡ್ಡುಕೊಟ್ಟು ಬಿಡಿಸಿಕೊಂಡು ಹಾಕಿಕೊಂಡು ಹೋಗು, ಬರೀ ಕತ್ತಿನಲ್ಲಿ ನಂಟರಿಷ್ಟರ ಮನೆಗೆ ಹೋಗಬೇಡ ಎಂದು ಹೇಳಿದರು. "

" ನನಗೆ ಹೇಳಿದ್ದರೆ ನಾನು ಬಿಡಿಸಿ ಕೊಡುತ್ತಿರಲಿಲ್ಲವೇನೋ ? "

" ಅವರಿಗೂ ನಾನಾಗಿ ನಾನೇ ಹೇಳಲಿಲ್ಲ. ಸಂದರ್ಭ ಹಾಗೆ ಬಂತು. "

" ಇನ್ನು ಮೇಲೆ ನೀನು ಯಾವುದಕ್ಕೂ ಅವನನ್ನು ಒಂದು ಚಿಕ್ಕಾಸೂ ಕೇಳಬೇಡ. ನಿನಿಗೆ ಏನು ಬೇಕೋ ನನಗೆ ಹೇಳು-ನಾನು ತಂದು ಕೊಡುತ್ತೇನೆ. "

" ಅವರಾಗಿಯೇ ತಂದುಕೊಟ್ಟರೆ...."

" ತೆಗೆದುಕೊಳ್ಳುವುದು ಬಿಡುವುದು ನಿನಗೆ ಸೇರಿದ ವಿಷಯ. "

" ರಾಜೂ, ನಾನು ದುರಾಶೆಯವಳಲ್ಲ. ನನ್ನ ಕರ್ಮ ನನ್ನನ್ನು ಈ ಸ್ಥಿತಿಗಿಳಿಸಿದೆ. " ಎಂದು ಸರಸ್ವತಿ ಕಣ್ಣಲ್ಲಿ ನೀರು ತಂದುಕೊಂಡಳು.

ನಂಜಪ್ಪ ಮಂಜು ಗೆಡ್ಡೆಯಂತೆ ಕರಗಿ ಹೋದ. ತನ್ನ ಕಣ್ಮಣಿಯು ಕಣ್ಣಲ್ಲಿ ನೀರು ತರಿಸಿದೆನಲ್ಲಾ ಎಂದು ಪಶ್ಚಾತ್ತಾಪ ಪಟ್ಟುಕೊಂಡು

" ನನ್ನನ್ನು ಕ್ಷಮಿಸು ಸರಸೂ—ನಾನೊಂದು ಪಶು. "

" ಹಾಗೇಕನ್ನುವಿರಿ. ನೀವು ನನ್ನ ಭಾಗದ ದೇವರು. "

ನಂಜಪ್ಪನ ವಿಮನಸ್ಕತೆಯನ್ನು ಪರಿಹರಿಸಲು

" ಸ್ಟೇಷನ್ ಯಾವದು ಹೋಯಿತು ? " ಎಂದು ಕೇಳಿದಳು.

" ನಾನು ನೋಡಲಿಲ್ಲ—ಪ್ರಾಯಶಃ ಮಾಲೂರು ಆಗಿರಬಹುದು. ಮುಂದಿನ ಸ್ಟೇಷನ್ನಿನಲ್ಲಿ ಕಾಫಿ ಸಿಕ್ಕಬಹುದು. "

" ನನ್ನ ಚೆಂಬು ತೊಳೆದುಕೊಂಡು ನೀರು ತಂದಿಟ್ಟುಕೊಂಡಿದ್ದರಾಗಿತ್ತು."

" ನನ್ನ ಚೆಂಬಿನಲ್ಲಿ ನೀರಿದೆ. ಬೇಕಾದರೆ ತೆಗೆದುಕೋ. ?

" ನೀವೂ ಚೆಂಬು ತಂದಿರುವಿರಾ ? "

" ಚೆಂಬಿಲ್ಲದೆ ನಾನು ಪ್ರಯಾಣ ಹೊರಡುವುದೇ ಇಲ್ಲ. "

ರೈಲು ಕೋಲಾರ ಜಿಲ್ಲೆಯಲ್ಲಿ ಹೋಗುತ್ತಿತ್ತು. ದೃಷ್ಟಿಚಾಚಿ ನೋಡಿದಷ್ಟೂ ಕಲ್ಲುಗುಡ್ಡಗಳು ಕಾಣುತ್ತಿದ್ದವು. ಕಣ್ಣಿಗೆ ತಂಪೆಸೆಯುವ ಹಸಿರು ಗಿಡವಾಗಲಿ, ಪೈರು ಪಚ್ಚೆಯಾಗಲಿ ಕಾಣಬರುತ್ತಿರಲಿಲ್ಲ, ಬಿಸಿಲೂ ಸಾಕಷ್ಟು ಸುಡುವುದಕ್ಕಾರಂಬಿಸಿತ್ತು. ಪ್ರಕೃತಿ ದೃಶ್ಯವನ್ನು ನೋಡುತ್ತಿದ್ದ ನಂಜಪ್ಪ ಸರಸ್ವತಿಯ ಕಡೆ ತಿರುಗಿ

" ಈ ಹಾಳು ರೈಲು ಸಂಜೆ ನಾಲ್ಕು ಗಂಟೆಯವರೆಗೂ ಹೀಗೆ ಓಡುತ್ತದೆ."

" ನಿಧಾನವಾಗಿ ಹೋಗಲಿ ಬಿಡಿ. ನಮ್ಮದೇನು ರಾಜಕಾರ್ಯ! "

" ನನ್ನ ದಾಹ ನೀನೇನು ಬಲ್ಲೆ. ಯಾವಾಗ ಮದರಾಸು ಮುಟ್ಟುವೆವೋ ಎಂದು ತಹತಹ ಪಡುತ್ತಿದ್ದೇನೆ. "

" ನಿನ್ನೆ ನಾಟ್ಯಶಾಲೆ ಕಡೆ ಹೋಗಲಿಲ್ಲವೇ ? "

" ಹೋಗಿದ್ದೆ. ನನ್ನ ಮನಸ್ಸಿಗೆ ಯಾವದೂ ಬೇಡವಾಗಿದೆ."

" ಯಾವದೂ...."

" ನಿನ್ನೊಬ್ಬಳನ್ನು ಬಿಟ್ಟು...."

" ನನ್ನನ್ನು ನೀವು ಇಷ್ಟು ಹಚ್ಚಿಕೊಳ್ಳಬಾರದು. "

" ಆ ಮಾತು ಹೇಳುವುದು ಸುಲಭ."

" ಸುಲಭವಲ್ಲ ರಾಜೂ, ಅದರ ಕಷ್ಟ ನಾನೂ ಬಲ್ಲೆ.. ನನ್ನಿಂದ ನಿಮಗೆಷ್ಟು ವ್ಯಥೆಯಾಗುತ್ತಿದೆಯೆಂಬುದನ್ನೂ ಬಲ್ಲೆ."

" ಆ ವ್ಯಥೆ ನೀನಲ್ಲದೆ ಇನ್ನು ಯಾರು ಪರಿಹರಿಸಬೇಕು. "

" ನಾನೇ ಪರಿಹರಿಸುತ್ತೇನೆ. ಯೋಚನೆ ಮಾಡಬೇಡಿ. "

ಬಂಗಾರುಪೇಟೆ ನಿಲ್ದಾಣ ಬಂದಿತು. ನಂಜಪ್ಪ ಇಳಿದು ಹೋಗಿ ಸರಸ್ವತಿಯ ರೈಲುಚೆಂಬಿಗೆ ಕಾಫಿ ಹಾಕಿಸಿಕೊಂಡು ಬಂದು ಅವಳೊಂದಿಗೆ ಸೇವಿಸಿದ.

ಪ್ರಯಾಣ ಸುಖಕರವಾಗಿ ಸಾಗಿತು. ಜಾಲಾರ್‌ಪೇಟೆ ಸ್ಟೇಷನ್ನಿನ

ಹೋಟೆಲಿನವರು ಎರಡು ಊಟ ತಂದು ರೈಲಿಗೇ ಕೊಟ್ಟರು. ಸರಸ್ವತಿ ಆಶ್ಚರ್ಯದಿಂದ

"ಊಟಕ್ಕೆ ಯಾವಾಗ ಹೇಳಿದ್ದಿರಿ ?" ಎಂದಳು.

"ಬೆಂಗಳೂರಿನಲ್ಲಿಯೇ ವೈರ್ ಮಾಡಿಸಿದ್ದೆ."

ಊಟ ಮುಗಿಸಿದ ಮೇಲೆ ಸರಸ್ವತಿ ಬುಟ್ಟಿಗೆ ಕೈ ಹಾಕಿ ವೀಳೆಯದೆಲೆ ಅಡಿಕೆ ತೆಗೆದು ನಂಜಪ್ಪನಿಗೂ ಕೊಟ್ಟು ತಾನೂ ಸವಿದಳು. ರೈಲಿನಲ್ಲಿ ಹೆಚ್ಚು ಗಲಾಟೆಯಿರಲಿಲ್ಲ. ಸರಸ್ವತಿ ಕುಳಿತಲ್ಲಿಯೇ ಪವಡಿಸಿದಳು. ನಂಜಪ್ಪ ತನ್ನ ಹೊಲ್ಡ್ ಆಲ್ ತೆಗೆದು ಅವಳ ತಲೆಯ ಕೆಳಗೆ ಕೊಟ್ಟ. ಅವನೂ ಇನ್ನೊಂದು ಬರ್ತ್ ಮೇಲೆ ಪವಡಿಸಿದ. ಇಬ್ಬರೂ ಸುಖ ನಿದ್ರೆ ಮುಗಿಸಿ ಏಳುವ ವೇಳೆಗೆ ಅರಕೋಣಂ ನಿಲ್ದಾಣ ಬಂದಿತ್ತು. ಇಬ್ಬರೂ ಮುಖ ತೊಳೆದುಕೊಂಡು ಕಾಫಿ ತೆಗೆದುಕೊಂಡರು.

"ಇನ್ನು ಒಂದೂವರೆ ಗಂಟೆ ಪ್ರಯಾಣ ಅಷ್ಟೆ. ಮದರಾಸ್ ಹತ್ತಿರ ಬಂದಿತು."

"ಇಷ್ಟು ಬೇಗ ಬಂದುಬಿಟ್ಟಿವೇ ?" ಎಂದಳು.

ಮದರಾಸಿಗೆ ಗಾಡಿ ಸರಿಯಾಗಿ ನಾಲ್ಕುಗಂಟೆಗೆ ಮುಟ್ಟಿತು.

ನಂಜಪ್ಪ ಕೆಳಗಿಳಿದು ಸರಸ್ವತಿಯನ್ನು ಕೆಳಗಿಳಿಸಿಕೊಂಡ. ಕೂಲಿಯವನೊಬ್ಬ ಸಾಮಾನುಗಳನ್ನು ಕೆಳಗಿಟ್ಟ. 'ವುಡ್‌ಲ್ಯಾಂಡ್ಸ್' ಹೊಟೇಲಿನ ಒಬ್ಬ ನೌಕರ ಫಸ್ಟ್ ಮತ್ತು ಸೆಕೆಂಡ್ ಕ್ಲಾಸ್ ಡಬ್ಬಗಳನ್ನು ನೋಡಿಕೊಂಡು ಬರುತ್ತಿರುವುದನ್ನು ಕಂಡು ನಂಜಪ್ಪ ಅವನನ್ನು ಕರೆದು

"ನಂಜಪ್ಪನವರಿಗೆ ಟ್ಯಾಕ್ಸಿ ಬಂದಿದೆಯೇನು ?" ಎಂದು ಕೇಳಿದ.

ನೌಕರ ಅವನನ್ನು ನೋಡಿ

"ನಿಮ್ಮನ್ನೇ ಹುಡುಕುತ್ತಿದ್ದೆ ಸಾರ್ – ಟ್ಯಾಕ್ಸಿ ತಂದಿದ್ದೇನೆ" ಎಂದು ಹೇಳಿದ.

ನೌಕರನೊಂದಿಗೆ ನಂಜಪ್ಪ, ಸರಸ್ವತಮ್ಮ ಹೊರಟರು. ಕೂಲಿಯವನು ಸಾಮಾನು ಹೊತ್ತುಕೊಂಡು ಬಂದ.

ರಾಯಪೇಟೆಯಲ್ಲಿದ್ದ 'ವುಡ್ ಲ್ಯಾಂಡ್ಸ್' ಹೊಟೇಲಿನ ಮುಂದೆ ಟ್ಯಾಕ್ಸಿ ನಿಂತಿತು. ನೌಕರ ಅತಿಥಿಗಳನ್ನು ಅವರಿಗೆ ನಿರ್ಧಿಷ್ಟವಾಗಿದ್ದ ರೂಮಿಗೆ ಕರೆದೊಯ್ದ.

ನೌಕರ ಹೋಗುವುದಕ್ಕೆ ಮುಂಚೆ

"ಏನಾದರೂ ಬೇಕೇ ಸಾರ್" ಎಂದು ಕೇಳಿದ.

"ಸ್ವಲ್ಪ ಕಾಫಿ ಕಳಿಸಿಕೊಡಿ."

"ಹಾಗೇ ಆಗಲಿ. ಇನ್ನು ಏನಾದರೂ ಬೇಕಾದರೆ ಇಲ್ಲೇ ಬೆಲ್ ಇದೆ. ರಿಂಗ್ ಮಾಡಿ" ಎಂದು ಹೇಳಿದ.

ಸರಸ್ವತಿ ರೂಮಿನಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡು ಅದರ ಅಂದಚೆಂದವನ್ನು ನೋಡಿದಳು. ರೂಮು ವಿಶಾಲವಾಗಿತ್ತು. ಅದರಲ್ಲಿ ಎರಡು ಮಂಚಗಳು, ಬಟ್ಟೆಯ ಸ್ಟ್ಯಾಂಡ್, ಡ್ರೆಸಿಂಗ್ ಟೇಬಲ್ – ರೂಮಿನ ಮುಂಭಾಗದಲ್ಲಿ ಸೋಫಾಸೆಟ್ ಮತ್ತು ಟೀಪಾಯ್. ರೂಮಿನ ಒಳಗಿದ್ದ ಕಿರುಕೋಣೆಯಲ್ಲಿ (ante-room) ಸ್ನಾನಗೃಹ, ಶೌಚಗೃಹಗಳಿದ್ದವು.

"ಚೆನ್ನಾಗಿದೆಯೇ ?" ಎಂದು ನಂಜಪ್ಪ ಕೇಳಿದ.

"ಸೊಗಸಾಗಿದೆ. ಹೊಟೇಲಿನವರಿಗೂ ಮೊದಲೇ ತಿಳಿಸಿದ್ದಿರಾ ?"

"ಕಾಗದ ಬರೆದಿದ್ದೆ – ವೈರ್ ಮಾಡಿದ್ದೆ. ನನ್ನ ರಾಣಿಗೆ ಸ್ವಲ್ಪವೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಲು ಯತ್ನಿಸಿದ್ದೇನೆ. ರಾಣಿ ಮೆಚ್ಚಿಕೊಂಡರೆ ನನ್ನ ಶ್ರಮ ಸಾರ್ಥಕ."

"ರಾಜೂ." ಎಂದು ಸರಸ್ವತಿ ಅವನ ಬಳಿ ಸರಿದಳು.

"ಸ್ವಲ್ಪ ತಡಿ. ಹೊಟೇಲ್ ಹುಡುಗ ಕಾಫಿ ತರಬಹುದು." ಎಂದು ಹೇಳಿದ.

ಹೊಟೇಲ್ ಹುಡುಗ ತಂದು ಕೊಟ್ಟ ಕಾಫಿ ಕುಡಿದು ಮುಗಿಸಿದಮೇಲೆ ನಂಜಪ್ಪ ಅವನಿಗೆ

"ಆರು ಗಂಟೆಗೆ ಸರಿಯಾಗಿ ಟ್ಯಾಕ್ಸಿ ಬೇಕೂಂತ ಮ್ಯಾನೇಜರಿಗೆ ಹೇಳು."

ಎಂದು ಸರಸ್ವತಿಯ ಕಡೆ ತಿರುಗಿ

" ಸ್ನಾನ ಮಾಡುವ ಹಾಗಿದ್ದರೆ ಮಾಡು. ಬೀಚ್ ಕಡೆ ಹೋಗಿ ಬರೋಣ."

" ನೀವು ಸ್ನಾನ ಮಾಡುವುದಿಲ್ಲವೇ ?"

" ಮಾಡದೇ ಉಂಟೆ ? " ಎಂದು ಹೇಳಿದ.

ಸರಸ್ವತಿ ಸೋಪಿನ ಪೆಟ್ಟಿಗೆ, ಟವಲುಗಳನ್ನು ತೆಗೆದುಕೊಂಡು ಸ್ನಾನ ಗೃಹಕ್ಕೆ ಹೋದಳು. ಅವಳು ಸ್ನಾನ ಮುಗಿಸಿ ಬರುವಷ್ಟರಲ್ಲಿ ನಂಜಪ್ಪ ಮುಖ ಕ್ಷೌರ ಮಾಡಿಕೊಂಡ.

ಸರಸ್ವತಿ ಸ್ನಾನ ಮುಗಿಸಿ ಬಂದಳು.

" ಚೆನ್ನಾಗಿ ಸ್ನಾನವಾಯಿತೇ ?" ಎಂದು ಕೇಳಿದ.

" ಆಯಿತು. ಆಯಾಸವೆಲ್ಲಾ ಪರಿಹಾರವಾದಂತಾಯಿತು. ಹೋಗಿ ನಿಮ್ಮ ಸ್ನಾನ ಮುಗಿಸಿ " ಎಂದಳು.

ನಂಜಪ್ಪ ಸ್ನಾನ ಮುಗಿಸಿ ಬರುವಷ್ಟರಲ್ಲಿ ಸರಸ್ವತಿ ತಲೆ ಬಾಚಿಕೊಂಡು ಮುಖಕ್ಕೆ ಪೌಡರು, ಹಣೆಗೆ ಕುಂಕುಮ ಧರಿಸಿ ಮೂರು ನಾಲ್ಕು ಸೀರೆಗಳನ್ನು ಆರಿಸಿ ಹೊರಗೆ ತೆಗೆದಿಟ್ಟು, ಕುಪ್ಪಸ ಧರಿಸಿ ಸಿದ್ಧವಾಗಿದ್ದಳು.

ನಂಜಪ್ಪ ಸ್ನಾನ ಗೃಹದಿಂದ ಹೊರಗೆ ಬಂದು

" ಜೇಬಿನಲ್ಲಿ ಬೀಗದಕೈಯಿದೆ. ನನ್ನ ಟ್ರಂಕು ತೆಗೆದು ಪಂಚೆ, ಜುಬ್ಬ ಕೊಡು " ಎಂದ.

ಸರಸ್ವತಮ್ಮ ಅವನು ಕೇಳಿದ ಬಟ್ಟೆಗಳನ್ನು ತೆಗೆದುಕೊಟ್ಟಳು. ನಂಜಪ್ಪ ಪಂಚೆ ಉಟ್ಟುಕೊಳ್ಳುತ್ತಾ

" ಸೀರೆ ಉಟ್ಟುಕೊಳ್ಳುವುದಿಲ್ಲವೇ ?" ಎಂದು ಕೇಳಿದ.

" ಯಾವುದು ಉಟ್ಟುಕೊಳ್ಳಲಿ ಹೇಳಿ."

" ಹೆಂಗಸರ ಅಲಂಕಾರ ನನಗೇನು ತಿಳಿಯುತ್ತದೆ ಹೇಳು."

" ಹೆಂಗಸರಿಗೆ ಸೀರೆ ಆರಿಸುವುದಕ್ಕೆ ತಿಳಿಯುತ್ತದೇನೋ ? ಹೇಳಿ."

" ಆನಂದ ಕಲರ್‌ದು ಉಟ್ಟುಕೋ."

" ನಾನೂ ಅದನ್ನೇ ಉಟ್ಟುಕೊಳ್ಳೋಣ ಎಂದಿದ್ದೆ. ನೀವೇನು ಹೇಳು

ವಿರ್ರೋ ನೋಡೋಣ ಎಂದು ಕೇಳಿದೆ."

ಸರಸ್ವತಿ ತನ್ನ ಮೈಲಿಗೆಯ ಸೀರೆಯನ್ನು ಕಳಚಿ, ಹೊಸ ಸೀರೆಯನ್ನು ಕೈಗೆತ್ತಿಕೊಂಡಳು. ನಂಜಪ್ಪ ಮಿಂಚಿನಂತೆ ಅವಳ ಬಳಿಗೆ ಸರಿದು ಅವಳನ್ನಪ್ಪಿದ.

ಹೊಟೇಲಿನವನು 'ಟ್ಯಾಕ್ಸಿ ಸಿದ್ಧವಾಗಿದೆ ಸಾರ್' ಎಂದು ಕೂಗಿದಾಗಲೇ ಅವರಿಗೆಚ್ಚರ. ಇಬ್ಬರೂ ಮಂಚದಿಂದಿಳಿದು ವಸ್ತ್ರ ಧರಿಸಿ ಹೊರಡಲನುವಾದರು.

ಟ್ಯಾಕ್ಸಿ ಅವರನ್ನು ಬೀಚಿಗೆ ಕರೆದೊಯ್ಯಿತು.

ಟ್ಯಾಕ್ಸಿಯಿಂದಿಳಿದು ಇಬ್ಬರೂ ಮಳಲುದಂಡೆಯ ಮೇಲೆ ತಿರುಗಾಡಿದರು. ಸರಸ್ವತಿಯ ಸಂತೋಷ ಮುಗಿಲು ಮುಟ್ಟಿತ್ತು. ಅವಳು ಸಮುದ್ರ ನೋಡಿರಲಿಲ್ಲ. ಅದರ ಗಹನ ವಿಸ್ತಾರ, ಗಂಭೀರ ನಾದ ಅವಳ ಹೃದಯವನ್ನು ಸೂರೆಗೊಂಡಿತು. ಆಕಾಶದಂಚಿನಿಂದ ತಮ್ಮ ಕಡೆಗೆ ಬಳುಕುತ್ತ ಬರುತ್ತಿದ್ದ ಸಮುದ್ರವನ್ನು ನೋಡುತ್ತಾ ಸರಸ್ವತಿ

"ಮಕ್ಕಳನ್ನು ಕರೆದುಕೊಂಡು ಬರಬೇಕಾಗಿತ್ತು. ಅವರೂ ಸಮುದ್ರ ನೋಡಿಯೇ ಇಲ್ಲ."

"ನಾನು ಬೇಡವೆನ್ನುತ್ತಿರಲಿಲ್ಲವಲ್ಲ – ನೀನೇ ಹೇಳಲಿಲ್ಲ."

"ಅವರಿಗೂ ಸಂಕೋಚವಾಗುತ್ತದೆ–ನಿಮಗೆ ಬೇಸರವಾಗುತ್ತದೆ ಎಂದು ನಾನು ಹೇಳಲಿಲ್ಲ."

"ನನಗೇಕೆ ಬೇಸರ ?"

"ನಾವಿಬ್ಬರೇ ಇರುವುದಕ್ಕಾಗುವುದಿಲ್ಲ ವಲ್ಲ ಎಂದು."

"ಒಟ್ಟಿಗೆ ಎರಡು ರೂಮು ತೆಗೆದುಕೊಂಡರಾಗುತ್ತಿತ್ತು."

"ಆಗಲಿ – ಇನ್ನೊಮ್ಮೆ ಬಂದರಾಯಿತು. ಅವರಿಗೂ ರಜಾ ಬರಲಿ."

ನಂಜಪ್ಪ ಕಿಸೆಯಿಂದ ಕರವಸ್ತ್ರ ತೆಗೆದು ಮರಳಿನ ಮೇಲೆ ಹಾಸಿ 'ಕುಳಿತುಕೋ' ಎಂದ. ಇಬ್ಬರೂ ಸಮುದ್ರವನ್ನೀಕ್ಷಿಸುತ್ತ ಅದರ ಅಸದೃಶ ಸೌಂದರ್ಯಸುಧೆಯನ್ನೀಂಟುತ್ತ ಕುಳಿತರು. ಸಮುದ್ರದ ತರಂಗಗಳಂತೆ ಮಧುರ ಭಾವನೆಗಳು ತರಂಗತರಂಗವಾಗಿ ಅವರ ಹೃದಯದಲ್ಲಿದ್ದವು. ನಂಜಪ್ಪ

ಸರಸ್ವತಿಯ ಕೈಮೇಲೆ ತನ್ನ ಕೈಯಿಟ್ಟು

" ಸರಸಾ, ಸಂತೋಷವಾಗಿದೆಯೇ ಮನಸ್ಸಿಗೆ."

" ರಾಜೂ, ನನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಬಂದಿರುವಿರಿ."

" ನಿನ್ನನ್ನು ಎಷ್ಟು ಸುಖಪಡಿಸಬೇಕು, ಸಂತೋಷವಾಗಿಟ್ಟುಕೊಂಡಿರ ಬೇಕೆಂದು ಬಯಸುತ್ತಿರುವೆ ಬಲ್ಲೆಯಾ ?"

" ಬಲ್ಲೆ – ನಿಮ್ಮನ್ನು ನಾನು ನಿರಾಶೆಗೊಳಿಸುವುದಿಲ್ಲ."

" ನಿನ್ನನ್ನುಳಿದು ನನಗೆ ಬೇರೆ ಎಲ್ಲಿಯೂ ಸುಖವಿಲ್ಲ ಸರಸಾ."

" ನಾನು ಅಲ್ಪಳು ದೊರೆ–ನನ್ನನ್ನೇಕೆ ಇಷ್ಟು ಪ್ರೀತಿಸುವಿರಿ."

" ಅ ರಹಸ್ಯ ನಾನು ಬಗೆಹರಿಸಲಾರೆ."

" ನಿಮ್ಮ ದೊಡ್ಡ ಗುಣ ನೋಡಿದಷ್ಟೂ ನನ್ನ ಸಣ್ಣತನದ ಅರಿವಾಗುತ್ತದೆ."

" ಅಲ್ಲಿ ನೋಡು – ಮಹಾಸಾಗರದ ಮೇಲೆ ದೊಡ್ಡ ಅಲೆಯೊಂದು ಎದ್ದಿದೆ. ದಾರಿಗಡ್ಡಲಾದ ಜೊಂಡನ್ನು ಅದು ನಿರ್ದಾಕ್ಷಿಣ್ಯವಾಗಿ ಸವರಿಹಾಕು ತ್ತಿದೆ. ಪ್ರೀತಿಯ ಮಹಾ ಅಲೆಗೆ ನನ್ನ ದೇಹ – ಮನಸ್ಸುಗಳೆರಡೂ ಸಿಕ್ಕಿದೆ. ಅದು ಸವರಿ ಹಾಕಿದರೂ ಸರಿ – ತನ್ನೊಳಗೇ ಅಡಗಿಸಿಕೊಂಡರೂ ಸರಿ – ನಾನು ಹೀಗೆ ಮಾತನಾಡಿದರೆ ನಿನಗೆ ನಂಬಿಕೆಯಾಗುವುದು ಕಷ್ಟವಲ್ಲವೆ ?"

" ಏಕೆ ಹಾಗೆ ಕೇಳುವಿರಿ ?"

" ಇವನಿಗೆ ಮದುವೆಯಾಗಿದೆ – ಜತೆಗೆ ಎರಡನೆಯಸಂಸಾರವೂ ಇದೆ ; ಎರಡನ್ನೂ ಬಿಟ್ಟು ನನ್ನ ವಿಷಯದಲ್ಲಿ ನಿಸ್ಸೀಮ ಪ್ರೇಮವಿದೆಯೆಂದು ಹೇಳುತ್ತಿ ದ್ದಾನಲ್ಲಾ ಇದು ನಿಜವೇ ಎಂದು ನಿನಗನಿಸಬಹುದು. ನಿನ್ನ ಮನಸ್ಸಿಗೆ ಸಂದೇಹ ಬಂದರೆ ನಾನು ಖಂಡಿತವಾಗಿ ನಿನ್ನನ್ನು ಆಕ್ಷೇಪಿಸುವುದಿಲ್ಲ. ಆದರೆ ಸತ್ಯವನ್ನು ನಿನ್ನ ಮುಂದೆ ಹೇಳುತ್ತಿದ್ದೇನೆ. ನೀನು ಬೇಕೆಂದು ನಾನು ಬಯಸಿದಾಗ, ನಮ್ಮ ಸಂಬಂಧ ಹೀಗೆ ರೂಪು ಗೊಳ್ಳುತ್ತದೆಂದು ನಾನು ಕನಸಿ ನಲ್ಲಿಯೂ ಕಂಡಿರಲಿಲ್ಲ. ಒಂದು ದಿನ–ಎರಡು ದಿನ ನಾನು ಎಷ್ಟೋ ಹೆಂಗಸರ ಸ್ನೇಹ ಸಹವಾಸ ಮಾಡಿದ್ದೇನೆ. ಹಾಗೆಯೇ ಇದೂ ಒಂದು ಎಂದು ಭಾವಿಸಿದ್ದೆ. ಆದರೆ ನಾನೊಂದು ಬಯಸಿದರೆ ವಿಧಿ ತಾನೊಂದು ಬಯಸಿತು . ಯಾವ ಜನ್ಮದ

ಋಣಾನುಬಂಧವೋ ನಮ್ಮನ್ನು ಕಟ್ಟಿಹಾಕಿತು."

"ಖಂಡಿತವಾದ ಮಾತು. ಇದು ಜನ್ಮಾಂತರ ಸಂಬಂಧ ಎನ್ನುವುದರಲ್ಲಿ ಸಂದೇಹವಿಲ್ಲ."

"ಪುನಃ ಪುನಃ ಹಳೆಯ ಮಾತನ್ನೇ ಆಡುತ್ತಿರುವೆನೆಂದು ಬೇಸರಪಟ್ಟು ಕೊಳ್ಳಬೇಡ. ನಾನೊಂದು ಮಾತು ಹೇಳುತ್ತೇನೆ—ಚಿತ್ತವಿಟ್ಟು ಕೇಳು."

"ಹೇಳಿ."

"ಮಂಜಯ್ಯನ ಸಂಬಂಧ ಕಡಿದು ಹಾಕುವುದು ಸಾಧ್ಯವಿಲ್ಲವೇ ?"

"ಹೇಗೆ ಸಾಧ್ಯ ನೀವೇ ಹೇಳಿ. ಅವರನ್ನು ನಾನು ಏತಕ್ಕೂ ಆಕ್ಷೇಪಿಸು ವಂತಿಲ್ಲ. ಮೊದಲಿನಿಂದಲೂ ನನ್ನ ವಿಷಯದಲ್ಲಿ ಬಹಳ ದೊಡ್ಡ ರೀತಿಯಲ್ಲಿಯೇ ನಡೆದುಕೊಳ್ಳುತ್ತಿದ್ದಾರೆ."

"ನಮ್ಮ ಸಬಂಧ ಅವನಿಗೆ ಗೊತ್ತಾದರೆ 'ದೊಡ್ಡರೀತಿ' ಉಳಿಯ ಲಾರದು."

"ಉಳಿಯಲಾರದೆಂದು ನನಗೂ ಅನ್ನಿಸುತ್ತದೆ."

"ಅವರಿವರ ಬಾಯಿಂದ ಅವನು ಕೇಳುವುದಕ್ಕಿಂತ ನೀನೇ ಹೇಳಿಬಿಟ್ಟರೆ ಒಳ್ಳೆಯದಲ್ಲವೇ—ಇದೇ ಕಾರಣವಾಗಿ ಅವನು ಬರುವುದು ನಿಲ್ಲಿಸಿದರೆ ಸರ್ವ ಕ್ಷೇಮವಾಗುತ್ತದೆ."

"ನೀವು ಆತುರಪಡಬೇಡಿ. ನನಗೆ ಸಾಕಷ್ಟು ಕಾಲಾವಕಾಶ ಕೊಡಿ: ನಿಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ, ಸಂತೋಷವಾಗುವಂತೆ ನಾನು ಮಾಡು ತ್ತೇನೆ." ಎಂದು ಆಶ್ವಾಸನವಿತ್ತಳು.

ಸರಸ್ವತಿಯ ಆಶ್ವಾಸನ ನಂಜಪ್ಪನ ಮನಸ್ಸಿನ ಆವೇಗವನ್ನು ಸ್ವಲ್ಪ ಕಡಿಮೆಮಾಡಿತು.

"ಹೊತ್ತಾಯಿತು. ಹೋಗೋಣವೇ" ಎಂದ.

"ಸಮುದ್ರವನ್ನು ಬಿಟ್ಟು ಹೋಗುವುದಕ್ಕೇ ನನಗೆ ಮನಸ್ಸಿಲ್ಲ."

"ನಾಳೆ ಸಂಜೆ ಬೇಗ ಬರೋಣ."

ಎಂದು ಅವಳನ್ನೆಬ್ಬಿಸಿಕೊಂಡು ಹೊಟೇಲಿಗೆ ಬಂದ.

ಮಾರನೆಯ ದಿನ ನಂಜಪ್ಪ ಟ್ಯಾಕ್ಸಿ ಮಾಡಿಕೊಂಡು ಮದರಾಸಿನ ಪ್ರೇಕ್ಷಣೀಯ ನೋಟಗಳನ್ನೆಲ್ಲಾ ಸರಸ್ವತಿಗೆ ತೋರಿಸಿಕೊಂಡು ಬಂದ. ಅಂದೇ ಸಂಜೆ ಅಡಿಯಾರಿನ ' ಕಲಾಕ್ಷೇತ್ರ ' ದಲ್ಲಿ ರುಕ್ಮಿಣಿದೇವಿಯ ನೃತ್ಯಪ್ರದರ್ಶನ ತೋರಿಸಿಕೊಂಡು ಬಂದ.

ರುಕ್ಮಿಣಿದೇವಿಯ ನೃತ್ಯ ನಾಟಕ ನೋಡಿ ಸರಸ್ವತಿ ಅವಕ್ಕಾಗಿದ್ದಳು. ರುಕ್ಮಿಣಿದೇವಿಯ ದೇದೀಪ್ಯಮಾನ ಕಲೆ ಸರಸ್ವತಿಯ ಸುಪ್ತಚೇತನವನ್ನು ಜಾಗ್ರತಗೊಳಿಸಿತ್ತು.

ಅಂದೇ ರಾತ್ರಿ ಹೊಟೇಲಿನಲ್ಲಿ ನಂಜಪ್ಪನೊಂದಿಗೆ ಕುಳಿತಾಗ

" ನೃತ್ಯ ಹೇಗಿತ್ತು ?" ಎಂದು ಕೇಳಿದಳು.

" ಕೇಳಬೇಕಾದ್ದೇನಿದೆ? ರುಕ್ಮಿಣಿದೇವಿ ಸಾಕ್ಷಾತ್ ನೃತ್ಯ ಸರಸ್ವತಿ. ಅವರ ವಿಷಯ ಕುಮಾರ ಆಗಾಗ್ಗೆ ಹೇಳುತ್ತಿದ್ದ. ನಾನು ನಂಬಿರಲಿಲ್ಲ, ಕಣ್ಣಾರೆ ಕಂಡಮೇಲೆ ಅವನ ಮಾತು ಅಕ್ಷರಶಃ ನಿಜವೆನಿಸಿದೆ."

" ಸುಧನಿಗೆ ಹೀಗೆ ಕಲಿಸಬೇಕೆಂದು ನನ್ನಿಷ್ಟ."

" ರುಕ್ಮಿಣಿದೇವಿ 'ಕಲಾಕ್ಷೇತ್ರ'ದಲ್ಲಿ ಶಾಲೆಯನ್ನೇ ನಡೆಸುತ್ತಿದ್ದಾರೆ. ನಾಳೆ ಬೇಕಾದರೆ ಅವರಲ್ಲಿಗೆ ಹೋಗಿ ವಿಚಾರಿಸೋಣ. "

" ಎಲ್ಲಿ ಸಾಧ್ಯ ಹೇಳಿ. ಸುಮ್ಮನೆ ನನಗೊಂದು ಹುಚ್ಚು ಆಸೆ. ಅವಳಿ ಗೋಸ್ಕರ ತಿಂಗಳಿಗೆ ನೂರು, ನೂರೈವತ್ತು ರೂಪಾಯಿ ಖರ್ಚು ಮಾಡುವುದು ನನ್ನ ಯೋಗ್ಯತೆಯೇ ! "

" ಆ ಖರ್ಚು ನನಗಿರಲಿ."

" ಇದು ಯಾವ ನ್ಯಾಯ. ನೀವು ಎಷ್ಟಕ್ಕೇಂತ ಖರ್ಚುಮಾಡುವಿರಿ?"

" ನಾಟ್ಯಶಾಲೆಯ ವಿಷಯ ಯೋಚನೆ ಮಾಡುತ್ತಿದ್ದೀಯೇನೋ?"

" ಹೂ ! ಅಲ್ಲಿ ಸಂಸಾರ ನಡೆಸಬೇಡವೆ ? "

" ನಿನ್ನದೂ ನನ್ನದೂ ಬಾಂಧವ್ಯ ಇತ್ಯರ್ಥವಾಗಲಿ ಎಂದು ಸುಮ್ಮ ನಿದ್ದೇನೆ.

" ಇತ್ಯರ್ಥವಾದರೆ "

" ಕುಂತಳನಿಗೂ ಕುಮಾರನಿಗೂ ಲಗ್ನ ಮಾಡಿಸಿಬಿಡಬೇಕೆಂದಿದ್ದೇನೆ. "

" ಪಾಪ! ಆ ಹುಡುಗಿ ತಲೆಯ ಮೇಲೆ ನೀವೇ ಕಲ್ಲು ಎತ್ತಿ ಹಾಕುತ್ತೀರಾ? "

" ಹೋಗಲಿ – ಕುಮಾರನಲ್ಲದಿದ್ದರೆ ಇನ್ನೊಬ್ಬನಾಯಿತು."

" ಶಾಲೆಯ ಗತಿ! "

" ಆದರ ಖರ್ಚು ಅದು ಹುಟ್ಟಿಸಿಕೊಳ್ಳುತ್ತದೆ. ಪಾಠಗಳಲ್ಲಿ ಕುಮಾರ ಈಗ ಸಾಕಷ್ಟು ಸಂಪಾದನೆ ಮಾಡುತ್ತಿದ್ದಾನೆ."

" ಈ ಸಂಪಾದನೆಯದು ಯಾವ ನೆಚ್ಚಿಗೆ. ಇವತ್ತು ನಾಲ್ಕು ಕಾಸು ಬರುತ್ತದೆ ನಾಳೆ ಯಥಾಪ್ರಕಾರ ಲಾಟರಿ."

"ನನ್ನ ಶಕ್ತಿ ಮೀರಿ ಕುಮಾರನಿಗೆ ಸಹಾಯ ಮಾಡಿದ್ದೇನೆ. ಅವನು ಬದುಕುವ ಮಾರ್ಗ ಅವನು ನೋಡಿಕೊಳ್ಳಬೇಕು. ಸಾಯುವವರೆಗೂ ನನಗೇ ಅವನು ಗಂಟುಬಿದ್ದರೆ ಹೇಗೆ?"

" ನಾನೂ ನನ್ನ ಸಂಸಾರ ಸಾಯುವವರೆಗೂ ನಿಮಗೆ ಗಂಟುಬಿದ್ದರೆ! "

" ನಿನ್ನ ವಿಷಯ ಬೇರೆ. " ಎಂದು ಹೇಳಿದ.

ಮಾರನೆಯ ಬೆಳಿಗ್ಗೆ ಸ್ನಾನ, ಉಪಹಾರ ತೀರಿದ ಮೇಲೆ ಸರಸ್ವತಿಯನ್ನು ನಂಜಪ್ಪ ಟ್ಯಾಕ್ಸಿಯಲ್ಲಿ ಪೇಟೆಕಡೆ ಕರೆದುಕೊಂಡು ಹೋದ. ಟ್ಯಾಕ್ಸಿ ಸೂರಜ್ ಮಲ್ ಅಂಗಡಿಯ ಮುಂದೆ ನಿಂತಿತು.

" ಇಳಿ " ಎಂದು ನಂಜಪ್ಪ ಹೇಳಿದ.

" ಎಲ್ಲೀಗೆ ? "

" ಎಲ್ಲೀಗೋ—ಸುಮ್ಮನೆ ಇಳಿಯಬಾರದೇ? "

ಇಬ್ಬರೂ ಹೋಗಿ ಅಂಗಡಿಯಲ್ಲಿ ಕುಳಿತರು. ಅಂಗಡಿಯ ಒಬ್ಬ ನೌಕರ ಬಂದು

" ಏನು ಬೇಕಾಗಿತ್ತು ಸಾರ್" ಎಂದು ಕೇಳಿದ.

" ಚಿನ್ನದ ಬಳೆಗಳನ್ನು ತೋರಿಸಿ."

" ಬರಿಯ ಚಿನ್ನದ್ದು ಬೇಕೋ, ಕೆಂಪು, ಬಿಳಿಯ ಕಲ್ಲು ಕೆತ್ತಿದ್ದು

ಬೇಕೋ."

" ಎರಡನ್ನೂ ತೋರಿಸಿ."

ನೌಕರ ಬಳೆಗಳನ್ನು ತರಲು ಹೋದಾಗ ಸರಸ್ವತಿ

" ಬಳೆ ಯಾರಿಗೇಂದ್ರೆ ?"

" ನನ್ನ ರಾಣೀಗೆ."

" ನಿಮಗೆಲ್ಲೋ ಹುಚ್ಚು. ದುಡ್ಡಿನ ಲಕ್ಷ್ಯವೇ ಇರುವ ಹಾಗಿಲ್ಲ ನಿಮಗೆ."

" ದುಡ್ಡಿರೋದೆ ಖರ್ಚುಮಾಡಿಸಿಕೊಳ್ಳುವುದಕ್ಕಲ್ಲವೇ ?"

" ನನಗೇನೂ ಬೇಕಾಗಿಲ್ಲ."

" ಬಳೇ ತೆಗೆದುಕೊಂಡು ಬರುತ್ತಿದ್ದಾನೆ. ಸುಮ್ಮನೆ ನೋಡಿ ನಿನಗೆ ಯಾವುದುಬೇಕೋ ಒಂದು ಜತೆ ಆರಿಸಿಕೋ. ಅಂಗಡಿಯವನ ಮುಂದೆ ಪಂಚಾಯಿತಿಮಾಡಬೇಡ."

ಮಕಮಲ್ ಒಳಹಾಸು ಹಾಕಿದ್ದ ಪೆಟ್ಟಿಗೆಗಳನ್ನು ತಂದು ನೌಕರ ನಂಜಪ್ಪನ ಮುಂದಿಟ್ಟು, ಪೆಟ್ಟಿಗೆಗಳನ್ನು ತೆಗೆದು ತೋರಿಸಿದ. ಬಗೆಬಗೆಯ ನಕಾಸೆ ಕೆತ್ತಿದ ಬಳೆಗಳು – ಸುತ್ತಲೂ ಬಿಳಿಯ, ಕೆಂಪು ಕಲ್ಲುಗಳನ್ನು ಕೂಡಿಸಿದ ಬಳೆಗಳು – ಮುಂಗೈ ಮೇಲೆ ದೊಡ್ಡಕಲ್ಲು, ಹೃದಯದಾಕಾರವಿಟ್ಟ ಬಳೆಗಳು ಕಣ್ಣು ಕೋರೈಸಿದವು. ಸರಸ್ವತಿ ಅವುಗಳನ್ನು ಜತೆಜತೆಯಾಗಿ ತೆಗೆದುಕೊಂಡು ನೋಡಿದಳು.

" ಯಾವುದು ಚೆನ್ನಾಗಿದೆ."

" ಎಲ್ಲವೂ ಚೆನ್ನಾಗಿಯೇ ಇದೆ."

" ಒಂದು ಜತೆ ಆರಿಸು."

" ಆರಿಸಲೇ ಬೇಕೆ ?"

" ನೀನು ಆರಿಸದಿದ್ದರೆ ನಾನೇ ಆರಿಸುತ್ತೇನೆ."

" ಅದೇ ಒಳ್ಳೆಯದು – ಹಾಗೇ ಮಾಡಿ."

ನಂಜಪ್ಪ ಆರಿಸಿದ ಜತೆಯಲ್ಲಿ ಮುಂಗೈಮೇಲೆ ಹೃದಯದಾಕಾರವಿತ್ತು

ಹೃದಯದೊಳಗೆ ಒಂದೊಂದು ಕೆಂಪುಕಲ್ಲು ಕೂಡಿಸಲ್ಪಟ್ಟಿತ್ತು. ಸರಸ್ವತಿಯೂ ಮನಸ್ಸಿನಲ್ಲಿ ಅದನ್ನೇ ಆರಿಸಿದ್ದಳು.

" ಬೆಲೆಯೆಷ್ಟಾಗುತ್ತದೆ ? "

ನೌಕರ ಬಳೆಯ ಜತೆಯನ್ನು ಯಜಮಾನನಿಗೆ ತೋರಿಸಿದ. ಅವನು ಬಳೆಯ ನಂಬರು ನೋಡಿ, ಪುಸ್ತಕದಲ್ಲಿ ಹುಡುಕಿ

" ಮುನ್ನೂರ ತೊಂಭತ್ತಾರು ರೂಪಾಯಿ, ಹತ್ತಾಣೆಯಾಗುತ್ತದೆ " ಎಂದ.

" ಚಿನ್ನ ಎಷ್ಟು ಸವರನ್ ಇದೆ ? "

" ಐದು ಸವರನ್ ಚಿನ್ನವಿದೆ. "

" ಚಿನ್ನ ಗ್ಯಾರಂಟಿ ತಾನೆ ? "

" ಗ್ಯಾರಂಟಿ ಮಾಲಿಗೆ ನಮ್ಮ ಅಂಗಡಿ ಪ್ರಸಿದ್ಧಿ ಸಾರ್. "

" ಬಿಲ್ ಹಾಕಿ " ಎಂದು ನಂಜಪ್ಪ ಹೇಳಿದ.

ಬಿಲ್ಲಿನ ಹಣ ಪಾವತಿಮಾಡಿ ನಂಜಪ್ಪ ಸರಸ್ವತಿಯನ್ನು 'ಚಂದೀರಾಮ'ನ ಬಟ್ಟೆಯ ಅಂಗಡಿಗೆ ಕರೆದೊಯ್ದ. ಅಲ್ಲಿಯೂ ಕಾರಿನಿಂದ ಇಳಿಯುವುದಕ್ಕೆ ಸರಸ್ವತಿ ತಕರಾರು ಮಾಡಿದಳು.

" ಮಕ್ಕಳಿಗೆ ಏನಾದರೂ ಬಟ್ಟೆ ತೆಗೆದುಕೊಳ್ಳುವೆಯಂತೆ—ಇಳಿ. "

" ಮೊನ್ನೆಯೆಲ್ಲಾ ಸೀರೆಗಳು ತಂದುಕೊಟ್ಟಿದ್ದೀರಿ. ಈಗೇಕೆ ಬಟ್ಟೆ. "

ನಂಜಪ್ಪ ಬಲವಂತಮಾಡಿ ಸರಸ್ವತಿಯನ್ನು ಕಾರಿನಿಂದ ಇಳಿಸಬೇಕಾಯಿತು. ಅಂಗಡಿಯವರು ಸೀರೆಗಳ ರಾಶಿರಾಶಿಯನ್ನು ತಂದು ಮುಂದೆ ಹರಡಿದರು.

" ಇಬ್ಬರಿಗೂ ಒಂದೊಂದು ಸೀರೆ, ನಾಲ್ಕು ಕುಪ್ಪಸದ ಬಟ್ಟೆ ಆರಿಸು. "

ಎಂದು ಹೇಳಿದ. ಸರಸ್ವತಿ ಬಟ್ಟೆಗಳ ರಾಶಿಯಲ್ಲಿ ಹುಡುಕಿ ವಿವಿಧ ವರ್ಣದ, ಆದರೆ ಒಂದೇ ಮಾದರಿಯ ಎರಡು ಬನಾರಸ್ ಸೀರೆಗಳನ್ನಾರಿಸಿ, ಅವುಗಳಿಗೆ ನಿನಾಸ್, ಬನಾರಸ್, ಬಂಗಾಳ ರೇಷ್ಮೆಗಳಲ್ಲಿ ಎಂಟು ಕುಪ್ಪಸದ ಬಟ್ಟೆಗಳನ್ನಾರಿಸಿದಳು. ನಂಜಪ್ಪ ಅವುಗಳನ್ನು ಒಂದೆಡೆಗಿಟ್ಟು ನೌಕರನಿಗೆ

ಹೇಳಿ ಜಾರ್ಜೆಟ್, ಸೀರೆಗಳನ್ನು ತರಿಸಿದ. ಅವುಗಳಲ್ಲಿ ಒಂದು ಎಣ್ಣೆಗೆಂಪಿನ ಬಣ್ಣದ್ದು, ಒಂದು ಹಳದಿ ಬಣ್ಣದ್ದನ್ನು ತಾನೇ ಆರಿಸಿ, ಬೇರೆಬೇರೆ ಬಣ್ಣಗಳ ನಾಲ್ಕು ಕುಪ್ಪಸಗಳನ್ನು ಹರಿಸಿದ.

ಅಂಗಡಿಯವನು ಗಂಟು ಹೊತ್ತುಕೊಂಡು

" ಬಿಲ್ ಹಾಕಿಸಲೇ ಸಾರ್ " ಎಂದು ಕೇಳಿದ.

ನಂಜಪ್ಪನ ದೃಷ್ಟಿ ಎದುರಿಗೆ ಗಾಜಿನ ಅಲ್ಮೀರಾದಲ್ಲಿದ್ದ ಪರ್ಸುಗಳ ಕಡೆ ಹೋಯಿತು. ಅವುಗಳಲ್ಲಿ ಕೆಂಪು ಬಣ್ಣದ ಪರ್ಸ್ ಆರಿಸಿ ನೌಕರನ ಕೈಗಿತ್ತು

" ಎಲ್ಲಾ ಸೇರಿಸಿ ಬಿಲ್ ಹಾಕಿಸಿಬಿಡಿ " ಎಂದ.

ಬಟ್ಟೆಯ ಗಂಟನ್ನೂ ಬಿಲ್ಲನ್ನೂ ತಂದು ನಂಜಪ್ಪನ ಕೈಗಿತ್ತ. ನಂಜಪ್ಪ ಬಿಲ್ಲನ್ನು ಒಮ್ಮೆ ಪರಾಮರ್ಶಿಸಿ ದುಡ್ಡುಕೊಟ್ಟ.

ರೂಮಿಗೆ ಹಿಂದಿರುಗಿದ ಮೇಲೆ ಸರಸ್ವತಿ ಏನನ್ನೋ ಲೆಕ್ಕ ಹಾಕುತ್ತ ಕುಳಿತಳು. ಅವಳ ಏಕಾಗ್ರತೆಯನ್ನು ನೋಡಿ ನಂಜಪ್ಪ

" ಏನೋ ಬಹಳ ಲೆಕ್ಕಾಚಾರ ಮಾಡುವಂತಿದೆ. "

" ಬೆಂಗಳೂರು ಬಿಟ್ಟ ಹೊತ್ತಿನಿಂದ ಈವರೆಗೆ ಎಷ್ಟು ಖರ್ಚುಮಾಡಿದ್ದೀರಿ ಎಂದು ಲೆಕ್ಕಹಾಕುತ್ತಿದ್ದೆ. "

" ಒಳ್ಳೆಯದು, ಲೆಕ್ಕವೆಲ್ಲಿಗೆ ಬಂತು ? "

" ಈಗಾಗಲೇ ಒಂದು ಸಾವಿರ ಕೈಬಿಟ್ಟುಹೋಗಿದೆ. ನಾವು ಊರು ಮುಟ್ಟುವಷ್ಟರಲ್ಲಿ ಇನ್ನೂ ಇನ್ನೂರು ಮುನ್ನೂರು ಆಗಬಹುದು. "

" ಆದರೆ ಆಯಿತು. "

" ಹೀಗೆ ಖರ್ಚು ಮಾಡುವುದು ಯಾವ ನ್ಯಾಯ ರಾಜೂ. "

" ನೀನು ಸಂತೋಷವಾಗಿದ್ದರೆ ಸಾಕು. ಖರ್ಚಿಗೆ ನಾನೇನೂ ಹೆದರುವುದಿಲ್ಲ. "

" ಒಡವೆ, ವಸ್ತುವಿಲ್ಲದೆ ನಾನು ಸಂತೋಷವಾಗಿರಲಾರೆನೇನು ? "

" ಇಲ್ಲವೆಂದು ನಾನು ಹೇಳಲಿಲ್ಲ. ನಿನ್ನಿಂದ ನಾನು ಪಡುವ ಸೌಖ್ಯಕ್ಕೆ ಎಷ್ಟುಕೊಟ್ಟರೂ ಸಾಲದಾಗಿದೆ. "

ಊಟ ಮುಗಿದ ಮೇಲೆ ನಂಜಪ್ಪ ಮಲಗಿಬಿಟ್ಟ. ಅವನಿಗೆ ಗಾಢನಿದ್ರೆ ಹತ್ತಿತು. ಸರಸ್ವತಿಗೆ ನಿದ್ರೆ ಬರಲಿಲ್ಲ. ಎದ್ದು ಕುಳಿತಳು. ತಲೆಯಲ್ಲಿ ನೂರಾರು ಯೋಚನೆಗಳು ಸುಳಿದಾಡಿದವು. ಮೊದಲನೆಯ ದಿನ, ಮದರಾಸಿಗೆ ಬಂದಾಗ, ಮಂಜಯ್ಯನ ಸಂಬಂಧಕ್ಕೆ ತಿಲೋದಕ ಬಿಡಬೇಕೆಂದು ಅವಳು ಮಾಡಿದ್ದ ಯೋಚನೆಗೆ ಬಲವಾದ ಧಕ್ಕೆ ತಗುಲಿತ್ತು. ನಂಜಪ್ಪನ ಉತ್ಕಟಾಕಾಂಕ್ಷೆ, ಮಿತಿಯಿಲ್ಲದ ಧಾರಾಳ, ಮನಸ್ಸಿನ ಕೊರಗು ಅವಳ ನಿರ್ಧಾರವನ್ನು ಬಲಪಡಿಸಬೇಕಾಗಿತ್ತು. ಆದರೆ ಅದಕ್ಕೆ ವಿರುದ್ಧವಾದ ನಿರ್ಣಯದ ಕಡೆಗೆ ಅವಳ ಮನಸ್ಸು ಹಾರಿತ್ತು. ' ನಂಜಪ್ಪನವರಿಗೆ ಹುರುಡು ಹುಟ್ಟಿದೆ. ಮಂಜಯ್ಯನವರಿಗಿಂತ ತಾವು ಧಾರಾಳಿ ಎಂದು ತೋರಿಸಿಕೊಳ್ಳುವ ಚಪಲ ಹುಟ್ಟಿದೆ. ಮಂಜಯ್ಯ ಎದುರಾಳಿಯಾಗಿರುವ ವರೆಗೆ ಈ ಹುರುಡು ಉಳಿಯುತ್ತದೆ. ನಾಳೆ ಮಂಜಯ್ಯ ಕೈಮುಗಿದು ಹೊರಟುಹೋದರೆ ಈ ಉತ್ಸಾಹ, ಧಾರಾಳ, ಉತ್ಕಟೇಚ್ಛೆ ನಂಜಪ್ಪನವರಲ್ಲಿ ಉಳಿಯಲು ಸಾಧ್ಯವೇ? ಅಡವಿಟ್ಟಿದ್ದ ಒಡವೆಯನ್ನು ಮಂಜಯ್ಯ ಬಿಡಿಸಿ ತಂದು ಕೊಟ್ಟರಲ್ಲಾ ಎಂಬ ಅಸೂಯೆಯಿಂದ ನಂಜಪ್ಪನವರಿಂದು ಬಂಗಾರದ ಬಳೆ ಕೊಡಿಸಿದರು. ಅವರಾಗಿ ಅವರೇ ಬಳೆ ಕೊಡಿಸುತ್ತಿದ್ದರೇ ? " — ಉಭಯಪಕ್ಷಗಳ ವಾದಗಳನ್ನೂ ತೂಗಿನೋಡಿ ' ಮಂಜಯ್ಯನವರು ಇರುವುದೇ ಒಳ್ಳೆಯದು. ಅವರು ಬಂದಾಗಿನಿಂದ ಸಂಸಾರದ ಯೋಚನೆಯಿಲ್ಲ. ಕೈಯಲ್ಲಿ ನಾಲ್ಕು ಕಾಸು ಓಡಿಯಾಡುವಂತಾಯಿತು. ನಾಳೆ ಮಂಜುಳನ ಲಗ್ನಕ್ಕೂ ಸಹಾಯ ಮಾಡಲು ಮಾತು ಕೊಟ್ಟಿದ್ದಾರೆ— ನಿಷ್ಕಾರಣವಾಗಿ ಅವರನ್ನೇಕೆ ಕಳೆದುಕೊಳ್ಳಬೇಕು. '—ಆದರೆ ಈ ಇತ್ಯರ್ಥ ಕಾರ್ಯರಂಗದಲ್ಲಿ ಸುಲಭವಾದುದಲ್ಲವೆಂಬುದು ಸರಸ್ವತಿಗೆ ಚೆನ್ನಾಗಿ ಗೊತ್ತು– ' ನಂಜಪ್ಪ ಒಂದೇ ಸಮನೆ ಮಂಜಯ್ಯನವರ ಮೇಲೆ ಉರಿದುಬೀಳುತ್ತಿದ್ದಾರೆ. ಇಬ್ಬರನ್ನೂ ತೃಪ್ತಿಸುವುದು ಹೇಗೆ? ಇಬ್ಬರಿಗೂ ಘರ್ಷಣೆಯಾದರೆ ನಗೆಗೀಡಾಗುತ್ತದೆ. ಬೇಸರಗೊಂಡು ಇಬ್ಬರೂ ನಿಂತುಬಿಟ್ಟರೆ ಬೀದಿಯಲ್ಲಿ ಅಲೆಯಬೇಕಾದ ಪರಿಸ್ಥಿತಿಯೊದಗುತ್ತದೆ. ಯಾವ ರೀತಿಯಲ್ಲಿ ಈ ಸಮಸ್ಯೆ ಬಗೆಹರಿಸಬೇಕೆಂದು ಸರಸ್ವತಿಗೆ ತೋರಲಿಲ್ಲ. ' ದೇವರು ಮಾಡಿಸಿದ್ದಾಗಲಿ ' ಎಂದು

ಸಮಾಧಾನ ಮಾಡಿಕೊಂಡಳು.

ನಂಜಪ್ಪ ನಿದ್ರೆ ಮುಗಿಸಿ ಕಣ್ಣು ಬಿಟ್ಟು ನೋಡಿದ. ಪಕ್ಕದಲ್ಲಿ ಸರಸ್ವತಿ ಇರಲಿಲ್ಲ. ಇನ್ನೊಂದು ಮಗ್ಗುಲಾಗಿ ಸರಸ್ವತಿ ಕುಳಿತಿದ್ದುದನ್ನು ಕಂಡು

" ಏಕೆ ಸರಸಾ, ನಿದ್ರೆ ಬರಲಿಲ್ಲವೇ ? "

" ನನಗೇಕೋ ನಿದ್ರೆ ಹತ್ತಲಿಲ್ಲ. "

" ದೂರ ಹೋಗಿ ಏಕೆ ಕುಳಿತೆ. "

ಸರಸ್ವತಿ ಎದ್ದು ಬಂದು ಅವನ ಪಕ್ಕದಲ್ಲಿ ಕುಳಿತಳು.

" ದೂರ ಹೋಗಬೇಡ, ಸರಸೂ. "

" ಇಲ್ಲ. ನಿಮಗೆ ಚೆನ್ನಾಗಿ ನಿದ್ರೆ ಬಂದಿತ್ತು. ಎಲ್ಲಿ ಎಚ್ಚರವಾಗುತ್ತದೋ ಎಂದು ನಾನು ಎದ್ದು ಹೋದೆ. ನಿಮ್ಮನ್ನು ಬಿಟ್ಟು ನಾನೆಲ್ಲಿಗೆ ಹೋಗಲಿ. "

" ನಿನಗೆ ಮಾತನಾಡುವುದನ್ನು ಯಾರು ಕಲಿಸಿದರೇ ಸರಸೂ. "

" ಏಕೆ ? "

" ನಿನ್ನ ಧ್ವನಿ ಕಿವಿಯಮೇಲೆ ಬಿದ್ದರೆ ಸಾಕು ನನಗೆ ರೋಮಾಂಚನವಾಗುತ್ತದೆ. "

" ಇದನ್ನೇ ' ಹುಚ್ಚು ' ಎಂದು ತಿಳಿದವರು ಕರೆಯುವುದು. "

" ನನ್ನನ್ನು ಯಾವ ಹುಚ್ಚಾಸ್ಪತ್ರೆಗೆ ಕಳಿಸಿಕೊಡುತ್ತೀ ? "

" ನನ್ನ ತೊಡೆಯ ಮೇಲಿದೆ ನಿಮ್ಮ ಆಸ್ಪತ್ರೆ. "

" ನಿನ್ನ ಸ್ತನಗಳಲ್ಲಿದೆ ನನ್ನ ಔಷಧಿ. "

" ಹೋಗಿ ರಾಜೂ—ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲ. "

" ನಿನ್ನ ಹತ್ತಿರ ನಾನು ನಾಚಿದರೆ ಎಲ್ಲಿಗೆ ಹೋಗಲಿ ಹೇಳು. "

" ಎಲ್ಲಿಗೂ ಹೋಗುವುದಿಲ್ಲವೇ ? "

" ಆ ಕಾಲ ಮುಗಿದುಹೋಯಿತು ಸರಸಾ. "

" ನಾನು ಮುದುಕಿಯಾದೆ. ಇಲ್ಲಿ ನೋಡಿ ತಲೆಯಲ್ಲಿ ಒಂದೊಂದು ಬಿಳಿಗೂದಲು. "

" ಅದೂ ನಿನ್ನ ಮುಖಕ್ಕೊಂದು ಶೋಭೆಯನ್ನಿತ್ತಿದೆ. "

" ಏನು ಶೋಭೆಯೋ.... ಕ್ಷೋಭೆ. "

" ಏಕೆ ಬೇಸರ? "

" ನಿಮ್ಮ ಸ್ಥಿತಿನೋಡಿ. "

" ನನ್ನ ಸ್ಥಿತಿಯೇನಾಗಿದೆ ? "

" ಅಂಗಡಿ—ಮನೆ ಎಲ್ಲಾ ಮರೆತುಬಿಟ್ಟು ಹೀಗೆ ನೀವು ನನ್ನ ಧ್ಯಾನ-ಮಾಡುತ್ತ ಕುಳಿತರೆ.... "

" ಬೇರೆ ಯೋಚನೆಯೇ ನನ್ನ ತಲೆಯಲ್ಲಿ ಬರದಲ್ಲ. "

" ನಿಮ್ಮ ಮನೆ ವಿಷಯ ನೀವು ನನಗೆ ಹೇಳಿಯೇ ಇಲ್ಲ. "

" ಮನೆಯ ವಿಷಯ ಹೇಳಿಕೊಳ್ಳುವಂಥಾದ್ದು ಏನಿದೆ ? "

" ನಿಮ್ಮ ಹೆಂಡತಿ ಹೇಗೆ? "

" ಹೇಗೆಂದರೆ. "

" ಚೆನ್ನಾಗಿದ್ದಾರೆಯೇ ? "

" ಚೆನ್ನಾಗಿದ್ದಾಳೆ. "

" ನನಗಿಂತ ಚೆನ್ನಾಗಿದ್ದಾರೆಯೇ ? "

" ನಿಜ ಹೇಳಲೇನು ? "

" ನಿಜ ಹೇಳಲಿ ಎಂದೇ ನಾನು ಕೇಳಿದ್ದು. "

" ನಿನಗಿಂತಲೂ ಚೆನ್ನಾಗಿದ್ದಾಳೆ. "

" ರೂಪವತಿಯಾದ ಹೆಂಡತಿಯನ್ನಿಟ್ಟುಕೊಂಡು ನನ್ನಂಥ ಕುರೂಪಿಯ-ನ್ನೇಕೆ ಮೋಹಿಸಿದಿರಿ. "

" ಉತ್ತರ ನೀನೇ ಹೇಳಿರುವೆಯಲ್ಲಾ. "

" ಏನೆಂದು ? "

" ಮೋಹವೆಂದು ! "

" ನನ್ನಲ್ಲೇನು ಕಂಡಿರಿ ? "

" ತುಂಬಿದ ಜೀವನ. ನನ್ನ ಜೀವ ತುಂಬುವ ಚೇತನ. "

" ಅದು ಎಲ್ಲಾ ಹೆಂಗಸರಲ್ಲಿಯೂ ಇರುತ್ತದೆ. "

" ಇರುವುದಿಲ್ಲ. ಅದು ಕೆಲವರು ಪಡೆದುಬಂದಿರುವ ಸೌಭಾಗ್ಯ. ಇಷ್ಟೇಕೆ ಬಿಡಿಸಿ ಕೇಳಿದೆ. "

" ಸುಮ್ಮನೆ. ಹೊತ್ತುಗಳೆಯುವುದಕ್ಕೆ. "

" ಅಲ್ಲ. ನನ್ನ ಪರೀಕ್ಷೆಮಾಡುವುದಕ್ಕೆ. ನನ್ನ ಸ್ನೇಹ ದೃಢವಾದುದೋ ಅಲ್ಲವೋ ಎಂದು ತಿಳಿಯುವುದಕ್ಕೆ. "

" ನಿಮ್ಮ ಸ್ನೇಹ ದೃಢವಾದುದೆಂದು ನಾನು ಬಲ್ಲೆ. "

" ಇಲ್ಲ. ಅದರ ಆಳ ನಿನಗಿನ್ನು ಗೊತ್ತಿಲ್ಲ ಸರಸಾ. ಕಾಲಾನುಕಾಲಕ್ಕೆ ಗೊತ್ತಾಗುತ್ತದೆ. "

ವಿಷಯ ತುಂಬ ಗಂಭೀರವಾಯಿತೆಂದು ಸರಸ್ವತಿ,

" ಸಂಜೆ ಎಲ್ಲಿಗೆ ಹೋಗೋಣ. "

" ನೀನೇ ಹೇಳು. ವಸಂತಕುಮಾರಿ ಕಛೇರಿ ಇದೆಯಂತೆ ರಸಿಕರಂಜಿನಿ ಸಭೆಯಲ್ಲಿ. ಹೋಗೋಣವೇ ? "

" ನಾನು ಸಿದ್ಧಳಾಗಿದ್ದೇನೆ. "

" ಹತ್ತು ನಿಮಿಷದಲ್ಲಿ ನಾನೂ ಸಿದ್ಧನಾಗುತ್ತೇನೆ. ಹೊರಗಡೆಯೇ ಎಲ್ಲಿಯಾದರೂ ತಿಂಡಿ ತಿನ್ನೋಣ. "

ಇಬ್ಬರೂ ಬಟ್ಟೆ ಹಾಕಿಕೊಂಡು ಸಿದ್ಧರಾದರು. ಸರಸ್ವತಿ ಬಳೆಯ ಜತೆ ತೆಗೆದು ನಂಜಪ್ಪನ ಕೈಯಲ್ಲಿಟ್ಟಳು. ನಂಜಪ್ಪ ಅದನ್ನು ನೋಡುತ್ತಾ

" ನನ್ನ ಕೈಗೇಕೆ ಕೊಟ್ಟೆ. "

" ಏಕೆ ಹೇಳಿ ?— ನೀವೇ ತೊಡಿಸಬೇಕು. "

ನಂಜಪ್ಪ ತಾನೇ ಪ್ರೀತಿಯಿಂದ ಸರಸ್ವತಿಯ ಕೈಗೆ ಬಳೆ ತೊಡಿಸಿದ. ಸರಸ್ವತಿ ತನ್ನ ಕೈಗಳನ್ನೊಮ್ಮೆ ನೋಡಿಕೊಂಡು ಬಾಗಿ ನಂಜಪ್ಪನ ಪಾದಗಳನ್ನು ಮುಟ್ಟಿ ನಮಸ್ಕರಿಸಿದಳು. ನಂಜಪ್ಪನ ಹೃದಯಕ್ಕೆ ವಿಚಿತ್ರಾನುಭವವಾಯಿತು. ಅವಳನ್ನು ಮೇಲಕ್ಕೆಬ್ಬಿಸಿ ಗಟ್ಟಿಯಾಗಿ ಅಪ್ಪಿ

" ಹೀಗೇಕೆ ಮಾಡಿದೆ ಸರಸಾ ? "

" ನೀವು ನನ್ನ ಸ್ವಾಮಿಯಲ್ಲವೇ ? "

" ನಿನ್ನ ಮಾತು ದೇವರು ನಿಜಮಾಡಲಿ. " ಎಂದು ಅಕ್ಕರೆಯಿಂದ ನುಡಿದ.

ಮೋಟಾರಿನಲ್ಲಿ ಇಬ್ಬರೂ ಕುಳಿತರು. ಅದು ಹೋಗುತ್ತಿದ್ದಂತೆ ನಂಜಪ್ಪ ಡ್ರೈವರನ್ನು ಕೇಳಿದ,

" ತಿಂಡಿಗೆ ಒಳ್ಳೆಯ ಹೋಟಿಲ್ ಯಾವದು ಡ್ರೈವರ್ ? "

" ಮೌಂಟ್ ರೋಡಿನಲ್ಲಿ ಹೊಸದಾಗಿ ಒಂದು ಹೋಟಿಲಾಗಿದೆ ಸಾರ್. ತುಂಬ ಚೆನ್ನಾಗಿದೆ. ಏರ್‌ಕಂಡಿಷನ್ ಮಾಡಿದ (air–conditioned) ರೂಮುಗಳು ಇವೆ. "

" ತಿಂಡಿ ಚೆನ್ನಾಗಿರುತ್ತದೆಯೇ ? "

" ಬಹಳ ಚೆನ್ನಾಗಿರುತ್ತದೆ ಸಾರ್. "

ಡ್ರೈವರು ಅವರನ್ನು ಮೌಂಟ್‌ರೋಡಿನ 'ನಿಯೋಭಾರತ್ ಕೆಫೆ' ಬಳಿಗೆ ಕರೆತಂದು ಬಿಟ್ಟ. ನಿಯೋಭಾರತ ವಿಶೇಷ ರೀತಿಯಲ್ಲಿ ಸ್ಥಾಪಿತವಾಗಿದ್ದ ಉಪಾಹಾರಗೃಹ. ದೊಂಬಿಯಲ್ಲಿ ಕುಳಿತು ತಿಂಡಿ ತಿನ್ನಲು ಇಷ್ಟಪಡದಿದ್ದವರಿಗೆ ಮಹಡಿಯ ಮೇಲೆ ಪ್ರತ್ಯೇಕವಾದ ಕೊಠಡಿಗಳಿದ್ದವು. ಕೊಠಡಿಗೊಬ್ಬೊಬ್ಬ ಸರ್ವರ್— ಡ್ರೈವರ್ ತಿಳಿಸಿದಂತೆ ಪ್ರತಿಯೊಂದು ಕೊಠಡಿಯೂ ಏರ್‌ಕಂಡಿಷ ನಾಗಿತ್ತು. ಈ ವಿಶೇಷ ಕೊಠಡಿಗಳಲ್ಲಿ ಹೋಗಿ ಕೂಡುವುದಕ್ಕೇ ಹೊಟೇಲಿ ನವರು ತಲೆಗೆ ನಾಲ್ಕಾಣೆ ಶುಲ್ಕ ವಸೂಲ್ಮಾಡುತ್ತಿದ್ದರು.

ನಂಜಪ್ಪ, ಸರಸ್ವತಿ ಒಂದು ಕೊಠಡಿಯಲ್ಲಿ ಹಾಕಿದ್ದ ಸುಖವಾದ ಬೆತ್ತದ ಕುರ್ಚಿಗಳ ಮೇಲೆ ಕುಳಿತರು. ಸರ್ವರ್ ಐಸ್ ಹಾಕಿದ ನೀರು ತಂದು ಮುಂದಿಟ್ಟ. ನಂಜಪ್ಪ ಮೆನುಕಾರ್ಡ್ ನೋಡುತ್ತಾ

" ಮೊದಲು ಐಸ್‌ಕ್ರೀಮ್ ತಂದುಕೊಡು " ಎಂದ.

ಐಸ್‌ಕ್ರೀಮ್ ಇಬ್ಬರೂ ಸೇವಿಸುತ್ತ ಕುಳಿತಾಗ ಸರಸ್ವತಿ

" ನಿಮಗೆ ಮದರಾಸ್ ಚೆನ್ನಾಗಿ ಗೊತ್ತು. "

" ಗೊತ್ತಿಲ್ಲದೆ ಏನು. ನಾನು ವ್ಯಾಪಾರಕ್ಕೆ ಮೇಲಿಂದ ಮೇಲೆ ಇಲ್ಲಿಗೆ

ಬರುತ್ತಿರುತ್ತೇನೆ."

"ಯಾರ ಅಂಗಡಿಯಲ್ಲಿ ವ್ಯಾಪಾರಮಾಡುವಿರಿ?"

"ಗೋಡೌನ್ ಸ್ಟ್ರೀಟಿನಲ್ಲಿರುವ ಒಬ್ಬ ಸೇಟ್ ಅಂಗಡಿಯಲ್ಲಿ."

"ಅವರನ್ನು ನೋಡುವುದಿಲ್ಲವೇ?"

"ಈಗೇಕೆ ನೋಡಲಿ."

ಐಸ್‌ಕ್ರೀಮ್ ಮುಗಿಯಲು ಸ್ಪೆಷಲ್ ಈರುಳ್ಳಿ ದೋಸೆಗೆ ಆರ್ಡರು ಮಾಡಿದ. ದೋಸೆ ತಂದ ಸರ್ವರ್ ಕನ್ನಡ ಮಾತನಾಡುವುದನ್ನು ನೋಡಿ,

"ಇದೂ ಉಡುಪಿಯವರ ಹೋಟೆಲೇನಯ್ಯ" ಎಂದು ಕೇಳಿದ.

ಹೌದೆಂದು ಸರ್ವರ್ ಉತ್ತರಿಸಿದ.

ಸರಸ್ವತಿ ದೋಸೆ ತಿನ್ನುತ್ತಿದ್ದಾಗ ನಂಜಪ್ಪ ವ್ಯಂಗ್ಯವಾಗಿ

"ಇದೂ ನಿಮ್ಮವರದೇ ಹೊಟೇಲು" ಎಂದ.

ಸರಸ್ವತಿ ಕತ್ತೆತ್ತಿ ನೋಡಿ

"ಈ ಕೊಂಗುಮಾತು ನೀವು ಬಿಡುವುದಿಲ್ಲವಲ್ಲ." ಎಂದಳು.

ಸರಸ್ವತಿ, ನಂಜಪ್ಪ ಉಪಾಹಾರ ಮುಗಿಸಿಕೊಂಡು ಸಂಗೀತಕ್ಕೆ ಹೋಗುವ ವೇಳೆಗೆ ಕಛೇರಿ ಆರಂಭವಾಗಿತ್ತು. ಹತ್ತು ರೂಪಾಯಿನ ಎರಡು ಟಿಕೆಟ್‌ಗಳನ್ನು ತೆಗೆದು ಇಬ್ಬರೂ ಹೋಗಿ ಕುಳಿತರು.

ವಸಂತಕುಮಾರಿಯ ಸುಕೋಮಲ ಕಂಠದಿಂದ ತಾನವಿತಾನಗಳು ನಿರರ್ಗಳವಾಗಿ ಹೊರಡುತ್ತಿದ್ದವು. ಅವಳ ರಾಗವಿಸ್ತಾರ ಭಾವಪೂರ್ಣವಾಗಿತ್ತು. ಕಛೇರಿ ಮುಗಿಯುವ ವೇಳೆಗೆ ರಾತ್ರಿ ಹತ್ತು ಗಂಟೆಯಾಗಿತ್ತು.

ಹೊಟೇಲಿಗೆ ಹಿಂದಿರುಗುವಾಗ ನಂಜಪ್ಪ ಕೇಳಿದ

"ಕಛೇರಿ ಹೇಗಿತ್ತು,"

"ಸೊಗಸಾಗಿತ್ತು. ಆದೇಕೆ ಜನವೇ ಇಲ್ಲ. ಇವಳು ಬೆಂಗಳೂರಿಗೆ ಬಂದು ಹಾಡಿದಾಗ ಏನು ನೂಕುನುಗ್ಗಲು—ನನಗೆ ಟಿಕೆಟ್ಟೇ ಸಿಕ್ಕಲ್ಲಿಲ್ಲ."

"ಬೆಂಗಳೂರು ಸಮಾಚಾರವೇ ಹಾಗೆ ತಾನೆ. ಹೊರಗಿನವರು ಯಾರೇ ಬಂದರೂ ಪುರಸ್ಕಾರ."

" ಚೆನ್ನಾಗಿ ಹಾಡುತ್ತಾಳೇಂದ್ರೆ. "

" ನಾನು ಇಲ್ಲವೆನ್ನಲಿಲ್ಲ. "

ಅಂದೂ ಇಬ್ಬರಿಗೂ ಊಟಬೇಕಾಗಿರಲಿಲ್ಲ. ಭಾರತ ಕೆಫೆಯ ಉಪಾಹಾರ ಇನ್ನೂ ಕರಗಿರಲಿಲ್ಲ. ಹಾಲು ತರಿಸಿ ಕುಡಿದು, ಇಬ್ಬರೂ ತಾಂಬೂಲ ಸೇವಿಸಿದರು.

" ಮದರಾಸು ಬೇಸರವಾಗಿಲ್ಲವಲ್ಲ " ಎಂದು ನಂಜಪ್ಪ ಕೇಳಿದ.

" ನಿಮ್ಮ ಜತೆ ಎಲ್ಲಿದ್ದರೂ ನನಗೆ ಬೇಸರವಿಲ್ಲ. ಊರಿಗೆ ಯಾವಾಗ ಹಿಂದಿರುಗುವುದು ? "

" ಆಗಲೇ ಊರಿನ ಚಿಂತೆ ಆರಂಭವಾಯಿತೇ ? "

" ಮಕ್ಕಳು ಏನು ಮಾಡಿಕೊಳ್ಳುತ್ತಿವೆಯೋ ? "

" ಏನು ಮಾಡಿಕೊಳ್ಳುವುದು—ಊಟ ಮಾಡುತ್ತಾರೆ, ಸ್ಕೂಲಿಗೆ ಹೋಗುತ್ತಾರೆ. ಕುಮಾರ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಾನೆ. "

" ನಾನು ಊರಿಗೆ ಹೋದಮೇಲೆ ಒಂದು ದಿನದ ಮಟ್ಟಿಗೆ ಮೈಸೂರಿಗೆ ಹೋಗಿ ಬರಬೇಕು. "

" ಏಕೆ ? "

" ನಮ್ಮಣ್ಣನನ್ನು ನೋಡಿ ಮಂಜುಳಾ ವಿಷಯ ಏನಾದರೂ ಇತ್ಯರ್ಥ ಮಾಡಬೇಡವೇ ? ಅವನೋ ಶುದ್ಧ ಜಡಭರತ. ಮೇಲಿಂದ ಮೇಲೆ ಹೇಳುತ್ತಾ ಇದ್ದರೇ ಅವನ ಕಿವಿಗೆ ಬೀಳುವುದು. "

" ಈ ಸಲ ಅಣ್ಣನ ಮನೆಗೆ ಬಂದಿರುವ ಹಾಗೇನಲ್ಲವಲ್ಲ."

" ಛೆ, ಎಲ್ಲಿಯಾದರೂ ಉಂಟೆ ? ನಿಮ್ಮ ಜತೆ ಬಂದೆನೆಂದರೆ ನಾನು ಎಲ್ಲಾರ ಜತೆಯಲ್ಲಿಯೂ ಹೋಗುತ್ತೇನೆಯೇ ? "

" ಹೋಗಲಿ ಬಿಡು—ತಮಾಷೆಗಂದೆ. ಮೈಸೂರಿಗೆ ನಾನೂ ಬರಲೇ ? "

" ಬಂದರೇನು ಪ್ರಯೋಜನ. ನಾನು ಅಣ್ಣನ ಮನೆಗೆ ಹೋಗಬೇಕಾಗುತ್ತದೆ. "

ಅವಳ ಮಾತಿನಲ್ಲಿ ನಂಜಪ್ಪ ಸಂಶಯ ತಳೆಯಲಿಲ್ಲ.

ಇನ್ನು ಎರಡು ದಿವಸಗಳು ಮದರಾಸಿನಲ್ಲಿದ್ದು, ಎರಡನೆಯ ರಾತ್ರಿ ಊರಿಗೆ ಹೊರಡುವುದೆಂದು ನಿಶ್ಚಯವಾಯಿತು; ಮದರಾಸಿನ ವಿವಿಧ ದೇವಾಲಯಗಳು, ಪಾರ್ಕುಗಳು, ಸಿನೀಮಾ ಮಂದಿರಗಳಲ್ಲಿ ಅವರ ಕಾಲ ಸಾಗಿತು. ಹೊರಡುವುದಕ್ಕೆ ನಿಶ್ಚಯವಾಗಿದ್ದ ದಿನ ಸಂಜೆ ಸರಸ್ವತಿ ಕೇಳಿದಳು

"ರಾತ್ರಿಗೆ ಹೊರಡುವುದು ನಿಶ್ಚಯ ತಾನೆ."

ನಂಜಪ್ಪ ಸರಸ್ವತಿಯನ್ನು ಮುದ್ದಿಸುತ್ತಾ

"ಈ ರಾತ್ರಿ ಜತೆಯಲ್ಲಿ ಕಳೆಯೋಣ. ನಾಳೆಯಿಂದ ಊರಿನಲ್ಲಿ ರಾಮಾಯಣ ಇದ್ದೇ ಇದೆ. ನಾಳೆ ಬೆಳಿಗ್ಗೆ ಹೊರಟರೆ ಸಂಜೆಗೆ ಊರು ತಲುಪುತ್ತೇವೆ."

ಎಂದು ಕುಮಾರನಿಗೆ ತಾವು ಬರುವ ವಿಷಯ ತಿಳಿಸಿ ತಾರೂ ಕೊಟ್ಟ.

ಸಂಜೆ ಬೀಚಿಗೆ ಹೋಗಿ ಸ್ವಲ್ಪಹೊತ್ತು ಸುತ್ತಾಡಿಕೊಂಡು ಹೊಟೇಲಿಗೆ ಬೇಗ ತಲುಪಿದರು. ಸರಸ್ವತಿ ಸಾಮಾನುಗಳನ್ನು ಅಣಿಮಾಡಿ ಪ್ರಯಾಣದ ಸಿದ್ಧತೆ ಮಾಡಿದಳು. ಬೆಳಿಗ್ಗೆ ಆರೂಕಾಲಿಗೆ ಹೊರಡುವ ಪ್ಯಾಸೆಂಜರಿನಲ್ಲಿ ಪ್ರಯಾಣಮಾಡುವುದೆಂದು ಗೊತ್ತಾಯಿತು. ಎರಡು ಸೆಕೆಂಡ್ ಕ್ಲಾಸ್ ಟಿಕೆಟ್ ತರಿಸಿಡುವಂತೆ ನಂಜಪ್ಪ ಮ್ಯಾನೇಜರಿಗೆ ಹೇಳಿ ಕಳುಹಿಸಿದ.

ಊಟ ಮುಗಿಸಿ ನಂಜಪ್ಪ, ಸರಸ್ವತಿ ಮಲಗಿದರು.

ನಂಜಪ್ಪ ವಿಮನಸ್ಕನಾಗಿದ್ದುದನ್ನು ಕಂಡು ಸರಸ್ವತಿ ಅವನ ಬಳಿ ಸರಿದು ಅವನ ಎದೆಯ ಮೇಲೆ ಮುಖವಿಟ್ಟಳು. ನಂಜಪ್ಪ ಅವಳ ಮುಖ ನೇವರಿಸಿದ. ಸರಸ್ವತಿ ಅವನ ಮುಖಕ್ಕೆ ಮುಖವಿಟ್ಟು

"ಈಗಲೇ ನಾನು ಬೇಡವಾದೆನೆ?"

"ಹಾಗೇಕೆ ಕೇಳುವೆ ಸರಸೂ."

"ತಿರುಗಿ ಇಲ್ಲದ ಯೋಚನೆ ಆರಂಭಿಸಿಬಿಟ್ಟೆದ್ದೀರಿ."

"ಎಷ್ಟು ಮರೆಯಬೇಕೆಂದರೂ ಸಾಧ್ಯವೇ ಆಗುವುದಿಲ್ಲ."

"ಇದೇ ನಿಮಗೆ ಮನೋರೋಗವಾಗಿ ಪರಿಣಮಿಸುತ್ತೆ."

"ಚಿಕಿತ್ಸೆ ನಿನ್ನ ಕೈಯಲ್ಲಿದೆಯಲ್ಲ."

"ನನ್ನನ್ನು ನಂಬಿ ನಿರಾತಂಕವಾಗಿರಿ. ಬೆಳಿಗ್ಗೆ ಬೇಗ ಎದ್ದು ನಾವು ರೈಲಿಗೆ ಹೋಗಬೇಕು ರಾತ್ರಿಯನ್ನು—ಅದೂ ಈ ರಾತ್ರಿಯನ್ನು—ಹೇಗೆ ಕಳೆಯೋಣವೇ?"

ಎಂದಳು. ನಂಜಪ್ಪನ ಸುಪ್ತಚೇತನ ಜಾಗೃತವಾಯಿತು. ಇಬ್ಬರಿಗೂ ಅಂದು ನಿದ್ರೆ ಅನವಶ್ಯಕವೆನಿಸಿತು.

ಬೆಳಿಗ್ಗೆ ಸ್ನಾನ, ಉಪಾಹಾರ ಮುಗಿಸಿಕೊಂಡು, ಹೊಟೇಲ್ ಬಿಲ್ಲು, ಮಾಣಿಗಳಿಗೆ 'ಕಿಂಚಿದ್ಕಾಂಚನ' ಕೊಟ್ಟು ನಂಜಪ್ಪ, ಸರಸ್ವತಿ ಸ್ಟೇಷನಿಗೆ ಬಂದರು.

ಅವರಿಗಾಗಿ ರಿಸರ್ವ್ ಆಗಿದ್ದ ರೈಲ್ವೆ ಗಾಡಿಯ ಡಬ್ಬ ಅವರ ದಾರಿಯನ್ನೇ ಎದುರು ನೋಡುತ್ತಿತ್ತು.

೧೧

ರೈಲು ಬರುವುದಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆಯೇ ಕುಮಾರ ಸ್ಟೇಷನ್ನಿಗೆ ಬಂದ. ರೈಲು ವೇಳೆಗೆ ಸರಿಯಾಗಿ ಬೆಂಗಳೂರು ಸ್ಟೇಷನ್ ಮುಟ್ಟಿತು. ಕುಮಾರ ನಂಜಪ್ಪನ ಮುಖಕಂಡು, ಅವನ ಸೆಕೆಂಡ್‌ಕ್ಲಾಸ್ ಕಂಪಾರ್ಟ್‌ಮೆಂಟ್ ಬಳಿಗೆ ಹೋದ.

ನಂಜಪ್ಪ, ಸರಸ್ವತಿ ಗಾಡಿಯಿಂದಿಳಿದರು. ಕೂಲಿಗಳು ಸಾಮಾನುಗಳನ್ನು ಹೊರಗಿಟ್ಟರು. ಸರಸ್ವತಿ ಕುಮಾರನನ್ನು ಆತುರದಿಂದ ಕೇಳಿದಳು,

" ಮಕ್ಕಳು ಚೆನ್ನಾಗಿದ್ದಾರೆಯೇ ? "

" ಚೆನ್ನಾಗಿದ್ದಾರಮ್ಮ. "

" ನಾವು ಬರುವ ವಿಷಯ ತಿಳಿಸಿದಿರಾ ? "

" ತಿಳಿಸಿದೆ. "

ಒಂದು ಗಾಡಿ ಗೊತ್ತುಮಾಡಿಕೊಂಡು ಅದರಲ್ಲಿ ಸರಸ್ವತಿ ಕುಮಾರನೊಂದಿಗೆ ಮನೆಗೆ ಹೋಗುವುದೆಂದೂ ನಂಜಪ್ಪ ಬೇರೆ ಗಾಡಿ ಮಾಡಿಕೊಂಡು ತನ್ನ ಮನೆಗೆ ಹೋಗುವುದೆಂದೂ ನಿಶ್ಚಯವಾಯಿತು.

" ಈಗ ನಾಟ್ಯಶಾಲೆಗೆ ಬರುವುದಿಲ್ಲವೇ ಸ್ವಾಮಿ. " ಎಂದು ಕುಮಾರ ಕೇಳಿದ.

" ಹೊತ್ತಾಗಿದೆ. ಬೆಳಿಗ್ಗೆ ಬರುತ್ತೇನೆ. ಎಲ್ಲಾರೂ ಕ್ಷೇಮವಷ್ಟೇ ? "

" ಕ್ಷೇಮವಾಗಿದ್ದಾರೆ. "

ಗಾಡಿಯಲ್ಲಿ ಕುಳಿತಮೇಲೆ ಸರಸ್ವತಿ ನಂಜಪ್ಪನನ್ನು

" ಯಾವಾಗ ಬರುವಿರಿ ? "

" ಬೆಳಿಗ್ಗೆ ಒಂಭತ್ತು ಗಂಟೆಗೆ ಬರುತ್ತೇನೆ. " ಎಂದು ಹೇಳಿದ.

ಸರಸ್ವತಿಯನ್ನು ಮನೆಮುಟ್ಟಿಸಿದ ಮೇಲೆ ಕುಮಾರ ಹೆಚ್ಚು ಹೊತ್ತು ನಿಲ್ಲಲಿಲ್ಲ. ತನ್ನ ನಾಟ್ಯಶಾಲೆಯ ಕಡೆಗೆ ಹೋದ.

ತಾಯಿ ಬಂದುದನ್ನು ಕಂಡು ಮಂಜುಳಾ, ಸುಧೆಯರಿಗೆ ಅಪರಿಮಿತ ಸಂತೋಷವಾಯಿತು.

" ಎಷ್ಟು ದಿನ ಹೋಗಿಬಿಟ್ಟೆಯಮ್ಮ " ಎಂದಳು ಸುಧಾ.

ಮಂಜುಳಾ ತಾಯಿಯ ಕೈಯಲ್ಲಿ ಮಿನುಗುತ್ತಿದ್ದ ಬಳೆಗಳನ್ನು ನೋಡಿ

" ತೆಗೆದುಕೊಂಡೆಯಾ ಅಮ್ಮ. "

" ಹೂ—ಚೆನ್ನಾಗಿದೆಯೋ ? "

" ಚೆನ್ನಾಗಿವೆ. ನಮಗೇನೂ ಇಲ್ಲವೋ ? "

ಸರಸ್ವತಿ ತನ್ನ ಟ್ರಂಕ್ ತೆಗೆದು ಮಕ್ಕಳಿಗೆ ತಂದಿದ್ದ ಸೀರೆಗಳನ್ನು ಕೊಟ್ಟಳು. ಅವುಗಳ ಜತೆಯಲ್ಲಿದ್ದ ಜಾರ್ಜೆಟ್ ಸೀರೆಗಳನ್ನು ನೋಡಿ ಮಂಜುಳಾ,

" ನನಗೆ ಜಾರ್ಜೆಟ್ ಸೀರೆ ಬೇಕು " ಎಂದಳು.

" ನಿನಗೆ ಯಾವದು ಬೇಕು ತೊಗೋ "

ಮಂಜುಳಾ ಹೊಸ ಸೀರೆಗಳ ಅಂದಚೆಂದವನ್ನು ಮೆಚ್ಚುವುದರಲ್ಲಿ ಮೈ ಮರೆತಿದ್ದಾಗ ಸರಸ್ವತಿ ಸುಧೆಯ ಕಡೆ ತಿರುಗಿ

" ಅವರು ಬಂದಿದ್ದರೇ ? "

" ಬೆಳಿಗ್ಗೆ ಬಂದಿದ್ದರು. ಈಗ ಬರುವುದಾಗಿ ಹೇಳಿ ಹೋಗಿದ್ದಾರೆ. "

" ನಾನು ಎಲ್ಲಿಗೆ ಹೋಗಿದ್ದೇನೆಂದು ಕೇಳಿದರೇ ? "

" ಕೇಳಿದರು. ಮೈಸೂರಿಗೆ ಹೋಗಿದ್ದೀ ಎಂದು ಹೇಳಿದೆ. "

" ಇನ್ನೇನು ಹೇಳಿದರು. "

" ಏನೂ ಹೇಳಲಿಲ್ಲ. ದಿನವೂ ಬಂದು ನೋಡಿಕೊಂಡು ಹೋಗುತ್ತಿದ್ದರು. ಕುಮಾರರೂ ಬಂದು ವಿಚಾರಿಸಿಕೊಳ್ಳುತ್ತಿದ್ದರು. "

" ಮುದುಕಿಯೆಲ್ಲಿ ? "

" ಇಲ್ಲೇ ಇದ್ದರು. ನೀನು ಬರುವ ಸುದ್ದಿ ಹೇಳಿದಮೇಲೆ ಸಂಜೆ ಅಡಿಗೆ ಮಾಡಿಟ್ಟು ಮನೆಗೆ ಹೋದರು. "

ತಾನು ಇಲ್ಲದಿದ್ದಾಗ ಮನೆಯಲ್ಲೇನೂ ಹೆಚ್ಚುಕಡಿಮೆಯಾಗದಿರುವುದನ್ನು

ಕೇಳಿ ಸರಸ್ವತಿಯ ಮನಸ್ಸಿಗೆ ನೆಮ್ಮದಿಯಾಯಿತು.

ಸರಸ್ವತಿ ಎದ್ದು ಸಾಮಾನುಗಳನ್ನು ತೆಗೆದಿಟ್ಟು, ಮುಖ ತೊಳೆದು ಕೊಂಡು, ಬಟ್ಟೆ ಬದಲಾಯಿಸಿಕೊಂಡು, ಮಕ್ಕಳೊಂದಿಗೆ ಕುಳಿತು ಊಟ ಮುಗಿಸಿದಳು.

ಅಡಿಗೆಯ ಮನೆಯ ಕೆಲಸ ಮುಗಿಸಿಕೊಂಡು ಅವಳು ಹೊರಬೀಳುವ ಹೊತ್ತಿಗೆ ಸರಿಯಾಗಿ ಮಂಜಯ್ಯನವರ ಸವಾರಿ ದಯೆಮಾಡಿಸಿತು. ಸರಸ್ವತಿಯ ಮನಸ್ಸಿಗೆ ಕಿರಿಕಿರಿಯಾದರೂ ತೋರಗೊಡದೆ ಅವನ ಕಡೆ ನಗೆ ಬೀರಿದಳು. ಮಂಜಯ್ಯ ಏಕೋ ಅಸಮಾಧಾನಗೊಂಡಂತಿತ್ತು.

ರೂಮು ಸೇರಿದ ಮೇಲೆ ಅವನೇ ಕೇಳಿದ

"ಎಷ್ಟು ದಿವಸಕ್ಕೆ ಬರುವುದು!"

"ನಾಲ್ಕೈದು ದಿವಸಗಳಾಗಬಹುದು ಎಂದು ನಾನು ಹೇಳಿರಲಿಲ್ಲವೇ?"

"ಬೆಳಿಗ್ಗೆ, ಸಾಯಂಕಾಲ ನಿನ್ನ ದಾರಿ ನೋಡಿ ನೋಡಿ ಸಾಕಾಯಿತು."

ಎಂದು ಸರಸ್ವತಿಯ ಕೈಹಿಡಿದ. ಅವಳ ಹೊಸ ಬಳೆಗಳು ಕಣ್ಣಿಗೆ ಬಿದ್ದವು.

"ಇದು ಯಾವಾಗ ಬಂತು?"

"ಹೋದ ಸಲ ಬಂದಿದ್ದಾಗಲೇ ನಮ್ಮಣ್ಣ ಅಳತೆ ತೆಗೆದುಕೊಂಡು ಹೋಗಿದ್ದ. ಈಗ ಕೈಗೆ ಹಾಕಿ ಕಳುಹಿಸಿದ."

"ಪರವಾಗಿಲ್ಲ. ತೌರುಮನೆಯಿಂದ ಬರಿಗೈಯಲ್ಲಿ ಬರಲಿಲ್ಲ."

"ಅಣ್ಣನಿಗೆ ನನ್ನ ಕಂಡರೆ ತುಂಬ ಪ್ರೀತಿ. ಆದರೆ ಅವನ ಕೈ ನಡೆಯು ವುದಿಲ್ಲ—ದೊಡ್ಡ ಸಂಸಾರವಂದಿಗ ಏನು ಮಾಡುತ್ತಾನೆ ಹೇಳಿ."

"ಇನ್ನೇನು ತಂದೆ ಮೈಸೂರಿನಿಂದ. ವೀಳೆಯದೆಲೆ ತರಲಿಲ್ಲವೇ?"

"ಟೈಮೇ ಆಗಲಿಲ್ಲಾಂದ್ರೆ. ಮಧ್ಯಾನ್ಹ ಔತಣಾಂತ ಇಟ್ಟುಕೊಂಡರು. ಸ್ಟೇಷನ್ನಿಗೆ ಹೋಗುತ್ತಾ ಮಾರ್ಕೆಟ್ ಮೇಲೆ ಬರೋಣ ಎಂದಿದ್ದೆ. ಮನೆ ಯಲ್ಲಿಯೇ ಹೊತ್ತಾಗಿ ಬಿಟ್ಟಿತು."

"ಹೋಗಲಿ ಪರವಾಯಿಲ್ಲ. ಸುಖವಾಗಿ ಹೋಗಿ ಬಂದೆಯಲ್ಲಾ—ಅಷ್ಟೇ

ಸಾಕು."

"ಬೇಗ ಬರಲಿಲ್ಲ ಎಂದು ನಿಮಗೆ ಕೋಪ ಬಂದು ಬಿಟ್ಟಿತ್ತು."

"ಹೌದು ಬಂದಿತ್ತು. ನಿನ್ನ ಮುಖ ನೋಡಿದ ಮೇಲೆ ಎಲ್ಲಾ ಮರೆತು ಹೋಯಿತು.—ಆಯಾಸವಾಗಿರಬಹುದು. ಮಲಗಿಕೋ. ನಾಳೆ ಬರುತ್ತೇನೆ."

ಸರಸ್ವತಿ ಅವನ ಕೈ ಹಿಡಿದೆಳೆಯುತ್ತಾ

"ನಿಮ್ಮನ್ನು ನೋಡಿ ಆರು ದಿವಸವಾಯಿತು. ಈಗ ಹೋಗಲು ನಿಮ್ಮನ್ನು ನಾನು ಬಿಡುವುದಿಲ್ಲ" ಎಂದಳು.

ಮಂಜಯ್ಯನಿಗೆ ಮನೆಯೋಚನೆ ಮರೆತುಹೋಯಿತು.

ಪ್ರಯಾಣದ ಆಯಾಸವನ್ನೂ ಗಮನಿಸದೆ ತನ್ನ ಮನಸ್ಸಂತೋಷಪಡಿಸಲು ಸರಸ್ವತಿ ಮಾಡಿದ ಪ್ರಯತ್ನ ಮಂಜಯ್ಯನನ್ನು ಭಾವಪರವಶನನ್ನಾಗಿ ಮಾಡಿತು.

"ಏನು ಯೋಚನೆ ಮಾಡುತ್ತಿರುವಿರಿ?"

"ನನ್ನನ್ನು ಸಂತೋಷವಾಗಿಡಬೇಕೆಂದು ನೀನೆಷ್ಟು ಕಷ್ಟಪಡುತ್ತಿರುವೆ ಸರಸ್ವತಿ."

"ಇದರಲ್ಲಿ ಕಷ್ಟವೇನು ಬಂತು? ನಿಮ್ಮ ಸಂತೋಷವೇ ನನ್ನ ಸಂತೋಷ."

"ಅದನ್ನೇ ನಾನು ಯೋಚಿಸುತ್ತಿದ್ದೆ. ಮನುಷ್ಯ ತನ್ನ ಸ್ವಾರ್ಥಕ್ಕೆ ಇತರರ ನೋವನ್ನೂ ಕಡೆಗಣಿಸುತ್ತಾನೆ."

"ನೀವು ಸ್ವಾರ್ಥಿಗಳು ಎಂದು ನಾನು ಹೇಳಿದೆನೇಂದ್ರೆ?"

"ನೀನು ಹೇಳಲಿಲ್ಲ—ಇವತ್ತು ನಾನು ಸ್ವಾರ್ಥ ತೋರಿಸಿದೆ. ಆದರೆ ನಾನು ನಿಜವಾಗಿ ಸ್ವಾರ್ಥಿಯಲ್ಲ ಸರಸ್ವತಿ. ನನ್ನ ವಿಷಯವೇ ಒಂದು ಮಾತು ಹೇಳುತ್ತೇನೆ ಕೇಳು—ಆತ್ಮಪ್ರಶಂಸೆಗಾಗಿ ಈ ಮಾತು ಆಡುತ್ತಿಲ್ಲ. ನೀನು ತಿಳಿಯಬೇಕಾದ ವಿಷಯವಿರುವುದರಿಂದ ಹೇಳಬೇಕಾಗಿದೆ."

"ಹೇಳಿ."

"ನಿರ್ಗತಿಕನಾಗಿದ್ದ ನನ್ನನ್ನು ನಮ್ಮೂರಿನ ಯಜ್ಞಪ್ಪನವರು ಈ ಊರಿಗೆ

ಕರೆದುಕೊಂಡು ಬಂದರು. ಅವರ ಹೊಟೇಲಿನಲ್ಲಿ ನಾನು ಕೆಲಸಕ್ಕೆ ನಿಂತೆ. ಯಜ್ಞಪ್ಪನವರು ನನ್ನನ್ನು ನೌಕರನಂತೆ ಕಾಣುತ್ತಿರಲಿಲ್ಲ—ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಕಾಣುತ್ತಿದ್ದರು. ಅವರ ವ್ಯಾಪಾರ ದಿನದಿನಕ್ಕೆ ಬೆಳೆಯುತ್ತ ಹೋಯಿತು. ಯಜ್ಞಪ್ಪ ಸ್ವಭಾವತಃ ಒಳ್ಳೆಯ ಮನುಷ್ಯನಾದರೂ ತುಂಬ ದುರ್ಬಲ. ಕೈಯಲ್ಲಿ ಹತ್ತು ಕಾಸು ಓಡಿಯಾಡುವ ಹಾಗಾದ ಮೇಲೆ ಇಲ್ಲದ ಚಟಗಳಿಗೆ ತುತ್ತಾದರು. ಸಂಪಾದನೆ ಮಾಡುವುದಕ್ಕೆ ಹತ್ತು ವರ್ಷ ಬೇಕು—ಕಳೆಯುವುದಕ್ಕೆ ಹತ್ತೇ ದಿನ ಸಾಕು. ವ್ಯಾಪಾರವೂ ಹಾಳಾಗಿ ಹೋಯಿತು. ಯಜ್ಞಪ್ಪ ಇನ್‌ಸಾಲ್ವೆನ್ಸಿ ತೆಗೆದುಕೊಂಡರು. ಇನ್ನೊಬ್ಬರಲ್ಲಿ ಹೋಗಿ ಚಾಕರಿಗೆ ಸೇರಿಕೊಳ್ಳುವುದಕ್ಕೆ ಅವಮಾನ. ದುಃಖದಲ್ಲಿ ಕೊರಗಿ ಕೊರಗಿ ಕಣ್ಣು ಮುಚ್ಚಿಕೊಂಡರು. ಮನೆಯಲ್ಲಿ ಹೆಂಡತಿ, ಮೂರು ಮಕ್ಕಳು. ದೊಡ್ಡ ಮಗನ ವಯಸ್ಸು ಹನ್ನೆರಡು. ಅವರ ಸಂಸಾರ ನನ್ನ ಕೊರಳಿಗೆ ಬಿತ್ತು. ಯಜ್ಞಪ್ಪನವರ ಹೆಂಡತಿ, ಇಬ್ಬರು ಮಕ್ಕಳನ್ನು ಊರಿಗೆ ಕಳಿಸಿಕೊಟ್ಟು, ದೊಡ್ಡ ಮಗನನ್ನು ನನ್ನ ಹತ್ತಿರ ಇಟ್ಟುಕೊಂಡು ಸ್ಕೂಲು ಸೇರಿಸಿದೆ. ಅವನೂ ಒಳ್ಳೆಯ ಹುಡುಗ—ತುಂಬ ಚೂಟಿ. ಹೈಸ್ಕೂಲಿನ ವರೆಗೆ ಓದಿ ಸ್ಕೂಲು ಬಿಟ್ಟುಬಿಟ್ಟ. ನಾನೇ ಬಂಡವಾಳ ಹಾಕಿ ತುಮಕೂರಿನಲ್ಲಿ ಒಂದು ಸಣ್ಣ ಹೊಟೇಲ್ ಇಡಿಸಿ ಕೊಟ್ಟೆ. ಹುಡುಗ ವ್ಯಾಪಾರಮಾಡಿಕೊಂಡು ಹೊಟೇಲ್ ಬಡಾಯಿಸಿದ. ಊರಿನಿಂದ ತಾಯಿ, ತಂಗಿಯರನ್ನು ಕರೆಸಿಕೊಂಡ. ಒಬ್ಬ ತಂಗಿಗೆ ಮದುವೆ ಮಾಡಿದ. ಈಗ ಅನುಕೂಲವಾಗಿದ್ದಾನೆ. ಬಡತನ ಸಿರಿತನ ಶಾಶ್ವತವಲ್ಲ ವೆಂದು ನನಗೆ ಅರ್ಥವಾಯಿತು. ನನ್ನನ್ನು ಇದುವರೆಗೆ ಕಾಪಾಡಿರುವುದು ನನ್ನ ನೀಯತ್ತು. ನೀಯತ್ತಿದ್ದವರಿಗೇ ಬರಕತ್ತು ಎಂದು ತುರುಕರು ಹೇಳು ವುದು ನಿಜ. ”

ಮಂಜಯ್ಯನ ಮಾತುಗಳು ಸರಸ್ವತಿಯನ್ನು ಶೂಲದಂತೆ ಇರಿದವು. ‘ ಈ ಮಾತುಗಳನ್ನು ತನಗೆ ಅನ್ವಯಿಸಿ ಹೇಳುತ್ತಿದ್ದಾರೆಯೇ ’ ಎಂದು ಯೋಚಿಸಿದಳು.

“ ಇದನ್ನು ಈಗೇಕೆ ನನಗೆ ಹೇಳಿದಿರಿ. ”

"ನಿನ್ನ ನೀಯತ್ತು ನೋಡಿ ನನ್ನ ಮನಸ್ಸಿಗೆ ತುಂಬ ಸಂತೋಷವಾಯಿತು. ನೋಡು ಸರಸ್ವತಿ—ನಾನು ಅಲ್ಲಿ ಇಲ್ಲಿ ಹತ್ತು ಕಡೆ ಹೋಗುವ ಮನುಷ್ಯನಲ್ಲ. ನಿನ್ನ ಮೇಲೆ ವಿಶ್ವಾಸಹುಟ್ಟಿತು. ಅದನ್ನು ಶಾಶ್ವತವಾಗಿ ಉಳಿಸಿಕೊಂಡು ಹೋಗಬೇಕೆಂಬುದು ನನ್ನ ಇಚ್ಛೆ. ಒಂದು ದೃಷ್ಟಿಯಲ್ಲಿ ನಾನು ಮಾಡಿರುವುದು ಪಾಪ; ಇನ್ನೊಂದು ದೃಷ್ಟಿಯಲ್ಲಿ ಪಾಪವಲ್ಲ. ನೀನು ನನ್ನ ಸ್ನೇಹಿತನ ಹೆಂಡತಿ. ಸ್ನೇಹಿತನ ಹೆಂಡತಿಯ ಸಂಬಂಧ ಬೆಳಸಿದುದು ಪಾಪ. ಆದರೆ ನಿನ್ನ, ನಿನ್ನ ಮಕ್ಕಳ ಕೈಬಿಟ್ಟಿದ್ದರೆ ಅದು ಇನ್ನೂ ದೊಡ್ಡ ಪಾಪವಾಗುತ್ತಿತ್ತು. ನಿನ್ನ ಮಕ್ಕಳಿಗೂ ನಿನಗೂ ಒಂದು ಸರಿಯಾದ ದಾರಿ ಮಾಡಬೇಕಾದುದು ನನ್ನ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಅವರಿಗೆ ಗಂಡು ಗೊತ್ತುಮಾಡಿ ಮದುವೆ ಏರ್ಪಾಟು ಮಾಡು. ಎಲ್ಲಾ ಖರ್ಚೂ ನನಗಿರಲಿ. ನೀನು ಸುಖವಾಗಿರುವುದಕ್ಕೆ ಒಂದು ಮನೆ ಮಾಡಿಕೊಡುತ್ತೇನೆ. ನಿನ್ನ ಯೋಗಕ್ಷೇಮ ನನಗಿರಲಿ."

"ನನಗೇನೂ ಬೇಡಿ. ನಿಮ್ಮ ವಿಶ್ವಾಸವೊಂದು ದೃಢವಾಗಿದ್ದರೆ ಸಾಕು."

ಎಂದು ಹೇಳಿದಳು. ನಿರಹಂಭಾವದಿಂದ ಕೂಡಿದ ಅವಳ ನಿಸ್ವಾರ್ಥ ನುಡಿ ಮಂಜಯ್ಯನ ಕಣ್ಣಲ್ಲಿ ಅವಳ ಬೆಲೆಯನ್ನು ಮತ್ತಷ್ಟು ಏರಿಸಿತು.

ಮಂಜಯ್ಯ ರಾತ್ರಿಯೆಲ್ಲಾ ಸರಸ್ವತಿಯ ಮನೆಯಲ್ಲಿ ನಿಲ್ಲಲಿಲ್ಲ. ಎರಡು ಗಂಟೆಯ ಸುಮಾರಿಗೆ ಮನೆಗೆ ಹೊರಟ.

ಸರಸ್ವತಿ ಕಣ್ಣು ತೆರೆದುಕೊಂಡೇ ಮಲಗಿ ಯೋಚನಾಪರವಶಳಾದಳು. 'ನನಗೆ ಈಗ ನಡೆಯುತ್ತಿರುವುದು ಯಾವ ದೆಸೆ. ಶುಕ್ರಮಹಾದೆಸೆಯೇ ಒದಗಿ ಬಂದಂತೆ ಕಾಣುತ್ತದೆ. ಇಬ್ಬರು ಹುರುಪಿನಿಂದ ಮನೆಗೆ ತಂದು ಹಾಕಲು ಆತುರ ಪಡುತ್ತಿದ್ದಾರೆ. ಆದರೆ—ಇದು ಎಷ್ಟು ದಿನ ಹೀಗೆ ನಡೆಯುಬಹುದು. ನಂಜಪ್ಪನವರು ಬರುವುದು ಗೊತ್ತಾದ ಮೇಲೂ ಮಂಜಯ್ಯನವರ ಸಂಬಂಧ ಹೀಗೇ ಉಳಿಯಬಹುದೇ ?—ಉಳಿದಷ್ಟು ದಿನವೇ ಆಯಿತು. ಲೋಕದಲ್ಲಿ ಯಾವುದು ಶಾಶ್ವತ ?' ಮಂಜಯ್ಯನ ಆಶ್ವಾಸನ, ಅದರಲ್ಲಿಯೂ ಅವನು ಮನೆ ಮಾಡಿಕೊಡುವ ವಿಷಯ ಕೇಳಿ ಸರಸ್ವತಿಯ ಮನಸ್ಸಿಗೆ ಅಪಾರ ಆನಂದವಾ

ಗಿತ್ತು. ಆ ಆನಂದ ಮುಳ್ಳಿನೊಳಗೆ ಹುದುಗಿಸಿಟ್ಟ ಹೂವಿನಂತಾಗಿತ್ತು. ಅವನು ಹೇಳಿದ ಆತ್ಮಕಥೆ, ಅದರಲ್ಲಿಯೂ 'ನೀಯತ್ತಿ'ನ ಪ್ರಸ್ತಾಪ ಅವಳ ಮೈ ನಡುಗಿಸಿತ್ತು. ತಾನು ಆಡುತ್ತಿರುವ ಆಟ 'ನೀಯತ್ತಿ'ನ ಎಲ್ಲೆಯೊಳಗೆ ಬರುವುದಿಲ್ಲವೆನ್ನುವುದನ್ನು ಅವಳು ಚೆನ್ನಾಗಿ ಮನಗಂಡಿದ್ದಳು. ಆದರೆ 'ಬೀದಿಯಲ್ಲಿ ಹೋಗುವ ಮಾರಮ್ಮ—ಮನೆಗೆ ಬಂದು ಹೋಗಮ್ಮ' ಎಂದು ಹೇಳಿದ ಹಾಗಾಗಿತ್ತು ಅವಳ ಪಾಡು. ಒಣವಿಚಾರಗಳಿಗೆ ಮನವನೀಡಾಡಿ, ಇಲ್ಲಸಲ್ಲದ ಅಂತಸ್ತಾಪ ತಂದುಕೊಳ್ಳುವುದಕ್ಕಿಂತ ಪಾಲಿಗೆ ಬಂದುದು ಪಂಚಾಮೃತವೆಂದು ಅನುಭವಿಸುವುದೇ ಒಳ್ಳೆಯದೆಂದು ಅವಳು ನಿರ್ಧರಿಸಿದಳು.

ಮಂಜಯ್ಯ ಬೇಡವಾಗಿದ್ದರೂ ಅವನನ್ನು ರಮಿಸಿ ಅವನೊಂದಿಗೆ ತಾನು ಕಳೆದ ವೇಳೆಯನ್ನು ಸ್ಮರಿಸಿಕೊಂಡಳು—ಈ ದೇಹ ಎಷ್ಟು ಕೆಲಸ ಮಾಡುತ್ತದೆ, ಎಂಥೆಂಥವರನ್ನು ಮತಿಹೀನರನ್ನಾಗಿ ಮಾಡುತ್ತದೆ ಎಂದು ಅದರ ಅಸಾಮಾನ್ಯ ಶಕ್ತಿಯನ್ನು ಮೆಚ್ಚಿಕೊಂಡಳು.

ಸರಸ್ವತಿಯ ಸುಖನಿದ್ರೆಗೆ ಪೋಷಕವಾದುದು ಅವಳು ನಂಜಪ್ಪನೊಂದಿಗೆ ಮದರಾಸಿನಲ್ಲಿ ಕಳೆದ ಮಧುರ ದಿನಗಳ ರಸನಿಮಿಷಗಳು. ಎರಡು ಮನಸ್ಸು ಒಂದಾಗಿ, ಎರಡು ದೇಹ ಒಂದಾಗಿ ತಾವು ಜತೆಯಲ್ಲಿ ಕಳೆದ ದಿನಗಳ ಪ್ರತಿಕ್ಷಣವನ್ನೂ ಮೆಲುಕುಹಾಕಿ ಸುಖಿಸಿದಳು. ನಿದ್ರಾದೇವಿಯ ತಾಯಿತೋಳು ಕೂಡ ಅವಳಿಗೆ ನಲ್ಲನ ಆಲಿಂಗನವಾಗಿ ಕಂಡು ಬಂದಿತು.

೧೨

ಜಿಕೋ ಎನ್ನುತ್ತಿದ್ದ ಮುತ್ತಮ್ಮನ ಮನೆ ಮತ್ತೆ ತುಂಬಿತು. ಭಾಗ್ಯಮ್ಮನ ಮುಖನೋಡಿ ಮುತ್ತಮ್ಮನಿಗೆ ಸಾಕಾಗಿತ್ತು; ಮುತ್ತಮ್ಮನ ಮುಖನೋಡಿ ಭಾಗ್ಯಮ್ಮನಿಗೆ ಸಾಕಾಗಿತ್ತು. ಸರಸ್ವತಿ ಪ್ರವೇಶೋತ್ಸವ ಮಾಡಿ ಹೋದ ಮೇಲೆ ಮುತ್ತಮ್ಮನ ಹಳೆಯ ಶಿಷ್ಯೆಯರು, ಸ್ನೇಹಿತರು, ಪ್ರೋಷಕರು ಒಬ್ಬೊಬ್ಬರಾಗಿ ಬರಲಾರಂಭಿಸಿದರು. ಪೇಟೆಗೆ ಹೋಗುತ್ತಿದ್ದ ಭಾಗ್ಯಮ್ಮ ಕೆಲವು ದಿವಸ ಇದೇ ಕೆಲಸ ಮಾಡಿ ಹಳಬರನ್ನೆಲ್ಲಾ ಬರಮಾಡಿದಳು.

ಹಳಬರಲ್ಲಿ ಮೊದಲು ಬಂದವಳು ವೆಂಕಟಿ. ಮುತ್ತಮ್ಮನನ್ನು ಕಂಡ ಕೂಡಲೆ ಬಹಳ ದಿವಸಗಳು ಗಂಡನಮನೆಯಲ್ಲಿಯೇ ಇದ್ದು ಬೇಸತ್ತು ತೌರು ಮನೆಗೆ ಬರುವ ಮಗಳಂತೆ ಬಂದು ಮುತ್ತಮ್ಮನಿಗೆ ತೆಕ್ಕೆ ಬಿದ್ದಳು.

" ಎಂಗಿದ್ದೀಯೆ ವೆಂಕಟಿ " ಎಂದು ಮುತ್ತಮ್ಮ ವಿಶ್ವಾಸಪೂರ್ವಕವಾಗಿ ಕೇಳಿದಳು.

" ಏನು ಇರಾದು ಬಿಡಮ್ಮ. ನೀನು ಒದ್ಕೊಂಡು ನಮ್ಮನ್ನೆಲ್ಲಾ ಕಾಡು ಪಾಲು ಮಾಡಿದೆ. "

" ನಾನೇನೆ ಮಾಡಿದೆ ? "

" ಇಲ್ಲಿ ನೀನು ಹುಲಿ ಹಂಗಿದ್ದೀ. ಯಾರೂ ಕಮಕ್ ಕಿಮಕ್ ಅನ್ನಾಕೆ ಆಗಾಕಿಲ್ಲ. ನಮಗೂ ಮರ್ಯಾದೆಯಾಗಿ ಜೀವನ ಕಳೆದು ಹೋಗುತ್ತಿತ್ತು. "

" ಇಷ್ಟು ದಿನ ಎಲ್ಲಿ ಹೋಗುತ್ತಿದ್ದೆ. "

" ಪಾಪಕ್ಕನ ಮನೆ, ಲಚ್ಮಕ್ಕನ ಮನೆ ಎಲ್ಲಾ ಆಯ್ತು. ಎಲ್ಲಿಹೋದರೂ ಯವ್ವಾರ, ಹೊಡೆದಾಟ ಬಡಿದಾಟ. ನೀನು ಸಾವಿರಾಹೇಳು—ನಿನ್ನ ಮನೆ ಗನತೆ ಎಲ್ಲೂ ಬರಾಕಿಲ್ಲ ಮುತ್ತಮ್ಮ. "

" ಬಾಲೂ ಏನಾದಳೇ ? "

" ಹನ್ನೆರಡು ಗಂಟೇಗೆ ಬತ್ತೀನಿ ಎಂತಾ ಹೇಳಿದಳು. ರಾಮರಾಜಪ್ಪ ಬತ್ತಾರಾ ? "

" ಬರಬಹುದು. ಇನ್ನು ಯಾರಿದ್ದಾರೆ. "

" ಲಚ್ಮಕ್ಕನ ಮನೆಗೆ ಒಂದು ಹುಡುಗಿ ಬತ್ತಿತ್ತು ಮುತ್ತಮ್ಮ. ಭೋ ಚಂದಾಕದೆ. "

" ಮನೆ ಗೊತ್ತಿದ್ರೆ ಕರ್ಕೊಂಡು ಬಾ. ಹುಡುಗಿಗೆ ಅಪ್ಪ ಅಮ್ಮ ಇದ್ದಾರೋ ? "

" ಇದ್ದಾರೆ. ಅಪ್ಪನಿಗೆ ಸವಾರ್ ಲೈನಿನಲ್ಲಿ ಕೆಲಸ. ಅಮ್ಮನೇ ಕರ್ಕೊಂಡು ಬರ್ತಾಳೆ. "

" ತರಲೆ ಗಿರಲೆ ಮಾಡೋರಿಗೆ ಹೇಳಬೇಡಮ್ಮ. "

" ಬಡವರು—ತರಲೆ ಏನು ಮಾಡ್ತಾರಮ್ಮ. "

ಮುತ್ತಮ್ಮ ವೆಂಕಟೆಯರ ಜತೆಯಲ್ಲಿ ಮಾತಿಗೆ ಕುಳಿತುಕೊಳ್ಳಲು ಭಾಗ್ಯಮ್ಮನಿಗೆ ಬಿಡುವಿರಲಿಲ್ಲ.

ರಾಮರಾಜಪ್ಪ ಬಂದುದನ್ನು ಕಂಡು ವೆಂಕಟೆಯ ಮುಖ ಅರಳಿತು. ರಾಮರಾಜಪ್ಪ ಬೈಸಿಕಲ್ ಹೊರಗಡೆ ಬಿಟ್ಟು ಒಳಕ್ಕೆ ಬಂದು, ಮುತ್ತಮ್ಮನ ಹರಕು ಮಂಚದ ಮೇಲೆ ಕುಳಿತ. ಮುತ್ತಮ್ಮ ಅವನನ್ನು ಆಕ್ಷೇಪಿಸುವ ಧ್ವನಿಯಲ್ಲಿ

" ನಮ್ಮ ಮನೆ ದಾರಿ ಗೊತ್ತಾಯಿತೇನಪ್ಪಾ " ಎಂದಳು.

" ದಾರೀಗೇ ನೀನೇ ಮುಳ್ಳು ಹಾಕಿಸಿದ್ದೆ. "

" ಅದು ಸರಿ—ಯಾವಾಗಲಾದರೂ ಬಂದು, ಮುದುಕಿ ಬದುಕಿದ್ದಾಳೆಯೋ ಸತ್ತಳೋ ಎಂದು ವಿಚಾರಿಸಿದೆಯಾ? ನೀವಾಯಿತು ನಿಮ್ಮ ಕೆಲಸವಾಯಿತು. "

" ನಿನಗೆ ಏಕೆ ಕೋಪ ಬರಬೇಕೊಂತ ಬರಲಿಲ್ಲ ಮುತ್ತಮ್ಮ. "

" ಇನ್ನೇನಪ್ಪಾ ಸಮಾಚಾರ. ಯಾಪಾರ ಚೆನ್ನಾಗಿ ನಡೆದಿದೆಯೋ? ಮನೆಗಳ ಮೇಲೆ ಮನೆ ಕಟ್ಟಿಸುತ್ತಾ ಇದ್ದೀಯಂತೆ? "

" ಕೈ ನಡೆಯುವಾಗ ಆಸ್ತಿ ಮಾಡದಿದ್ದರಾಗುತ್ತದೆಯೇ ಮುತ್ತಮ್ಮ."

" ಮಾಡಿಕೋಪ್ಪ. ಚಂದಾಕಿರು. ನಂಗೂ ಅಷ್ಟೇ ಬೇಕಾದ್ದು. ಬಡವರ ಕೈಬಿಡಬೇಡ"

" ಏನು ? ಯಾರಾದರೂ ಬರುತ್ತಾರೊ ? "

" ಬಾಲೂ ಬರ್‍ತಾಳೆ ಎಂತ ವೆಂಕಟಿ ಹೇಳಿದಳಪ್ಪಾ."

ಬಾಲು ದಾರಿ ನೋಡುತ್ತ ರಾಮರಾಜಪ್ಪ ಸಿಗರೇಟ್ ಹಚ್ಚಿಕೊಂಡು-ಕುಳಿತ.

ಬಾಲು ಕೈಯಲ್ಲಿ ಒಂದು ಬುಟ್ಟಿ ಹಿಡಿದು ಪ್ರವೇಶಿಸಿದಳು. ಬಾಲೂ, ರಾಮರಾಜು ಮುಗುಳ್ನಗೆ ವಿನಿಮಯಮಾಡಿಕೊಂಡರು.

" ಬಾಲೂ, ಬಾಲೂ ಎಂತಿದ್ದೆಯಲ್ಲಪ್ಪಾ—ಇಗೋ ಬಾಲು "

ಎಂದು ಮುತ್ತಮ್ಮ ಹೇಳಿ ಬಾಲು ಯೋಗಕ್ಷೇಮ ವಿಚಾರಿಸಿಕೊಂಡು

" ಹೋಗಿ—ಹೊತ್ತಾಗತ್ತೆ " ಎಂದು ಹೇಳಿದಳು.

ಬಾಲೂ, ರಾಮರಾಜು, ಮುತ್ತಮ್ಮನ ಮನೆಯ ದೊಡ್ಡ ತೊಟ್ಟಿಯ ಪಕ್ಕದಲ್ಲಿದ್ದ ರೂಮು ಸೇರಿದರು.

ಮುತ್ತಮ್ಮ ತನ್ನ ಮುಂದೆ ಸುರಿದ ಗೋಧಿಯನ್ನು ಶುದ್ಧಿ ಮಾಡುತ್ತ ವೆಂಕಟಿ ಕುಳಿತಳು.

ಸ್ವಲ್ಪಹೊತ್ತು ಕಳೆಯಿತು. ಕುಮಾರ ನಂಜಪ್ಪ ಸರಸ್ವತಿಯರೊಂದಿಗೆ ಪ್ರವೇಶಿಸಿದ. ಮುತ್ತಮ್ಮ ಮುಂದಿನ ತೊಟ್ಟಿಯಲ್ಲೇ ಅವರನ್ನೆದುರುಗೊಂಡು

" ಮಹಡಿ ಮೇಲಕ್ಕೇ ಹೋಗಿಬಿಡಿ " ಎಂದಳು.

" ಯಾರದೊ ಬೈಸಿಕಲ್ಲಿದೆ " ಎಂದ ನಂಜಪ್ಪ.

" ನಿಮ್ಮ ಹಾಗೇ ಯಾರೋ ಬಂದಿದ್ದಾರೆ. "

ಎಂದು ಮುತ್ತಮ್ಮ ಹೇಳಿದಳು.

ನಂಜಪ್ಪ, ಸರಸ್ವತಿ ಮಹಡಿ ಮೇಲಕ್ಕೆ ಹೋದಮೇಲೆ ಕುಮಾರ ತೊಟ್ಟಿಯಲ್ಲಿ ಕುಳಿತ.

ಮುತ್ತಮ್ಮ, ಭಾಗ್ಯಮ್ಮ ಕುಮಾರನನ್ನು ಕೆಣಕಿ ಅವನ ವಿಷಯ ಸಂಗ್ರ

ಹಿಸಿಕೊಂಡರು. ಭಾಗ್ಯಮ್ಮ ಜಾಣ್ಮೆಯಿಂದ ಪ್ರಶ್ನೆಮಾಡಿ ಸರಸ್ವತಿ ವಿಷಯ, ಅವಳ ಮನೆ ಇರುವ ಜಾಗ ತಿಳಿದುಕೊಂಡಳು.

ರಾಮರಾಜು ಹೊರಗೆ ಬಂದು ಕುಳಿತ. ಅವನು ಎರಡು ಸಿಗರೇಟ್ ಮುಗಿಸುವಷ್ಟರಲ್ಲಿ ಮಹಡಿ ಮೆಟ್ಟಿಲ ಮೇಲೆ ಸರಸ್ವತಿ ನಿಂತಿರುವುದು ಕಂಡು ಬಂದಿತು. ರಾಮರಾಜುವನ್ನು ರೂಮಿಗೆ ಕಳುಹಿಸಿ, ಸರಸ್ವತಿ ಸ್ನಾನಗೃಹಕ್ಕೆ ಹೋಗಲು ಮುತ್ತಮ್ಮ ಅನುಕೂಲ ಮಾಡಿಕೊಟ್ಟಳು.

ಸರಸ್ವತಿ ಸ್ನಾನಗೃಹದಿಂದ ಹಿಂದಿರುಗಿದಾಗ ರಾಮರಾಜು ಅವಳನ್ನು ಬಾಗಿಲು ಮರೆಯಲ್ಲಿ ನಿಂತು ಚೆನ್ನಾಗಿ ನೋಡಿದ.

ಕುಮಾರ, ಸರಸ್ವತಿ, ನಂಜಪ್ಪ ಹೊರಟು ಹೋದ ಸ್ವಲ್ಪ ಹೊತ್ತಿನ ಮೇಲೆ ಬಾಲೂ, ವೆಂಕಟ ಇಬ್ಬರನ್ನೂ ಮುತ್ತಮ್ಮ ಕಳುಹಿಸಿಕೊಟ್ಟಳು.

ರಾಮರಾಜು ಹೊರಡುವ ಸೂಚನೆಯನ್ನೇ ತೋರಿಸಲಿಲ್ಲ. ಮುತ್ತಮ್ಮ ಅವನ ಬಳಿಗೆ ಬಂದು

" ಇನ್ನೇನಪ್ಪಾ ಸಮಾಚಾರ " ಎಂದಳು.

" ಅವಳು ಯಾರು ಮುತ್ತಮ್ಮ " ಎಂದು ರಾಮರಾಜು ಕೇಳಿದ.

" ಹೀಗೇ ಒಬ್ಬರು ಕರೆದುಕೊಂಡು ಬರುತ್ತಾರಪ್ಪಾ. ಯಾರೋ ಏನೋ ನಾನು ಚೆನ್ನಾಗಿ ಕಾಣೆ. "

" ಒಬ್ಬಳೇ ಬರುವುದಿಲ್ಲವೇ? "

" ಕೇಳಿ ನೋಡಬೇಕಪ್ಪಾ. "

" ಕೇಳಿ ನೋಡಿದರಾಗುವುದಿಲ್ಲ. ನೀನು ಅನುಕೂಲ ಮಾಡಿಕೊಡಲೇ ಬೇಕು. "

" ಅವಳನ್ನು ಕೇಳದೆ ಹೇಗಪ್ಪಾ ಹೇಳುವುದು. ಅವೆಲ್ಲಾ ಆಕಾಶದಲ್ಲಿರೋ ಹೆಂಗಸರು. "

" ಹತ್ತು ರೂಪಾಯಿ ಹೆಚ್ಚಾದರೆ ಆಯ್ತು. ಕಾಸಿನ ಮುಖ ನಾನು ನೋಡುತ್ತೇನೆಯೇ ಮುತ್ತಮ್ಮ. "

" ನೂರು ರೂಪಾಯಿ ಕೊಡ್ತೀಯೇನು ಹೇಳು. "

" ಹಾಗೂ ಸರಿ—ಎಂದು ಬರಲಿ ಹೇಳು. "

" ನೀನೂ ನಾಳೆ ನಾಡಿದ್ದು ಹೀಗೆ ಬಂದು ಹೋಗು. ನಾನು ವಿಚಾರಿಸಿರುತ್ತೇನೆ. "

" ಕೆಲಸ ಹಣ್ಣು ಮಾಡಬೇಕು ಮುತ್ತಮ್ಮ. ಪಡಪೋಸಿ ಮಾಡಿದರೆ ಆಗಾಕಿಲ್ಲ! "

" ನೀನು ನಾಳೆ ಬಾ ಹೋಗು—ದೇವರಿದ್ದಾನೆ. ಕುಡಿಯೋಕೆ ಏನೂ ತಂದುಕೊಡುವುದಿಲ್ಲವೇನಪ್ಪಾ? "

" ನಾಳೆ ಎರಡು ಬಾಟ್ಳು ವೈಟ್ ಹಾರ್ಸ್ (White Horse) ತಂದು ಕೊಡುತ್ತೇನೆ ಸುಮ್ಮನಿರು. "

" ತಪ್ಪಕೂಡದು. "

" ಖಂಡಿತ ತಪ್ಪುವುದಿಲ್ಲ. "

" ವೆಂಕಟಿ ಯಾವದೋ ಹೊಸ ಹುಡುಗಿ ಪತ್ತೆ ಮಾಡವಳಂತೆ. ನಾಳೆ ಆದು ಆಗಾಕಿಲ್ವಾ. "

" ಅದು ಇದ್ದೇ ಇರತ್ತೆ. ಇದು ನೋಡು. "

" ಯಾರೋ ಖಾಯಂ ಆಗಿರುವಾಗ ನಾವು ಮಾತಾಡಿಸಿದರೆ ಚೆಂದಾಕಿರತೈತಾ ರಾಮರಾಜಪ್ಪ? "

" ತಿರುಗಿ ಹಳೇ ಪುರಾಣವೇ ತೆಗೆದೆ—ನೀನು ಕರೆಸು. ನಿನ್ನ ಕೈಲಾಗದಿದ್ದರೆ ನಾನು ಮಾತನಾಡಸ್ತೀನಿ. "

" ನೀನು ನಾಳೆ ಬಾ ಹೋಗು. "

ಸಂಜೆ ಎಲ್ಲರೂ ಮನೆಗೆ ಹೋದ ಮೇಲೆ ಮುತ್ತಮ್ಮ

" ಭಾಗ್ಯಮ್ಮ. ನಾಳೆ ಆಯಮ್ಮನ ಮನೆ ಪತ್ತೆಮಾಡಿ ಇತ್ತ ಬಾ ಅನ್ನಬೇಕಮ್ಮ. ಈ ರಾಮರಾಜಪ್ಪ ಶನಿ. ಇವನೇನು ಬಿಡೋಹಂಗಿಲ್ಲ. "

" ನಾನೇನೋ ಮನೆ ಪತ್ತೆಮಾಡಿ ಹೇಳ್ತೀನಮ್ಮ. ಆಯಮ್ಮ ಬರದಿದ್ದರೆ ನನ್ನ ಮೇಲೆ ಮಾತಿಲ್ಲ. "

" ರಾಮರಾಜಪ್ಪ ನೂರು ರೂಪಾಯಿ ಕೊಟ್ರೆ ಯಾರನ್ನ ಕೆಡಿಸ್ತ.

ಆಯಮ್ಮನಿಗೆ ಐವತ್ತಾಯಿತು—ನಿನಗೆ ಇಪ್ಪತ್ತೈದು, ನನಗೆ ಇಪ್ಪತ್ತೈದು. ”

ಕಣ್ಣು ಮುಂದೆ ಬೃಹದಾಕಾರ ತಾಳಿ ನಿಂತ ಇಪ್ಪತ್ತೈದರ ಸಂಖ್ಯೆ ಭಾಗ್ಯಮ್ಮನ ಆತುರವನ್ನು ಹೆಚ್ಚಿಸಿತು. ಬೆಳಗಾದೀತೇ ಎಂದು ಕಾದಿದ್ದಳು. ಬೆಳಿಗ್ಗೆ ಅಡಿಗೆಯ ಕೆಲಸವನ್ನೂ ಮುತ್ತಮ್ಮನಿಗೆ ವಹಿಸಿ ತಾನು ಪೇಟೆಯ ಕಡೆ ಹೊರಟಳು.

ಕುಮಾರ ಹೇಳಿದ್ದ ಮನೆಯ ಗುರುತನ್ನು ಚೆನ್ನಾಗಿ ನೆನಪಿನಲ್ಲಿಟ್ಟು ಕೊಂಡು ಭಾಗ್ಯಮ್ಮ ಸರಸ್ವತಿಯ ಮನೆ ಹುಡುಕಾಡಿದಳು. ಸ್ವಲ್ಪ ಕಾಲಾ ನಂತರ ಮನೆಯೂ ಸಿಕ್ಕಿತು. ಸುಧೆಯೇ ಭಾಗ್ಯಮ್ಮನಿಗೆ ಉತ್ತರ ಹೇಳಿ, ಒಳಗೆ ಬರಮಾಡಿಕೊಂಡಳು. ಸುಧೆ, ಮಂಜುಳ ಇಬ್ಬರ ಪರಿಚಯವನ್ನೂ ಮಾಡಿ ಕೊಂಡು ಭಾಗ್ಯಮ್ಮ

“ ಅಮ್ಮ ಎಲ್ಲಿಗೆ ಹೋಗಿದ್ದಾರೆ. ”

“ ಇಲ್ಲೇ ಹೋಗಿದ್ದಾರೆ. ಈಗ ಬರುತ್ತಾರೆ. ಅವರಲ್ಲಿ ನಿಮಗೇನಾವರೂ ಕೆಲಸವಿತ್ತೇ ? “

“ ಇತ್ತು—ನಾನೂ ನಿಮ್ಮಮ್ಮ ತುಂಬ ಸ್ನೇಹಿತರು. ಇದೇನಮ್ಮ— ಇವತ್ತು ಸ್ಕೂಲು ಇಲ್ವಾ? ”

“ ಇಲ್ಲ—ಇವತ್ತು ರಜಾ. ”

ಸುಧೆ ಮಾತನಾಡುತ್ತ ಕುಳಿತಿರುವಂತೆ ಸರಸ್ವತಿ ಮನೆಗೆ ಬಂದಳು. ಭಾಗ್ಯಮ್ಮನ ಮುಖ ನೋಡಿದೊಡನೆಯೇ ಅವಳ ಎದೆ ಹೊಡೆದುಕೊಳ್ಳಲಾ ರಂಭಿಸಿತು. ‘ ಇವಳೇಕೆ ಮನೆಗೆ ಬಂದಳು ? ’ ಎಂದುಕೊಂಡಳು. ಮನಸ್ಸಿನಲ್ಲಿ ನಡೆಯುತ್ತಿದ್ದ ಮಹಾಯುದ್ಧವನ್ನು ತೋರಗೊಡದೆ

“ ಎಷ್ಟು ಹೊತ್ತಾಯಿತಮ್ಮ ಬಂದು ? ” ಎಂದು ಕೇಳಿದಳು.

“ ಸ್ವಲ್ಪ ಹೊತ್ತಾಯಿತಮ್ಮ, ನಿಮ್ಮ ಮಗಳು ಮಾತನಾಡಿಸುತ್ತಿದ್ದಳು. ಬಲು ಜಾಣೆ ಕಣ್ರಮ್ಮ. ”

ಸುಧೆಯನ್ನು ಕಾಫಿಮಾಡಿ ತರಲು ಸರಸ್ವತಿ ಕಳುಹಿಸಿ, ಭಾಗ್ಯಮ್ಮನ ಬಳಿಗೆ ಬಂದು ಪಿಸುಮಾತಿನಲ್ಲಿ

" ಏನಮ್ಮ ಇಲ್ಲಿಯವರೆಗೆ ಬಂದೆ. ನಮ್ಮನೆ ಗುರುತು ಹೇಗೆ ಸಿಕ್ಕಿತು. "

" ಹೇಗೋ ಪತ್ತೆಮಾಡಿದೆ. ಮಧ್ಯಾನ್ಹ ನಿಮಗೆ ಪುರಸತ್ತೈತಾ? "

" ಏಕೆ? "

" ಮನೆ ಹತ್ತಿರ ಬರಬೇಕೂಂತ ಮುತ್ತಮ್ಮ ಹೇಳಿಕಳಿಸಿದ್ದಾಳೆ. "

" ನಾನು ಹೇಗೆ ಬರಲಮ್ಮ. "

" ನೀವು ಇವತ್ತು ಬಂದು ಮುತ್ತಮ್ಮನ ಹತ್ತಿರ ಮಾತಾಡಿ ಹೋಗಿ. ನಿಮಗೇ ಅನುಕೂಲವಾಗುತ್ತದೆ. ನಿಮ್ಮ ಮೇಲೆ ಮುತ್ತಮ್ಮನಿಗೆ ತುಂಬ ಇಸ್ವಾಸ ಬಂದುಬಿಟ್ಟಿದೆ."

ಸರಸ್ವತಿ ಅನುಮಾನಿಸುತ್ತ ಕುಳಿತಳು. ಸುಧಾ ಕಾಫಿ ತಂದು ಇಬ್ಬರ ಮುಂದೆಯೂ ಇಟ್ಟಳು. ಕಾಫಿ ಕುಡಿದು ಭಾಗ್ಯಮ್ಮ

" ನೀವು ಅನುಮಾನಿಸಬೇಡಿರಮ್ಮ. ಬಂದು ಹೋಗಿ. ಇದರಿಂದ ನಿಮಗೇ ಒಳ್ಳೇದಾಗತ್ತೆ." ಎಂದಳು.

ಸರಸ್ವತಿ ಮನಸ್ಸು ಜೋತುಬಿದ್ದಿತು.

" ಎರಡು ಗಂಟೆಗೆ ಬರುತ್ತೇನೆ. "

" ಹಾಗೇ ಮಾಡಿ "

ಎಂದು ಹೇಳಿ ಭಾಗ್ಯಮ್ಮ ಒಂದೇ ಉಸುರಿಗೆ ಮನೆಗೆ ಧಾವಿಸಿದಳು.

ಮುತ್ತಮ್ಮನ ಮನೆಯಲ್ಲಿ ರಾಮರಾಜಪ್ಪ ಬಂದು ಕುಳಿತಿದ್ದ– ಭಾಗ್ಯಮ್ಮನ ಮುಖ ನೋಡಿದೊಡನೆಯೇ ಅವನಿಗೆ ಗೆಲುವಾಯಿತು. ಅವನು ತಂದಿಟ್ಟಿದ್ದ 'ವೈಟ್ ಹಾರ್ಸ್' ಶೀಷೆಗಳನ್ನು ನೋಡಿ ಭಾಗ್ಯಮ್ಮನ ಮುಖವೂ ಅರಳಿತು.

" ಏನಮ್ಮ– ಏನು ಮಾಡಿಕೊಂಡು ಬಂದೆ?" ಎಂದು ಕೇಳಿದ.

" ಸ್ವಲ್ಪ ತಡೆದುಕೊಳ್ಳಪ್ಪ. ಏಳುವುದು ಬೀಳುವುದು ನೋಡದೆ ಓಡಿ ಬರುತ್ತಾ ಇದ್ದೇನೆ."

ಭಾಗ್ಯಮ್ಮ ಕುಳಿತುಕೊಂಡು ಸ್ವಲ್ಪ ಸುಧಾರಿಸಿಕೊಂಡು ಮುತ್ತಮ್ಮನಿಗೆ

" ಎರಡು ಗಂಟೆಗೆ ಬರ್ತಾಳಂತಮ್ಮ. ಅವಳನ್ನು ಒಪ್ಪಿಸೋ ಹೊತ್ತಿಗೆ

ನನಗೆ ಸಾಕು ಸಾಕಾಗಿ ಹೋಯಿತು. ಈ ಮಾರಾಯ ಗಾಡಿ ಬಾಡಿಗೆ ಕೂಡ ಕೊಡಲಿಲ್ಲ."

ಮುತ್ತಮ್ಮ ಮನಸ್ಸಿನಲ್ಲಿಯೇ ಅಂದಾಜು ಮಾಡಿಕೊಂಡು

" ರಾಮರಾಜಪ್ಪ, ನೀನು ಮೂರು ಗಂಟೆಗೆ ಬಾಪ್ಪ" ಎಂದಳು.

" ಯಾಕಮ್ಮ– ಅವಳು ಎರಡು ಗಂಟೆಗೇ ಬರ್‍ತಾಳಂತೆ."

" ಇದೇ ನಿನ್ನ ಪಂಚಾಯತಿ. ಅವಳನ್ನು ಕುದುರಿಸೋಕೆ ನಂಗೆ ಟೈಮ್ ಬ್ಯಾಡ್ವಾ. ಬಂದವಳು ಕೂಡಲೇ ಒಪ್ಪಿಬಿಡ್ತಾಳೇನು ?"

" ಹಾಗೇ ಆಗಲಮ್ಮ. ಮೂರು ಗಂಟೆಗೆ ಸರಿಯಾಗಿ ಬರುತ್ತೇನೆ."

ಎಂದು ಹೇಳಿ ಹೋದ.

ಸರಸ್ವತಿ ಒಂದು ಗಂಟೆಯಿಂದಲೇ ಹೊರಡುವ ಸಿದ್ಧತೆ ಮಾಡಿದಳು. ಅಲಂಕಾರ ಮುಗಿಸಿ ಕೈಗೆ ಗಡಿಯಾರ ಕಟ್ಟಿಕೊಂಡಳು. ತಾಯಿ ಹೊರಗೆ ಹೊರಟುದನ್ನು ಕಂಡು ಸುಧೆ

" ಎಲ್ಲೀಗಮ್ಮ ಇಷ್ಟು ಹೊತ್ತಿಗೇ ?"

" ಹೊರಡುವಾಗ ಹಾಗೆ ಕೇಳಬಾರದು ಸುಧಾ."

" ಅವರು ಬಂದರೆ ಏನು ಹೇಳಲಿ ?"

" ಮೈಸೂರಿನಿಂದ ಅಣ್ಣಾ ಬಂದಿದ್ದರು, ಪೇಟೆಯ ಕಡೆ ಕರೆದುಕೊಂಡು ಹೋದರು ಎಂದು ಹೇಳು."

" ನೀನು ಹಿಂದಕ್ಕೆ ಬರುವುದು ?"

" ಆರು ಗಂಟೆಗೆ ಬರುತ್ತೇನೆ."

ಸುಧೆ ಯಾವ ಭಾವವನ್ನೂ ವ್ಯಕ್ತ ಮಾಡದೆ ಸುಮ್ಮನಾದಳು.

ಸರಸ್ವತಿಯ ದಾರಿನೋಡುತ್ತ ಭಾಗ್ಯಮ್ಮ ಬಾಗಿಲಿನಲ್ಲಿಯೇ ಕಾದಿದ್ದಳು.

" ಮನೆ ಸುಲಭವಾಗಿ ಸಿಕ್ಕಿತೇನ್ರಮ್ಮ." ಎಂದು ಕೇಳಿದಳು.

" ಸಿಕ್ಕದೆ ಏನಮ್ಮ—ಹಿಂದೆ ಬಂದಿದ್ದೆನಲ್ಲಾ."

ವೆಂಕಟಿ, ಬಾಲು ಕೈಯಲ್ಲಿ ಮಾತನಾಡುತ್ತ ಕುಳಿತಿದ್ದ ಮುತ್ತಮ್ಮ ಸರಸ್ವತಿಯ ಮುಖ ಕಂಡೊಡನೆಯೇ ಅವರನ್ನು ರೂಮಿಗೆ ಕಳಿಸಿದಳು. ಸರ

ಸ್ವತಿ ತೊಟ್ಟಿಯಲ್ಲಿ ಕುಳಿತುಕೊಂಡು

"ತುಂಬ ಬಿಸಲಮ್ಮ."

"ನಡೆದುಕೊಂಡೇ ಬಂದಿರೇನಮ್ಮ?"

"ಇಲ್ಲ. ಗಾಡಿಯಲ್ಲಿ ಬಂದೆ–ಗಾಡಿ ಅಲ್ಲಿಯೇ ನಿಲ್ಲಿಸಿ ನಡೆದುಕೊಂಡು ಬಂದೆ. ನನ್ನನ್ನು ಬರಹೇಳಿದೆಯಂತೆ!"

"ಹೂ! ಬರಹೇಳಬೇಕಾಯಿತು. ರಾಮರಾಜಪ್ಪನ ಕಾಟ."

"ರಾಮರಾಜಪ್ಪ ಯಾರು?"

"ನನಗೆ ಭೋ ದಿವಸದ ಗುರುತು. ಚಿನ್ನದಂಥ ಮನುಷ್ಯ. ಕಷ್ಟ ವೆಂದರೆ ಪ್ರಾಣ ಕೊಡುತ್ತಾನೆ. ಅವತ್ತು ನೀವು ಬಂದಿದ್ದಿರಿ ನೋಡಿ— ನಿಮ್ಮನ್ನು ನೋಡಿಬಿಟ್ಟ– ಅವನ ಬುದ್ಧಿಯೇ ಕೆಟ್ಟುಹೋಗಿದೆ."

"ಅವರ ಬುದ್ಧಿ ಸರಿಮಾಡೋಕೆ ನಾನು ಡಾಕ್ಟರ್ ಅಲ್ಲವಲ್ಲಾ!"

"ಯಾರಮ್ಮ ಹೇಳಿದರು – ನೀವೇ ಡಾಕ್ಟರು – ರಾಮರಾಜಪ್ಪ ತುಂಬ ಅನುಕೂಲವಾಗಿದ್ದಾನಮ್ಮ. ಮಿಲ್ಟ್ರಿ ಕಂಟ್ರಾಕ್ಟ್ ಮಾಡಿ ಸಾವಿರಾರು ರೂಪಾಯಿ ಸಂಪಾದಿಸಿದ್ದಾನೆ. ಈ ಊರಿನಲ್ಲಿಯೇ ಅವನದು ಐದಾರು ಮನೆಗಳಿವೆ. ಮನುಷ್ಯ ತುಂಬ ಧಾರಾಳಿ."

"ನಾನೇನೂ ಕಷ್ಟದಲ್ಲಿಲ್ಲ ಮುತ್ತಮ್ಮ."

"ನಿನ್ನಂಥ ಹೆಣ್ಣು ಕಷ್ಟದಲ್ಲಿ ಯಾಕಮ್ಮ ಇರಬೇಕು. ನಿನ್ನುದ್ದಕ್ಕೂ ಹಣ ಸುರಿಯೋರು ಇದ್ದಾರೆ."

"ಅವರು ನನಗೆ ಯಾವುದಕ್ಕೂ ಕಡಿಮೆಮಾಡಿಲ್ಲ."

—'ಹಾಗಾದರೆ ನನ್ನ ವ್ಯಾಪಾರದ ಮನೆಗೇಕೆ ಕರೆದುಕೊಂಡು ಬಂದ' ಎಂದು ಕೇಳಬೇಕೆಂದು ಮುತ್ತಮ್ಮನಿಗೆ ಮನಸ್ಸಾಯಿತು. ಮಾತು ವಿರಸಕ್ಕೆ ಕಾರಣವಾಗಿ ಕೆಲಸ ಕೆಟ್ಟುಹೋಗಬಹುದೆಂದು ಮನಸ್ಸು ಬಿಗಿ ಹಿಡಿದುಕೊಂಡು

"ಅವರು ಬೇಡವೆಂದು ನಾನು ಹೇಳಲಿಲ್ಲವಲ್ಲ. ಹೀಗೇ ನಿಮಗೆ ಅನು ಕೂಲವಾದಾಗ ಬಂದು ಹೋದರೆ ಸಾಕು—ನಾನು ನಿಮ್ಮ ಯಜಮಾನನಿಗೆ ಉಪಕಾರ ಮಾಡಿದ್ದೀನೋ ಇಲ್ಲವೋಮ್ಮ?"

"ಏನು ಉಪಕಾರ ?"

"ನಿಮ್ಮನ್ನು ಕರ್ಕೊಂಡು ಬರೋಕೆ ಮನೆ ಕೊಡಲಿಲ್ಲವಾ ?"

"ಹೌದು ಮುತ್ತಮ್ಮ. ಉಪಕಾರ ಪಡೆದು ನಾನು ಇಲ್ಲವೆನ್ನುವುದಿಲ್ಲ."

"ಅದಕ್ಕೆ ಬದಲಾಗಿ ನನಗೊಂದು ಉಪಕಾರ ಮಾಡಿ."

"ಏನದು ?"

"ಹೇಳಿದೆನಲ್ಲಾ—ರಾಮರಾಜಪ್ಪನ ಸ್ನೇಹ."

"ನನ್ನನ್ನು ಉಭಯಸಂಕಟಕ್ಕೆ ಸಿಕ್ಕಿಸುತ್ತಿರುವಿರಿ ?"

"ಉಭಯಸಂಕಟ ಯಾವದು ?"

"ಅವರಿಗೆ ಗೊತ್ತಾದರೆ....?"

"ನನ್ನ ಮನೆಯಲ್ಲಿ ಒಂದು ನರಪ್ರಾಣಿ ಉಸಿರೆತ್ತುವುದಿಲ್ಲ."

"ಹೇಗಾದರೂ ತಿಳಿದು ಹೋದರೆ....?"

"ಎಚ್ಚರವಾಗಿದ್ದರೆ ಹೇಗೆ ತಿಳಿಯುತ್ತದೆ."

"ಅವರು ನಾನು ಕೇಳಿದ್ದು ತಂದುಕೊಡುತ್ತಾರೆ."

"ನೀವು ಕೇಳಿದ್ದು ರಾಮರಾಜಪ್ಪನ ಕೈಯಲ್ಲಿ ನಾನು ಕೊಡಿಸುತ್ತೇನೆ."

"ಹಬ್ಬದ ಕೂಳು ನೆಚ್ಚಿ ನಿತ್ಯದ ಕೂಳು ಕಳೆದುಕೊಂಡರು ಎನ್ನುವ ಹಾಗಾಗುತ್ತದೆ."

"ನಿಮ್ಮ ಮಾತಿಗೆ ನಾನೇನು ಹೇಳಲಮ್ಮ. ಅದಕ್ಕೆ ಅಳಬೇಕೋ ನಗಬೇಕೋ ನನಗೆ ಗೊತ್ತಾಗುತ್ತಿಲ್ಲ. ನಂಜಪ್ಪ ಸಂಸಾರಿಯೋ ಗುಂಡು ಗೋವಿಯೋ ?"

"ಏಕೆ ಹಾಗೆ ಕೇಳುವಿರಿ—ಅವರು ಸಂಸಾರಿ."

"ಸಂಸಾರಿಯ ಸ್ನೇಹ ಸ್ಥಿರವಾಗಿರುತ್ತದೆ ಎಂದು ಯಾವ ನೆಚ್ಚಿಗೆ ಸರಸ್ವತಮ್ಮನೋರೇ. ನಿಮ್ಮ ಸಂಬಂಧದ ವಿಷಯ ಅವನ ಹೆಂಡತಿಯ ಕಿವಿಯ ಮೇಲೆ ಬೀಳುವ ವರೆಗೆ ಅಡ್ಡಿಯಿಲ್ಲ—ಆಮೇಲೆ ಹೆಂಡತಿಯನ್ನು ಬಿಟ್ಟು ಅವನು ನಿಮ್ಮ ಸಂಸಾರ ನಡೆಸುತ್ತಾನೆಯೇ ?— ಇಂಥ ಒಣ ಭ್ರಾಂತಿಯಿಂದಲೇ ನೀವುಗಳು ಕಷ್ಟಕ್ಕೆ ಸಿಕ್ಕಿಕೊಳ್ಳುವುದು. ವಯಸ್ಸಿರುವಾಗ – ದೇವರು ಅನುಕೂಲ

ಮಾಡಿಕೊಟ್ಟಿರುವಾಗ ಕೈತುಂಬ ನಾಲ್ಕು ಕಾಸು ಮಾಡಿಕೊಳ್ಳಬೇಕಮ್ಮ. ನೀವೂ ಮಕ್ಕಳೊಂದಿಗರು. ನಂಜಪ್ಪ ನಡುನೀರಿನಲ್ಲಿ ಕೈ ಬಿಟ್ಟರೆ ನಿಮ್ಮ ಮಕ್ಕಳಿಗೆ ಆಗುವವರು ಯಾರು?"

"ಇವರಲ್ಲಿಯಲ್ಲಾ ಆಗುವುದೇನು ಹೋಗುವುದೇನಮ್ಮ?"

"ಹಾಗನ್ನಬೇಡಿ. ರಾಮರಾಜಪ್ಪನ ಗುಣ ನಿಮಗೇ ಗೊತ್ತಾಗುತ್ತದೆ–ಅವನಿಗೆ ದೇವರು ಅನುಕೂಲದ ಜತೆಗೆ ಧಾರಾಳವಾದ ಮನಸ್ಸನ್ನೂ ಕೊಟ್ಟಿದ್ದಾನೆ."

"ಇವರು ನಮ್ಮ ಮನೆ ಹತ್ತಿರ ಬರಕೂಡದು."

"ಹಾಗೇ ಆಗಲಿ."

"ಈಗೆಷ್ಟು ಕೊಡಿಸುವಿರಿ?"

"ನೀವೇ ಹೇಳಿ."

"ನನಗೆ ತುಂಬ ಸಾಲವಿದೆ. ಸಾಲದ ಹೊರೆ ಹೊತ್ತುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆಯೇ?"

"ಗಾಡಿ ಮುಂದೆ ಕುದುರೆ ಕಟ್ಟಬೇಕು ಸರಸ್ವತಮ್ಮ, ಕುದುರೆ ಮುಂದೆ ಗಾಡಿ ಕಟ್ಟಬಾರದು. ಈಗ ರಾಮರಾಜಪ್ಪನಿಂದ ನೂರು ರೂಪಾಯಿ ಕೊಡಿಸುತ್ತೇನೆ ತೆಗೆದುಕೊಳ್ಳಿ—ಮುಂದಕ್ಕೆ ಅವನುಂಟು ನೀವುಂಟು—ನೀವು ಏನು ಕೇಳಿದರೂ ಅವನು ಕೊಡುತ್ತಾನೆ."

ಸರಸ್ವತಿ ಕ್ಷಣಕಾಲ ಯೋಚಿಸಿದಳು. ಮುತ್ತಮ್ಮನ ವಾದಸರಣಿಯಲ್ಲಿ ಸತ್ಯಾಂಶವಿದೆಯೆಂದು ಭಾವಿಸಿದಳು. ಮಂಜಯ್ಯ, ನಂಜಪ್ಪ ಇವರ ಮಧ್ಯೆ ಅಪರೋಕ್ಷವಾಗಿ ನಡೆಯುತ್ತಿದ್ದ ಘರ್ಷಣೆಯ ಚಿತ್ರ ಅವಳ ಚಿತ್ತಫಲಕದ ಮೇಲೆ ಮೂಡಿತು. 'ನನ್ನ ಸ್ವಾತಂತ್ರ್ಯ ನಾನು ಮಂಜಯ್ಯನಿಗಾಗಲಿ, ನಂಜಪ್ಪನಿಗಾಗಲಿ ಏಕೆ ಮಾರಿಕೊಳ್ಳಬೇಕು.' ಎಂದು ವಾದ ಮಾಡುತ್ತಾ

"ನಿನ್ನ ಮಾತಿಗೆ ಒಪ್ಪುತ್ತೇನಮ್ಮ. ನನ್ನ ಮರ್ಯಾದೆ ಕಾಪಾಡುವುದು ನಿನ್ನ ಭಾರ" ಎಂದು ಮುತ್ತಮ್ಮನಿಗೆ ಹೇಳಿದಳು.

ಮುತ್ತಮ್ಮನಿಗೆ ಅಪರಿಮಿತಾನಂದವಾಯಿತು.

" ನೀವು ಮಹಡಿಯ ಮೇಲಿರಿ. ರಾಮರಾಜಪ್ಪ ಬರುತ್ತಲೇ ಕಳಿಸಿ ಕೊಡುತ್ತೇನೆ. "

" ಅವರು ಬರುವುದಕ್ಕೆ ತಡವಾಗುತ್ತದೆಯೇ ? "

" ಮೂರು ಗಂಟೆಗೆ ಸರಿಯಾಗಿ ಬರುತ್ತಾನೆ. "

ಸರಸ್ವತಿ ಮಹಡಿಯ ಮೇಲೆ ಹೋಗಿ ಕುಳಿತ ಹತ್ತು ನಿಮಿಷಗಳಲ್ಲಿ ರಾಮರಾಜಪ್ಪ ಬಂದ. ತೊಟ್ಟಿಯನ್ನೊಮ್ಮೆ ಸಿಂಹಾವಲೋಕನ ಮಾಡಿದ. ಸರಸ್ವತಿಯನ್ನು ಕಾಣದೆ ಅವನ ಮನಸ್ಸು ವ್ಯಥೆಗೊಂಡಿತು.

" ಬರಲಿಲ್ಲನೇ ಮುತ್ತಮ್ಮ " ಎಂದು ಕೇಳಿದ.

" ಇಲ್ಲವಲ್ಲಪ್ಪಾ—ಖಂಡಿತ ಬರುತ್ತೇನೆಂದು ಹೇಳಿದವಳು ಕೊನೆಗೂ ಕೈಗೊಟ್ಟಳಲ್ಲ. "

ಸರಸ್ವತಿಗೆ ಹಿಡಿಶಾಪ ಹಾಕುತ್ತ ರಾಮರಾಜಪ್ಪ ಕುಳಿತುಕೊಂಡ.

" ಬರದಿದ್ದರೆ ಅಷ್ಟೇ ಹೋಯಿತು, ಅವಳು ಯಾವ ರಂಭೆಯಪ್ಪ ! ಬಾಲೂ ಬಂದಿದ್ದಾಳೆ ಮಾತನಾಡಿಸಿಕೊಂಡು ಹೋಗು. ನಾಳೆ ನಾನು ಜೇರೆ ಕರೆಸುತ್ತೇನೆ. "

" ನನಗೆ ಯಾವದೂ ಜೇಡ—ಬಿಡಮ್ಮ "

ಎಂದು ರಾಮರಾಜಪ್ಪ ಬೇಸರದ ದನಿಯಲ್ಲಿ ನುಡಿದ. ಮುತ್ತಮ್ಮ ಅವನ ಚಿತ್ತವಿಹ್ವಲತೆಯನ್ನು ಕಂಡು

" ಮುತ್ತಮ್ಮನ ಮೇಲೆ ನಿನಗೆ ನಂಬಿಕೆಯಿಲ್ಲ ರಾಮರಾಜಪ್ಪ. "

" ಏಕಮ್ಮ ? "

" ಒಪ್ಪಿಕೊಂಡ ಕೆಲಸ ಆಗುಮಾಡದೆ ನಾನು ಯಾವತ್ತಾದರೂ ಸೋತು ಬಿದ್ದಿದ್ದೇನೆಯೇ ? "

" ಹಾಗಾದರೆ....ಬಂದಿದ್ದಾಳೆ ! "

" ಬಂದಿದ್ದಾಳಪ್ಪಾ ಬಂದಿದ್ದಾಳೆ–ಈಗಲಾದರೂ ಸಮಾಧಾನವಾಗಿರು. "

" ಎಲ್ಲಿ ? "

" ಮೇಲೆ ಇದ್ದಾಳೆ ತಡೀ. ಹೋಗುವೆಯಂತೆ. ಅವಳನ್ನು ಒಪ್ಪಿಸ

ಬೇಕಾದರೆ ನನಗೆ ಸಾಕು ಸಾಕಾಗಿ ಹೋಯಿತು. ಕಲಿತ ಬುದ್ಧಿಯನ್ನೆಲ್ಲಾ ಖರ್ಚುಮಾಡಿ ನಾನು ಒಪ್ಪಿಸಬೇಕಾಯಿತು. ನೂರು ರೂಪಾಯಿ ಅವಳಿಗೇ ಮೊತ್ತವಾಗಿ ಕೊಟ್ಟುಬಿಡಬೇಕು."

"ಅದಕ್ಕೆ ನಾನು ಒಪ್ಪಿಕೊಂಡಿದ್ದೆನಲ್ಲಾ."

"ಭಾಗ್ಯಮ್ಮ ಬಹಳ ಕಷ್ಟಪಟ್ಟಿದ್ದಾಳೆ. ಅವಳಿಗೆ ಇಪ್ಪತ್ತೈದು ಕೊಡಿಸುತ್ತೇನೆಂದು ಹೇಳಿದ್ದೇನೆ. ಅವಳಿಗೆ ಇಪ್ಪತ್ತೈದು—ನನಗೆ ಇಪ್ಪತ್ತೈದು ಕೊಡಬೇಕು."

ರಾಮರಾಜಪ್ಪ ಕ್ಷಣಕಾಲ ಯೋಚಿಸಿ ಮರುಮಾತನಾಡದೆ ಮುತ್ತಮ್ಮನ ಕೈಯಲ್ಲಿ ನೂರೈವತ್ತು ರೂಪಾಯಿಗಳನ್ನಿಟ್ಟ.

ರಾಮರಾಜಪ್ಪ ಕೊಟ್ಟ ಹಣದಲ್ಲಿ ಐವತ್ತು ರೂಪಾಯಿಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಮುತ್ತಮ್ಮ ಉಳಿದುದನ್ನು ಸರಸ್ವತಿಗೆ ಕೊಟ್ಟು ಬಂದು

"ನೀನು ಮೇಲಕ್ಕೆ ಹೋಗಪ್ಪ. ಮನೆಗೆ ಹೋಗುವಾಗ ನೀನು ಮೊದಲು ಹೊರಟುಹೋಗು—ಅವಳು ಆಮೇಲೆ ಹೋಗಲಿ."

"ಹಾಗೇ ಆಗಲಿ" ಎಂದು ಹೇಳಿ ರಾಮರಾಜಪ್ಪ ಮಹಡಿಯನ್ನೇರಿದ.

ಸರಸ್ವತಿ ಕಿಟಕಿಯ ಕಡೆ ಮುಖಮಾಡಿ ದೂರ ದಿಗಂತವನ್ನು ದಿಟ್ಟಿಸಿ ನೋಡುತ್ತ ನಿಂತಿದ್ದಳು. ರಾಮರಾಜಪ್ಪ ಬೆನ್ನು ಮುಟ್ಟಿದೊಡನೆಯೇ ತಟಕ್ಕನೆ ತಿರುಗಿ ನೋಡಿದಳು.

"ನೀನು ಬಂದು ಬಹಳ ಹೊತ್ತಾಯಿತೇ?"

"ಎರಡು ಗಂಟೆಗೇ ಬಂದೆ."

"ಬರುವೆಯೋ ಇಲ್ಲವೋ ಎಂದು ಮನಸ್ಸಿಗೆ ತುಂಬ ಚಿಂತೆಯಾಗಿತ್ತು."

"ಚಿಂತೆಯೇಕೆ? ಈ ಮನೆಯ ತುಂಬ ಹೆಂಗಸರು ಇದ್ದಾರಲ್ಲಾ."

"ಇದ್ದಾರೆ—ಆದರೆ ನೀನಿಲ್ಲ."

ಸರಸ್ವತಿಯ ಮುಖದಲ್ಲಿ ಅಣಕದ ನಗೆ ತೇಲಿತು. ದರಿದ್ರನಿಗೆ ನಿಧಿ ದೊರಕಿದಂತಾಗಿತ್ತು ರಾಮರಾಜಪ್ಪನಿಗೆ.

ರಾಮರಾಜಪ್ಪನ ಉದ್ವೇಗ ಪರಿಹಾರವಾಗಿ ಇಬ್ಬರೂ ಹಾಸಿಗೆಯ ಮೇಲೆ

ಕುಳಿತಾಗ

"ನನ್ನ ಸ್ನೇಹ ಬೆಳಸುವ ವಿಷಯದಲ್ಲಿ ನೀನು ಬಹಳ ಅನುಮಾನಿಸಿದೆ ಯೆಂದು ಮುತ್ತಮ್ಮ ಹೇಳಿದಳು.

"ನಿಜ."

"ನಾನೇನೂ ಅಪಾಪೋಲಿಯಲ್ಲ ಸರಸ್ವತಿ."

"ಛೆ; ಛೆ; ನಾನು ಹಾಗೆ ಭಾವಿಸಲಿಲ್ಲ. ನಾನು ಸಂಸಾರವಂದಿಗಿತ್ತಿ. ಮನೆಯಲ್ಲಿ ಮಕ್ಕಳಿದ್ದಾರೆ—ನನ್ನ ನಂಟರಿಷ್ಟರ ಬಳಗವೂ ಬಹಳ ದೊಡ್ಡದು—ಆದಕ್ಕಾಗಿ ಹೆದರಿದೆ."

"ನಿನ್ನನ್ನು ಕಷ್ಟಕ್ಕೆ ಸಿಕ್ಕಿಸುವಷ್ಟು ನಾನು ದುಷ್ಟನಲ್ಲ."

"ನೋಡಿದಿರಾ—ನಾನೊಂದು ಹೇಳಿದರೆ ನೀವೊಂದು ಅರ್ಥಮಾಡಿ ಕೊಳ್ಳುವಿರಿ—ನಿಮ್ಮ ವಿಷಯ ಮುತ್ತಮ್ಮ ಬೇಕಾದಷ್ಟು ಹೇಳಿದ್ದಾಳೆ. ನನಗೆ ಸ್ವಲ್ಪವೂ ಅನುಮಾನವಿಲ್ಲ."

"ನೀನು ಇಲ್ಲಿಗೆ ಬರುವುದು ನನಗೆ ಸ್ವಲ್ಪವೂ ಇಷ್ಟವಿಲ್ಲ. ನೀನು ಬರುವ ಮನೆಯಲ್ಲ ಇದು."

"ನೀವೇ ಬರಮಾಡಿಕೊಂಡಿರುವಿರಿ?"

"ಹೌದು. ಇದು ಬಿಟ್ಟು ಬೇರೆ ಉಪಾಯವೇ ಇರಲಿಲ್ಲವಲ್ಲಾ!"

"ನನ್ನ ಮನೆಗೆ ನೀವು ದಯೆಯಿಟ್ಟು ಬರಬಾರದು."

"ನೀನು ಬೇಡವೆಂದರೆ ನಾನು ಖಂಡಿತ ಬರುವುದಿಲ್ಲ."

"ನಾನು ಬೇಕಾದರೆ ವಾರಕ್ಕೆರಡು ಸಾರಿ ಇಲ್ಲಿಗೇ ಬರುತ್ತೇನೆ."

"ನಂಜಪ್ಪನನ್ನು ಕಂಡರೆ ಅಷ್ಟು ಭಯವೇ?"

"ಭಯದ ಪ್ರಶ್ನೆಯಲ್ಲ—ಅವರು ನನ್ನ ವಿಷಯದಲ್ಲಿ ತುಂಬ ವಿಶ್ವಾಸ ವುಳ್ಳವರಾಗಿದ್ದಾರೆ."

"ನನಗೆ ವಿಶ್ವಾಸವಿಲ್ಲವೇನು?"

"ಇಲ್ಲವೆಂದು ನಾನು ಹೇಳಿದೆನೇ?"

"ನಾವಿಬ್ಬರೂ ಏನಾದರೊಂದು ವ್ಯವಸ್ಥೆಮಾಡಿಕೊಳ್ಳುವುದಕ್ಕಾಗುವು

ದಿಲ್ಲವೇ ?"

"ಸ್ವಲ್ಪ ದಿವಸ ಹೀಗೇ ನಡೆದುಕೊಂಡು ಹೋಗಲಿ. ಮುಂದೆ ಕಾಲ ಹೇಗೆ ಬರುವುದೋ ನೋಡೋಣ."

"ದುಡ್ಡಿನ ವಿಷಯ ಯೋಚನೆ ಮಾಡಬೇಡ. ದೇವರು ನನ್ನನ್ನು ಚೆನ್ನಾಗಿ ಇಟ್ಟಿದ್ದಾನೆ."

"ಮುತ್ತಮ್ಮ ಹೇಳಿದಳು. ದುಡ್ಡೇ ಮುಖ್ಯವೆಂದು ನಾನು ತಿಳಿದು ಕೊಂಡಿಲ್ಲ. ಸಂಸಾರದ ಯೋಚನೆ ನನಗಿಲ್ಲದಿದ್ದರೆ ನಿಮ್ಮಿಂದ ನಾನು ಬಿಡಿ ಕಾಸೂ ತೆಗೆದುಕೊಳ್ಳುತ್ತಿರಲಿಲ್ಲ."

"ನೋಡು ಸರಸ್ವತಿ, ನಾನು ಇದುವರೆಗೆ ಲಕ್ಷಾಂತರ ರೂಪಾಯಿ ಸಂಪಾ ದಿಸಿದ್ದೇನೆ, ಕಳೆದೂ ಇದ್ದೇನೆ. ಮೊದಲು ದುಡ್ಡು ಕೂಡಿಡಬೇಕು, ಆಸ್ತಿ ಮಾಡಬೇಕು ಎನ್ನುವ ಲಕ್ಷ್ಯವೇ ಇರಲಿಲ್ಲ. ಈಗೀಗ ಸ್ವಲ್ಪ ಆಸ್ತಿ ಮಾಡುವು ದಕ್ಕೆ ಆರಂಭಿಸಿದ್ದೇನೆ. ದುಡ್ಡಿಗೆ ನಾನೆಂದಿಗೂ ಬೆಲೆ ಕೊಡುವವನಲ್ಲ. ವಿಶ್ವಾಸ ಕಂಡು ಬರುವ ಕಡೆಗೆ ಪ್ರಾಣ ಒಪ್ಪಿಸಲೂ ಸಿದ್ಧನಾಗಿದ್ದೇನೆ."

"ನನ್ನದೂ ಅದೇ ಸ್ವಭಾವ. ಆದರೇನು ಮಾಡಲಿ ತಾಪತ್ರಯಗಳು ಹೆಚ್ಚಿದರೆ ಸ್ವಭಾವವನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ. ನನಗೆ ಹೊತ್ತಾ ಗುತ್ತದೆ. ಹೊರಡಲು ಅಪ್ಪಣೆಯೇ."

"ಇಷ್ಟು ಬೇಗ ಹೋಗಬೇಕೇ ?"

"ಬೇಕಾದರೆ ಸ್ವಲ್ಪ ಹೊತ್ತು ಇದ್ದು ಹೋಗುತ್ತೇನೆ" ಎಂದು ಹೇಳಿದಳು.

ಅರ್ಧ ಗಂಟೆ ತರುವಾಯ ರಾಮರಾಜಪ್ಪ ಎದ್ದು ನಿಂತು ಕೋಟಿಗೆ ಕೈನೀಡಿದ. ಕೋಟು ಮೊಳೆ ಕಿತ್ತುಕೊಂಡು ನೆಲದ ಮೇಲೆ ಬಿತ್ತು. ಕಿಸೆ ಯಲ್ಲಿದ್ದ ಷೀಫರ್ ಫೌಂಟನ್‌ಪೆನ್ ಕೆಳಗೆ ಬಿತ್ತು. ರಾಮರಾಜಪ್ಪ ಕೋಟನ್ನು ಕೈಗೆತ್ತಿಕೊಂಡ. ಸರಸ್ವತಿ ಪೆನ್ ಕೈಗೆ ತೆಗೆದುಕೊಂಡಳು. ಅವಳು ಪೆನ್ನನ್ನೇ ದಿಟ್ಟಿಸಿ ನೋಡುತ್ತಿದ್ದುದನ್ನು ಕಂಡು ರಾಮರಾಜಪ್ಪ

"ಪೆನ್ ಚೆನ್ನಾಗಿದೆಯೇ ?"

" ತುಂಬ ಚೆನ್ನಾಗಿದೆ. "

" ಬೇಕಾದರೆ ಇಟ್ಟುಕೋ. "

ಸರಸ್ವತಿ ಬೇಡವೆನ್ನದೆ ಪೆನ್ನನ್ನು ತನ್ನ ಕುಪ್ಪಸದ ಒಳಕ್ಕೆ ಇಳಿಬಿಟ್ಟಳು.

" ತಿರುಗಿ ಯಾವಾಗ ಇಲ್ಲಿಗೆ ಬರುವೆ? "

" ಎಂದು ಬರಲಿ ನೀವೇ ಹೇಳಿ. "

" ನಾಳೆ ಬರುವೆಯಾ? "

" ನಾಳೆ ಸಾಧ್ಯವಿಲ್ಲ—ನಾಡಿದ್ದು ಬರುತ್ತೇನೆ. "

" ಖಂಡಿತವೇ—"

" ಖಂಡಿತ. "

" ಬೇಗ ಬರಬೇಕು. "

" ಹನ್ನೆರಡು ಗಂಟೆಗೇ ಬರುತ್ತೇನೆ. "

ರಾಮರಾಜಪ್ಪ ಕೆಳಗಿಳಿದು ಬಂದು ಕೈ ಕಾಲು ಮುಖ ತೊಳೆದುಕೊಂಡು ಮುತ್ತಮ್ಮನ ಮಂಚದ ಮೇಲೆ ಕುಳಿತ. ಅವನ ಮುಖ ಪ್ರಸನ್ನವಾಗಿದ್ದುದನ್ನು ಕಂಡು ಮುತ್ತಮ್ಮ

" ತೃಪ್ತಿಯಾಯಿತೇನಪ್ಪಾ? " ಎಂದು ಕೇಳಿದಳು.

" ಆಯಿತಮ್ಮ. "

" ತಿರುಗಿ ಯಾವಾಗ ಬರಹೇಳಿದ್ದೀ? "

" ನಾಡಿದ್ದು. "

ಮುತ್ತಮ್ಮ ಮುಸಿಮುಸಿ ನಗುತ್ತಾ ಕುಳಿತಳು. ರಾಮರಾಜಪ್ಪ ಅವಳನ್ನು ಆಶ್ಚರಿಯಿಂದ ನೋಡಿ

" ಯಾಕಮ್ಮ ನಗುತ್ತೀ? "

" ನಿನ್ನ ಬುದ್ಧೀಗೆ ಏನು ಹೇಳಲೋ ರಾಮರಾಜು. ಮನೆಯಲ್ಲಿದ್ದ ಪಡ್ಡೆ ಹುಡುಗಿ ಬಿಟ್ಟು ಈ ಮುದಿ ಹಂಕನಿಗೆ ಗಂಟು ಬಿದ್ದಿರುವೆಯಲ್ಲಾ. "

" ಮುತ್ತಮ್ಮ, ಅದು ನಿನಗೆ ಅರ್ಥವಾಗುವ ವಿಷಯವಲ್ಲ, ಸುಮ್ಮನೆ ಚರ್ಚೆಮಾಡಬೇಡ " ಎಂದು ಹೊರಡಲನುವಾದ.

ರಾಮರಾಜು ಹೊರಗೆ ಹೋದ ಮೇಲೆ ಸರಸ್ವತಿ ಕೆಳಗಿಳಿದು ಬಂದು ಮುಖ ತೊಳೆದುಕೊಂಡಳು.

" ನಾಡಿದ್ದು ಬರ್‍ತೀರಂತೆ. "

" ಹೌದಮ್ಮ. ಬಾರೆಂದು ಹೇಳಿದ್ದಾರೆ. "

" ಬೇಗ ಬನ್ನಿ—ಬೇಗ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಕತ್ತಲೆಯಾದರೆ ಒಬ್ಬರೇ ತುಂಬ ದೂರ ಹೋಗುವುದಕ್ಕೆ ಕಷ್ಟವಾಗುತ್ತದೆ. "

" ಹನ್ನೆರಡು ಗಂಟೆಗೇ ಬರುತ್ತೇನೆ. "

ಭಾಗ್ಯಮ್ಮ ಸರಸ್ವತಿಯನ್ನು ಬಸ್‌ಸ್ಟ್ಯಾಂಡಿನವರೆಗೆ ಕರೆದೊಯ್ದು ಬಿಟ್ಟು ಬಂದಳು.

ಸರಸ್ವತಿ ಮನೆಗೆ ಬಂದೊಡನೆಯೇ ಸುಧಾ ಸ್ವಾಗತಿಸಿ

" ಎಷ್ಟು ಹೊತ್ತು ಹೋಗಿಬಿಟ್ಟೆಯಮ್ಮ " ಎಂದಳು.

" ಏಕೆ? ಯಾರು ಬಂದಿದ್ದರು ? "

" ಮಂಜಯ್ಯ ಬಂದಿದ್ದರು, ಆಮೇಲೆ ನಂಜಪ್ಪ ಬಂದಿದ್ದರು. "

" ಏನು ಹೇಳಿದೆ? "

" ಮಾವ ಬಂದಿದ್ದರು, ಕರೆದುಕೊಂಡು ಹೋದರು ಎಂದು ಹೇಳಿದೆ. "

ಸರಸ್ವತಿ ಕುಪ್ಪಸಕ್ಕೆ ಸಿಕ್ಕಿದ್ದ ಪೆನ್ ತೆಗೆದು ಸುಧೆಯ ಕೈಯಲ್ಲಿತ್ತಳು. ಅಲ್ಲಿಗೆ ಆ ವೇಳೆಗೆ ಬಂದ ಮಂಜುಳಾ ಪೆನ್ ಕಿತ್ತುಕೊಂಡು

" ಚೆನ್ನಾಗಿದೆ. ನನಗಿರಲಿ " ಎಂದಳು.

ಸುಧೆಯ ಮುಖ ಕಂಗೆಟ್ಟುದನ್ನು ಕಂಡು ಸರಸ್ವತಿ

" ಅಂಥದೇ ಪೆನ್ ನಿನಗೂ ತರಿಸಿಕೊಡುತ್ತೇನೆ ಸುಮ್ಮನಿರು "

ಎಂದು ಸಮಾಧಾನ ಹೇಳಿದಳು.

ಎಂಟು ಗಂಟೆಯ ಸುಮಾರಿಗೆ ಮಂಜಯ್ಯ ಬರಬಹುದೆಂದು ಸರಸ್ವತಿ ಊಟಮುಗಿಸಿ ಕುಳಿತಳು. ಮಂಜಯ್ಯನ ಸವಾರಿ ದಯಮಾಡಿಸಲಿಲ್ಲ. ಒಂಭತ್ತುವರೆಯವರೆಗೆ ಅವನ ದಾರಿ ನೋಡಿ ಮಲಗಿದಳು. ಸರಸ್ವತಿ ಮಲಗಿದ ಸ್ವಲ್ಪ ಹೊತ್ತಿನೊಳಗಾಗಿ ನಂಜಪ್ಪನ ಸಣ್ಣ ಧ್ವನಿ ಕೇಳಿಸಿತು. ಬಾಗಿಲು

ತೆಗೆದು ಅವನನ್ನು ಒಳಕ್ಕೆ ಬರಮಾಡಿಕೊಂಡಳು.

" ಮಧ್ಯಾಹ್ನ ನೀವು ಬಂದಿದ್ದರಂತೆ! "

" ಹೌದು—ನೀನು ಎಲ್ಲಿಗೆ ಹೋಗಿಬಿಟ್ಟಿದ್ದೆ. "

" ಅಣ್ಣ ಬಂದಿದ್ದರು. ಪೇಟೆಯ ಕಡೆ ಎಳೆದುಕೊಂಡು ಹೋದರು. "

" ಅವೇನು ಈಗ ಬಂದಿದ್ದರು. "

" ಮನೆಗೆ ಸ್ವಲ್ಪ ಜವಳಿ ಬೇಕಾಗಿತ್ತಂತೆ. "

ಸರಸ್ವತಿಯ ಕುಶಾಗ್ರಮತಿಗೆ ಒಂದು ವಿಚಾರ ಹೊಳೆಯಿತು.

" ಇವತ್ತು ಒಂದು ಕೆಲಸವಾಯಿತಲ್ಲಾಂದ್ರೆ? "

" ಏನಾಯಿತು ? "

" ನಾನೂ ಅಣ್ಣ ಮಾರ್ಕೆಟ್ಟಿನಿಂದ ಹೊರಕ್ಕೆ ಬರುವಾಗ ಆಕೆ, ನೀವು ನನ್ನನ್ನು ಕರೆದುಕೊಂಡು ಹೋಗಿದ್ದಿರಲ್ಲಾ, ಆ ಮನೆಯವಳು ಸಿಕ್ಕಿದಳು. "

" ಹೂ—ಸಿಕ್ಕಿ...."

" ಮಾತಾಡಿಸಿ ಬಿಟ್ಟಳು. "

" ಏನೆಂದು ? "

" ಹೆಚ್ಚೇನಿಲ್ಲ—' ಚೆನ್ನಾಗಿದ್ದೀರಾ, ಮನೆಯ ಕಡೆ ಬರಲೇ ಇಲ್ಲ ' ವೆಂದಳು. ನನ್ನ ದೊಡ್ಡ ಜೀವ ಮೆತ್ತಗಾಗಿ ಹೋಯಿತು. "

" ನಿಮ್ಮಣ್ಣ ಏನಾದರೂ ಕೇಳಿದರೇ? "

" ಆಕೆ ಯಾರು ಎಂದು ಕೇಳಿದರು. ಹೀಗೇ ಗುರುತಿನವರು ಎಂದು ಹೇಳಿ ಪಾರಾದೆ. ಇನ್ನು ಮೇಲೆ ಅವರ ಮನೆಗೆ ನಾನು ಬರುವುದಿಲ್ಲಾಂದ್ರೆ. "

" ನಿನ್ನ ನೋಡಬೇಕಾದರೆ ನಾನು ರಾತ್ರಿಯವರೆಗೂ ಕಾಯಬೇಕು. "

" ಅದಕ್ಕೆ ನಾನೇನು ಮಾಡಲಿ ? "

ಸರಸ್ವತಿಯ ಧ್ವನಿಯಲ್ಲಿ ಮಾರ್ದವತೆ ಇರಲಿಲ್ಲ. ನಂಜಪ್ಪನ ಮನಸ್ಸು ಅಳುಕಿತು. "

" ಸರಸಾ, ನಿನಗೆ ಕೋಪ ಬಂದಿದೆ. "

" ಬರದೇ ಇರುತ್ತದೆಯೇ? ಅಂಥ ಹೆಂಗಸು ನನ್ನನ್ನು ಬೀದಿಯಲ್ಲಿ

ಮಾತನಾಡಿಸಿದರೆ ನೋಡಿದವರು ಏನೆಂದುಕೊಳ್ಳುತ್ತಾರೆ. ಮರ್ಯಾದೆಯಾಗಿ ನಾನು ಮನೆಯಲ್ಲಿದ್ದೆ...."

" ನಾನು ನಿನ್ನ ಬೀದಿಗೆಳೆದೆ. "

" ನಿಮ್ಮನ್ನೇಕೆ ಆಕ್ಷೇಪಿಸಲಿ. ಕೈ ಹಿಡಿದ ಗಂಡ ಎನ್ನಿಸಿಕೊಂಡ ಆ ಮುಂಡೇಮಗ ಸರಿಯಾಗಿ ನನ್ನ ನೋಡಿಕೊಂಡಿದ್ದರೆ ಈ ಸ್ಥಿತಿ ನನಗೇಕೆ ಬರುತ್ತಿತ್ತು. "

" ಹೋಗಲಿ ಬಿಡು. ಕಳೆದುಹೋದ ಮಾತು ಕಟ್ಟಿಕೊಂಡೇನು ಪ್ರಯೋಜನ. ಇನ್ನು ಮೇಲೆ ಅಲ್ಲಿಗೆ ಹೋಗುವುದೇ ಬೇಡ. "

" ದಿನವೂ ನಾನು ನಿದ್ದೆಗೆಡುವುದಕ್ಕೆ ಆಗುವುದಿಲ್ಲಾಂದ್ರೆ. "

" ದಿನವೂ ಬರಬೇಡವೆಂದಲ್ಲವೇ ನೀನು ಹೇಳುತ್ತಿರುವುದು. "

" ನೀವೇ ತಿಳಿದುಕೊಳ್ಳುತ್ತೀರಿ ಎಂದಿದ್ದೆ. ದಿನದಿನವೂ ಬಡವಾಗುತ್ತಿದ್ದೀ ಎಂದು ಅವರು ಬೊಬ್ಬೆ ಹಾಕುತ್ತಾರೆ. "

" ಆ ಹೋಟಲಿನವನ ಮಾತು ನಿನಗೆ ಹೆಚ್ಚು. "

" ನೀವು ಅವರನ್ನು ಹೋಟಲಿನವನು ಎಂದನ್ನಬೇಡಿ. "

" ಸರಸಾ, ಇದೇಕೆ ಇಂದು ಹೀಗಾಡುತ್ತಿರುವೆ. "

" ಯಾವ ಸುಖಕ್ಕೆ ನಾನು ಹೀಗೆ ದುಡಿಯಬೇಕು ಹೇಳಿ. ನನ್ನ ಮೇಲೆ ಅವರಿಗೂ ಕೋಪ–ನಿಮಗೂ ಕೋಪ. ನಾನು ಯಾರನ್ನು ಸಮಾಧಾನಪಡಿಸಲಿ. ನನ್ನ ಬಾಳ್ವೆ ನಾಯಿ ಬಾಳ್ವೆಗಿಂತ ಕಡೆಯಾಯಿತು. "

ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವಳನ್ನು ಸಮಾಧಾನ ಪಡಿಸುವ ಪ್ರಯತ್ನ ಸಂಜಪ್ಪ ಮಾಡಿದ—ಸಫಲವಾಗಲಿಲ್ಲ. "

" ಕೋಪ ಬಿಡು ಸರಸಾ. ಎಲ್ಲಾ ಸರಿಹೋಗುತ್ತದೆ. " ಎಂದು ಅಂಗಲಾಚಿದ.

ಸರಸ್ವತಿ ಮತ್ತಷ್ಟು ಕೆರಳಿ

" ಸರಿಹೋಗುತ್ತದೆ—ನಾನು ಸತ್ತ ಮೇಲೆ ಎಲ್ಲಾ ಸರಿಹೋಗುವುದು. " ಎಂದು ಬಿರುಸಾಗಿ ನುಡಿದಳು.

ನೆಂಜಪ್ಪ ಅವಾಕ್ಕಾಗಿ ಕುಳಿತ. ಸರಸ್ವತಿ ತನ್ನನ್ನು ಮಾತನಾಡಿಸಬಹು ದೆಂದು ನಿರೀಕ್ಷಿಸಿದ. ಸರಸ್ವತಿ ಮುಖ ಕೆಳಗೆ ಮಾಡಿ ಕುಳಿತಿದ್ದಳು.

ನಂಜಪ್ಪ ಸ್ವಲ್ಪ ಹೊತ್ತು ನೋಡಿದ. ಅವನ ಮನಸ್ಸಿಗೆ ತುಂಬ ದುಃಖ ವಾಯಿತು. ಕಣ್ಣುಗಳ ಕಟ್ಟೆಯನ್ನೊಡೆದುಕೊಂಡು ನೀರು ಬರುವುದರಲ್ಲಿತ್ತು. ಮರುಮಾತನಾಡದೆ ಎದ್ದು ಹೊರಟುಹೋದ.

ಸರಸ್ವತಿ ಹಾಗೆಯೇ ಸ್ವಲ್ಪ ಹೊತ್ತು ಕುಳಿತಿದ್ದಳು. ನಂಜಪ್ಪ ಹಿಂದಿ ರುಗಬಹುದೆಂದು ಆವಳು ನಿರೀಕ್ಷಿಸಿದಳು. ಅವನು ಬಾರದಿರಲು ಎದ್ದು ದೀಪ ಆರಿಸಿ ಮಲಗಿದಳು. ತನ್ನ ಶಕ್ತಿಯ ಪ್ರಭಾವ ನೋಡಿ ಸರಸ್ವತಿಯೇ ವಿಸ್ಮಯ ಗೊಂಡಿದ್ದಳು.

೧೩

ಸರಸ್ವತಿಯ ಮನಸ್ಸಿನಲ್ಲಿ ಹಿಂದಿನ ರಾತ್ರಿಯಿದ್ದ ಸಮಾಧಾನ ಬೆಳಿಗ್ಗೆಯ ವೇಳೆಗೆ ನುಚ್ಚುನೂರಾಗಿತ್ತು. ಮನಸ್ಸಿನಲ್ಲಿ ಮೂಡಿದ್ದ ಭಯ ರಾತ್ರಿಯ ಸುಖ ನಿದ್ರೆಯನ್ನು ಮರೆಸಿತ್ತು. ನಂಜಪ್ಪನ ಮೇಲೆ ತಾನು ಕೋಪಿಸಿಕೊಂಡುದು ಅನುಚಿತವಾಯಿತೇನೋ ಎಂದು ಭಾವಿಸಿದಳು. ತನ್ನ ಕೋಪ ಅವನ ವಿಶ್ವಾಸಕ್ಕೆ ಪುಟಕೊಡಬಹುದೆಂಬ ನಂಬಿಕೆ ಭಗ್ನವಾಗಿತ್ತು. 'ಇಷ್ಟೇಕೆ ಯೋಚನೆ ಮಾಡಬೇಕು, ಇಂದು ಬಂದೇ ಬರುತ್ತಾರೆ' ಎಂದು ಸಮಾಧಾನ ತಂದುಕೊಳ್ಳಲೆತ್ನಿಸಿದಳು.

ಸುಧೆ ಶಾಲೆಗೆ ಹೋಗುವ ಸಿದ್ಧತೆ ಮಾಡಿಕೊಂಡು ತಾಯಿಯ ಬಳಿಗೆ ಬಂದು

"ಅಮ್ಮ. ಇವತ್ತು ನಾನು ಸ್ಕೂಲಿನಿಂದ ಬರಲು ಸ್ವಲ್ಪ ತಡವಾಗಬಹುದು."

"ಏಕಮ್ಮ—ಶಾಲೆಯಲ್ಲೇನಿದೆ?"

"ಇಂಗ್ಲಿಷ್ ಮೇಷ್ಟ್ರು—ಪೀತಾಂಬರರಾಯರು—ಒಂದು ವಾದ್ಯಮೇಳ ಸಿದ್ಧಮಾಡುತ್ತಿದ್ದಾರೆ. ಮೇಳದಲ್ಲಿ ಹಾಡುವ ಭಾಗ ನನ್ನದು—ಸಂಜೆಗೆ ರಿಹರ್ಸಲ್ ಇಟ್ಟುಕೊಂಡಿದ್ದಾರೆ."

"ರಿಹರ್ಸಲ್ ಮುಗಿಸಿಕೊಂಡೇ ಬಾ. ಜತೆಯಲ್ಲಿ ಯಾರು ಬರುತ್ತಾರೆ."

"ಜತೆಗಾತಿಯರು ಬರುತ್ತಾರೆ. ಸ್ಕೂಲ್ ಆಳು ನಮ್ಮ ಜತೆ ಬರುತ್ತಾನೆ"

"ನಿಮ್ಮ ಇಂಗ್ಲಿಷ್ ಮೇಷ್ಟ್ರಿಗೂ ಸಂಗೀತಕ್ಕೂ ಏನೇ ಸಂಬಂಧ ಸುಧಾ."

"ಅವರು ಮೈಸೂರಿನವರಮ್ಮ. ಅಲ್ಲಿ ಯಾರೋ ದೊಡ್ಡ ವಿದ್ವಾಂಸರ ಹತ್ತಿರ ವೀಣೆ ಪಾಠವಾಗಿದೆ. ಅವರೇ ಸೊಗಸಾಗಿ ವೀಣೆ ಬಾರಿಸುತ್ತಾರೆ. ಅವರನ್ನು ಒಂದು ದಿನ ನಮ್ಮ ಮನೆಗೆ ಕರೆದು ಕಾಫಿ ತಿಂಡಿ ಕೊಡಬೇಕೆಂದು ಆಸೆ. ಕರೆಯಲೇ?"

" ಅದಕ್ಕೇನು ಅವಶ್ಯಕವಾಗಿ ಕರೆ. ಎಂದು ಕರೆಯುತ್ತೀ ? "

" ನಾಳೆ ಮಧ್ಯಾಹ್ನ ನನಗೆ ಎರಡು ಪೀರಿಯಡ್ ಲೆಟ್ಆಫ್ (let off) ಇದೆ. ಸಂಜೆಗೆ ಬನ್ನಿರೆಂದು ಕರೆಯುತ್ತೇನೆ. "

" ಹಾಗೇ ಮಾಡು. ನಿಮ್ಮಕ್ಕನನ್ನೂ ಮನೆಯಲ್ಲಿಯೇ ಇರು ಎಂದು ಹೇಳು. ಅವಳೂ ವೀಣೆ ಕೇಳಲಿ. "

ತಾಯಿಯ ಒಪ್ಪಿಗೆ ಸಿಕ್ಕಿದುದಕ್ಕೆ ಸುಧನಿಗೆ ತುಂಬ ಸಂತೋಷವಾಯಿತು.

ಮಾರನೆಯದಿನ ಮಂಜುಳಾ 'ಕಾಲೇಜಿಗೆ ಹೋಗಲಿಲ್ಲ. ಪೀತಾಂಬರ ರಾಯನ ಸ್ವಾಗತಸಿದ್ಧತೆ ಮಾಡಲು ತಾಯಿಗೆ ನೆರವಾದಳು. ಮಧ್ಯಾಹ್ನ ಸುಧೆಯೂ ಶಾಲೆಯಿಂದ ಬಂದು ತಾಯಿಯ ಸಹಾಯಕ್ಕೆ ನಿಂತಳು.

" ಎಷ್ಟು ಹೊತ್ತಿಗೆ ಬರುತ್ತಾರೆ ಸುಧಾ. "

" ನಾಲ್ಕೂವರೆಗೆ ಶಾಲೆ ಬಿಟ್ಟಕೂಡಲೆ ಬರುತ್ತಾರಂತೆ. "

ಸರಸ್ವತಿ ಮನೆಯಲ್ಲಿ ತಿಂಡಿಸಾಮಾನು ಮಾಡಿ, ಸುಧೆಯ ಕೈಯಲ್ಲಿ ಹೊಟೇಲಿನಿಂದ ಕೆಲವು ಸಿಹಿ ತಿಂಡಿಗಳನ್ನು ತರಿಸಿದಳು.

ನಾಲ್ಕೂವರೆಯ ವೇಳೆಗೆ ಸುಧೆ ಹೊರಗೆ ಕಾದಿದ್ದು ಪಿತಾಂಬರನನ್ನು ಒಳಕ್ಕೆ ಕರೆತಂದು ಅವನಿಗೆ ತಾಯಿ, ಅಕ್ಕನ ಪರಿಚಯ ಮಾಡಿಸಿದಳು.

ಪೀತಾಂಬರ ನೋಡಲಿಕ್ಕೆ ತಾಳಿಕೆಯಾಗುವ ಆಳು. ಎಣ್ಣೆಗೆಂಪು ಬಣ್ಣ, ಗುಂಗುರು ಕೂದಲು, ಮಾಟವಾದ ಮುಖ. ಗಳಿಗೆ ಕೆಡದಂತಹ ಸೂಟ್ ಸದಾ ಧರಿಸುತ್ತಿದ್ದುದು ಅವನ ಹೆಚ್ಚುಗಾರಿಕೆಯಾಗಿತ್ತು. ಕಾಲೇಜಿನಲ್ಲಿ ಪೀತಾಂಬರ 'ಡ್ಯಾಂಡಿ' (dandy) ಎಂದು ಹೆಸರಾಗಿದ್ದ. ಅವನಿಗೆ ಕೆಲಸ ಸಿಕ್ಕಿ ಉಪಾಧ್ಯಾಯನಾದ ಮೇಲೂ ಆ ಕೀರ್ತಿಯನ್ನು ಉಳಿಸಿಕೊಂಡು ಬಂದಿದ್ದ.

ಮೇಷ್ಟ್ರಿಗೂ, ಅಕ್ಕನಿಗೂ ಸುಧೆ ತಿಂಡಿ ತಿನಿಸು ತಂದುಕೊಟ್ಟಳು, ಸರಸ್ವತಿ ಸುಧೆಗೆ ತಿಂಡಿ ತಂದುಕೊಟ್ಟಳು, ಸ್ವೀಕರಿಸಬೇಕೆಂದು ಸುಧೆ ಉಪಚಾರ ಹೇಳಿದಳು. "

" ನಿಮ್ಮ ತಾಯಿ ತೆಗೆದುಕೊಳ್ಳುವುದಿಲ್ಲವೇ ? "

" ಅವರು ಆಮೇಲೆ ತೆಗೆದುಕೊಳ್ಳುತ್ತಾರೆ. "

ಉಪಾಹಾರ, ಕಾಫಿ ಮುಗಿದಮೇಲೆ ಪೀತಾಂಬರ ಮಂಜುಳನ ಕಾಲೇಜಿನ ವಿಷಯ, ಪಾಠದ ವಿಷಯ, ಉಪಾಧ್ಯಾಯಿನಿಯರ ವಿಷಯ ವಿಚಾರಿಸಿಕೊಂಡ. ಮಾತು ಸಾಗಿದ್ದಂತೆ ಸುಧಾ

"ಸರ್—ನೀವು ಸ್ವಲ್ಪ ವೀಣೆ ನುಡಿಸಬೇಕು."

"ನನಗೇನು ಬರುತ್ತದೆ ಸುಧಾ. ನಿಮ್ಮಕ್ಕ ನುಡಿಸಲಿ ಎಲ್ಲರೂ ಕೇಳೋಣ."

ಸುಧೆ ಎದ್ದು ಹೋಗಿ ವೀಣೆಗಳನ್ನು ತಂದು ಅಕ್ಕನ ಮುಂದೆ, ಪೀತಾಂಬರನ ಮುಂದೆ ಇಟ್ಟಳು.

"ನೀನು ನುಡಿಸಮ್ಮ" ಎಂದು ಮಂಜುಳನಿಗೆ ಹೇಳಿದ.

ಮಂಜುಳ ವೀಣೆಯನ್ನು ಮುಟ್ಟಲಿಲ್ಲ.

ಪೀತಾಂಬರ ವೀಣೆಯನ್ನು ನುಡಿಸಲಾರಂಭಿಸಿದ. ತಾಯಿ ಮಕ್ಕಳು ಭಿತ್ತಿಚಿತ್ರಗಳಂತೆ ಅವನ ವೀಣಾವಾದವನ್ನು ಆಲಿಸುತ್ತ ಕುಳಿತರು. ಯಾರಿಗೂ ಹೊತ್ತಿನ ಪರಿವೆಯೇ ಇಲ್ಲ.

ಕಲ್ಯಾಣಿ ರಾಗಾಲಾಪನೆ ಸಾಗಿತ್ತು. ಗಡಿಯಾರ ಏಳರ ಗಡಿ ದಾಟಿ, ಅರ್ಧ ಗಂಟೆಯನ್ನು ಸೂಚಿಸುತ್ತಿತ್ತು. ಹೊರಗೆ ಯಾರದೋ ನೆರಳು ಕಂಡಂತಾಯಿತು.

ಸರಸ್ವತಿ ಮೆಲ್ಲನೆ ಎದ್ದು ಹೊರಗೆಹೋದಳು.

ಮರೆಯಲ್ಲಿ ನಿಂತಿದ್ದ ಮಂಜಯ್ಯನನ್ನು ಕರೆದುಕೊಂಡು ಸ್ವಲ್ಪ ದೂರ ಹೋದಳು. ಮಂಜಯ್ಯ ತುಸು ಬೇಸರದಿಂದಲೇ

"ಯಾರದು ವೀಣೆ ನುಡಿಸುತ್ತಿರುವುದು."

"ಸುಧೆಯ ಮೇಷ್ಟ್ರು."

"ಕಛೇರಿ ಇನ್ನೂ ಎಷ್ಟು ಹೊತ್ತಾಗುತ್ತದೋ?"

"ಅವರು ಬಂದು ಸ್ವಲ್ಪ ಹೊತ್ತಾಯಿತು."

"ನಾನು ಬರುವ ವೇಳೆಗೇ ನಿನ್ನ ಮನೆಯಲ್ಲಿ ಕಾರ್ಯಕ್ರಮ ನಡೆಯುತ್ತದೆ."

" ಅವರು ಅಪರೂಪಕ್ಕೆ ಬಂದಿದ್ದಾರೇಂದ್ರೆ. "

" ಇವತ್ತು ಅವರು—ನಾಳೆ ಬೇರೊಬ್ಬರು. "

" ನನ್ನ ಮನೆಗೆ ಬಂದು ಹೋಗುವವರು ಹೆಚ್ಚು ಎಂದು ನಾನು ಮೊದಲೇ ಹೇಳಿರಲಿಲ್ಲವೇ ? "

" ಸರಿ—ಅದಕ್ಕೇನಾದರೂ ಇತಿಮಿತಿ ಇದ್ದರೆ ತಾನೆ. "

" ಒಂಭತ್ತು ಗಂಟೆಗೆ ಬನ್ನಿ. "

" ಆ ವೇಳೆಗೆ ನಾನು ಬರುವುದಕ್ಕಾಗುವುದಿಲ್ಲವೆಂದು ಗೊತ್ತಿಲ್ಲವೇ ? "

" ಹಾಗಾದರೆ ನಾಳೆ ಬನ್ನಿ" ಎಂದಳು.

ಮಂಜಯ್ಯ ಮುಖ ಕೆಂಪಗೆ ಮಾಡಿಕೊಂಡು ಹೊರಡಲಡಿಯಿಟ್ಟ, ಸರಸ್ವತಿ

" ನಾಳೆ ಎಷ್ಟು ಹೊತ್ತಿಗೆ ಬರುವಿರಿ ? " ಎಂದಳು.

ಮಂಜಯ್ಯ ಉತ್ತರಕೊಡದೆ ಹೊರಟು ಹೋದ. ಸರಸ್ವತಿ ಒಂದು ಕ್ಷಣ ಕಾಲ ಅಲ್ಲಿಯೇ ನಿಂತಿದ್ದು ಒಳಗೆ ಬಂದು ಕುಳಿತಳು. ಕಲ್ಯಾಣಿಯ ರಾಗ ಅವಳಿಗೆ ಮಂಜಯ್ಯನ ನೆನಪನ್ನೇ ಅಳಿಸಿಬಿಟ್ಟಿತು.

ಕಲ್ಯಾಣಿಯ ರಾಗಾನಂತರ ಕೃತಿ ನುಡಿಸಿ, ತರುವಾಯ ಎರಡು ದೇವರ ನಾಮ ನುಡಿಸಿ ಪೀತಾಂಬರ ವೀಣೆಯನ್ನು ಕೆಳಗಿಳುಹಿ

" ಇನ್ನಾದರೂ ನೀನು ನುಡಿಸಲೇಬೇಕಮ್ಮ " ಎಂದ.

ಮಂಜುಳಾ ವೀಣೆಯನ್ನು ಕೈಗೆತ್ತಿಕೊಂಡು ಖರಹರಪ್ರಿಯ, ಮೋಹನ ರಾಗಗಳಲ್ಲಿ ಎರಡು ಕೀರ್ತನೆ ನುಡಿಸಿದಳು.

ಸರಸ್ವತಿ ಪೀತಾಂಬರನನ್ನು ಮುಕ್ತಕಂಠದಿಂದ ಹೊಗಳಿ

" ಪುರಸತ್ತಾದಾಗ ಬರುತ್ತಿರಿ. ನಿಮಗೆ ಅನುಕೂಲವಾದಾಗ ನಮ್ಮ ಮಂಜುಳನಿಗೆ ಸ್ವಲ್ಪ ವೀಣೆ ಹೇಳಿಕೊಟ್ಟರೆ ಉಪಕಾರವಾಗುತ್ತದೆ " ಎಂದಳು.

ಪೀತಾಂಬರ ಆಗಲೆಂದು ಒಪ್ಪಿಕೊಂಡ.

ಪೀತಾಂಬರನನ್ನು ಕಳುಹಿಸಿಕೊಟ್ಟ ಮೇಲೆ ಸರಸ್ವತಿ ಮಕ್ಕಳಿಗೆ ಎಲೆ ಹಾಕಿ ಬಡಿಸಿದಳು. ಅವರು ಊಟ ಮುಗಿಸಿಕೊಂಡು ರೂಮು ಸೇರಿದಮೇಲೆ

ಮಧ್ಯಾಹ್ನದ ತಿಂಡಿಯನ್ನು ಒಂದು ತಟ್ಟೆಯಲ್ಲಿಟ್ಟು ರೂಮಿನ ಮೇಜಿನ ಮೇಲಿಟ್ಟು ಬಂದು, ಸ್ವಲ್ಪ ಮಜ್ಜಿಗೆ ಅನ್ನ ತಿಂದು ತನ್ನ ಊಟ ಮುಗಿಸಿ ಎದ್ದಳು.

ಸರಸ್ವತಿಯ—ಚಿತ್ತ ಮನಸ್ಸು, ಗಡಿಯಾರ—ಮನೆಯ ಹೊರಗಿನ ಬಾಗಿಲ ಮೇಲೆ ನೆಟ್ಟವು. ಒಂಭತ್ತಾಯಿತು—ಹತ್ತಾಯಿತು—ಹನ್ನೊಂದಾಯಿತು—ಹನ್ನೆರಡಾಯಿತು. ನಂಜಪ್ಪನ ಸುಳಿವಿಲ್ಲ. ಸರಸ್ವತಿ ದುಃಖ ಸಹಿಸಲಾರದೆ ದಿಂಬು ನೆನೆಯುವಂತೆ ಕಣ್ಣೀರ್ಗರೆದಳು. ನಂಜಪ್ಪನನ್ನು ಕಳೆದುಕೊಂಡೆನಲ್ಲಾ ಎಂದು ಮಮ್ಮಲ ಮರುಗಿದಳು.

ರಾತ್ರಿ ಎಷ್ಟು ಬೇಗ ಕಳೆದುಹೋಗುತ್ತದೆ, ಸೂರ್ಯೋದಯವಾಗುವುದಲ್ಲ ಎಂದು ಪರಿತಪಿಸುತ್ತಿದ್ದವಳು ಈಗ ಸೂರ್ಯೋದಯವಾದೀತೇ ಎಂದು ಹಂಬಲಿಸತೊಡಗಿದಳು. ಎಳೆಬೆಳದಿಂಗಳು ಅವಳ ಮೈಯನ್ನು ಮುಳ್ಳಿನಂತೆ ಚುಚ್ಚುತ್ತಿದ್ದಿತು. ಮೈ, ಮನಸ್ಸು ಅಸ್ತವ್ಯಸ್ತವಾಗಿದ್ದಿತು.

ಬೆಳಿಗ್ಗೆ ಸರಸ್ವತಿ ಹಾಸಿಗೆ ಬಿಟ್ಟು ಎದ್ದಾಗ ಅವಳ ಎರಡು ಕಣ್ಣುಗಳೂ ಕೆಂಡಗಳಂತೆ ಪ್ರಜ್ವಲಿಸುತ್ತಿದ್ದವು.

ನಂಜಪ್ಪ ಕುಂತಳೆಯ ಸಹವಾಸದಲ್ಲಿ, ಅವಳ ಮುಗ್ಧ ಮನೋಹರ ರೂಪರಾಶಿಯಲ್ಲಿ ತನ್ನ ದುಃಖವನ್ನು ನೋವನ್ನು ಮರೆಯಲೆತ್ನಿಸಿದ್ದ. ತನ್ನಿನಿಯ ತನ್ನಲ್ಲಿಗೆ ಬಂದನಲ್ಲಾ ಎಂದು ಕುಂತಳೆ ಹಿಗ್ಗಿಹೋಗಿದ್ದಳು. ಅವಳ ಮೈ, ಮುಖದ ಮೇಲೆ ಸಂತೋಷ ಚಿಲುಮೆಯಂತೆ ಚಿಮ್ಮುತ್ತಿತ್ತು.

ಕುಂತಳೆಯನ್ನಪ್ಪಿ ಮಲಗಿದ್ದಂತೆ, ಮುಖದ ಮೇಲೆ ಚಲ್ಲಾಟವಾಡುತ್ತಿದ್ದ ಅವಳ ಭೃಂಗ ಕುಂತಳಗಳನ್ನು ಮೃದುವಾಗಿ ನೇವರಿಸುತ್ತ ನಂಜಪ್ಪ ಅವಳ ಸ್ನಿಗ್ಧ ಮನೋಹರ ರೂಪವನ್ನು ದಿಟ್ಟಿಸಿ ನೋಡುವನು. ಕುಂತಳೆಯನ್ನು ಸರಸ್ವತಿಯನ್ನು ಹೋಲಿಸಿ ನೋಡುವನು.

‘ಸರಸ್ವತಿ ರೂಪವತಿಯೇ ?’

‘ಅಲ್ಲ.’

‘ಗುಣವತಿಯೇ ?’

‘ ಗುಣವತಿಯೆಂದು ಹೇಳಲು ಸಾಧ್ಯವಿಲ್ಲ. ‘

‘ ನನ್ನನ್ನು ಪ್ರೀತಿಸುತ್ತಾಳೆಯೇ ? ’

‘ ಪ್ರೀತಿಸುತ್ತೀನೆಂದು ಹೇಳುತ್ತಾಳೆ. ’

‘ ಸರಸ್ವತಿ ಪ್ರೀತಿಸುವುದು ನಿನ್ನನ್ನೋ—ನಿನ್ನ ಹಣವನ್ನೋ ? ’

‘ ಹಣವನ್ನು ಪ್ರೀತಿಸುತ್ತಾಳೆ. ಆದರೆ ಅದಕ್ಕೂ ಹೆಚ್ಚಾಗಿ ತನ್ನ ಮನಸ್ಸಿನ ಲೋಲುಪತೆಗೆ ಬೆಲೆಕೊಡುತ್ತಾಳೆ. ’

‘ ಸರಸ್ವತಿಯಲ್ಲಿ ನಿನಗೆ ತೃಪ್ತಿದೊರಕುತ್ತದೆಯೇ ? ’

‘ ಇಲ್ಲವೆನ್ನಲಾರೆ—ದೊರಕುತ್ತದೆಂದೂ ಹೇಳಲಾರೆ. ಅವಳ ಸಂಗದಲ್ಲಿ ಇದ್ದಷ್ಟು ಹೊತ್ತು ನನ್ನ ವ್ಯಕ್ತಿತ್ವವನ್ನು ಅವಳಿಗೆ ಒಪ್ಪಿಸಿದಂತೆ ಭಾಸವಾಗುತ್ತದೆ. ನಾನು ಸೇವಕ—ಅವಳು ಒಡತಿ ಎಂಬ ಭಾವನೆ ಮೂಡುತ್ತದೆ. ’

‘ ಕುಂತಳೆ.... ’

‘ ಅವಳ ಸಂಗ ಹಾಲಿಗೆ ಹಾಲು ಬೆರಸಿದಂತಾಗುತ್ತದೆ. ಎಲ್ಲ ವ್ಯತ್ಯಾಸಗಳೂ ಸಂಪೂರ್ಣವಾಗಿ ಅಳಿಸಿ ಹೋಗುತ್ತವೆ. ’

‘ ಕೈಯಲ್ಲಿ ಅಪರಂಜಿ ಹಿಡಿದುಕೊಂಡು ಹಿತ್ತಾಳೆಗೆ ಆಸೆಪಡುವೆಯಾ ? ’

‘ ದರಿದ್ರನ ಮನಸ್ಸು ಹಿತ್ತಾಳೆಯನ್ನು ಬಯಸುವುದೇ ವಿನಾ ಅಪರಂಜಿಯನ್ನು ಬಯಸುವುದಿಲ್ಲ. ’

ಸಂಜಪ್ಪನ ಕಣ್ಣುಗಳಿಂದ ಜಾರಿದ ಹನಿಗಳು ಕುಂತಳೆಯ ಕಪ್ಪೋಲಗಳ ಮೇಲೆ ಸಿಡಿದು ಅವಳನ್ನೆಚ್ಚರಿಸಿದವು.

“ ಕಣ್ಣೀರು ಹಾಕುತ್ತಿರುವಿರಿ ? ” ಎಂದಳು.

“ ಇಲ್ಲ. ಕಣ್ಣಿಗೇನೋ ಬಿತ್ತು. ”

“ ಏಕೆ ಮರೆಮಾಚುವಿರಿ. ”

“ ಕುಂತಳಾ, ನಾನು ನಿನ್ನ ವಿಷಯದಲ್ಲಿ ಸತ್ಯವಾಗಿ ನಡೆದುಕೊಳ್ಳುತ್ತಿಲ್ಲ ”

“ ಏಕೆ ಹಾಗನ್ನುವಿರಿ ? ”

“ ನನ್ನ ದೇಹವಿಲ್ಲಿರುತ್ತದೆ. ಮನಸ್ಸು ಬೇರೊಂದು ಕಡೆ ಹರಿದಾಡುತ್ತಿರುತ್ತದೆ. ”

" ವಿಚಿತ್ರವಾಗಿ ಮಾತನಾಡುತ್ತಿರುವಿರಿ. "

" ವಿಚಿತ್ರವಲ್ಲ. ಸತ್ಯವನ್ನು ಕೇಳು, ನಿನ್ನನ್ನು ನಾನು ಅಪ್ಪುವಾಗು, ಆ ಅಪ್ಪುಗೆಯೊಳಗಿರುವವಳು ನೀನಲ್ಲ—ಬೇರೊಬ್ಬಳು. "

" ನಿಮ್ಮನ್ನು ಕಟ್ಟಿಹಾಕುವ ಅಧಿಕಾರ ನನಗೆಲ್ಲಿದೆ. "

" ಆ ಅಧಿಕಾರ ನಿನಗಿರಬಾರದೇ—ಆ ಅಧಿಕಾರ ನೀನು ದೊರಕಿಸಿಕೊಳ್ಳಬಾರದೇ—ಆ ಅಧಿಕಾರ ನನ್ನ ಮೇಲೆ ಪ್ರಯೋಗಿಸಬಾರದೇ? "

ಕುಂತಳ ಚಕಿತಳಾಗಿ ಸಂಜಪ್ಪನನ್ನು ನೋಡಿದಳು. ಅವನ ಮಾತೊಂದೂ ಅವಳಿಗೆ ಅರ್ಥವಾಗಲಿಲ್ಲ.

ಬೆಳಿಗ್ಗೆ ನಂಜಪ್ಪ ಸಾವಕಾಶವಾಗಿ ಎದ್ದು ಅಂಗಡಿಯ ಕಡೆ ಹೋದ. ಮ್ಯಾನೇಜರ್ ನಾಗಣ್ಣ ಅವನನ್ನು ನುಂಗಿಬಿಡುವಂತೆ ನೋಡಿದ.

" ಸ್ವಲ್ಪ ಹೊತ್ತಾಯಿತು ನಾಗಣ್ಣ. "

" ತುಂಬ ಹೊತ್ತಾಗಿದೆ ಸ್ವಾಮಿ. "

" ಯಾರಾದರೂ ಹುಡುಕಿಕೊಂಡು ಬಂದಿದ್ದರೇ? "

" ಗರಡಿ ರಂಗಪ್ಪ ಬಂದಿದ್ದ. "

" ಏನಂತೆ. "

" ಮಾರುತಿ ಜಯಂತಿಗೆ ಚಂದಾ ವಸೂಲ್ಮಾಡುವುದಕ್ಕೆ. "

" ಹತ್ತು ರೂಪಾಯಿ ಕೈಗೆ ಹಾಕಿ ಕಳಿಸಿಬಿಡಬೇಕಾಗಿತ್ತು. "

" ಕೊಡಹೋದೆ—ಒಲ್ಲೆನೆಂದ. ನಿಮ್ಮನ್ನೇ ಬಂದು ಕಾಣುವನಂತೆ. "

ನಂಜಪ್ಪ ಸೆರೆಯಾಳಿನಂತೆ ಅಂಗಡಿಯಲ್ಲಿ ಕುಳಿತ. ಅವನ ಮನಸ್ಸು ವಿಹ್ವಲವಾಗಿತ್ತು. ಬಂದ ಗಿರಾಕಿಗಳಿಗೆ ಮನಸ್ಸು ಬಂದಂತೆ ಉತ್ತರ ಕೊಡುತ್ತಿದ್ದ. ನಾಗಣ್ಣ ಅವನ ಸ್ಥಿತಿಯನ್ನು ನೋಡಿ

" ಮೈಯಲ್ಲಿ ಸರಿಯಾಗಿಲ್ಲವೇ ಸ್ವಾಮಿ " ಎಂದ.

" ಏನೂ ಇಲ್ಲವಲ್ಲ. "

" ಮನೆಗೆ ಹೋಗಿ ಮಲಗಿಕೊಳ್ಳಿ. ನಾನು ಅಂಗಡಿಯಲ್ಲಿರುತ್ತೇನೆ. "

" ಚಿಂತೆಯಿಲ್ಲ. ನಿನ್ನ ಕೆಲಸ ನೀನು ನೋಡಿಕೋ. "

ಎಂದು ಹೇಳಿ ಮನಸ್ಸು ಗಟ್ಟಿಮಾಡಿಕೊಂಡು ಅಂಗಡಿಯಲ್ಲಿಯೇ ಕುಳಿತ. ಹನ್ನೊಂದು ಗಂಟೆಯ ಮೇಲೆ ಅಂಗಡಿಯಲ್ಲಿ ಹೆಚ್ಚು ಗಡಿಬಿಡಿಯಿರಲಿಲ್ಲ. ನಂಜಪ್ಪ ವಿಚಾರನೌಕೆಯಲ್ಲಿ ಕುಳಿತು ಹೊರಟ. ಎಲ್ಲಿಗೆ ಎನ್ನುವುದು ಅವನಿಗೇ ಗೊತ್ತಿರಲಿಲ್ಲ. ಗೊತ್ತು ಮಾಡಿಕೊಳ್ಳುವ ಇಚ್ಛೆಯೂ ಇರಲಿಲ್ಲ.

'ಸರಸ್ವತಿಯನ್ನು ನೋಡಿ ಮೂರು ದಿವಸಗಳಾದವು—ಮೂರು ಯುಗ ಗಳಾದಂತಿದೆ. ಈಗ ಅವಳ ಮನೆಯವರೆಗೆ ಹೋಗಿಬರಲೇ ?—ಛೆ; ಇನ್ನು ಅಲ್ಲಿಗೆ ಕಾಲಿಡಬಾರದು. ಅವಳ ಮನೆಯಿರುವ ದಿಕ್ಕಿನಲ್ಲಿ ಕೂಡ ಸುಳಿಯ ಬಾರದು. ಅವಳ ಕಣ್ಣಿನಲ್ಲಿ ನಾನು ಕಸ. ಆ ಹೊಟೇಲಿನವನ ಬಗ್ಗೆ ನಾನು ಒಂದು ಮಾತು ಆಡಿದರೆ ಅವಳಿಗೆ ಸಹನೆಯಾಗಲಿಲ್ಲ. ಸರಸ್ವತಿಗೆ ನಿಜವಾಗಿ ನನ್ನ ಮೇಲೆ ಪ್ರೀತಿಯಿಲ್ಲ—ಅವಳು ಪ್ರೀತಿಸುವುದು ಮಂಜಯ್ಯನನ್ನೇ. ಎಲ್ಲಿ ಪ್ರೀತಿಯಿಲ್ಲವೋ ಅಲ್ಲಿ ಕಾಲಿಟ್ಟರೆ ಅಪಮಾನ ಅನಿವಾರ್ಯ. ಆದರೆ—ಸರಸ್ವತಿ ಯನ್ನು ಹೇಗೆ ಮರೆಯಲಿ. ಅವಳನ್ನು ನೋಡದೆ ಹೇಗೆ ಬಾಳಲಿ. ಅವಳ ನೆನಪು ಬಂದರೆ ಸಾಕು ನನ್ನ ಸಮಸ್ತ ಚೇತನವೂ ಉಡುಗಿ ಹೋಗುತ್ತದೆ. ನೋಡಲಾರೆ, ನೋಡದಿರಲಾರೆ; ಹೋಗಲಾರೆ, ಹೋಗದಿರಲಾರೆ. ದೇವರು ನನಗೆ ಸಾವನ್ನಾದರೂ ಕರುಣಿಸಬಾರದೆ ?'

ನಂಜಪ್ಪನ ಅಂಗಡಿಯ ಮುಂದೆ ಒಂದು ಜಟಕಾಗಾಡಿ ಬಂದು ನಿಂತಿತು.

ಗಾಡಿಯಿಂದಿಳಿದು ಸರಸ್ವತಿ ನೇರವಾಗಿ ನಂಜಪ್ಪನ ಅಂಗಡಿಯನ್ನು ಪ್ರವೇಶಿಸಿದಳು.

ನಂಜಪ್ಪನ ಜಂಘಾಬಲವೇ ಉಡುಗಿ ಹೋಯಿತು. ಗಿರಾಕಿಗಳನ್ನು ಸ್ವಾಗತಿಸುವಂತೆ ಎದ್ದುನಿಂತು ಅವಳನ್ನು ಸ್ವಾಗತಿಸಿ

"ಏನು ಬೇಕಾಗಿತ್ತರಮ್ಮ" ಎಂದು ಕೇಳಿದ.

"ಚೀಟಿ ಬಟ್ಟೆಗಳು, ವಾಯಲ್ ಬೇಕಾಗಿತ್ತು."

ನಂಜಪ್ಪನೇ ಬಟ್ಟೆ ಥಾನುಗಳನ್ನು ತೆಗೆದು ಮೇಜಿನ ಮೇಲೆ ಹರಡಿದ. ಸರಸ್ವತಿ ತನಗೆ ಬೇಕಾದ ಕೆಲವು ಬಟ್ಟೆಗಳನ್ನಾರಿಸಿಕೊಂಡಳು. ಬಟ್ಟೆಗಳನ್ನು ನೋಡುವ ನೆಪದಲ್ಲಿ ಮೆಲ್ಲನೆ ತನ್ನ ಕೈಯಲ್ಲಿದ್ದ ಕಾಗದವನ್ನು ನಂಜಪ್ಪನ

ಕೈಗಿತ್ತಳು. ನಂಜಪ್ಪ ಬೇರೆ ಥಾನು ತೆಗೆಯುವ ನೆಪದಲ್ಲಿ ಕಾಗದವನ್ನು ಕಿಸೆಗೆ ಸೇರಿಸಿದ.

ಸರಸ್ವತಿ ಬಟ್ಟೆಗಳನ್ನು ಕೈಗೆ ತೆಗೆದುಕೊಂಡು, ಬಿಲ್ ಹಣ ಕೊಟ್ಟು ತಾನು ಬಂದಿದ್ದ ಗಾಡಿಯಲ್ಲಿ ಹೊರಟು ಹೋದಳು.

ನಂಜಪ್ಪನಿಗೆ ಅಂಗಡಿಯಲ್ಲಿ ಕೂಡುವುದಕ್ಕೆ ಬಹಳ ಕಷ್ಟವಾಯಿತು. ಕೂಡಲೆ ಎದ್ದು ಹೋದರೆ ಅನುಮಾನಕ್ಕೆ ಕಾರಣವಾಗಬಹುದೆಂದು ನಿರ್ವಾಹವಿಲ್ಲದೆ ಕುಳಿತು, ಸ್ವಲ್ಪ ಕಾಲದ ಮೇಲೆ

"ಕಾಫಿ ಕುಡಿದು ಬರೋಣ, ಬರುವೆಯಾ ನಾಗಣ್ಣ" ಎಂದು ಕೇಳಿದ.

"ನಾನು ಬೇಕಾದರೆ ತಂದುಕೊಡುತ್ತೇನೆ."

"ಬೇಡ—ಅಲ್ಲಿಂದ ತರುವ ಹೊತ್ತಿಗೆ ಆರಿ ತಂಗಳಾಗುತ್ತದೆ."

"ಅಂಗಡಿಯಲ್ಲಿ ಯಾರೂ ಇಲ್ಲ, ನೀವು ಹೋಗಿ ಬನ್ನಿ ಸ್ವಾಮಿ."

ನಾಗಣ್ಣ ಅಷ್ಟು ಹೇಳಿದ್ದೇ ಸಾಕೆಂದು ಅಲ್ಲಿಂದ ಹೊರಟು ಎದುರಿಗಿದ್ದ 'ಇಂದ್ರ ಭವನ'ದ ಮಹಡಿಯ ಮೇಲೆ ಹೋಗಿ ಕುಳಿತು ಸ್ಪೆಷಲ್ ಕಾಫೀಗೆ ಆರ್ಡರ್ ಮಾಡಿದ. ಸ್ಪೆಷಲ್ ಕಾಫಿ ಬರುವುದು ತಡವೆಂದು ನಂಜಪ್ಪನಿಗೆ ಗೊತ್ತಿತ್ತು. ಕಿಸೆಯಲ್ಲಿದ್ದ ಕಾಗದ ತೆಗೆದು ಸಾವಕಾಶವಾಗಿ ಓದಲು ಮೊದಲಿಟ್ಟ.

"ಮನೋಹರಾ,

ನೀವು ನಮ್ಮ ಮನೆಗೆ ಬಂದು ಮೂರು ದಿವಸಗಳಾದವು. ಹಗಲೂ ರಾತ್ರಿ ನಿಮಗಾಗಿ ಕಾದು, ನೀವು ಬರಲಿಲ್ಲವೆಂದು ಅತ್ತು ಅತ್ತು ಸೋತು ಕಂಗೆಟ್ಟಿದ್ದೇನೆ. ಇವತ್ತು ನೀವು ಬರದಿದ್ದರೆ ಅಂಗಡಿಗಾದರೂ ಹೋಗಿ ನಿಮ್ಮನ್ನು ನೋಡಿ ಬರುವುದೆಂದು ನಿರ್ಧರಿಸಿದ್ದೇನೆ.

ಬಡವಳ ಮೇಲೆ ಇಷ್ಟು ಕೋಪವೇ? ಅಂದು ರಾತ್ರಿ ನನಗೆ ಮೈಯಲ್ಲಿ ಸರಿಯಿರಲಿಲ್ಲ. ಊರಿನಿಂದ ಬಂದ ಅಣ್ಣ ಏನುಏನೋ ಮಾತನಾಡಿ ಮನಸ್ಸು ನೋಯಿಸಿದ್ದ. ತಿಳುವಳಿಕೆಯಿಲ್ಲದ ಹೆಂಗಸಾದ ನಾನು ನಿಮ್ಮ ಮೇಲೆ ಕೋಪ ತೋರಿಸಿದೆ. ನಾನು ಮಾಡಿದುದು ದೊಡ್ಡ ತಪ್ಪು. ನಿಮ್ಮ ಕಾಲುಗಳನ್ನು ಹಿಡಿದುಕೊಂಡು ಕ್ಷಮೆ ಬೇಡಿಕೊಳ್ಳುತ್ತೇನೆ. ಇನ್ನೆಂದೆಂದಿಗೂ ನಿಮ್ಮ ಮನಸ್ಸು

ನೋಯಿಸುವುದಿಲ್ಲ ರಾಜೂ. ಇದೊಂದು ಬಾರಿಗೆ ಈ ಅಜ್ಞಳನ್ನು ಕ್ಷಮಿಸ ಬಾರದೇ ?

ನಿನ್ನೆ ರಾತ್ರಿ ತಿಂಡಿ ಮಾಡಿಟ್ಟುಕೊಂಡು ನಿಮಗಾಗಿ ಕಾದೆ. ನಿಮ್ಮನ್ನು ಬಿಟ್ಟು ನಾನು ಅರೆಕ್ಷಣವೂ ಇರಲಾರೆ. ರಾತ್ರಿವೇಳೆಯಲ್ಲಿ ನಿಮ್ಮನ್ನು ಬಿಟ್ಟು ಮಲಗುವುದೆಂದರೆ ಅದೇ ನನಗೆ ಪ್ರತ್ಯಕ್ಷ ನರಕ.

ಕೋಪವನ್ನು ಬಿಟ್ಟು ಇಂದು ರಾತ್ರಿ ಖಂಡಿತ ಬನ್ನಿ. ನನ್ನ ತಪ್ಪಿಗೆ ಬೇಕಾದ ಶಿಕ್ಷೆ ವಿಧಿಸಿ. ಆದರೆ ನನ್ನಿಂದ ದೂರ ನಿಲ್ಲಬೇಡಿ.

ನೀವು ಬಂದು ಹೋದ ಮಾರನೆಯ ದಿನ ಅವರು ಬಂದರು. ನಿಮ್ಮ ಮನಸ್ಸು ನೋಯಿಸಿದೆನಲ್ಲಾ ಎಂದು ವ್ಯಸನವಾಗಿತ್ತು. ಅವರನ್ನೂ ಮನಸ್ಸಿಗೆ ಬಂದಹಾಗೆ ಬಯ್ದೆ. ಇಂದಿನವರೆಗೂ ಅವರೂ ಇತ್ತ ಸುಳಿದಿಲ್ಲ. ಒಳ್ಳೆಯದೇ ಆಯಿತು. ಈ ಸಮಯಕ್ಕೆ ಪೀಡೆ ಪರಿಹಾರವಾದರೆ ನಾನು ದುಃಖಪಡುವುದಿಲ್ಲ.

ಬನ್ನಿ ರಾಜು, ರಾತ್ರಿಗೆ ಬನ್ನಿ—ನಿಮಗಾಗಿ ಕಾದಿರುತ್ತೇನೆ.

ಇಂತು ನಿಮ್ಮ ಪ್ರಾಣವಲ್ಲಭೆ ಸರಸೂ. ”

ನಂಜಪ್ಪ ಮೂರು ನಾಲ್ಕು ಸಲ ಕಾಗದವನ್ನೋದಿಕೊಂಡು ‘ ಇದು ನಿಜವೇ ?–ಇವಳು ನಿಜವಾಗಿಯೂ ನನಗಾಗಿ ಹಂಬಲಿಸುತ್ತಿರುವಳೇ ’ ಎಂದು ಕೊಂಡ. ಅವನ ಮನಸ್ಸಿನ ನಿರ್ಧಾರವನ್ನು ಸರಸ್ವತಿಯ ಕಾಗದ ಹರಿದು ಚೂರುಮಾಡಿ ಗಾಳಿಗೆ ತೂರಿತು.

ಸರಸ್ವತಿ ನಂಜಪ್ಪನಿಗೆ ಕಾಗದ ಕೊಟ್ಟವಳೇ ಅದೇ ಗಾಡಿಯಲ್ಲಿ ಮುತ್ತ ಮ್ಮನ ಮನೆಗೆ ಹೋದಳು—ರಾಮರಾಜಪ್ಪ ಅವಳಿಗಾಗಿ ಕಾದಿದ್ದ.

೧೪

ರಾತ್ರಿ ಸರಸ್ವತಿ ನಂಜಪ್ಪನಿಗೆ ಬಹಳ ಹೊತ್ತು ಕಾಯಬೇಕಾಗಿರಲಿಲ್ಲ. ಒಂಭತ್ತೂವರೆಗೇ ಅವನ ಸವಾರಿ ಅವಳ ಮನೆಗೆ ದಯೆಮಾಡಿಸಿತು. ಸರಸ್ವತಿ ಯಜಮಾನನನ್ನಗಲಿ ಪುನರ್ಮಿಳನ ಹೊಂದಿದ ಸಾಕಿದ ನಾಯಿಯಂತೆ ಅವನ ಮೇಲೆ ಬಿದ್ದು ರಮಿಸಿದಳು. ಅವಳ ಪ್ರಣಯಚೇಷ್ಟೆಗೆ ಸಿಕ್ಕಿ ಅವನ ಕೋಪ ಮಂಜಿನಂತೆ ಕರಗಿಹೋಯಿತು.

"ಅವನು ಖಂಡಿತವಾಗಿ ಬರಲಿಲ್ಲವೇ ?"

"ಇವತ್ತು ಸಂಜೆ ಬಂದಿದ್ದರು. ಒಳಗೂ ಬರಲಿಲ್ಲ. ಬಾಗಿಲ ಹೊರಗೇ ನಿಂತರು. ಒಳಗೆ ಬನ್ನಿ ಎಂದೆ, ಏನೂ ಅವಶ್ಯಕವಿಲ್ಲವೆಂದರು. ಹಾಗಾದರೆ ಇಲ್ಲಿಯವರೆಗೆ ಏಕೆ ಬಂದಿರಿ ಎಂದೆ—ನನ್ನಿಷ್ಟ ನೀನು ಯಾರು ಕೇಳುವುದಕ್ಕೆ ಎಂದರು. ಬೀದಿಯಲ್ಲಿ ಜನ ಓಡಾಡುತ್ತಿರುತ್ತಾರೆ, ಹೀಗೆ ಹೊರಗೆ ನಿಂತು ಮಾತನಾಡುವುದು ಒಳ್ಳೆಯದಲ್ಲ ಎಂದೆ—ಒಳಗೆ ಹೋಗು ಎಂದು ಹೇಳಿಬಿಟ್ಟು ಹೊರಟೇ ಹೋದರು."

"ನಿನಗೆ ತುಂಬ ವ್ಯಸನವಾಯಿತೇನೋ ?"

"ನನಗೇಕೆ ವ್ಯಸನವಾಗಬೇಕು. ಪೀಡೆ ಪರಿಹಾರವಾಯಿತೆಂದು ಸಂತೋಷ ವಾಯಿತು. ವ್ಯಸನವಾಗಿದ್ದರೆ ನಾನು ಹೀಗಿರುತ್ತಿದ್ದೆನೇ ?"

"ನೀನು ಅಂಗಡಿಯ ಹತ್ತಿರ ಬರಬಾರದಾಗಿತ್ತು."

"ನೀವು ಬರದಿದ್ದರೇನು ಮಾಡಲಿ ?"

"ಕುಮಾರನ ಹತ್ತಿರ ಹೇಳಿಕಳಿಸಬೇಕಾಗಿತ್ತು."

"ನಮ್ಮ ಪ್ರಣಯ ಕಲಹ ಅವನಿಗೇಕೆ ಗೊತ್ತಾಗಬೇಕು. ಸಣ್ಣ ಮಾತಿಗೆ ನೀವಿಷ್ಟು ಕೋಪ ಮಾಡಿಕೊಂಡು ಮನೆಯ ಕಡೆ ಬರುವುದನ್ನು ನಿಲ್ಲಿಸಿದರೆ ನನ್ನ ಗತಿಯೇನು ?"

"ನಾನು ಸುಖವಾಗಿದ್ದೆನೆಂದು ತಿಳಿದುಕೊಂಡಿರುವೆಯೇನು ?"

" ನಿಮ್ಮನ್ನು ಸಂತೈಸುವುದಕ್ಕೆ ಕುಂತಳ ಇದ್ದಾಳೆ. "

" ಇದ್ದಾಳೆ–ನಾನೇ ತನ್ನ ಸರ್ವಸ್ವ ಎಂದು ಅವಳು ನಂಬಿಯೂ ಇದ್ದಾಳೆ. ಆದರೆ ನಾನು ಅವಳಿಗೆ ದ್ರೋಹ ಮಾಡುತ್ತಿದ್ದೇನೆ. "

" ನೀವು ದ್ರೋಹಮಾಡುವುದೇ ! "

" ಹೌದು. ಅವಳ ಮುಖದಲ್ಲಿ ನಿನ್ನ ಮುಖ—ಅವಳ ಮೈಯಲ್ಲಿ ನಿನ್ನ ಮೈ ಕಂಡರೆ ದ್ರೋಹವಲ್ಲವೇನು ? "

" ನನ್ನ ರಾಜು ನನ್ನನ್ನು ಅಷ್ಟು ಪ್ರೀತಿಸುತ್ತಾರೆಯೇ ? "

" ಯಾರನ್ನಾದರೂ ಕಣಿ ಕೇಳು. "

" ನಾನೇನು ಮಾಡಿದರೆ ನನ್ನ ರಾಜು ಕೋಪ ಹೋಗುತ್ತದೆ. "

" ರೋಗಿಗೆ ಯಾವ ಔಷಧ ಕೊಡಬೇಕೆಂಬುದು ವೈದ್ಯನಿಗೆ ತಾನೆ ಗೊತ್ತು. "

" ನಿಮ್ಮ ವೈದ್ಯಳಾಗುವಷ್ಟು ಭಾಗ್ಯಶಾಲಿಯೇ ನಾನು. "

" ಅಂಗಡಿಯ ವ್ಯಾಪಾರ ಕೂಡ ನಾನು ಕಡೆಗಾಣಿಸುತ್ತಿದ್ದೇನೆಂದು ನಾಗಣ್ಣ ಆಕ್ಷೇಪಿಸುತ್ತಿದ್ದಾನೆ. "

" ನಿರಾತಂಕವಾಗಿ ನಿಮ್ಮ ಕೆಲಸ ನೀವು ನೋಡಿಕೊಳ್ಳಬಾರದೇ ? ಎಂದಿದ್ದರೂ ನಾನು ನಿಮ್ಮವಳೇ ಅಲ್ಲವೇ? ನಿಮ್ಮ ನನ್ನ ಮನಸ್ಸು ಕೂಡಿದ ಹಾಗೆ ಬೇರೆಯವರ ಜತೆ ಕೂಡಲು ಸಾಧ್ಯವೇ ? "

" ಈ ವಿಷಯ ಇತ್ಯರ್ಥವಾಗುವುದು ಯಾವ ಜನ್ಮಕ್ಕೆ ? "

" ಸದ್ಯದಲ್ಲೇ ಆಗುತ್ತದೆ. ನನ್ನ ಎಲ್ಲ ಗ್ರಹಚಾರ ಕಳೆದುಕೊಂಡು ನಿಮ್ಮ ಮನಸ್ಸಿಗೆ ಶಾಂತಿತರಬೇಕೆಂದು ತುಂಬ ಪ್ರಯತ್ನಿಸುತ್ತಿದ್ದೇನೆ. ನನ್ನ ಅದೃಷ್ಟವಶಾತ್ ಅವರಾಗಿ ಅವರೇ ದೂರವಾಗುತ್ತಿದ್ದಾರೆ. "

ನಂಜಪ್ಪನ ಹೃದಯದಲ್ಲಿ ಅನಿರೀಕ್ಷಿತವಾಗಿ ಯಾವದೋ ಸಾತ್ವಿಕ ತೇಜಸ್ಸು ಮೂಡಿದಂತಾಯಿತು. ಅದರ ದಿವ್ಯ ಪ್ರಭೆಯಲ್ಲಿ ಅವನು ಕ್ಷಣಕಾಲ ಮೈಮರೆತ. ಅವನ ಮುಖದಲ್ಲಿ ಗಾಂಭೀರ್ಯ ಶಾಂತಿ ಕಂಗೊಳಿಸಿದವು.

" ಸರಸಾ, ನಾನೊಂದು ನೇರವಾದ ಪ್ರಶ್ನೆ ಕೇಳುತ್ತೇನೆ. ಅದಕ್ಕೆ

ನೇರವಾದ ಉತ್ತರ ಕೊಡುವೆಯಾ ? "

" ಆಗಲಿ ಕೇಳಿ. "

" ಮಂಜಯ್ಯ ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಾನಲ್ಲವೇ ? "

" ಅದನ್ನು ನಾನೇನು ಬಲ್ಲೆ. "

" ನೇರವಾಗಿ ಉತ್ತರಕೊಡಲು ಒಪ್ಪಿಕೊಂಡಿರುವುದನ್ನು ಮರೆಯಬೇಡ, "

" ಪ್ರೀತಿಸುತ್ತಾರೆ. "

" ನೀನು....? "

" ನಾನು ಹಾಗೆ ಪ್ರೀತಿಸಲು ಸಾಧ್ಯವಿಲ್ಲ. ನನ್ನ ಮನಸ್ಸು ನಿಮ್ಮಲ್ಲಿ...."

" ನನ್ನ ವಿಷಯ ಹಾಗಿರಲಿ. ಮಂಜಯ್ಯನ ವಿಷಯ ಹೇಳು. "

" ಅವರ ಬಗ್ಗೆ ನನಗೆ ಕೃತಜ್ಞತೆಯಿದೆಯೇ ವಿನಾ ಪ್ರೀತಿಯಿಲ್ಲ. "

" ಪ್ರೀತಿಯೆನ್ನುವುದು ಕೃತಜ್ಞತೆ — ಗೌರವ — ಅಂತಃಕರಣಗಳನ್ನು ಬಿಟ್ಟು ಹೊರಗೆ ಉಳಿಯುವ ವಸ್ತುವಲ್ಲ. ನಿಜವಾದ ಪ್ರೀತಿಯಲ್ಲಿ ಆ ಗುಣಗಳು ಹಾಸು ಹೊಕ್ಕಾಗಿರುತ್ತವೆ. "

" ಈಗೇಕೆ ಈ ಮಾತು ? "

" ಈಗ ನಾವು ಮೂವರೂ ಸುಖಿಗಳಲ್ಲ. ನಿನ್ನ ನನ್ನ ಸಂಬಂಧ ಮಂಜಯ್ಯನಿಗೆ ಗೊತ್ತಿದೆಯೋ ಇಲ್ಲವೋ. ಗೊತ್ತಿದ್ದರೆ ಅವನು ಸುಖಿಯಾಗಿರಲು ಸಾಧ್ಯವಿಲ್ಲ ; ನಾನು ಸುಖಿಯಾಗಿಲ್ಲ. ನಮ್ಮಿಬ್ಬರ ಮನಸ್ಸು ಇಷ್ಟು ನೋವಿನಲ್ಲಿ ಮುಳುಗಿರುವಾಗ ನೀನು ಸುಖಿಯಾಗಿರಲು ಸಾಧ್ಯವಿಲ್ಲ. "

" ನನ್ನ ಕೈಬಿಡುವ ಯೋಚನೆ ಮಾಡುತ್ತಿರುವಿರೇನು ? "

" ಮಂಜಯ್ಯ, ನೀನೂ ಸುಖವಾಗಿರಬಾರದೇಕೆಂದು ಯೋಚಿಸುತ್ತಿದ್ದೇನೆ. "

" ನಿಮಗೆ ನಾನು ಬೇಡವಾದರೆ ಆ ಮಾತು ಬೇರೆ—ಮಂಜಯ್ಯನ ಕೈಗೆ ಹಾಕಿ ಹೋಗುವ ವಿಷಯ ಮಾತ್ರ ಪ್ರಸ್ತಾಪಿಸಬೇಡಿ. "

" ಅವನ ಜತೆಯಲ್ಲಿಯಾದರೂ ನೀನು ಸುಖವಾಗಿರಲಿ ಎಂದು ನನ್ನ ಆಸೆ"

" ನನ್ನ ಸುಖದ ವಿಷಯ ನೀವಿಷ್ಟು ಆಳವಾಗಿ ಯೋಚನೆ ಮಾಡಬೇಕಾದ

ಅಗತ್ಯವಿಲ್ಲ. ನಿಮಗೆ ಬೇಡವಾದರೆ ಬಿಟ್ಟುಬಿಡಬಹುದು. ಉಳಿದ ವಿಷಯ ನನ್ನ ಕರ್ಮಕಥೆಗೆ ಸೇರಿದ್ದು. ನನ್ನನ್ನು ಮರೆತುಬಿಡಲು ಪ್ರಯತ್ನಿಸುತ್ತಿರುವಿರಿ–ಹಾಗೇ ಮಾಡಿ. ನಿಮ್ಮನ್ನು ಬಲವಂತದಿಂದ ಉಳಿಸಿಕೊಳ್ಳುವ ಸಾಹಸ ನಾನು ಮಾಡುವುದಿಲ್ಲ. ಆದರೆ ನಿಮ್ಮನ್ನು ನಾನು ಮರೆಯಲಾರೆ—ನಿಮ್ಮೊಂದಿಗೆ ಕಳೆದ ದಿನಗಳನ್ನು ರಾತ್ರಿಗಳನ್ನು ಮರೆಯಲಾರೆ–ಮದರಾಸಿನಲ್ಲಿ ಕಳೆದ ಸ್ವರ್ಗದ ದಿನಗಳನ್ನು ಮರೆಯಲಾರೆ. ”

“ ಸರಸಾ—ಸರಸಾ, ನಾನು ನಿನ್ನನ್ನು ಮರೆಯಬಲ್ಲೆನೇನೆ ? ನಿನ್ನ ಬಿಟ್ಟು ನಾನು ಬದುಕಬಲ್ಲೆನೇ ? ನನ್ನ ತನುಮನದಲ್ಲಿ ರಕ್ತದ ಕಣ ಕಣದಲ್ಲಿ ನೀನು ಬೆರೆತಿರುವಾಗ ನಿನ್ನನ್ನು ಬಿಟ್ಟು ನಾನು ಇರಬಲ್ಲೆನೇ ? ”

“ ಬನ್ನಿ ದೊರೆ—ಬನ್ನಿ ನನ್ನ ರಾಜು—ಮೂರು ದಿವಸವಾಯಿತಲ್ಲಾ ನಿಮ್ಮನ್ನು ನೋಡಿ—ಮುಟ್ಟಿ....” ಎಂದಳು.

ಮೂರು ದಿವಸಗಳ ಬಾಕಿಯನ್ನು ಅಂದು ತೀರಿಸಲು ಇಬ್ಬರೂ ನಿಶ್ಚಯಿಸಿದರು.

೧೫

ಗಂಟೆ ಏಳೂವರೆಯಾಗಿದ್ದರೂ ಮಂಜುಳ ಮನೆಗೆ ಬಂದಿರಲಿಲ್ಲ. ಸರಸ್ವತಿ ಮಗಳ ದಾರಿ ನೋಡಿ ನೋಡಿ ಬೇಸತ್ತಿದ್ದಳು. ಅವಳ ಮನಸ್ಸು ಹಲವು ಚಿಂತೆಗಳಿಗೆ ವಿಾಸಲಾಗಿದ್ದಿತು. ಸುಧೆಯನ್ನು ಕರೆದು

" ಏಳೂವರೆಯಾದರೂ ಮಂಜುಳನ ಕಾಲೇಜು ಮುಗಿಯುವುದಿಲ್ಲವೇ ಸುಧಾ " ಎಂದು ಕೇಳಿದಳು.

ತಾಯಿಯ ಮನಸ್ಸು ವ್ಯಗ್ರವಾಗಿದೆಯೆಂದು ತಿಳಿದ ಸುಧಾ ಕಕ್ಕಾಬಿಕ್ಕಿಯಾಗಿ

" ಕಾಲೇಜು ನಾಲ್ಕೂವರೇಗೇ ಮುಗಿದು ಹೋಗುತ್ತದವ್ಮಾ. "

" ಇಷ್ಟು ಹೊತ್ತಿನ ತನಕ ಏನು ಮಾಡುತ್ತಿದ್ದಾಳೆ—ಎಲ್ಲಿಗೆ ಹೋಗಿದ್ದಾಳೆ. "

" ನನಗೆ ಗೊತ್ತಿಲ್ಲ. ಕಾಲೇಜ್ ಡೇ ಮಹೋತ್ಸವಕ್ಕೆ ನಾಟಕದ ರಿಹರ್ಸಲ್ ಇಟ್ಟುಕೊಂಡಿದ್ದಾರೆಯೋ ಏನೋ? "

" ಏನೋಮ್ಮ—ವಯಸ್ಸಾದರೂ ನಿಮಗೆ ತಿಳುವಳಿಕೆ ಮಾತ್ರ ಬರಲಿಲ್ಲ. ನೀವು ಹೀಗೆ ನನಗೆ ಆತಂಕವುಂಟುಮಾಡಿದರೆ ನನ್ನ ಗತಿಯೇನು? ಯಾವದಕ್ಕೇಂತ ನಾನು ಬಡಿದುಕೊಳ್ಳಲಿ. ನನಗೆ ಸಾಕಾಗಿ ಹೋಗಿದೆ ಈ ಸಂಸಾರ. "

" ಕೋಪ ಮಾಡಿಕೊಳ್ಳಬೇಡಮ್ಮ. "

" ಕೋಪ ಮಾಡಿಕೊಳ್ಳದೆ ಸಂತೋಷವಾಗಿರಲೇ ? ಅವಳದು ನಿತ್ಯವೂ ಇದೇ ಗೋಳಾಗುತ್ತ ಬಂತು. ನನ್ನ ಕೂಲಿಯ ಆಳು ಎಂದು ಭಾವಿಸಿಕೊಂಡಿದ್ದಾಳೆ. ದುಡಿದೂ ದುಡಿದೂ ನಾನು ಹಣ್ಣಾಗಿ ಹೋಗಿದ್ದೇನೆ. "

ತಾಯಿಯ ಉದ್ಗಾರಕ್ಕೆ ಪ್ರತಿ ಹೇಳುವುದಕ್ಕಿಂತ ತೆಪ್ಪಗಿರುವುದೇ ಲೇಸೆಂದು ಸುಧಾ ಭಾವಿಸಿದಳು.

ಮಂಜುಳ ಮನೆಗೆ ಬಂದಾಗ ಎಂಟೂವರೆಯಾಗಿತ್ತು. ನೇರವಾಗಿ ತನ್ನ

ರೂಮಿಗೆ ಹೋಗಿ ಶಾಲೆಯ ಉಡುಪು ಬದಲಾಯಿಸಿಕೊಂಡು, ಮುಖ ತೊಳೆದು ಕೊಂಡು ಅಡಿಗೆಯ ಮನೆಗೆ ಬಂದಳು. ಸರಸ್ವತಿ ಮಾತನಾಡದೆ ಎರಡು ಎಲೆ ಹಾಕಿ ಇಬ್ಬರು ಮಕ್ಕಳಿಗೂ ಬಡಿಸಿದಳು. ಅವರ ಊಟ ಸಾಗಿದ್ದಾಗ

" ಎಂಟೂವರೆಯವರೆಗೆ ಯಾವ ಕಾಲೇಜು ನಡೆಯುತ್ತದೆ ಮಂಜುಳಾ."

ಎಂದು ಕೇಳಿದಳು.

" ಪರೀಕ್ಷೆ ಹತ್ತಿರ ಬಂತಮ್ಮ. ಪಾಠಗಳು ಆಗಿಲ್ಲ. ಸ್ಪೆಷಲ್ ಕ್ಲಾಸ್ ಮಾಡುತ್ತಿದ್ದಾರೆ."

" ದಿನವೂ ಸ್ಪೆಷಲ್ ಕ್ಲಾಸ್ ಮಾಡುತ್ತಿದ್ದಾರೇನು ?"

" ಮಾಡುತ್ತಿದ್ದಾರೆ."

" ನಾನು ನಾಳೆ ಕಾಲೇಜಿಗೆ ಬಂದು ವಿಚಾರಿಸಲೋ ?"

" ನನ್ನ ಮೇಲೆ ನಂಬಿಕೆಯಿರದಿದ್ದರೆ ವಿಚಾರಿಸಬಹುದು."

" ಹಗಲೂ ರಾತ್ರಿಯೆನ್ನದೆ ನೀನು ಹೊರಗಿದ್ದರೆ ಜನ ಏನೆಂದುಕೊಳ್ಳು ತ್ತಾರೆ ?"

" ಏನಂದುಕೊಳ್ಳುತ್ತಾರೆ."

" ಎದುರುವಾದಿಸುವುದು ನಿನಗೆ ಚೆನ್ನಾಗಿ ರೂಢಿಯಾಗಿದೆ."

" ಏನು ಮಾಡು ಎಂದು ಹೇಳುತ್ತಿರುವೆಯಮ್ಮ. ಕಾಲೇಜು ಬಿಟ್ಟು ಬಿಡಲೇನು ?"

" ಬಿಟ್ಟಾರೂ ಬಿಟ್ಟುಕೋ, ಕಟ್ಟಿಯಾದರೂ ಕಟ್ಟಿಕೋ. ಹೀಗೆ ನೀನು ಮಾಡಿದರೆ ಯಾವ ತಲೆಮಾಸಿದವನು ನಿನ್ನ ಕಟ್ಟಿಕೊಳ್ಳಲು ಸಿದ್ಧವಾಗಿರು ತ್ತಾನೆ."

" ಈಗಲೂ ಯಾವನೂ ಸಿದ್ಧವಾಗಿಲ್ಲವಲ್ಲ" ಎಂದಳು.

ಸರಸ್ವತಿಯ ಮುಖದ ಮೇಲೆ ಚಬಕದಿಂದ ಹೊಡೆದಂತಾಯಿತು. ಕೈಯಲ್ಲಿದ್ದ ಸಾರಿನ ಸವುಟನ್ನು ಮೂಲೆಗೆ ರೊಯ್ಯನೆಸೆದು ನಿಂತಳು. ಅವಳ ಕಣ್ಣುಗಳಲ್ಲಿ ಕಿಡಿಗಳು ಕಾರುತ್ತಿದ್ದವು.

" ಎತ್ತಲಾಗಿಯಾದರೂ ಹಾಳಾಗಿ ಹೋಗು. ಬೀದಿ ಬಸವಿಯಾಗಿ ನೀನು

ಕುಲಗೆಟ್ಟುಹೋದರೆ ಅದರ ಕಷ್ಟ ಅನುಭವಿಸುವವಳು ನೀನೇ ಹೊರತು ನಾನಲ್ಲ " ಎಂದಳು.

ಮಂಜುಳಾ ಕೈಮೇಲೆ ನೀರು ಸುರಿದುಕೊಂಡು ಊಟ ಬಿಟ್ಟೆದ್ದು ತನ್ನ ರೂಮಿಗೆ ಹೊರಟು ಹೋದಳು. ಮಗಳನ್ನು ಸಮಾಧಾನ ಮಾಡುವುದಕ್ಕೆ ಸರಸ್ವತಿ ಅವಳನ್ನು ಹಿಂಬಾಲಿಸಲಿಲ್ಲ.

ಸರಸ್ವತಿಯೂ ಊಟ ಮಾಡಲಿಲ್ಲ. ಅಡಿಗೆಯ ಮನೆಯ ಕದವನ್ನು ಧಢಾರನೆ ಮುಂದಕ್ಕೆಳೆದುಕೊಂಡು ರೂಮಿಗೆ ಬಂದು ಮಲಗಿದಳು.

ಮಂಜಯ್ಯ ಬಂದು ಬಾಗಿಲು ತಟ್ಟಿದಾಗ ಅವನಿಗೆ ಸುಧೆಯೇ ಬಾಗಿಲು ತೆಗೆಯಬೇಕಾಯಿತು.

ಮಂಜಯ್ಯ ಸರಸ್ವತಿಯ ರೂಮಿಗೆ ಬಂದು ಕುರ್ಚಿಯ ಮೇಲೆ ಕುಳಿತ. ಸರಸ್ವತಿ ಅಳುತ್ತಿದ್ದುದನ್ನು ಕಂಡು ಅವನಿಗೆ ವ್ಯಥೆಯಾಯಿತು. ಅವಳ ಬಳಿ ಬಂದು ಕುಳಿತು ಸಮಾಧಾನ ಮಾಡಲೆತ್ನಿಸಿದ.

" ಯಾಕೆ ಸರಸ್ವತಿ—ಏನಾಯಿತು—ಏಕೆ ಅಳುತ್ತಿರುವೆ ? "

" ಅಯ್ಯೋ ಹೋಗೀಂದ್ರೆ. "

" ಯಾರು ಏನಂದರು ? "

" ನನ್ನ ಜನ್ಮ ನನಗೆ ಸಾಕಾಗಿ ಹೋಗಿದೆ. ಹಾಳು ಯಮಧರ್ಮರಾಯನಿಗೆ ಕರುಣೆ ಬರಲೊಲ್ಲದು."

" ಮಕ್ಕಳು ಬೇಸರವನ್ನುಂಟುಮಾಡಿದರೇ ? "

" ಮಕ್ಕಳು ಯಾರೋ ತಾಯಿಯಾರೋ ? ಮಂಜುಳ ಇವತ್ತು ಎಂಟೂವರೆಗೆ ಮನೆಗೆ ಬಂದಳು. ಏಕೆ ತಡವೆಂದು ಕೇಳಿದುದಕ್ಕೆ ನನ್ನ ಮೇಲೇ ತಿರುಗಿಬಿದ್ದಳು. ಅವಳೂ ದಾರಿಬಿಟ್ಟು ಹೋದರೆ ನನ್ನ ಗತಿಯೇನು ? "

" ಅವಳು ತಿಳುವಳಿಕಸ್ಥೆ. ಹಾಗೇಕೆ ಮಾಡುವಳು ಹೇಳು. ಕಾಲೇಜಿನಲ್ಲಿಯೇ ಹೊತ್ತಾಗಿರಬಹುದು. "

" ಇವತ್ತಿನ ಮಾತಲ್ಲ. ನಿತ್ಯವೂ ಹೀಗೇ ಆಗಿದೆ. "

" ಬೇಗ ಗಂಡು ಗೊತ್ತುಮಾಡಿ ಮದುವೆ ಕೆಲಸ ಮುಗಿಸಿಬಿಡು. "

“ ಗಂಡು ಗೊತ್ತು ಮಾಡಿಕೊಡುವವರು ಯಾರು ? ”

“ ನಿಮ್ಮಣ್ಣ ಪ್ರಯತ್ನಿಸುತ್ತಿದ್ದಾನೆಂದು ಹೇಳಿದೆ, ಅದಕ್ಕೋಸ್ಕರ ಮೈಸೂರಿಗೂ ಹೋಗಿ ಬಂದೆ. ”

“ ಅವನೊಬ್ಬ ಅಣ್ಣ—ನಾನೊಬ್ಬಳು ತಂಗಿ. ಎಮ್ಮೆಯ ಮೇಲೆ ಮಳೆ ಸುರಿದ ಹಾಗೆ ಅವನ ಸ್ವಭಾವ. ”

“ ಆಗುತ್ತದೆ. ಮದುವೆ ಮುಂಜಿ ನಿಂತ ಗಳಿಗೆಯಲ್ಲಿ ಆಗುತ್ತದೆಯೇ. ಇಷ್ಟಕ್ಕೆಲ್ಲಾ ನೀನು ಬೇಸರಮಾಡಿಕೊಂಡು ಆಕಾಶ ಕಳಚಿ ಬಿತ್ತೆಂದು ಭಾವಿಸಿದರೆ ಹೇಗೆ ?—ಊಟ ಮಾಡಿದೆಯಾ ? ”

“ ಇಲ್ಲ—ಬೇಕಾಗಲಿಲ್ಲ. ”

“ ಏಳು—ಸೇರಿದಷ್ಟು ಊಟಮಾಡು. ”

“ ನೀವೂ ಮಾಡುವಿರೇನು ? ”

ಮಂಜಯ್ಯ ಯೋಚಿಸಿ

“ ಅನ್ನವಿದೆಯೋ, ತಿರುಗಿ ಮಾಡಬೇಕೋ. ”

“ ಇರುವುದನ್ನೇ ಇಬ್ಬರೂ ತಿಂದರಾಯಿತು. ”

“ ಹಾಗೇ ಅಗಲಿ. ”

“ ಇಲ್ಲಿಗೇ ಕಲಸಿಕೊಂಡು ಬರುತ್ತೇನೆ. ”

ಎಂದು ಎದ್ದು ಹೋಗಿ ತಟ್ಟೆಯಲ್ಲಿ ಮಜ್ಜಿಗೆ ಅನ್ನ ಕಲಸಿ, ನೆಂಚಿಕೊಳ್ಳುವುದಕ್ಕೆ ಉಪ್ಪಿನಕಾಯಿ, ಹುಳಿಯ ಹೋಳು ತಂದಳು. ಇಬ್ಬರೂ ಊಟ ಮುಗಿಸಿದರು.

ಸರಸ್ವತಿ ತಾಂಬೂಲ ಮಡಿಸಿಕೊಡುತ್ತಾ

“ ಇವತ್ತು ಪುರಸತ್ತಾಗಿರುವ ಹಾಗೆ ಕಾಣುತ್ತದೆ. ”

“ ಒಂದು ದಿನ ಮನೆಗೆ ತಡವಾಗಿ ಹೋದರೇನಂತೆ. ”

“ ಮನೆಗೆ ಬೆಳಿಗ್ಗೆ ಹೋದರಾಯಿತು. ”

“ ಇಲ್ಲ—ಹನ್ನೊಂದು ಗಂಟೆಗಾದರೂ ಹೋಗಲೇಬೇಕು. ”

“ ಇದು ನಿಮ್ಮ ಮನೆಯಲ್ಲವೇನೋ ? ”

" ಅಲ್ಲವೆಂದೆನೆ ? "

" ಇಲ್ಲೇಕೆ ಒಂದು ರಾತ್ರಿ ಕಳೆಯಬಾರದು. "

" ವೃಥಾ ಮನೆಯಲ್ಲೇಕೆ ಹಗರಣ. "

" ನಾಳೆ ನಿಮ್ಮ ಮನೆಯವರು ನನ್ನ ಕೈಬಿಟ್ಟುಬಿಡಿ ಎಂದು ಹೇಳಿದರೆ. "

" ಅವರು ಆ ಮಾತಿಗೆ ಬರುವುದಿಲ್ಲ. "

" ಒಂದು ವೇಳೆ ಹೇಳಿದರೆ ? "

" ಸಾಧ್ಯವಿಲ್ಲವೆನ್ನುತ್ತೇನೆ. "

" ನನ್ನ ಮೆಚ್ಚಿಸುವುದಕ್ಕೆ ಹೀಗೆ ಹೇಳುವಿರಿ. "

" ಇಲ್ಲ ಸರಸ್ವತಿ. ನಾನು ನಿನಗೆ ಅನ್ಯಾಯ ಮಾಡುವುದಿಲ್ಲ. ಇದುವರೆಗೆ ನನ್ನಿಂದ ಏನಾದರೂ ಅನ್ಯಾಯವಾಗಿದೆಯೇ ? "

" ಯಾವ ಬಾಯಲ್ಲಿ ಹೇಳಲಿ. ಮಹಾರಾಯರು ನೀವು ನನಗೇತಕ್ಕೆ ಕಡಿಮೆ ಮಾಡಿದ್ದೀರಿ ? "

" ನಿನಗೊಂದು ಮುಖ್ಯ ವಿಷಯ ಹೇಳುವುದಿತ್ತು. ನೀನು ಕೋಪಮಾಡಿಕೊಂಡಿರುವುದನ್ನು ಕಂಡು ಸುಮ್ಮನಾದೆ. "

" ಹೇಳಿ—ಖಂಡಿತ ಕೋಪವಿಲ್ಲ ಹೇಳಿ. "

" ಮನೆಯವರನ್ನು ಊರಿಗೆ ಕಳಿಸಬೇಕಾಗಿದೆ. "

" ಏಕೆ ? "

" ಅಲ್ಲೇ ಹೆರಿಗೆಯಾಗಲೆಂದು ಅವರ ತಾಯಿ ಇಚ್ಛಿಸುತ್ತಾರೆ. "

" ಈ ವಿಷಯ ನೀವು ನನಗೆ ಹೇಳಿಯೇ ಇರಲಿಲ್ಲ. "

" ಏನು ದೊಡ್ಡ ವಿಷಯ ಎಂದು ಸುಮ್ಮನಿದ್ದೆ. "

ಸರಸ್ವತಿ ನೀರವವಾಗಿ ಕುಳಿತುದನ್ನು ಕಂಡು ಮಂಜಯ್ಯ

" ಈಗ ಸಂತೋಷವಾಯಿತೇ ? "

" ಆಗದೆ ಇರುತ್ತದೆಯೇ ? "

" ಸಾವಕಾಶವಾಗಿ ನಿನ್ನ ಜತೆ ಇರುವುದಕ್ಕಾಗುವುದಿಲ್ಲವಲ್ಲ ಎಂದು ವ್ಯಥೆಪಡುತ್ತಿದ್ದೆ. "

" ನನಗೂ ವ್ಯಥೆಯಾಗಿತ್ತು. "

ಸರಸ್ವತಿಯ ಮನಸ್ಸಿಗೆ ನಿಜವಾಗಿಯೂ ವ್ಯಥೆಯಾಗಿತ್ತು—ಭಯವೂ ಆಯಿತು. ' ಮನೆಯವರನ್ನು ಊರಿಗೆ ಕಳುಹಿಸಿ ಇವನು ಸದಾಕಾಲ ಇಲ್ಲಿಯೇ ಒಕ್ಕರಿಸಿದರೆ ಏನುಗತಿ ? ' ಎಂದು ಯೋಚನೆಮಾಡಿದಳು.

" ಇನ್ನೂ ಏನೋ ಯೋಚಿಸುತ್ತಿರುವೆ ? "

" ನನ್ನ ಆಸೆ ಸಫಲವಾಗುತ್ತದೆಯೇ ಎಂದು ಯೋಚಿಸುತ್ತಿದ್ದೇನೆ. "

" ಮಗಳ ಮದುವೆ ವಿಷಯ ತಾನೇ ! ಗಂಡು ಗೊತ್ತುಮಾಡಿ ಲಗ್ನ ನಿಶ್ಚಯಮಾಡು. ಉಳಿದ ವಿಷಯ ನನಗಿರಲಿ. "

" ಬಾಡಿಗೆ ಮನೆಯಲ್ಲಿ ನಾನು ಲಗ್ನಮಾಡಬೇಕೇ ? "

" ಲಗ್ನದ ಕೆಲಸ ಮೊದಲು ಮುಗಿಯಲಿ. ಮನೆಯ ವಿಷಯ ಮುಂದೆ ಯೋಚಿಸಿದರಾಯಿತು. "

" ದೇವರು ಯಾವಾಗ ಕಣ್ಣುಬಿಟ್ಟು ನೋಡುತ್ತಾನೋ ! "

" ಯಾವ ದೇವರು ? "

" ನನ್ನ ದೇವರು. "

" ಅದು ಯಾರು ? "

" ನೀವು. "

ಮಂಜಯ್ಯನಿಗೆ ಸ್ವರ್ಗ ಒಂದೇ ಗೇಣುದೂರದಲ್ಲಿ ಉಳಿಯಿತು.

ಮಂಜಯ್ಯ ಮನೆಗೆ ಹೊರಡುವ ವೇಳೆಗೆ ಒಂದು ಗಂಟೆಯಾಗಿತ್ತು. ಹೊರಡಬೇಕೆಂದು ಚಡಪಡಿಸಿದ ಅವನಿಗೆ ಸರಸ್ವತಿ

" ಮನೆ, ಮನೆ, ಯಾವಾಗ ನೋಡಲಿ ಮನೆ. ಹೋಗಿ. ನಿಮ್ಮೊಬ್ಬರಿಗೇ ಮನೆ ಇರುವುದು. "

" ನೀನು ಬೇಡವೆಂದರೆ ಹೋಗುವುದಿಲ್ಲ. "

ಸರಸ್ವತಿ ಕಣ್ಣುಗಳಿಂದಲೇ ತನ್ನ ಭಾವನೆಯನ್ನು ವ್ಯಕ್ತಪಡಿಸಿದಳು. ಮಂಜಯ್ಯನಲ್ಲಿ ವಿಷಯ, ಕರ್ತವ್ಯಗಳ ಸಮರವಾರಂಭವಾಯಿತು. ಮಂಜಯ್ಯ ಸೋಲನ್ನೊಪ್ಪಿಕೊಂಡ. ಆದರೆ ಅವನು ನಿರೀಕ್ಷಿಸಿದ್ದ ಸಂತೋಷ, ಶಾಂತಿ

ಮನಸ್ಸಿಗೆ ಒದಗಲಿಲ್ಲ.

ಮನೆಯಲ್ಲೆಲ್ಲಿ ಹಗರಣವಾಗುವುದೋ ಎಂಬ ಯೋಚನೆ ಮಂಜಯ್ಯ ನಿಗೆ—ಅವನ ಮನೆಯಲ್ಲಿ ಹಗರಣವಾಗಲಿ ಎಂಬ ಆಸೆ ಸರಸ್ವತಿಗೆ. ರಾತ್ರಿಯನ್ನು ಇಬ್ಬರೂ ಕಣ್ಣುಬಿಟ್ಟುಕೊಂಡೇ ಕಳೆದರು.

"ಇಂದು ಜಾಗರಣೆಯಾಗಿದೆ" ಎಂದ ಮಂಜಯ್ಯ.

"ಹೌದು. ಕೆಲವರು ಶಿವನ ಹೆಸರಿನಲ್ಲಿ, ಕೆಲವರು ರಾಮನ ಹೆಸರಿನಲ್ಲಿ ಜಾಗರಣೆ ಮಾಡುತ್ತಾರೆ. ನಾವು ಕಾಮನ ಹೆಸರಿನಲ್ಲಿ ಜಾಗರಣೆ ಮಾಡುತ್ತಿದ್ದೇವೆ."

ಸರಸ್ವತಿಯ ಚಮತ್ಕಾರದ ಮಾತಿಗೆ ಉತ್ತರಕೊಡುವಷ್ಟು ಜಾಣ್ಮೆ ಮಂಜಯ್ಯನಿಗಿರಲಿಲ್ಲ. ಅವಳ ಮಾತಿಗೆ ಗಹಗಹಿಸಿ ನಕ್ಕು ತನ್ನ ಮೆಚ್ಚುಗೆ ವ್ಯಕ್ತಪಡಿಸಿದ.

ತನ್ನ ಅಮಾನುಷ ಶಕ್ತಿವಿಲಾಸವನ್ನು ನೆನಸಿಕೊಂಡು ಸರಸ್ವತಿ ಒಳಗೊಳಗೇ ಹಿಗ್ಗುತ್ತಿದ್ದಳು. ಒಂದೊಂದು ಬೆರಳಿಗೆ ಒಂದೊಂದು ಸೂತ್ರವನ್ನು ಕಟ್ಟಿಕೊಂಡು ತಾನು ಮಂಜಯ್ಯ, ನಂಜಪ್ಪ, ರಾಮರಾಜಪ್ಪನನ್ನು ಕುಣಿಸುತ್ತಿದ್ದುದನ್ನು ಸ್ಮರಿಸಿಕೊಂಡಳು. ಇನ್ನೂ ಒಂದು ಬೆರಳು ಸೂತ್ರ ಕಟ್ಟಿಕೊಳ್ಳಲು ಧಾವಿಸುತ್ತಿತ್ತು. ಇವರೆಲ್ಲರ ಅನುಭವಲೋಕವನ್ನು ಬಿಟ್ಟು ಅವಳ ಮನಸ್ಸು ಬೇರೆಯೊಂದು ಲೋಕದಲ್ಲಿ ಹಾರಾಡುತ್ತಿತ್ತು. ಅಲ್ಲಿನ ವಿದ್ಯಮಾನಗಳ ನೆನಪು ಅವಳಿಗೆ ಅವರ್ಣನೀಯ ಆನಂದವನ್ನೊದಗಿಸಿತ್ತು. ಸತ್ಯ ನಿತ್ಯವೆಂದು ಹೇಳುವವರಿಗೆ ಲೋಕಾನುಭವವಿಲ್ಲ—ಕನಸೇ ನಿತ್ಯವೆಂದು ಭಾವಿಸಿದಳು. ಸತ್ಯದ ನೇತುವೆಯ ಜೀವಗಳನ್ನು ಕಿತ್ತು ಅವಳು ಕನಸಿನ ಲೋಕದಲ್ಲಿದ್ದಳು. ಅದೇ ಶಾಶ್ವತವೆಂಬ ಭಾವನೆ ಅವಳಲ್ಲಿ ಬಲವಾಗಿ ಬೇರೂರಿತ್ತು.

೧೬

ಮನೆಗೆ ತಡವಾಗಿ ಬರುವುದು ಮಂಜುಳನಿಗೆ ನಿತ್ಯವಿಧಿಯಾಗುತ್ತ ಬಂತು. ತಾಯಿ ಮಗಳು ಈ ವಿಷಯ ಚರ್ಚೆ ಮಾಡಿದರು—ಬಡಿದಾಡಿದರು—ಬಯ್ದಾಡಿದರು—ಮಾತು ಬಿಟ್ಟರು. ಯಾವದಕ್ಕೂ ಬಗೆಹರಿಯದ ಸಮಸ್ಯೆ ಒಂದು ಮೂಕ ಒಪ್ಪಂದವಲ್ಲಿ ಮುಕ್ತಾಯವಾಯಿತು.

ಕೊನೆಗೂ ರಾಮರಾಜು ಮನೆಗೆ ಬಂದೇಬಿಟ್ಟ. ತಾಯಿ ಅವನನ್ನು ಸ್ವಾಗತಿಸಿದುದು, ರೂಮಿಗೆ ಕರೆದೊಯ್ದುದು, ಆದರಿಸಿದುದು, ಅವನು ಹೋದ ಮೇಲೆ ಟ್ರಂಕ್ ತೆಗೆದು ನೋಟಿನ ಕಂತೆಯನ್ನು ಮುಚ್ಚಿಟ್ಟುದನ್ನು ಕಣ್ಣಾರೆ ಕಂಡಳು. ರಾಮರಾಜು ಪ್ರವೇಶ ಮಂಜುಳನಿಗೆ ತಾಯಿಯ ಮೇಲೆ ಪ್ರಯೋಗಿಸಲು ಒಂದು ಮಹಾಸ್ತ್ರವನ್ನು ಒದಗಿಸಿಕೊಟ್ಟಿತ್ತು. ಸರಸ್ವತಿ ಮಗಳ ಎದುರಿಗೆ ಧೈರ್ಯವಾಗಿ ನಿಂತು ಅವಳನ್ನು ಆಕ್ಷೇಪಿಸುವ ಮಾತು ದೂರ ಉಳಿಯಿತು. ಸರಸ್ವತಿ ಮಗಳ ವಿಚಾರ ಸಂಪೂರ್ಣವಾಗಿ ನಿರ್ಲಕ್ಷಿಸುವುದಕ್ಕಾರಂಭಿಸಿದಳು.

ಮಂಜುಳನ ಚಲನವಲನ, ಅವಳು ಮನೆಗೆ ಸಾವಕಾಶವಾಗಿ ಬರುವುದರ ಕಾರಣ ಸರಸ್ವತಿಗೆ ಕೂಲಂಕಷವಾಗಿ ಗೊತ್ತಾಗಲು ತಡವಾಗಲಿಲ್ಲ. ಸರ್ವವ್ಯಾಪಿಯಾದ ರಾಮರಾಜು ಅವಳಿಗೆ ಎಲ್ಲ ಸುದ್ದಿಗಳನ್ನೂ ತಂದೊಪ್ಪಿಸಿದ್ದ. ಆಸ್ಫೋಟನೆಯ ಮುಹೂರ್ತ ನಿರೀಕ್ಷಿಸುತ್ತಿದ್ದ ಜ್ವಾಲಾಮುಖಿಯಂತಾಗಿತ್ತು ಸರಸ್ವತಿಯ ಪಾಡು.

ಒಂದು ದಿನ ಮಂಜುಳ ತನ್ನ ಸಹಾಧ್ಯಾಯಿನಿಯೊಬ್ಬಳ ಮದುವೆಗೆ ಹೊರಡಲು ಅಲಂಕಾರ ಮಾಡಿಕೊಂಡು ಸಿದ್ಧಳಾದಳು. ಸುಧೆಗೂ ಆಹ್ವಾನವಿದ್ದುದರಿಂದ ಅವಳೂ ಹೊರಡಲು ಸಿದ್ಧಳಾಗಿದ್ದಳು. ಮಂಜುಳ ಕೆಂಪು ಜಾರ್ಜೆಟ್ ಧರಿಸಿ ಕೈಯಲ್ಲಿ ಹಳದಿ ಜಾರ್ಜೆಟ್ ಕುಪ್ಪಸ ಹಿಡಿದು ತಾಯಿಯ ಬಳಿಗೆ ಬಂದು

“ ನೋಡಮ್ಮ. ಇದು ಸೀರೆಗೆ ಮ್ಯಾಚ್ (match) ಆಗುತ್ತೇನೋ ?”

ಸರಸ್ವತಿ ಕುಪ್ಪಸದ ಕಡೆಗೆ ಕಣ್ಣು ಹಾಯಿಸಲಿಲ್ಲ. ಮಗಳನ್ನು ದಿಟ್ಟಿಸಿ ನೋಡಿ

“ ನಾನು ಯಾವೂರ ದಿಕ್ಕು ಎಂದು ಕೇಳುತ್ತಿರುವೆ ಮಂಜುಳಾ ?”

“ ನಿನ್ನ ಕೇಳದೆ ನಾನು ಯಾರನ್ನು ಕೇಳಬೇಕು.”

“ ಅಯ್ಯೋ ಪಾಪ ! ಎಲ್ಲಾ ನನ್ನ ಕೇಳಿಕೊಂಡೇ ಮಾಡುತ್ತಿರುವೆ.”

“ ನಾನೇನು ಮಾಡುತ್ತಿದ್ದೇನೆ.”

‘ ಆ ವಿಷಯ ನಾನು ಚರ್ಚೆಮಾಡುವುದನ್ನು ಎಂದೋ ಬಿಟ್ಟುಬಿಟ್ಟಿದ್ದೇನಲ್ಲ. ನೀನುಂಟು ನಿನ್ನ ಭವಿಷ್ಯವುಂಟು – ಅದಕ್ಕಾರು ಹೊಣೆ. ನಾಳೆ ಹೆಚ್ಚು ಕಡಿಮೆಯಾದರೆ ನನ್ನ ಆಕ್ಷೇಪಿಸಬೇಡ. ತಿಳಿದೂ ತಿಳಿದೂ ಬೆಂಕಿಗೆ ಕೈಯಿಡುವವರು ಅದು ಸುಡುತ್ತದೆ ಎಂಬುದನ್ನೂ ಆಲೋಚಿಸಿಯೇ ಇರುತ್ತಾರೆ. ನೀನೇನು ಸಣ್ಣವಳಲ್ಲ – ಇಪ್ಪತ್ತು ತುಂಬುವುದಕ್ಕೆ ಬಂದಿದೆ ; ನನ್ನ ವಿದ್ಯಾಭ್ಯಾಸ ಹೈಸ್ಕೂಲು ಪ್ರವೇಶಕ್ಕೇ ಮುಗಿಯಿತು, ನೀನು ಬಿ. ಎ. ಕ್ಲಾಸಿನಲ್ಲಿ ಓದುತ್ತಿರುವೆ – ನನಗಿಂತ ಬುದ್ಧಿವಂತೆ. ನಿನಗೆ ನಾನು ಹೇಳಬೇಕಾದದ್ದೇನಿದೆ. ದೇವರು ಬುದ್ಧಿ ಕೊಟ್ಟಹಾಗೆ ಮಾಡು ” ಎಂದಳು.

ತಾಯಿಯ ಅಪ್ರಿಯ ಮಾತುಗಳು ಮಂಜುಳನ ಮನಸ್ಸಿಗೆ ನೋವುಂಟು ಮಾಡಿದರೂ ಅವಳು ಅದನ್ನು ಹೆಚ್ಚಾಗಿ ಗಮನ ಕೊಡಲಿಲ್ಲ. ತನಗೆ ಸೂಕ್ತ ಕಂಡ ಕುಪ್ಪಸ ಧರಿಸಿ ಮದುವೆಯ ಮನೆಗೆ ಹೋಗಿ ಬಂದಳು.

ಸರಸ್ವತಿಯ ತಲೆಯಲ್ಲಿ ನೂರಾರು ಯೋಚನೆಗಳು ಸುಳಿದಾಡಲಾರಂಭಿಸಿದವು. ಮಂಜುಳನನ್ನು ದಾರಿಗೆ ತರುವ ಬಗೆಯನ್ನು ಕುರಿತು ದೀರ್ಘವಾಗಿ ಯೋಚನೆ ಮಾಡಿದಳು. ‘ ನಂಜಪ್ಪನವರನ್ನು ಕೇಳಿ ನೋಡಲೇ ’ ಎಂದು ವಿಚಾರಮಾಡಿ ಕೊನೆಗೆ—‘ ಬೇಡ ಬೇಡ. ಅವರಿಗೆ ಈ ವಿಷಯ ಗೊತ್ತಾದರೆ ಇಲ್ಲದ ವ್ಯಾಜ್ಯ ಆರಂಭವಾಗುತ್ತದೆ ’ ಎಂದು ನಿರ್ಧರಿಸಿದಳು. ಈ ಸಮಸ್ಯೆಯನ್ನು ಬಗೆಹರಿಸುವ ಒಂದು ಮಾರ್ಗ ತಟ್ಟನೆ ಅವಳಿಗೆ ಹೊಳೆಯಿತು. ಅದರ ಸ್ವರೂಪ ಕಂಡು ಸರಸ್ವತಿಯ ಮೈ ನಡುಗಿತು.

ಸರಸ್ವತಿಯ ಮನೆಯಲ್ಲಿ ಪೀತಾಂಬರನ ಸಲಿಗೆ ಬೆಳೆಯುತ್ತ ಬಂದಿತ್ತು.

ಅವನು ಎರಡು ದಿನಕ್ಕೊಮ್ಮೆಯಾದರೂ ಬಂದು ತಾಯಿ, ಮಕ್ಕಳ ಜತೆ ನಗುತ್ತ ನಲಿಯುತ್ತ ಮಾತಾಡಿ ಹೋಗುತ್ತಿದ್ದ. ಅವನು ಬಂದಾಗ ಎಲ್ಲರಿಗೂ ಸಂಭ್ರಮ. ಎಲ್ಲರೂ ಅವನನ್ನು ಆದರಿಸುತ್ತಿದ್ದರು. ಪೀತಾಂಬರ ಆಗಾಗ್ಗೆ ಮಂಜುಳನಿಗೆ ಸ್ವಲ್ಪ ವೀಣೆಯ ಪಾಠವನ್ನೂ ಹೇಳಿಕೊಡುತ್ತಿದ್ದ. 'ಇವನು ಯಾರು' ಎಂದು ಕೇಳಿದವರಿಗೆ 'ಚಾಮರಾಜನಗರದಲ್ಲಿರುವ ನನ್ನ ಅಕ್ಕನ ಮಗ' ಎಂದು ಸರಸ್ವತಿ ಹೇಳುವುದಕ್ಕಾರಂಭಿಸಿದಳು.

ಪೀತಾಂಬರನ ವಹಿವಾಟವನ್ನು ನಂಜಪ್ಪನೂ ಗಮನಿಸಿದ್ದ. ಅವನು ಮನೆಯಲ್ಲೆಲ್ಲಾ ಧಾರಾಳವಾಗಿ ಓಡಿಯಾಡುವುದೂ, ಮಂಜುಳಾ ಸುಧೆಯರ ಜತೆ ಚಲ್ಲಾಟವಾಡುವುದು ಅವನ ಲಕ್ಷ್ಯವನ್ನು ಸೆಳೆದಿದ್ದವು.

ಒಂದು ದಿನ ಮನಸ್ಸು ತಡೆಯಲಾಗದೆ

"ಇವನು ಯಾರು ಸರಸಾ" ಎಂದು ಕೇಳಿದ.

"ನಮ್ಮ ಸುಧಾ ಮೇಷ್ಟ್ರು—ಯಾಕೇಂದ್ರೆ."

"ಅವನ ರೀತಿನೀತಿಯೇ ಚೆನ್ನಾಗಿಲ್ಲ."

"ಅಂಥದ್ದೇನೂ ಇಲ್ಲ, ಸ್ವಲ್ಪ ಹುಡುಗು."

"ಈ ಹುಡುಗಾಟ ನಾಳೆ ದೊಡ್ಡಾಟವಾಗುತ್ತದೆ."

"ಆತ ತುಂಬ ಮರ್ಯಾದಸ್ಥಾಂದ್ರೆ. ಅಂಥ ಭಯಕ್ಕೆ ಕಾರಣವಿಲ್ಲ."

"ಹುಲ್ಲೆಯನ್ನೂ ಹುಲಿಯನ್ನೂ ಯಾರೂ ಒಂದು ಬೋನಿನಲ್ಲಿ ಕೂಡುವುದಿಲ್ಲ ಸರಸಾ."

"ನೀವು ಹೇಳುವುದು ನ್ಯಾಯ. ಬೆಳೆದ ಮಕ್ಕಳಿಗೆ ನಾನೇನು ಹೇಳಲು ಸಾಧ್ಯ?"

"ನಿನ್ನ ಮಕ್ಕಳು ನಿನ್ನ ಮಾತು ಕೇಳುತ್ತಾರಷ್ಟೆ?"

"ಕೇಳದೆ ಏನು?"

"ನನಗೆ ಅನುಮಾನ! ನಿನ್ನ ಮಾತು ನಿನ್ನ ಮಕ್ಕಳು ಕೇಳುವಹಾಗಿದ್ದರೆ ಇವಳಿಗೆ ಇಷ್ಟು ಸ್ವಾತಂತ್ರ್ಯ ಸಿಕ್ಕುತ್ತಿರಲಿಲ್ಲ."

"ಕಷ್ಟದಲ್ಲಿ ಬೆಳೆದ ಮಕ್ಕಳೆಂದು ನಾನು ದಂಡಿಸುವುದಕ್ಕೆ ಹೋಗು

ವುದಿಲ್ಲ. ”

“ ಮಕ್ಕಳನ್ನು ಸಕಾಲದಲ್ಲಿ ದೊಡ್ಡವರು ದಂಡಿಸದಿದ್ದರೆ ಅವರೇ ಮಕ್ಕಳ ದುರ್ಗತಿಗೆ ಕಾರಣರಾಗುತ್ತಾರೆ. ”

“ ನಾನು ಏನು ಮಾಡಬೇಕೆಂದು ಹೇಳುವಿರಿ ? ”

“ ಅವನನ್ನು ಮನೆಗೆ ಬರಬೇಡವೆಂದು ಹೇಳಬೇಕು. ”

“ ನಿಮ್ಮನ್ನೇಕೆ ಬರಮಾಡಿಕೊಳ್ಳುತ್ತೇನೆಂದು ಮಂಜುಳ ಕೇಳಿದರೆ ? ”

“ ನಾನು ನಿನಗೆ ಹೇಗೊ ಹಾಗೆ ಮಂಜುಳನಿಗೆ ಅವನೋ !”

“ ಇಲ್ಲ ಇಲ್ಲ – ಅಂಥದೇನೂ ಇಲ್ಲ. ಮಂಜುಳನ ಬಾಯಿ ತುಂಬ ಹಗುರ.”

“ ಅವಳ ಮನಸ್ಸೂ ಅಷ್ಟೇ ಹಗುರ. ಸುಧೆಗೆ ಸ್ವಲ್ಪ ಕಷ್ಟ, ದುಃಖ ಅರ್ಥವಾಗುತ್ತದೆ. ”

“ ನಿಜ. ಮಂಜುಳನಿಗೆ ತನ್ನ ಬಿಟ್ಟು ಜಗತ್ತೇ ಬೇಕಿಲ್ಲ. ನಾಳೆ ಈ ಹುಡುಗಿ ಹೇಗೆ ಪೂರೈಸುತ್ತದೋ ದೇವರೇ ಬಲ್ಲ.”

“ ನಾಳೆಯ ಮಾತು ಹಾಗಿರಲಿ, ಇವತ್ತಿನ ವಿಷಯ ಯೋಚಿಸು. ”

ಸರಸ್ವತಿ ಹೊಸದಾಗಿ ಯೋಚಿಸಬೇಕಾಗಿರಲಿಲ್ಲ. ಅವಳ ತಲೆಯ ತುಂಬ ಅದೇ ವಿಷಯವಾಗಿತ್ತು. ಮನಸ್ಸಿನ ಚಿಂತೆ ಅವಳ ದೇಹದ ಮೇಲೂ ಪರಿಣಾಮವನ್ನುಂಟು ಮಾಡಿತ್ತು. ಆಗಾಗ್ಗೆ ತಲೆ ಸಿಡಿದುಹೋಗುವಂತಹ ತಲೆನೋವು ಬಂದು ಮೈ ಬಿಚ್ಚಗಾಗುತ್ತಿತ್ತು. ಸರಸ್ವತಿಯ ದೇಹಾರೋಗ್ಯ ಸಂಜಪ್ಪನಿಗೆ ಕಳವಳವನ್ನುಂಟುಮಾಡಿತು.

ಸರಸ್ವತಿಯ ಜೀವನದಲ್ಲಿ ಸಮಸ್ಯೆಗಳ ಸಂಖ್ಯೆ ಏರುತ್ತ ಬಂದಿತು. ಮರು ದಿನ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಸರಸ್ವತಿಯ ಅಣ್ಣ ಚಲುವಯ್ಯ ಮೈಸೂರಿನಿಂದ ಬಂದಿಳಿದ. ‘ ಇವನೇಕೆ ಈಗ ಬಂದ ’ ಎಂದು ಸರಸ್ವತಿ ಗೊಣಗಿಕೊಂಡಳು.

ಚಲುವಯ್ಯ ತಾನು ಬಂದ ಕಾರಣವನ್ನು ತಂಗಿಗೆ ವಿವರಿಸಿ

“ ಇವತ್ತೇ ನೀನು ಹೊರಡಬೇಕಮ್ಮ ” ಎಂದು ಹೇಳಿದ.

“ ಹೇಗಾಗುತ್ತದೆ ಅಣ್ಣಯ್ಯ. ಮೊದಲೇ ನೀನು ಕಾಗದ ಬರೆದಿದ್ದರೆ

ಹೊರಡುವ ಏರ್ಪಾಟು ಮಾಡುತ್ತಿದ್ದೆ."

"ಹೊರಡಲಾಗದಿರುವಂಥ ಅನಿವಾರ್ಯವೇನು ?"

"ಮಂಜಯ್ಯನವರ ವಿಷಯ ನಿನಗೆ ಹೇಳಿದ್ದೆನಲ್ಲವೇ ?"

"ಹೂ ! ನಿನ್ನ ಯಜಮಾನರಿಗೆ ಸಾಲಕೊಟ್ಟಿದ್ದವನು."

"ಅವರ ಮನೆಯಲ್ಲಿ ಮದುವೆ. ನನ್ನ ಸಹಾಯ ಕೇಳಿದರು—ಆಗಲಿ ಎಂದು ಒಪ್ಪಿಕೊಂಡು ಬಿಟ್ಟಿದ್ದೇನೆ."

"ಮನೆಯ ಕೆಲಸಕ್ಕಿಂತ ಕಂಡವರ ಮನೆಯ ಕೆಲಸ ಹೆಚ್ಚಲ್ಲವೇ ?"

"ನನ್ನ ಸ್ಥಿತಿಗತಿ ತಿಳಿದೂ ನೀನೇ ಹೀಗೆ ಅಂದರೆ ನಾನೇನು ಹೇಳಲಿ. ಮಂಜಯ್ಯನವರು ಹಣಕ್ಕೆ ವರಾತಮಾಡಿಲ್ಲ—ಅದರ ಬಡ್ಡಿಯೇ ಬೇಕಾದಷ್ಟು ಬೆಳೆದಿದೆ. ನಾನಿದುವರೆಗೆ ಮೂರು ಕಾಸು ಬಡ್ಡಿ ಕೊಟ್ಟಿಲ್ಲ. ಅವರ ಮನೆಯ ಮದುವೆಯಲ್ಲಿ ಸ್ವಲ್ಪ ಚಾಕರಿ ಮಾಡಿದರೆ ಬಡ್ಡೀ ಹಣವನ್ನಾದರೂ ಬಿಡುತ್ತಾರೆ ಎಂದು ಆಸೆ. ಇಷ್ಟಕ್ಕೂ ನಾನು ಮೈಸೂರಿಗೆ ಬಂದು ಮಾಡಬೇಕಾದದ್ದೇನು ? ಅತ್ತಿಗೆ ಎಲ್ಲಾ ನೋಡಿಕೊಳ್ಳುತ್ತಾರೆ."

"ಅಲ್ಲಮ್ಮ. ಲಗ್ನಪತ್ರಿಕೆ ಆಗುವಾಗ ನನ್ನವರಾಗಿ ಯಾರಾದರೂ ಇರಬೇಡವೇ ? ನನಗೇನು ನೂರಾರು ಜನ ಬಂಧುಬಳಗ ಇದ್ದಾರೇನು ?"

"ನಾನು ಬಂದು ನಿಂತುಕೊಂಡು ನಿನ್ನ ಮನೆಯ ಶುಭಕಾರ್ಯದಲ್ಲಿ ಭಾಗವಹಿಸಬೇಕಾದುದು ನನ್ನ ಕರ್ತವ್ಯ. ಇರುವ ವಿಷಯ ನಿನಗೆ ಹೇಳಿದ್ದೇನೆ. ನೀನು ಹೇಗೆ ಹೇಳಿದರೆ ಹಾಗೆ ಮಾಡುತ್ತೇನೆ."

ಚಲುವಯ್ಯ ಸ್ವಲ್ಪ ಯೋಚಿಸಿದ. ತಂಗಿಯ ಸಂಸಾರದ ಕಷ್ಟಕ್ಕೆ ತಾನು ನೆರವಾಗದಿರುವಾಗ ಅವಳನ್ನು ವೃಥಾ ಆಕ್ಷೇಪಿಸುವುದು ನ್ಯಾಯವಲ್ಲ ವೆಂದು ನಿರ್ಧರಿಸಿಕೊಂಡು

"ಹೋಗಲಿ—ಮಕ್ಕಳನ್ನಾದರೂ ಕಳುಹಿಸಿಕೊಡು."

"ಸಂತೋಷವಾಗಿ ಕರೆದುಕೊಂಡು ಹೋಗು. ಅವರು ತಿರುಗಿ ಬರುವುದು"

"ಎರಡು ಮೂರು ದಿವಸಗಳಲ್ಲಿ ನಾನೇ ಕರೆದುಕೊಂಡು ಬಂದು ಬಿಡುತ್ತೇನೆ."

ಸರಸ್ವತಿ ಚಲುವಯ್ಯನ ವ್ಯವಸ್ಥೆಯನ್ನೊಪ್ಪಿಕೊಂಡಳು.

ಮಂಜುಳಾ, ಸುಧಾ ಶಾಲೆಗಳಿಂದ ಹಿಂದಿರುಗಿದ ಕೂಡಲೆ ಮೈಸೂರಿಗೆ ಹೊರಡುವ ಸಿದ್ಧತೆಮಾಡಿಕೊಳ್ಳಬೇಕಾಯಿತು. ಸರಸ್ವತಿ ಅಣ್ಣನಿಗೆ

" ಮಂಜುಳನ ವಿಷಯ ಜ್ಞಾಪಕದಲ್ಲಿರಲಪ್ಪ. ಬೇಗ ಅವಳ ಮದುವೆಯಾಗಿ ಹೋದರೆ ನಾನು ನಿರಾತಂಕವಾಗಿರಬಹುದು."

" ನನ್ನ ಮಗಳು ನಿನ್ನ ಮಗಳು ಇಬ್ಬರ ಮದುವೆಯನ್ನೂ ಒಟ್ಟಿಗೆ ಮಾಡಿಬಿಡುತ್ತೇನೆ ಸುಮ್ಮನಿರು. ಮಂಜುಳನಿಗೆ ಇಪ್ಪತ್ತು ತುಂಬಿತೇನು!"

" ಇನ್ನೇನು ತುಂಬುತ್ತದೆ."

" ನಿನ್ನ ಆರೋಗ್ಯವೂ ಚೆನ್ನಾಗಿರುವ ಹಾಗೆ ಕಾಣುವುದಿಲ್ಲ. ಮೈಸೂರಿಗೆ ಬಂದು ನಾಲ್ಕು ದಿನವಿದ್ದು ಸುದಾರಿಸಿಕೊಂಡರೆ ಚೆನ್ನಾಗಿತ್ತು."

" ಆಗಲಿ ಇನ್ನು ಯಾವಾಗಲಾದರೂ ಬರುತ್ತೇನೆ. ಸದ್ಯ ಮಂಜುಳನಿಗೆ ಗಂಡು ಗೊತ್ತಾಗಿಬಿಟ್ಟರೆ ನನ್ನ ಆರೋಗ್ಯ ತಾನಾಗಿಯೇ ಸುದಾರಿಸುತ್ತದೆ."

ಚಲುವಯ್ಯ ತಂಗಿಯ ಮಕ್ಕಳನ್ನು ಕರೆದುಕೊಂಡು ಅದೇ ರಾತ್ರಿ ಮೈಸೂರಿಗೆ ಪ್ರಯಾಣ ಬೆಳಸಿದ.

ಬೆಳಿಗ್ಗೆ ಬಂದ ಮಂಜಯ್ಯನಿಗೆ ತನ್ನ ಮಕ್ಕಳು ಪ್ರಯಾಣಮಾಡಿದ ವಿಷಯ ಸರಸ್ವತಿ ತಿಳಿಸಿದಳು.

" ನೀನೂ ಹೋಗಿ ಬರಬೇಕಾಗಿತ್ತು."

" ಹೇಗೆ ಹೋಗಲಿ—ನಿಮಗೆ ಹೇಳಿಕೂಡ ಇರಲಿಲ್ಲ. ನೀವು ಕೋಪ ಮಾಡಿಕೊಂಡರೆ!"

" ಇದಕ್ಕೆಲ್ಲಾ ಕೋಪಮಾಡಿಕೊಳ್ಳುವಷ್ಟು ಮೂರ್ಖನೇ ನಾನು."

" ಅಣ್ಣನಿಗೆ ತಿಳಿಯದ ಹಾಗೆ ಹೆಚ್ಚು ದಿನ ನಮ್ಮ ಸಂಬಂಧ ಮುಚ್ಚಿಡಲು ಸಾಧ್ಯವಿಲ್ಲ."

" ತಿಳಿದರೆ ತಿಳಿಯಲಿ—ಅದಕ್ಕೇನು ಮಾಡುವುದು ?"

" ತಿಳಿದರೆ ಅವನು ಪುನಃ ನನ್ನ ಮನೆಯ ಹೊಸಲೊಳಗೆ ಕಾಲಿಡುವುದಿಲ್ಲ."

" ಅದಕ್ಕೆ ನಾನೇನು ಮಾಡಲಿ ? "

" ನನಗೆ ತ್ರಿಶಂಕುಸ್ವರ್ಗವೇ ಗತಿಯಾದರೆ ! "

" ನಾನು ಬರುವುದು ನಿನಗಿಷ್ಟವಿಲ್ಲವಾದರೆ ಹೇಳಿಬಿಡು. ಬರುವುದನ್ನು ನಿಲ್ಲಿಸಿ ಬಿಡುತ್ತೇನೆ. "

" ಹಾಗೆ ನಾನು ಹೇಳಲಿಲ್ಲ. ನಿಮ್ಮ ವಿಶ್ವಾಸ ದೃಢವಾಗಿರಬೇಕೆಂದು ನನ್ನ ಆಸೆ. "

" ಆಡಿದ ಮಾತೇ ಆಡಿ ಏನು ಪ್ರಯೋಜನ ಸರಸ್ವತಿ. ನಿನಗೆ ಬೇಕಾದ ಸಹಾಯಮಾಡಲು ನಾನು ಸಿದ್ಧನಾಗಿದ್ದೇನೆಂದು ಹೇಳಿರುವೆನಲ್ಲಾ. "

" ಈ ಸಲ ಅಣ್ಣನಿಗೆ ಚುರುಕುಮುಟ್ಟುವಂತೆ ಮಾಡಿದ್ದೇನೆ. ಮಂಜುಳನಿಗೆ ಅವನು ಬೇಗ ಗಂಡು ಗೊತ್ತುಮಾಡುತ್ತಾನೆ. "

" ಮಾಡಲಿ. ಮದುವೆಯ ಸಿದ್ಧತೆ ಮಾಡು. "

" ಬೆಳ್ಳಿಯ ಬಂಗಾರದ ಸಾಮಾನುಗಳನ್ನು ಈಗಲೇ ಮಾಡಿಸಿಟ್ಟುಕೊಂಡಿರುವುದು ಒಳ್ಳೆಯದಲ್ಲವೇ ? "

" ನಿನಗೆ ದುಡ್ಡು ಬೇಕು ತಾನೆ ! "

" ದುಡ್ಡಿಲ್ಲದೆ ಒಡವೆಗಳು ಆಗುತ್ತವೆಯೇಂದ್ರೆ. "

" ಮುಂದಿನ ವಾರ ನಾನು ಏನಾದರೂ ಏರ್ಪಾಟುಮಾಡುತ್ತೇನೆ. "

" ಅಂಗಡಿಗೆ ನೀವೇ ಕರೆದುಕೊಂಡು ಹೋಗಬೇಕು. "

" ನಾನು ಬೇಡ. ನಿಮ್ಮಣ್ಣನ ಜತೆ ಹೋಗಿ ಬಾ. "

" ನನ್ನ ಜತೆ ಬರುವುದಕ್ಕೆ ನಿಮಗೆ ನಾಚಿಕೆಯೇನೋ ? "

" ಹಾಗಲ್ಲ—ಸುಮ್ಮನೆ ಪುಕಾರೇಕೆ ಮಾಡಿಕೊಳ್ಳಬೇಕು. "

" ನಿಮ್ಮಿಷ್ಟದಂತೆ ಮಾಡಿ " ಎಂದು ಹೇಳಿದಳು.

ಮಂಜಯ್ಯ ಹೊರಟು ನಿಲ್ಲಲು

" ರಾತ್ರಿ ಬರುವಿರಷ್ಟೆ " ಎಂದು ಕೇಳಿದಳು.

" ರಾತ್ರಿ ಬರುವುದಕ್ಕಾಗುವುದಿಲ್ಲ. ಮನೆಗೆ ನಂಟರು ಬಂದಿದ್ದಾರೆ. ಅವರು ಜತೆಯಲ್ಲಿಯೇ ಇರುತ್ತಾರೆ. ಅದಕ್ಕೇ ನೋಡಿಕೊಂಡು ಹೋಗಲು

ಈಗ ಬಂದೆ. ”

“ ಪುನಃ ದರ್ಶನ. ”

“ ನಾಳೆ ” ಎಂದು ಹೇಳಿದ.

ಮಂಜುಳನ ಭವಿಷ್ಯತ್ತಿನ ಯೋಚನೆ ಸರಸ್ವತಿಯನ್ನು ವ್ಯಾಪಿಸಿತು. ಆದಷ್ಟು ಬೇಗ ಅವಳ ಮದುವೆ ಮಾಡಿಬಿಡಬೇಕೆಂದೂ, ಈಗಿನಿಂದಲೇ ಮದುವೆಗೆ ಬೇಕಾದ ಒಡವೆ, ವಸ್ತ್ರ, ಪಾತ್ರೆಗಳು, ಇತರ ಸಾಮಾನುಗಳನ್ನೊದಗಿಸಿ ಕೊಳ್ಳಬೇಕೆಂದೂ ನಿಶ್ಚಯಿಸಿದಳು. ಮಂಜುಳನ ಇತ್ತೀಚಿನ ಚಲನವಲನಗಳು, ದಿಟ್ಟತನ, ನಿರ್ಮಮತೆ ಅವಳಿಗೆ ತುಂಬ ದುಃಖವನ್ನುಂಟುಮಾಡಿದ್ದವು. ಎಲ್ಲಕ್ಕೂ ಹೆಚ್ಚಾಗಿ ಸರಸ್ವತಿಯ ಮನಸ್ಸನ್ನು ಕದಡಿಬಿಟ್ಟಿದ್ದ ವಿಷಯವೆಂದರೆ ಮಂಜುಳಾ, ಪೀತಾಂಬರರಾಯನ ಸ್ನೇಹದ ವಿವರ. ‘ ಅದರಲ್ಲಿ ಏನು ತಪ್ಪು ?’ ಎಂದು ತನ್ನನ್ನು ತಾನು ಪ್ರಶ್ನಿಸಿಕೊಂಡಳು. ಅವರಿಬ್ಬರೂ ಜತೆಯಲ್ಲಿ ಪಾರ್ಕಿನಲ್ಲಿ ತಿರುಗಾಡಿರಬಹುದು, ಸಿನೀಮಾಕ್ಕೆ ಹೋಗಿರಬಹುದು, ಟ್ಯಾಕ್ಸಿಯಲ್ಲಿ ಓಡಾಡಿರಬಹುದು. ಅವುಗಳನ್ನು ಕಂಡಿದ್ದ ರಾಮರಾಜಪ್ಪ ವಿಪರೀತ ಅರ್ಥ ಕಲ್ಪನೆ ಮಾಡಿಕೊಂಡಿರಬಹುದು. ರಾಮರಾಜುವಂತೆ ಅಧುನಿಕ ಶಿಕ್ಷಣ ಸಂಸ್ಕಾರವಿಲ್ಲದೆ ಬೆಳೆದವರಿಗೆ ಹೆಣ್ಣು ಗಂಡು ಒಟ್ಟಿಗಿರುವುದೆಂದರೆ ಕೇವಲ ಕಾಮತೃಪ್ತಿಗೆ ಎಂದು ಕಲ್ಪನೆಯಾಗುವುದು ಸಹಜ. – ಆದರೆ ತಾನೂ ಹಾಗೇ ಭಾವಿಸಬೇಕೇ ?

ಮಂಜುಳನ ನಡತೆಯನ್ನು ಸಮರ್ಥಿಸುತ್ತಿದ್ದ ಸರಸ್ವತಿಯ ಮನಸ್ಸಿನ ಮೇಲೆ ಒಂದು ಕಪ್ಪುಮೋಡ ಹಾದುಹೋಯಿತು. ಮಂಜುಳ, ಪೀತಾಂಬರ ಇವರ ಸಂಬಂಧ ಸ್ನೇಹದ ಎಲ್ಲೆಕಟ್ಟಿನಲ್ಲಿದೆಯೆಂದು ನಂಬುವುದಾದರೂ ಹೇಗೆ? ಅವನು ತರುಣ, ಸ್ಫುರದ್ರೂಪಿ, ವಿದ್ಯಾವಂತ, ರಸಿಕ. ವಯಸ್ಸಿಗನುಗುಣವಾಗಿ ಕಾಮನೆಗಳು ಅವನ ಮನಸ್ಸಿನಲ್ಲಿ ಮನೆಮಾಡಿರುತ್ತವೆ. ಅನುಗುಣ ವಯಸ್ಸಿನ ಯುವತಿ ಜತೆಯಲ್ಲಿರುವಾಗಲೂ ಮನಸ್ಸು ಬಿಗಿಹಿಡಿದಿರಬೇಕಾದರೆ ಅವನೇನು ಶುಕಮುನಿಯೇ ?

ಮುದುಕಿದರೆ ಆಗುವ ಪರಿಣಾಮಕ್ಕೆ ಅಂಜಿ, ತನ್ನ ಸ್ಥಾನಮಾನಗಳಿಗೆ

ಹೆದರಿ ಪೀತಾಂಬರ ಒಂದು ವೇಳೆ ಸುಮ್ಮನಿದ್ದರೂ ಇರಬಹುದು.—ಆದರೆ ಮಂಜುಳ ಸುಮ್ಮನಿರುವಳೇ? ಅವಳ ಒಂದೊಂದು ಮಾತು, ಒಂದೊಂದು ಚಲನವಲನವೂ, ಮುಖದ ಮೇಲೆ ಸುಳಿಯುತ್ತಿದ್ದ ಭಾವ, ರಾಗಗಳು ಎಂಥ ವರ ಚಿತ್ತವನ್ನಾದರೂ ಚಂಚಲಮಾಡುತ್ತವೆ. ಪ್ರಕೃತಿಯ ಪ್ರಕೋಪವನ್ನು ಸಹಿಸಲಾಗದೆ ಅವಳೇ ಏತಕ್ಕೆ ಪೀತಾಂಬರನಿಗೆ ತನ್ನ ತಾರುಣ್ಯದ ಬಲಿದಾನ ವನ್ನರ್ಪಿಸಬಾರದು?

ಮಂಜುಳನ ಪ್ರಭಾವಕ್ಕೆ ಪೀತಾಂಬರ ಸಿಕ್ಕಿರಲಿ, ಪೀತಾಂಬರನ ಪ್ರಭಾ ವಕ್ಕೆ ಮಂಜುಳ ಸಿಕ್ಕಿರಲಿ, ಅವರಿಬ್ಬರನ್ನೂ ಬೇರ್ಪಡಿಸದಿದ್ದರೆ ಗತ್ಯಂತರವಿಲ್ಲ ವೆಂಬುದನ್ನು ಸರಸ್ವತಿ ಗ್ರಹಿಸಿದಳು.

ಪೀತಾಂಬರನ ಬಗ್ಗೆ ಆಲೋಚಿಸುತ್ತ ಆಲೋಚಿಸುತ್ತ ತಟ್ಟನೆ ಅವಳ ಮನಸ್ಸಿಗೆ ಹೊಸ ಅನುಭವದ ಅರಿವಾಯಿತು. ರೋಮಾಂಚನವಾಯಿತು, ಕೈಕಾಲುಗಳು ನಡುಗಿದವು, ತುಟಿಗಳದುರಿದವು, ಮೈಯೆಲ್ಲಾ ಬೆವರಿತು. ಮನಸ್ಸಿನ ಉದ್ವೇಗ ಮರೆಸಲು ಎದ್ದು ಒಲೆಹಚ್ಚಿ ಚಕ್ಕುಲಿಹಿಟ್ಟು ಕಲಸಿ ಕೊಂಡಳು.

ಚಕ್ಕುಲಿ ಕರೆದದ್ದಾದ ಮೇಲೆ ಸರಸ್ವತಿ ಸ್ನಾನಮಾಡಿ ಊಟ ಮುಗಿಸಿ ಮನೆಯ ಬಾಗಿಲು ಹಾಕಿಕೊಂಡು ಮಲಗಿದಳು. ಸೋತಿದ್ದ ಅವಳ ದೇಹಕ್ಕೆ ನಿದ್ರೆ ಅಮೃತಸೇಚನೆಯನ್ನು ಮಾಡಿತು. ಸರಸ್ವತಿ ಹಾಸಿಗೆ ಬಿಟ್ಟು ಎದ್ದಾಗ ನಾಲ್ಕು ಗಂಟೆ ಹೊಡೆಯುತ್ತಿತ್ತು. ಮುಖ ತೊಳೆದುಕೊಂಡು ತಲೆಬಾಚಿ ಹೆರಳು ಹಾಕಿಕೊಂಡು, ಹೆರಳಿಗೆ ಮಾಟವಾಗಿ ಎರಡು ಸಂಪಿಗೆ ಹೂವು, ಒಂದು ಕೆಂಪು ಗುಲಾಬಿ ಹೂವನ್ನೇರಿಸಿದಳು. ಕಾಫಿ ಡಿಕಾಕ್ಷನ್ ಅವಳು ಹಾಕುತ್ತಿರು ವಂತೆ ಹೊರಬಾಗಿಲಿನಲ್ಲಿ ಯಾರೋ ಕೂಗಿದಂತಾಯಿತು. ಎದ್ದುಹೋಗಿ ನೋಡಿದಳು—ಎದುರಿಗೆ ಪೀತಾಂಬರ.

"ಬನ್ನಿ—ಬನ್ನಿ ಒಳಗೆ"

ಎಂದು ಅವನನ್ನು ಸ್ವಾಗತಿಸಿ ತನ್ನ ರೂಮಿಗೆ ಕರೆದೊಯ್ದು ಕುಳ್ಳಿರಿಸಿ ದಳು. ಮಿಂಚಿನಂತೆ ಅಡಿಗೆಯ ಮನೆಯಲ್ಲಿ ಸುಳಿದು ಕಾಫಿಯನ್ನೂ ಚಕ್ಕುಲಿ

ಯನ್ನೂ ಪೀತಾಂಬರನಿಗೆ ತಂದಿತ್ತಳು. ಮತ್ತೊಮ್ಮೆ ಅಡಿಗೆಯ ಮನೆಗೆ ಹೋಗಿ ತನಗೊಂದು ಲೋಟ ಕಾಫಿ ಹಿಡಿದುಕೊಂಡು, ಬರುವಾಗ ಮನೆಯ ತಲೆಬಾಗಿಲಿನ ಚಿಲಕ ಹಾಕಿಕೊಂಡು ಬಂದಳು.

ರೂಮಿನ ಕುರ್ಚಿಯ ಮೇಲೆ ಪೀತಾಂಬರ ಕುಳಿತಿದ್ದ. ಮೇಜಿನ ಮೇಲೆ ಚಕ್ಕುಲಿಯ ತಟ್ಟೆ, ಕಾಫಿಯ ಲೋಟ ಇದ್ದವು. ಅವನೆದುರಿಗೆ ಮಂಚದ ಮೇಲೆ ಸರಸ್ವತಿ ಕಾಫಿ ಲೋಟ ಹಿಡಿದು ಕುಳಿತಳು.

"ಮಕ್ಕಳೆಲ್ಲಿ ಯಾರೂ ಕಾಣುವುದಿಲ್ಲ. ಸುಧಾ ಇವತ್ತು ಸ್ಕೂಲಿಗೂ ಬರಲಿಲ್ಲ."

"ಮಂಜುಳಾ ಸುಧಾ ಇಬ್ಬರೂ ಊರಿನಲ್ಲಿಲ್ಲ."

"ಎಲ್ಲಿಗೆ ಹೋಗಿದ್ದಾರೆ."

"ನಿನ್ನೆ ನಮ್ಮಣ್ಣ ಮೈಸೂರಿನಿಂದ ಬಂದಿದ್ದರು. ರಾತ್ರಿ ಅವರ ಜತೆಯಲ್ಲಿ ಮೈಸೂರಿಗೆ ಹೋಗಿದ್ದಾರೆ."

"ಅಲ್ಲಿ ಏನಾದರೂ ವಿಶೇಷವಿತ್ತೇ?"

"ಹೂ! ನಮ್ಮಣ್ಣನ ಮಗಳ ಲಗ್ನಪತ್ರಿಕೆ ಮುಹೂರ್ತವಿಟ್ಟುಕೊಂಡಿದ್ದಾರೆ."

"ನೀವೇ ಹೋಗಿಲ್ಲ."

"ನಾನೆಲ್ಲಿ ಹೋಗಲೀಂದ್ರೆ. ಎಲ್ಲರೂ ಮನೆಬಿಟ್ಟು ಹೋದರೆ ಮನೆಯಲ್ಲಿ ಯಾರು?"

ಸರಸ್ವತಿ ಎದ್ದು ತನ್ನ ಕಾಫಿಲೋಟ ಮೇಜಿನ ಮೇಲಿಟ್ಟು ಮತ್ತೆ ಮಂಚದ ಮೇಲೆ ಕುಳಿತಳು. ಪೀತಾಂಬರ ಚಕ್ಕುಲಿ ಕುರುಕುತ್ತಿದ್ದ.

"ನೀವು ವೀಣೆ ಎಲ್ಲಿ ಅಭ್ಯಾಸ ಮಾಡಿಕೊಂಡಿರಿ?"

"ಮೈಸೂರಿನಲ್ಲಿ."

"ನಿಮ್ಮ ಗುರುಗಳು ಯಾರು?"

"ಸುಬ್ಬಣ್ಣನವರ ಶಿಷ್ಯರೊಬ್ಬರಿದ್ದರು ಶೇಷಗಿರಿರಾಯರೂಂತ–ಅವರು."

"ಇದ್ದರು ಎನ್ನುವಿರಿ."

“ಹೌದು. ಅವರು ತೀರಿಕೊಂಡು ಮೂರು ವರ್ಷಗಳಾದವು. ಇದೇನು ನನ್ನ ವೀಣಾಭ್ಯಾಸದ ವಿಷಯ ಇಷ್ಟು ವಿಚಾರಮಾಡುತ್ತಿರುವಿರಿ.”

“ನೀವು ಸೊಗಸಾಗಿ ನುಡಿಸುತ್ತೀರಿ—ನಿಮಗೆ ಕಲಿಸಿಕೊಟ್ಟ ಗುರುಗಳು ಯಾರು ತಿಳಿಯಬೇಕೆಂದು ಕುತೂಹಲವಾಯಿತು.”

ಕುಳಿತಿದ್ದ ಮುದ್ರೆಯನ್ನು ಬದಲಾಯಿಸಿ ಸರಸ್ವತಿ ಕುತ್ತಿಗೆಯ ಸಮೀಪ ಪಕ್ಕೆ ಒಂದು ದಿಂಬು ಕೊಟ್ಟುಕೊಂಡು, ಅರ್ಧ ಮಲಗಿರುವಂತೆ ಕಾಲು ಚಾಚಿ ಕುಳಿತುಕೊಂಡಳು. ಅವಳು ಈ ಭಂಗಿಯನ್ನವಲಂಬಿಸುವಾಗ ಎಡಸ್ತನದ ಮೇಲಿನಸೆರಗು ಅರ್ಧ ಜಾರಿತು. ಅದನ್ನು ಕಂಡರೂ ಕಾಣದವಳಂತೆ ಪೀತಾಂಬರ ನನ್ನೇ ದಿಟ್ಟಿಸುತ್ತ ಕುಳಿತಳು.

“ಇಷ್ಟು ದಿವಸವಾದರೂ ನೀವೆಲ್ಲಿರುವಿರೆಂದು ಹೇಳಿಯೇ ಇಲ್ಲ. ನಿಮ್ಮ ಮನೆ ನಮಗೆ ತೋರಿಸಬಾರದೇನು?”

“ಮನೆಯಿದ್ದರಲ್ಲವೇನಮ್ಮ ತೋರಿಸುವುದು, ನಾನಿನ್ನೂ ಮನೆ ಮಾಡಿಲ್ಲ. ಚಾಮರಾಜಪೇಟೆಯ ಒಂದು ಹೊಟೇಲಿನಲ್ಲಿ ರೂಮು ಮಾಡಿಕೊಂಡಿದ್ದೇನೆ.”

“ಮದುವೆ ಯಾವಾಗ ಮಾಡಿಕೊಳ್ಳುವಿರಿ?”

“ಗುರುಬಲ ಒದಗಿದಾಗ.”

“ಅದು ಯಾವಾಗ ಒದಗುತ್ತದೆ?”

“ಹೇಗೆ ಹೇಳಲಿ—ನಾನೇನು ಜ್ಯೋತಿಷಿಯೇ?”

ಅವನ ನಗೆಮಾತಿಗೆ ಸರಸ್ವತಿ ನಕ್ಕಳು.

“ನನಗೆ ಮದುವೆ ಮಾಡಿಸಲು ನೀವು ಕಾತರವಾಗಿರುವ ಹಾಗೆ ಕಾಣುತ್ತದೆ.”

“ಲೋಕಾಭಿರಾಮವಾಗಿ ಹೇಳಿದೆ. ನನಗೆ ತಿಳಿಸದೆ ನೀವು ಮದುವೆ ಮಾಡಿಕೊಳ್ಳುವಿರೇನು?”

“ಎಲ್ಲಿಯಾದರೂ ಉಂಟೇ? ನನ್ನ ಮದುವೆಯಲ್ಲಿ ನೀವೇ ಓಡಿಯಾಡಬೇಕು.”

" ಎಲ್ಲಾ ಹೀಗನ್ನುವವರೇ, ಮದುವೆಯ ಕಾಲಬಂದರೆ ನಮ್ಮ ನೆನಪೇ ಹಾರಿಹೋಗುತ್ತದೆ. "

" ನನ್ನ ಜ್ಞಾಪಕಶಕ್ತಿ ಅಷ್ಟು ದುರ್ಬಲವಾಗಿಲ್ಲ. "

" ಅದೇಕೆ ? "

" ಇದು ನನ್ನ ಮನೆಯೆಂಬ ಭಾವನೆ ಬಂದಿರುವುದರಿಂದ. "

" ಈ ಮನೆ ನಿಮ್ಮದಾದ ಮೇಲೆ ನಾವೂ ನಿಮ್ಮವರೇ. "

" ನಿಸ್ಸಂದೇಹವಾಗಿ. "

" ನಾನು ! "

" ನೀವೂ ನನ್ನವರೇ. "

ಸರಸ್ವತಿ ತೋಳು ಮುರಿಯುತ್ತಾ ಮೃದುವಾಗಿ

" ಇಲ್ಲಿಗೆ ಬನ್ನಿ " ಎಂದಳು.

ಪೀತಾಂಬರನ ಕಣ್ಣಿಗೆ ಕತ್ತಲೆ ಕವಿಯುತ್ತ ಬಂತು. ಅವನ ಕಣ್ಣುಗಳು ಸರಸ್ವತಿಯ ಕಡೆ ಹಾಯ್ದವು. ಅವಳ ಎದೆಯಮೇಲಿನ ಸೆರಗು ಉತ್ತರೀಯ ದಂತಾಗಿತ್ತು. ಮೈಯಳತೆಗಿಂತ ಸಣ್ಣದಾಗಿದ್ದ ಕುಪ್ಪಸದ ಎರಡು ಭಾಗಗಳು ಹಾಕಿದ್ದ ಗುಂಡಿಗಳನ್ನು ಎಳೆದಾಡುತ್ತಿದ್ದವು. ಎಡಸ್ತನ ಕುಪ್ಪಸದ ಬಿಗಿತದಿಂದ ತಪ್ಪಿಸಿಕೊಳ್ಳಲೆತ್ನಿಸುತ್ತಿತ್ತು. ಹೊರಗೆ ಹಣಿಕಿ ಹಾಕುತ್ತಿದ್ದ ಅದರ ಕೆಳಭಾಗ ಸ್ಪಷ್ಟವಾಗಿ ಕಾಣಬರುತ್ತಿತ್ತು.

ಪೀತಾಂಬರನನ್ನು ಎವೆಯಿಕ್ಕದೆ ಸರಸ್ವತಿಯ ಕಣ್ಣುಗಳು ನೋಡಿ ತಮ್ಮ ಬಳಿಗೆ ಎಳೆದುಕೊಳ್ಳುತ್ತಿದ್ದವು. ಅವನ ವಿಚಾರಶಕ್ತಿಗೆ ಪೂರ್ಣವಿರಾಮ ಸಿಕ್ಕಿದಂತಾಗಿತ್ತು. ತನ್ನ ಕುರ್ಚಿ ಬಿಟ್ಟೆದ್ದು ಸರಸ್ವತಿಯ ಮಂಚದ ಬಳಿ ಬಂದು ನಿಂತ.

" ಕುಳಿತುಕೊಳ್ಳಿ " ಎಂದಳು.

ಮಾಂತ್ರಿಕನ ಕೈಯಗೊಂಬೆಯಂತೆ ಪೀತಾಂಬರ ಅವಳ ಮಂಚದ ಬಳಿ ಕುಳಿತುಕೊಂಡ. ಸರಸ್ವತಿ ಅವನ ಬಲಗೈಯನ್ನು ತನ್ನ ಕೈಯಲ್ಲಿ ತೆಗೆದು ಕೊಂಡು ಅವನ ಬೆರಳುಗಳ ಮಧ್ಯೆ ತನ್ನ ಬೆರಳುಗಳನ್ನು ಜೋಡಿಸಿ ಅದುಮಿ

ದಳು. ಪೀತಾಂಬರನಲ್ಲಿ ವಿದ್ಯುದ್ಸಂಚಾರವಾದಂತಾಯಿತು. ಆ ಅನುಭವದಿಂದ ಅವನು ಚಕಿತನಾಗಿ ಭದ್ರಾಲಿಂಗನದಲ್ಲಿ ಸರಸ್ವತಿಯನ್ನು ಹಿಡಿದ. ಸರಸ್ವತಿ ಮೆಲ್ಲನೆದ್ದು ಕಿಟಕಿಯ ತೆರೆಯನ್ನು ಮುಂದಕ್ಕೆಳೆದಳು. ಗಾಢಾಲಿಂಗನ ಅವರನ್ನು ಒಂದುಗೂಡಿಸಿತು.

ಮುಖ ಮೇಲೆ ಮಾಡಿ ಅಂಗಾತನಾಗಿ ಮಲಗಿದ್ದ ಪೀತಾಂಬರನ ಮೇಲೆ ಸರಸ್ವತಿ ಮುತ್ತಿನ ಮಳೆ ಕರೆದಳು. ಅವನ ಕಣ್ಣುಗಳು, ಮೂಗು, ಕಿವಿಗಳು, ಕೆನ್ನೆಗಳಿಗೆ, ತುಟಿಗಳಿಗೆ ಮುದ್ದಿಟ್ಟಳು. ಅಲ್ಲಲ್ಲಿ ಮೆಲ್ಲನೆ ಕಚ್ಚಿದಳು. ಪೀತಾಂಬರನ ಬಾಹುಗಳು ಅವಳನ್ನು ಬಳಸಿ ತಬ್ಬಿಕೊಂಡವು. ಪೀತಾಂಬರನ ಮುಖಕ್ಕೆ ಮುಖವಿಟ್ಟು

"ನನ್ನನ್ನೇಕೆ 'ನೀವು' ಎನ್ನುವಿರಿ."

"ಇನ್ನೇನನ್ನಲಿ?"

"ನೀನು ಎನ್ನಿ—ಪ್ರೇಯಸಿ ಎನ್ನಿ."

"ಪ್ರೇಯಸಿ — ರಮಣಿ — ಪ್ರಿಯೆ — ಮೋಹನಾಂಗಿ—ರತಿ—ನನ್ನ ಸರಸ್ವತಿ."

"ರಮಣಾ—ರಮಣಾ, ಎಷ್ಟು ಬಯಸಿದೆ ನಿಮ್ಮನ್ನು."

"ಇಷ್ಟೇಕೆ ತಡಮಾಡಿದೆ?"

"ನೀವು ನನ್ನ ಮಕ್ಕಳ ಮೇಷ್ಟ್ರಲ್ಲವೇ?"

"ಅದಕ್ಕೂ ಇವಕ್ಕೂ ಏನು ಸಂಬಂಧ."

"ಮಕ್ಕಳ ಕಣ್ಣಿಗೇಕೆ ಬೀಳಬೇಕೆಂದು ಸುಮ್ಮನಿದ್ದೆ."

"ಸರಸ್ವತಿ, ಹೀಗೇಕೆ ಮಾಡಿದೆ?"

"ನಾನೇನು ಮಾಡಿದೆ?"

"ಏನೆಂದು ನೀನು ಬಲ್ಲೆ."

"ಆದ ಅನರ್ಥವೇನು?"

"ನನ್ನ ಮನಸ್ಸಿನಲ್ಲಿ ಇಷ್ಟು ಆಸೆ ಹುಟ್ಟಿಸಿ ನಿರಾಶೆ ಮಾಡುವೆಯಲ್ಲಾ?"

"ನಿರಾಶೆ ಏತಕ್ಕಾಗಬೇಕು."

" ಮಂಜಯ್ಯನವರು ಬರುವುದನ್ನು ನಾನು ಬಲ್ಲೆ. "

" ಅದು ಹೊಟ್ಟೆಯ ಪಾಡಿನ ವಿಷಯ. ನನಗೆ ಯಾವ ತೃಪ್ತಿಯೂ ಬೇಡವೇ ? ನನ್ನ ಜನ್ಮವೇ ನಿಸ್ವಾರ್ಥಕವಾಗಬೇಕೇ ? "

" ಈಗ ಸಾರ್ಥಕವಾಯಿತೇ ? "

" ನನ್ನನ್ನು ನೋಡಿದರೆ ತಿಳಿಯುವುದಿಲ್ಲವೇ — ಬಾಯಿಬಿಟ್ಟು ಹೇಳಬೇಕೇ ? "

" ನಮ್ಮ ಸ್ನೇಹ ಮುಂದುವರಿಯಲು ಸಾಧ್ಯವೇ ? "

" ಏಕೆ ಸಾಧ್ಯವಿಲ್ಲ. ನೀವು ಹೊಟೇಲಿನಲ್ಲಿ ಏಕಿರಬೇಕು. ಇಲ್ಲಿಯೇ ಬಂದು ಇದ್ದು ಬಿಡಿ. ಮಕ್ಕಳ ರೂಮು ಖಾಲಿ ಮಾಡಿಸಿಕೊಡುತ್ತೇನೆ. "

" ಕೇಳಿದವರಿಗೆ ಏನು ಹೇಳುತ್ತೀ ? "

" ಯಾರೋ ಬಾಡಿಗೆಗೆ ಇದ್ದಾರೆ ಎಂದು ಹೇಳುತ್ತೇನೆ. "

" ಬೇಡ—ಅದು ಇಲ್ಲಸಲ್ಲದ ತೊಂದರೆಗೆ ಪೀಠಿಕೆ ಹಾಕುತ್ತದೆ. "

" ಈಗ ನೀವು ರೂಮಿಗೆ ಹೋಗಬೇಕೇ ? "

" ಹೋಗಬೇಡವೇ ? "

" ನಾನು ಬೆಳಿಗ್ಗೆಯೇ ನಿಮ್ಮನ್ನು ಕಳಿಸುವುದು. "

" ಮಂಜಯ್ಯನವರು.... "

" ಯಾರೋ ನಂಟರು ಬಂದಿದ್ದಾರಂತೆ. ಅವರು ಇವತ್ತು ಬರುವುದಿಲ್ಲ. ಒಪ್ಪಿಗೆ ತಾನೆ. "

" ಕೇಳಬೇಕೇನು. ನಾನು ನಿನ್ನ ಬಂದಿ—ನಿನ್ನ ದಾಸ. "

" ಬಿಸಿಯಾಗಿ ಸ್ವಲ್ಪ ಅನ್ನ ಬೇಗ ಮಾಡಿಬಿಡುತ್ತೇನೆ. "

" ಮಧ್ಯಾಹ್ನದ ಅನ್ನವಿದೆಯಲ್ಲವೇ ? "

" ಇದೆ. "

" ಅದೇ ಸಾಕುಬಿಡು. ಸ್ವಲ್ಪ ಬಿಸಿಯಾಗಿ ಕಾಫಿ ಕೊಟ್ಟರೆ ಒಳ್ಳೆಯದು."

" ಹಾಗೇ ಆಗಲಿ. ಯಾರ ಕೈಯಲ್ಲಾದರೂ ಸ್ವಲ್ಪ ವೀಳೆಯದೆಲೆ ತರಿಸುತ್ತೇನೆ. "

ಸರಸ್ವತಿ ಏಳುವ ಪ್ರಯತ್ನ ಮಾಡಿದಳು. ಪೀತಾಂಬರನ ಬಾಹು ಅವಳನ್ನು ಬಂಧಿಸಿತ್ತು.

" ನಾನು ಏಳಲು ಬಿಡಿ. "

" ಏಳುವುದೇ ಬೇಡ—ಕಾಫಿಯೂ ಬೇಡ, ವೀಳೆಯದೆಲೆಯೂ ಬೇಡ. "

" ಮುಂದಿರುವ ರಾತ್ರಿಯೆಲ್ಲಾ ನಮ್ಮದೇ ಆಗಿದೆ. "

" ರಾತ್ರಿ ಸಾಲದು. ಕಣ್ಣು ಮುಚ್ಚಿ ತೆಗೆಯುವುದರೊಳಗಾಗಿ ಬೆಳಗಾಗಿ ಹೋಗಿಬಿಡುತ್ತದೆ. "

" ಬಿಡಿ—ನಾನು ಬೇಗ ಬಂದು ಬಿಡುತ್ತೇನೆ. "

ಎಂದು ಸರಸ್ವತಿ ಎದ್ದು ನಿಂತಳು.

ಪೀತಾಂಬರ ಮಲಗಿದ್ದ ಎಡೆಯಿಂದ ಅಲುಗಾಡಲಿಲ್ಲ. ಯಾವದೋ ಸಮ್ಮೋಹನಾಸ್ತ್ರ ಅವನನ್ನು ಬಂಧಿಸಿತ್ತು. ಸರಸ್ವತಿ ಕಾಫಿ ತಂದು ಅವನನ್ನು ಎಚ್ಚರಗೊಳಿಸಿದಳು.

ಬೆಳಗಿನ ತಂಗೂಳೇ ಪೀತಾಂಬರನಿಗೆ ಮೃಷ್ಟಾನ್ನವಾಯಿತು. ಸರಸ್ವತಿಯ ಸಂಗದಲ್ಲಿ ಬೆಳಕು ಹರಿದುದು ಅವನಿಗೆ ಕಾಣಬರಲೇ ಇಲ್ಲ.

ಬೆಳಿಗ್ಗೆ ಎದ್ದವನು ಹೊರಡಲನುವಾದ. ಸರಸ್ವತಿ ಕೇಳುವುದಕ್ಕೆ ಮುಂಚೆಯೇ

" ಮಧ್ಯಾನ್ಹ ಎರಡು ಗಂಟೆಗೆ ಬರುತ್ತೇನೆ " ಎಂದ.

" ಸ್ಕೂಲು. "

" ವಿರಾಮದವರೆಗೆ ಕೆಲಸಮಾಡಿ ಮಧ್ಯಾನ್ಹ ರಜಾ ತೆಗೆದುಕೊಂಡು ಬರುತ್ತೇನೆ. "

" ನಾನು ಕಾದಿರುತ್ತೇನೆ. "

ಪೀತಾಂಬರನ ಮುಖದಲ್ಲಿ ತೃಪ್ತಿಯ ನಗೆ ತೇಲಿತು.

೧೭

ಸರಸ್ವತಿಯ ಅಣ್ಣ ಮಂಜುಳಾ ಸುಧೆಯರನ್ನು ಕರೆತಂದು ಬಿಟ್ಟು ಊರಿಗೆ ಪ್ರಯಾಣಮಾಡಿದ. ಶಾಲೆಗಳಿಗೆ ಹೋಗಲು ವೇಳೆಯಾಗಿದ್ದುದರಿಂದ ಅವರು ಮನೆಯಲ್ಲಿಯೇ ನಿಂತರು.

ಶಾಲೆ ಮುಗಿಸಿಕೊಂಡು ಐದುಗಂಟೆಯ ವೇಳೆಗೆ ಬಂದ ಪೀತಾಂಬರ ಮಂಜುಳಾ, ಸುಧಾ ಊರಿಗೆ ಹಿಂದಿರುಗಿದ್ದುದನ್ನು ನೋಡಿ ಅಸಮಾಧಾನ ಗೊಂಡ. ಸಮಯ ಸಾಧಿಸಿ ಸರಸ್ವತಿ ಅವನನ್ನು ಒಂದು ಕಡೆಗೆ ಕರೆದು

"ರಾತ್ರಿ ಒಂಭತ್ತು ಗಂಟೆಗೆ ಬನ್ನಿ."

"ಮಕ್ಕಳು."

"ಅವರು ತಮ್ಮ ರೂಮಿಗೆ ಹೋಗಿರುತ್ತಾರೆ. ತಲೆಬಾಗಿಲು ಹಾಕಿರುತ್ತೇನೆ ಆದರೆ ಒಳಗೆ ಚಿಲುಕ ಹಾಕಿರುವುದಿಲ್ಲ. ದೀಪ ಆರಿಸಿರುತ್ತೇನೆ. ನೀವು ಒಳಗೆ ಬಂದು ಬಾಗಿಲು ಹಾಕಿಕೊಳ್ಳಿ. ನಾನು ರೂಮಿನಲ್ಲಿ ಕಾದಿರುತ್ತೇನೆ."

ರಾತ್ರಿ ಸರಸ್ವತಿ ಹೇಳಿದ ವೇಳೆಗೆ ಪೀತಾಂಬರ ಅವಳ ಮನೆಯಕಡೆ ತಿರುಗಲಿದ್ದಾಗ ಎದುರಿಗೆ ಮಂಜಯ್ಯ ಬಂದ. ಪೀತಾಂಬರ ರಸ್ತೆ ತಪ್ಪಿಸಿ ಬಳಸಿಕೊಂಡು ಬಂದು ಮೆಲ್ಲನೆ ಸರಸ್ವತಿಯಮನೆ ಸೇರಿಕೊಂಡ.

ಮಾರನೆಯ ದಿನ ಮಂಜುಳಾ, ಸುಧಾ ಊಟಮಾಡಿಕೊಂಡು ಶಾಲೆಗಳಿಗೆ ಹೋದರು. ಅವರು ಹೋದ ಸ್ವಲ್ಪ ಹೊತ್ತಿನೊಳಗಾಗಿ ನಂಜಪ್ಪನ ಸವಾರಿ ದಯಮಾಡಿಸಿತು.

ನಂಜಪ್ಪ ಮಾತನಾಡದೆ ಸರಸ್ವತಿಯ ರೂಮಿನಲ್ಲಿ ಕುಳಿತ. ಅವನು ಸಿಗರೇಟ್ ಸುಡುತ್ತಿದ್ದ ರೀತಿಯೇ ಅವನ ಮನಸ್ಸಿನ ಸ್ಥಿತಿಯನ್ನು ಎತ್ತಿ ತೋರಿಸುತ್ತಿತ್ತು.

ಸರಸ್ವತಿ ನಂಜಪ್ಪನ ಬಳಿ ಬಂದು ನಿಂತು ಅವನನ್ನು ಒಲಿಸುವ ಯತ್ನ ಮಾಡಿದಳು.

" ಮೂರು ದಿನದಿಂದ ನಾನು ರಾತ್ರಿ ಬಂದು ಬಂದು ಹೋಗುತ್ತಿದ್ದೇನೆ ಗೊತ್ತೋ? ಕಿಟಕಿಯ ತೆರೆ ನೋಡಿ ನೋಡಿ ನನ್ನ ಕಣ್ಣುಗಳಿಗೆ ನೋವಾಗಿದೆ."

" ನಾನೇನು ಮಾಡಲೀಂದ್ರಿ. ಅವರು ಮನೆಯವರನ್ನು ಊರಿಗೆ ಕಳಿಸಿಬಿಟ್ಟಿದ್ದಾರಂತೆ. ರಾತ್ರಿ ಏಳೂವರೆಗೆ ಬಂದರೆ ಬೆಳಿಗ್ಗೆ ಹೋಗುತ್ತಾರೆ."

" ನಾನು ಯಾವಾಗ ಬರುವುದು? ಮುತ್ತಮ್ಮನ ಮನೆಗೂ ನೀನು ಬರಲೊಲ್ಲೆ."

" ಅಲ್ಲಿಗಂತೂ ನಾನು ಖಂಡಿತ ಬರುವುದಿಲ್ಲ. ಬೆಳಿಗ್ಗೆ ಬಂದುಬಿಡಿ."

" ನನ್ನ ಅಂಗಡಿ ವ್ಯಾಪಾರದ ಗತಿ?"

" ನನಗಿಂತ ನಿಮ್ಮ ಅಂಗಡಿ ಹೆಚ್ಚೇ?"

" ಹೀಗೆ ಇನ್ನೆಷ್ಟು ದಿನ ನಡೆಯಬೇಕು."

" ಬಹಳ ದಿವಸವಿಲ್ಲ. ಅವರು ಮನೆಯವರನ್ನು ಬೇಗ ಕರೆಸಿಬಿಡುತ್ತಾರೆ."

" ನನ್ನ ನಿನ್ನ ಸಂಬಂಧ ಮಂಜಯ್ಯನ ಅನುಕೂಲ ಅವಲಂಬಿಸಿದೆ. ಇದರಿಂದ ನನಗೆಷ್ಟು ಹಿಂಸೆಯಾಗುತ್ತಿದೆಯೆಂಬುದರ ಕಲ್ಪನೆ ನಿನಗಿಲ್ಲ."

" ಎಲ್ಲರೂ ನನ್ನೇ ಆಕ್ಷೇಪಣೆ ಮಾಡಿದರೆ ನಾನು ನೇಣು ಹಾಕಿಕೊಂಡು ಪ್ರಾಣಬಿಡಲೇನು ಹೇಳಿ. ನನ್ನಿಂದಲ್ಲವೇ ನಿಮಗೆಲ್ಲಾ ಕಷ್ಟ."

" ಈಚೆಗೆ ಒರಟು ಮಾತಾಡುವುದೊಂದೇ ನಿನಗೆ ಬರುವುದು. ನಿನ್ನನ್ನೇಕೆ ಆಕ್ಷೇಪಿಸಲಿ. ನಿನ್ನ ಮೇಲೆ ವಿಶ್ವಾಸವಿಟ್ಟದ್ದು ನನ್ನ ತಪ್ಪು."

" ಹೋಗಲಿ—ನನ್ನ ಮರೆತುಬಿಡಿ."

" ನಿನ್ನನ್ನು ಮರೆಯಲು ಸಾಧ್ಯವಾಗಿದ್ದರೆ ಈ ನೋವು ಏತಕ್ಕೆ ಅನುಭವಿಸುತ್ತಿದ್ದೆ ಹೇಳು."

" ರಾಜೂ, ನನ್ನಿಂದ ನಿಮಗೆ ಎಳ್ಳಷ್ಟೂ ಸುಖವಿಲ್ಲ. ನಿಮ್ಮ ಒಳ್ಳೆಯದಕ್ಕೇ ನಾನು ಹೇಳುತ್ತೇನೆ. ನನ್ನನ್ನು ಬಿಟ್ಟುಬಿಡಿ."

" ನೀನು ಮಾಡಿದ ಆಣೆ ಪ್ರಮಾಣ."

" ನಾನು ನೀಚರಂಡೆ. ಮಾತಿಗೆ ತಪ್ಪಿದೆ. ರೌರವನರಕ ನನಗೆ ಕಾದಿದೆ. "

" ನಿನಗದು ಸ್ವರ್ಗವೇ. ಆ ಯಾತನೆ ಅನುಭವಿಸುವವನು ನಾನು. "

" ಹೌದು, ನೀವೊಬ್ಬರೇ ಮನುಷ್ಯರು. ನಾನೊಂದು ಕಲ್ಲುಗುಂಡು. "

" ನಿನ್ನ ಮನಸ್ಸಿನಲ್ಲೇನಿದೆ ಸ್ಪಷ್ಟವಾಗಿ ಹೇಳಿಬಿಡು. "

" ಹೇಳಿದೆನಲ್ಲಾ. ಬೆಳಿಗ್ಗೆ ಬನ್ನಿ " ಎಂದಳು.

' ಸರಿ ' ಎಂದುಕೊಂಡು ನಂಜಪ್ಪ ಅಲ್ಲಿಂದ ಎದ್ದುಹೋದ. ನಂಜಪ್ಪನಿಗೆ ಅಸಮಾಧಾನವಾಯಿತೆಂದು ಸರಸ್ವತಿ ದುಃಖಪಡಲಿಲ್ಲ.

ಅದೇ ಸಂಜೆ ಮಂಜುಳಾ ಬೇಗ ಮನೆಗೆ ಬಂದುದನ್ನು ನೋಡಿ ಸರಸ್ವತಿಗೆ ಆಶ್ಚರ್ಯವಾಯಿತು. ಮಂಜುಳಾ ಯಾರ ಕೈಯಲ್ಲಿಯೂ ಮಾತನಾಡಲಿಲ್ಲ. ಅವಳ ಮನಸ್ಸಿಗೆ ಬೇಸರವಾಗಿದ್ದುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಸುಧಾ ಅಕ್ಕನನ್ನು ಮಾತನಾಡಿಸುವ ಪ್ರಯತ್ನಮಾಡಿ ಛೀಮಾರಿ ಮಾಡಿಸಿಕೊಂಡಿದ್ದಳು. ಮಂಜುಳನ ಮನೋವೈಕಲ್ಯದ ಕಾರಣವನ್ನು ಊಹಿಸುವುದು ಸರಸ್ವತಿಗೆ ಕಷ್ಟವಾಗಲಿಲ್ಲ. ತನ್ನ ಪ್ರಯತ್ನ ಸಫಲತೆಯ ಹಾದಿ ಹಿಡಿದುದನ್ನು ಕಂಡು ಅವಳಿಗೆ ಸಂತೋಷವೇ ಅಯಿತು.

ರಾತ್ರಿಯ ವೇಳೆ ಸರಸ್ವತಿಯ ಶಯ್ಯಾಗೃಹದಲ್ಲಿ ನಂಜಪ್ಪನಿಗಿದ್ದ ಸ್ಥಾನಮಾನ ಪೀತಾಂಬರನಿಗೆ ಸೇರಿತು.

ಸರಸ್ವತಿ ಆಡಿದ ಕಟುಮಾತುಗಳಿಗೆ ನಂಜಪ್ಪನಿಗೆ ವಿಷಾದವಾಗಿದ್ದರೂ ಅವನು ಅವಳನ್ನು ಸಹಾನುಭೂತಿಯಿಂದ ನೋಡುವ ಪ್ರಯತ್ನ ಮಾಡಿದ. ' ಅದೂ ಹೆಣ್ಣು ಜೀವ. ಅವಳಿಗೂ ಕಷ್ಟಸುಖಗಳಿವೆ; ಜವಾಬ್ದಾರಿಗಳಿವೆ. ಮನೆಯಲ್ಲಿ ಬೆಳೆದ ಮಕ್ಕಳಿದ್ದಾರೆ. ಮಂಜಯ್ಯನ ಕಾಟವನ್ನು ಸಹಿಸಿಕೊಳ್ಳಬೇಕಾಗಿದೆ. ಅವನ ಕಾಟಕ್ಕೆ ಬೇಸತ್ತು ಅವಳ ಶಾಂತಿ ಕದಡಿಹೋಗುತ್ತದೆ. ನಾನು ಅವಳ ಮೇಲೆ ವೃಥಾ ಕೋಪಮಾಡಿಕೊಳ್ಳಬಾರದು ' ಎಂದು ತನಗೆ ತಾನೇ ಉಪದೇಶಮಾಡಿಕೊಂಡ.

ಮಾರನೆಯ ಬೆಳಿಗ್ಗೆ ನಂಜಪ್ಪ ಸರಸ್ವತಿಯ ಮನೆಗೆ ಹೋದಾಗ ಅವಳು

ಸುಪ್ರಸನ್ನಳಾಗಿದ್ದಳು. ಅವನೂ ಹಿಂದಿನ ದಿನದ ಕಟುಮಾತುಗಳನ್ನು ಮರೆತು ಪ್ರಸನ್ನನಾಗಿದ್ದ. ನಂಜಪ್ಪನನ್ನು ನೋಯಿಸಿದೆನಲ್ಲಾ ಎಂದು ಸರಸ್ವತಿಗೆ ವ್ಯಥೆಯೂ ಆಗಿತ್ತು. ಜತೆಗೆ ಪೀತಾಂಬರನ ಸಂಗಡ ರಾತ್ರಿ ಕಳೆದ ಸವಿನೆನಪು— ಮಧುರ ಅನುಭವ ಅವಳಿಗೆ ಹೊಸ ಚೈತನ್ಯವನ್ನಿತ್ತಿತ್ತು. ಸರಸ್ವತಿ ಮನಃ ಪೂರ್ವಕವಾಗಿ ನಂಜಪ್ಪನನ್ನು ಆದರಿಸಿದಳು. ಅವಳ ಮನೆಯ ತಲೆಬಾಗಿಲು ತೆಗೆದು ನಂಜಪ್ಪ ಹೊರಬಿದ್ದಾಗ ಹನ್ನೆರಡು ಗಂಟೆಯಾಗಿತ್ತು. ಮಂಜಯ್ಯ ಬಾಗಿಲಿನಲ್ಲಿಯೇ ಕಾದಿದ್ದ. ನಂಜಪ್ಪ ಅವನನ್ನೊಮ್ಮೆ ನೋಡಿ ಕತ್ತು ತಗ್ಗಿಸಿ ಕೊಂಡು ಹೊರಟುಹೋದ. ಮಂಜಯ್ಯ ನಂಜಪ್ಪನನ್ನು ದುರುಗಟ್ಟಿಕೊಂಡು ನೋಡಿ ಕಟಕಟನೆ ಹಲ್ಲುಕಡಿದ.

ಸರಸ್ವತಿ ಮಂಜಯ್ಯನಿಗೇನು ಹೇಳಬೇಕೆಂದು ತನ್ನ ವಿವರಣೆ ಸಿದ್ಧಮಾಡಿ ಕೊಳ್ಳುವುದರೊಳಗಾಗಿ ಅವನ ಬಿಗಿದ ಮುಷ್ಠಿ ಅವಳ ಕಪಾಲ ತಾಗಿತು. ಏಟನ್ನು ಅವಳು ನಿವಾರಿಸಿಕೊಳ್ಳುವುದರೊಳಗಾಗಿ ಮಂಜಯ್ಯ ಇನ್ನೊಂದು ಕಪಾಳಕ್ಕೆ ಬಿಗಿದ. ಅವನ ರಾಕ್ಷಸ ಹೊಡೆತ ತಾಳಲಾರದೆ ಸರಸ್ವತಿ ನೆಲದ ಮೇಲೆ ಕುಕ್ಕರಿಸಿದಳು. ಮಂಜಯ್ಯನಿಗೆ ಸಂಯಮ ಉಳಿದಿರಲಿಲ್ಲ. ಅವನ ಕಣ್ಣುಗಳು ಕೆಂಡಕಾರುತ್ತಿದ್ದವು. ಕೋಪೋದ್ದೀಪಿತನಾದ ಅವನ ತುಟಿಗಳು ಜೋತುಬಿದ್ದು ಅಲುಗಾಡುತ್ತಿದ್ದವು. ಉದ್ವೇಗದ ಭರದಲ್ಲಿ ಅವನ ಕೈಕಾಲು ನಡುಗುತ್ತಿದ್ದವು.

"ಅವನು ಯಾರು ಹೇಳು. ಸುಳ್ಳು ಹೇಳಿದರೆ ಇವತ್ತೇ ಕೊಂದು ಹಾಕಿ ಬಿಡುತ್ತೇನೆ."

"ನನ್ನನ್ನು ಹೊಡೆಯುವ ಅಧಿಕಾರ ನಿಮಗಿಲ್ಲ."

"ಅಧಿಕಾರ ಇಲ್ಲವೇ ?"

ಎಂದವನೇ ಮಂಜಯ್ಯ ಅವಳನ್ನು ಎಡಗಾಲಿನಿಂದ ಬಲವಾಗಿ ಒದೆದ. 'ಆಯ್ಯೋ' ಎಂದು ಸರಸ್ವತಿ ಚೀರಿದಳು.

"ಮನೆಹಾಳು ರಂಡೆ. ಒಟ್ಟಿಗೆ ಎಷ್ಟು ಮನೆ ನಾಶಮಾಡಬೇಕೆಂದು ಯೋಚನೆ ಮಾಡಿರುವೆ? ಅಣ್ಣ ಬಂದಿದ್ದಾನೆಂದು ಸುಳ್ಳು ಬೊಂಕುತ್ತಿದ್ದೆ

ಯಲ್ಲಾ—ಇವನೇ ನಿನ್ನಣ್ಣನೋ."

ಸರಸ್ವತಿಯ ಕಪಟನಾಟಕದ ರಹಸ್ಯವನ್ನರಿಯಬೇಕೆಂಬ ನಿರ್ಧಾರದಿಂದ ಮಂಜಯ್ಯ ಅವಳ ಮುಂದೆ ಕುಳಿತು

"ಬದುಕುವ ಆಸೆಯಿದ್ದರೆ ನಿಜ ಹೇಳು."

"ಏನು ಹೇಳಲಿ. ನನ್ನ ಮಾತು ನಂಬುವ ಹಾಗಿದ್ದರೆ ಹೇಳಬಹುದು."

"ಎಷ್ಟು ದಿವಸದಿಂದ ಈ ನಾಟಕವಾಡುತ್ತಿರುವೆ ?"

"ನಾನೇನು ಮಾಡಿದೇಂದ್ರಿ ?"

"ನಿನ್ನ ಅಂದ್ರೆ ಪಂದ್ರೆ ನಿಲ್ಲಿಸಿಬಿಡು. ಏನು ಮಾಡಿದೆಯೆಂದು ಕೇಳು ವುದಕ್ಕೆ ಬಾಯಿ ಬರುವುದೇನು ! ನಿನ್ನ ಜನ್ಮಕ್ಕೆ ಬೆಂಕಿ ಹಾಕಬೇಕು. ನೀನು ಮನುಷ್ಯಳೇ—ನೀನೊಂದು ಹೆಣ್ಣುನಾಯಿ—ನಿನಗೆ ಕ್ರಿಯೆಯಿದೆಯೇ, ದಯೆ ಯಿದೆಯೇ, ಧರ್ಮ ನೀತಿ ಇದೆಯೇ ? ನಿನ್ನ ಮನೆ ಉಳಿಯಲೆಂದು, ನಿರಪ ರಾಧಿಗಳಾದ ನಿನ್ನ ಮಕ್ಕಳು ಬೀದಿಯ ಬಸವಿಯರಾಗದಿರಲೆಂದು ನಾನು ಶಕ್ತಿ ಮೀರಿ ಪ್ರಯತ್ನಿಸಿದೆ. ನಿನಗೆ ನಾನು ಏತಕ್ಕೆ ಕಡಿಮೆಮಾಡಿದೆ ಹೇಳು ? ಯಾವ ಎಂಜಲ ಆಸೆಗೆ ಕಂಡವರ ಸ್ನೇಹಮಾಡಿದೆ."

"ನಾನು ಸತ್ಯವಾಗಿ ಅವರ ಸ್ನೇಹ ಮಾಡಿಲ್ಲಾಂದ್ರಿ."

"ಸತ್ಯ ಒಂದು ಕೇಡು ನಿನಗೆ. ದನ ತಿನ್ನುವವರು ಗೊಬ್ಬರದ ಆಣೆ ಇಟ್ಟಹಾಗೆ. ದೇವರ ಮುಂದೆ ಪ್ರಮಾಣ ಮಾಡಿದೆ—ನಿನ್ನ ಮಕ್ಕಳನ್ನು ಮುಟ್ಟಿ ಪ್ರಮಾಣ ಮಾಡಿದೆ. ಹೀಗೆ ಬಾವುಟ ಹಾರಿಸಿಕೊಂಡು, ಮೈ ಬಾಡಿಗೆಗೆ ಒಪ್ಪಿಸಿಕೊಂಡು ಬಾಳ್ವೆ ಮಾಡುವುದೇ ನಿನಗೆ ಪ್ರಿಯವಾಗಿದ್ದರೆ ನನ್ನಲ್ಲಿ ಸ್ಪಷ್ಟ ವಾಗಿ ಹೇಳಬೇಕಾಗಿತ್ತು."

"ನೀವು ತಿಳಿದುಕೊಂಡಿರುವುದೆಲ್ಲಾ ಶುದ್ಧ ತಪ್ಪು. ಅವರು ನನ್ನ ಅಣ್ಣ ತಮ್ಮ ಇದ್ದ ಹಾಗಿದ್ದಾರೆಯೇ ಹೊರತೂ ಬೇರೆಯಲ್ಲ. ನನ್ನ ಯಜಮಾನರಿಗೂ ಅವರಿಗೂ ತುಂಬ ಸ್ನೇಹ."

"ನಿಮ್ಮಣ್ಣ ಬಂದರೆ ಎರಡುಗಂಟೆಯ ಕಾಲ ಮನೆಯ ಬಾಗಿಲು ಹಾಕಿ ಕೊಂಡು ಮಲಗುವ ಮನೆಯಲ್ಲಿ ಕೂರಿಸಿಕೊಂಡು ಮಾತನಾಡಿಸುವೆಯೇನು ?"

" ಪುಂಡು ಕೋತಿಗಳು ಒಳಗೆನುಗ್ಗಿ ಮಾಡಿದ ಅಡಿಗೆ ಹೊತ್ತುಕೊಂಡು ಹೋಗುತ್ತವೆಂದು ಬಾಗಿಲು ಹಾಕಿದೆ. "

" ಹೌದು ! ನಿನ್ನ ಮನೆಯಲ್ಲಿ ಪುಂಡು ಕೋತಿಗಳ ಹಾವಳಿ ಹೆಚ್ಚಾಯಿತು. "

" ನೀವು ಕೋಪವನ್ನು ಬಿಡುವುದಿಲ್ಲವೇ ? "

" ಕೊನೆಗೂ ನಿನ್ನ ಬಾಯಲ್ಲಿ ಸತ್ಯ ಹೊರಡುವುದಿಲ್ಲ. "

" ಇಲ್ಲದ್ದನ್ನು ನಾನು ಹೇಗೆ ಒಪ್ಪಿಕೊಳ್ಳಲಿ. "

" ನಿನ್ನಿಷ್ಟ—ಎತ್ತಲಾಗಿಯಾದರೂ ಹಾಳಾಗಿ ಹೋಗು. ಇಂದೇ ನಮ್ಮ ಋಣಾನುಬಂಧ ತೀರಿತೆಂದು ತಿಳಿದುಕೋ. ಇಲ್ಲಿ ನೋಡು—ನಿನ್ನ ಮಗಳ ಮದುವೆಗೆಂದು ಸಾವಿರ ರೂಪಾಯಿ ಕೊಡಲು ತಂದಿದ್ದೆ. ನಿನಗಿನ್ನು ನನ್ನ ಆವಶ್ಯಕತೆಯೂ ಇಲ್ಲ—ನನ್ನ ಹಣದ ಆವಶ್ಯಕತೆಯೂ ಇಲ್ಲ. ಈಗ ಹೋದನಲ್ಲಾ ಅವನೇ ಎಲ್ಲಾ ಒದಗಿಸುತ್ತಾನೆ. "

ಸರಸ್ವತಿ ಎದ್ದು ಮಂಜಯ್ಯನನ್ನು ಮುಟ್ಟಿ ಸಮಾಧಾನಪಡಿಸಲೆತ್ನಿಸಿದಳು. ಮಂಜಯ್ಯ ಅವಳನ್ನು ದೂರತಳ್ಳಿ

" ನೀನು ಶುದ್ಧ ಹೊಲತಿ. ನನ್ನ ಮುಟ್ಟಬೇಡ. "

" ನನ್ನದು ತಪ್ಪಾಯಿತೂಂದ್ರೆ. ತಿಳಿಯದೆ ಮಾಡಿದ ಅಪರಾಧವನ್ನು ಇದೊಂದು ಸಲ ಕ್ಷಮಿಸಿಬಿಡಿ. "

" ನೀನು ನಾಯಿ. ನಿನ್ನನ್ನು ತಿಪ್ಪೆಯ ಮೇಲೆ ಕೂಡಿಸಬೇಕಲ್ಲದೆ ಸಿಂಹಾಸನದ ಮೇಲೆ ಕೂಡಿಸಿದರೆ ತಪ್ಪು ನಮ್ಮದಾಗುತ್ತದೆ " ಎಂದೆದ್ದು ನಿಂತ.

ಅವನು ಹೊರಗೆ ಹೋಗದಂತೆ ಸರಸ್ವತಿ ಬಾಗಿಲಿಗೆ ಅಡ್ಡನಿಂತಳು. ಮಂಜಯ್ಯ ಅವಳನ್ನು ಒಂದೆಡೆಗೆ ತಳ್ಳಿದ. ಸರಸ್ವತಿ ದೈನ್ಯದಿಂದ

" ಇದೇ ಕೊನೆಯೋ—ನೀವು ಪುನಃ ಇಲ್ಲಿಗೆ ಬರುವುದಿಲ್ಲವೇ ? "

" ಬರಬೇಕಾದ ಅಗತ್ಯ ಕಾಣಲಿಲ್ಲ. "

" ಕೋಪ ಬಿಟ್ಟುಬಿಡಿ. ನೀವು ಏನು ಹೇಳಿದರೂ ಮಾಡಲು ಸಿದ್ಧಳಾಗಿದ್ದೇನೆ. ನನ್ನ ಮಕ್ಕಳಾಣೆಗೂ ನಾನು ಮಾತಿಗೆ ತಪ್ಪುವುದಿಲ್ಲ. "

ಮಂಜಯ್ಯನ ಕೋಪ ಮಿತಿಮೀರಿತು. ಅವಳು ಮುಕ್ಕಳಾಣೆ ಇಟ್ಟದ್ದು ಅವನಿಗೆ ಅಸಹನೀಯವಾಯಿತು. ಅವಳನ್ನು ಹೊಡೆಯಲು ಕೈಯೆತ್ತಿದ. ಯಾವುದೋ ಯೋಚನೆ ಹೊಳೆದು 'ಛೆ!' ಎಂದುಕೊಂಡು ಕೈಯಿಳುಹಿ ಅಲ್ಲಿಂದ ಹೊರಟುಬಿಟ್ಟ. ಸರಸ್ವತಿ ಅವನನ್ನು ಹಿಂಬಾಲಿಸಲು ಪ್ರಯತ್ನಿಸಿ ವಿಫಲಳಾದಳು.

೧೮

ಅಂಗಡಿಗೆ ಹೋಗಿ ಕುಳಿತರೂ ನಂಜಪ್ಪನ ಮನಸ್ಸು ಸರಸ್ವತಿಯ ಮನೆ ಬಿಟ್ಟಿರಲಿಲ್ಲ. ಬಾಗಿಲಿನಲ್ಲಿಯೇ ತನ್ನನ್ನು ಕಂಡ ಮಂಜಯ್ಯ ಇಂದು ಏನಾದರೂ ರಾಮಾಯಣ ಮಾಡಿಯೇ ಇರುತ್ತಾನೆಂದು ಅವನಿಗೆ ಖಚಿತವಾಗಿತ್ತು. ನನಗಾಗಿ ಸರಸ್ವತಿ ಏನೇನು ಅನುಭವಿಸುತ್ತಾಳೋ ಎಂದು ಅವನ ಮನಸ್ಸು ದುಗುಡ ತಳೆಯಿತು. ಅಂಗಡಿಯಲ್ಲಿ ಸ್ವಲ್ಪ ಹೊತ್ತಿದ್ದ ಶಾಸ್ತ್ರಮಾಡಿ ಸರಸ್ವತಿಯ ಮನೆಯ ಕಡೆ ಹೊರಟ.

ಸರಸ್ವತಿಗೆ ಊಟವೂ ಬೇಡವಾಗಿತ್ತು. ಕಂಬನಿಗರೆಯುತ್ತ ಹೋಗಿ ಹಾಸಿಗೆಯ ಮೇಲೆ ಪವಡಿಸಿದಳು. ದವಡೆ ನೋಯುತ್ತಿದ್ದಿತು. ಕೆನ್ನೆಗಳೆರಡು ಬಾತುಕೊಂಡಿದ್ದವು. ಎಡಗೆನ್ನೆಯ ಮೇಲೆ ಮಂಜಯ್ಯನ ದಪ್ಪ ಬೆರಳಿನ ಗುರುತು ಸ್ಪಷ್ಟವಾಗಿ ಮೂಡಿತ್ತು. ಅವನ ಒದೆತಕ್ಕೆ ಸಿಕ್ಕಿದ ಅವಳ ಪಕ್ಕೆ ನೋಯುತ್ತಿದ್ದಿತು.

ಮಂಜಯ್ಯನ ಏಟನಿಂದಾದ ನೋವಿಗಿಂತ, ಅವನ ಮಾತಿನ ಚಾಟಿಯ ಪೆಟ್ಟು, ಅವಳನ್ನು ಹೆಚ್ಚಾಗಿ ಘಾತಿಸಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಅವನು ಹೇಳಿದ ' ನಿನ್ನ ಮಗಳ ಮದುವೆಗೆಂದು ಸಾವಿರ ರೂಪಾಯಿ ಕೊಡಲು ತಂದಿದ್ದೆ. ನಿನಗಿನ್ನು ನನ್ನ ಅವಶ್ಯಕತೆಯೂ ಇಲ್ಲ—ನನ್ನ ಹಣದ ಅವಶ್ಯಕತೆಯೂ ಇಲ್ಲ' ಎಂಬ ಶಾಸನ ಅವಳ ಕರುಳನ್ನು ಹಿಂಡಿತ್ತು. ದೋಷವನ್ನು ನಂಜಪ್ಪನ ಮೇಲೆ ಹಾಕಿ ತಾನು ಪಾರಾಗಲು ಪ್ರಯತ್ನಿಸಿದಳು. ' ಇವರು ಯಾರು ನನ್ನನ್ನು ಹೊಡೆಯುವುದಕ್ಕೆ. ನನಗೆ ತಾಳಿ ಕಟ್ಟಿದ್ದಾರೆಯೇ ' ಎನ್ನುವ ಮೂಢ ವಾದ ಅವಳಿಗೆ ಸ್ವಲ್ಪ ಸಮಾಧಾನವನ್ನು ತಂದುಕೊಟ್ಟಿತು.

ನಂಜಪ್ಪ ಸರಸ್ವತಿಯ ಮನೆ ಪ್ರವೇಶಿಸಿದ. ಗೂಬೆಹೊಕ್ಕ ಮನೆಯಂತೆ ಅದು ಏಕೋ ಏನೋ ಹಾಳು ಹಾಳು ಬಡಿಯುತ್ತಿತ್ತು. ಗಡಿಯಾರದ ಟಿಕ್ ಟಿಕ್ ಶಬ್ದದ ಜತೆಗೆ ಸರಸ್ವತಿಯ ಬಿಕ್ಕಳಿಕೆಯ ಶಬ್ದ ಕೇಳಿಬರುತ್ತಿತ್ತು.

ನಂಜಪ್ಪ ಸರಸ್ವತಿಯ ಮಂಚದ ಬಳಿಗೆ ಹೋಗಿ ಅವಳ ಮುಸುಕೆಳೆದು ನೋಡಿದ. ಮುಖವೆಲ್ಲಾ ಊದಿಕೊಂಡಿತ್ತು. ಕಣ್ಣುಗಳು ತುಂಬಿಕೊಂಡಿದ್ದವು.

"ಅವನು ನಿನ್ನನ್ನು ಹೊಡೆದನೇ ಸರಸಾ."

ಸರಸ್ವತಿ ಬಿಕ್ಕಿಬಿಕ್ಕಿ ಅತ್ತಳು.

"ನಿನ್ನ ಮೇಲೆ ಕೈ ಮಾಡುವಷ್ಟು ಆ ಹೊಟೇಲ್‌ನವನಿಗೆ ಧೈರ್ಯ ಬಂತೇ?"

"ನೀವು ಸುಮ್ಮನೆ ನನ್ನನ್ನು ಆಕ್ಷೇಪಿಸುತ್ತಿದ್ದಿರಿ."

"ಹೆಂಗಸಿನ ಮೇಲೆ ಕೈ ಮಾಡುವವನವನು ಎಂಥ ಗಂಡಸು."

"ಇವತ್ತು ನನ್ನ ಪ್ರಾಣ ಉಳಿದುದೇ ಹೆಚ್ಚು."

ಎಂದು ಮಂಜಯ್ಯ ವಿಧಿಸಿದ ಶಿಕ್ಷೆಯನ್ನು ಕೂಲಂಕಷವಾಗಿ, ಬಣ್ಣವೇರಿಸಿ ವರ್ಣಿಸಿದಳು.

ನಂಜಪ್ಪನ ಹೊಟ್ಟೆಯಲ್ಲಿ ತಳಮಳವಾಯಿತು.

"ನನ್ನನ್ನು ಹೊಡೆದುದಕ್ಕೆ ನಾನು ಯೋಚಿಸುವುದಿಲ್ಲಾಂದ್ರೆ. ನಿಮ್ಮನ್ನು ಏನು ಮಾಡಿಬಿಡುತ್ತಾರೋ ಎಂದು ಭಯವಾಗಿದೆ."

"ನನ್ನೇನು ಮಾಡಬಲ್ಲ."

"ಈ ಮನೆಗೆ ನೀವು ಹೇಗೆ ಕಾಲಿಡುತ್ತೀರೋ ನೋಡುತ್ತೇನೆಂದು ಹೆದರಿಕೆ ಹಾಕಿದ್ದಾರೆ. ರಸ್ತೆಯಲ್ಲಿ ನಿಮ್ಮನ್ನು ನಿಲ್ಲಿಸಿ ಅಪಮಾನಗೊಳಿಸಿ ಹೊಡೆಸುತ್ತಾರಂತೆ. ನಾನು ಬೀದಿಯಲ್ಲಿ ಹೋದರೆ ಪುಂಡರನ್ನು ಬಿಟ್ಟು ಅವಮಾನ ಮಾಡಿಸುತ್ತಾರಂತೆ. ನಾವಿಬ್ಬರೂ ಬೀದಿಯಲ್ಲಿ ತಲೆಯೆತ್ತಿಕೊಂಡು ತಿರುಗದ ಹಾಗೆ ಮಾಡುತ್ತಾರಂತೆ."

"ನಾನು ಕೈಗೆ ಬಳೆ ತೊಟ್ಟುಕೊಂಡಿದ್ದೇನೆಂದು ಭಾವಿಸಿದನೇನು ಆ ಭಡವಾ. ಅವನ ಚರ್ಮ ಸುಲಿಸಿ, ನಡುಬೀದಿಯಲ್ಲಿ ಎಲೆಕ್ಟ್ರಿಕ್ ಕಂಬಕ್ಕೆ ನೇಣು ಬಿಗಿಸಿಬಿಡಬಲ್ಲೆ. ಅನ್ನ ಮಾರಿಕೊಂಡು ಬದುಕುವ ಪರದೇಶಿ ಇಷ್ಟು ಬಲಿಷ್ಠನಾದನೇನು?"

"ನೀವು ಒಂದೆರಡು ತಿಂಗಳು ಈ ಊರು ಬಿಟ್ಟುಬಿಡಿಯುಂದ್ರೆ?"

"ನಾನೇಕೆ ಊರು ಬಿಡಬೇಕು."

"ನನಗೆ ತುಂಬ ಭಯವಾಗುತ್ತಿದೆ. ಅವರು ನಿಮಗೆ ಏನಾದರೂ ಮಾಡಿಸಿದರೆ."

"ನಾನು ಕೈಯಲ್ಲಾಗದ ದುರ್ಬಲನೆಂದು ತಿಳಿದುಕೊಂಡಿರುವೆಯಾ ಸರಸಾ? ಮೂರೇ ದಿವಸಗಳಲ್ಲಿ ಮಂಜಯ್ಯನನ್ನು ಈ ಊರಿನಿಂದಾಚೆಗೆ ಕಳುಹಿಸಬಲ್ಲೆ."

"ನಾನಾದರೂ ಊರುಬಿಟ್ಟು ಹೋಗುತ್ತೇನೆ."

"ನೀನು ಏಕೆ ಹೋಗಬೇಕು."

"ಯಾವ ಹೊತ್ತಿನಲ್ಲಿ ಅವರು ಏನು ಮಾಡುವರೋ?"

"ನೀನು ನಿಶ್ಚಿಂತಳಾಗಿರು. ನಾನು ನಿನ್ನ ಯೋಗಕ್ಷೇಮ ನೋಡಿಕೊಳ್ಳುತ್ತೇನೆ."

"ಏನು ಮಾಡುವಿರಿ?"

"ಅದನ್ನೀಗ ಹೇಳುವುದಿಲ್ಲ, ಕಾಲಕ್ರಮೇಣ ನಿನಗೇ ಗೊತ್ತಾಗುತ್ತದೆ."

"ದುಂಡಾವರ್ತಿಗೆ ಹೋಗಬೇಡಿ."

ನಂಜಪ್ಪ ಅವಳ ಬುದ್ಧಿವಾದಕ್ಕೆ ಗಮನ ಕೊಡಲಿಲ್ಲ. ಅವನ ಮನಸ್ಸಿನಲ್ಲಿ ಪ್ರತೀಕಾರದ ಬೆಂಕಿ ಹೊಗೆಯಾಡತೊಡಗಿತು.

ಮಂಜಯ್ಯ ಸಾವಕಾಶವಾಗಿ ಕುಳಿತು ನಡೆದುಹೋದ ಎಲ್ಲ ವಿದ್ಯಮಾನಗಳನ್ನು ಸ್ಮೃತಿಪಥಕ್ಕೆ ತಂದುಕೊಂಡ. ಸರಸ್ವತಿಯ ಮನೆಗೆ ತಾನು ಮೊದಲನೆಯ ಸಾರಿಗೆ, ಹಣ ವಸೂಲಿಗೆ ಹೋದ ದಿನದಿಂದ ಅಂದಿನವರೆಗಾದ ಘಟನಾವಳಿಯನ್ನು ನೆನಪುಮಾಡಿಕೊಂಡ. ಅವಳು ತೋರಿಸುತ್ತಿದ್ದ ಭಕ್ತಿ, ವಿಶ್ವಾಸ—ಅವಳು ಪ್ರಮಾಣಪೂರ್ವಕವಾಗಿ ಹೇಳುತ್ತಿದ್ದ ಮಾತುಗಳು—ಅವಳೂ ಅವಳ ಮಕ್ಕಳೂ ಋಜು ಜೀವನ ನಡೆಸುವುದಕ್ಕೆ ತಾನು ಮಾಡಿದ ಪ್ರಯತ್ನ ಎಲ್ಲವೂ ದೃಶ್ಯದೃಶ್ಯವಾಗಿ ಅವನ ಚಿತ್ತಪಟಲದ ಮೇಲೆ ಸುಳಿದವು. ಮಂಜಯ್ಯನ ಮನಸ್ಸು ಮಮ್ಮಲ ಮರುಗಿತು. ಹೆಂಗಸನ್ನು ಹೊಡೆದೆನಲ್ಲಾ ಎಂಬ ವಿಷಾದವೂ ಅವನನ್ನು ಕಾಡುತ್ತಿತ್ತು. 'ನಾನು ಅವಳನ್ನು ಕೇವಲ ಕಾಮದೃಷ್ಟಿಯಿಂದ

ನೋಡುತ್ತಿದ್ದೆನೇ ?'—' ಕಾಮದೃಷ್ಟಿಯಿರಲಿಲ್ಲವೆಂದರೆ ಅಸತ್ಯವಾಗುತ್ತದೆ. ಆದರೆ ಅದಕ್ಕೂ ಹೆಚ್ಚಾಗಿ ಅವಳ ಮಕ್ಕಳ ಬಾಳು ನೇರವಾಗಬೇಕೆಂಬ ಆಕಾಂಕ್ಷೆಯಲ್ಲವೇ ಅವಳ ಮೇಲಣ ಅನುರಾಗಕ್ಕೆ ಪ್ರೋಷಕವಾದುದು. ಒಂದು ಸಂಸಾರ ನನ್ನಿಂದ ಉಳಿಯಲಿ ಎಂದಲ್ಲವೇ ನಾನು ಆಶಿಸಿದುದು. ನಾನು ಅವಳಿಗೇತಕ್ಕೆ ಕಡಿಮೆಮಾಡಿದ್ದೆ. ಮದುವೆಯ ಖರ್ಚು ವಹಿಸಲು ಸಿದ್ಧವಾಗಿದ್ದೆ—ಮನೆ ಕಟ್ಟಿಸಿಕೊಡಲು ಸಿದ್ಧವಾಗಿದ್ದೆ. ಕೊನೆಗೂ ನನ್ನನ್ನು ವಂಚಿಸಿಬಿಟ್ಟಳಲ್ಲಾ.—ಈ ಜಗತ್ತಿನಲ್ಲಿ ಯಾರನ್ನು ನಂಬುವುದು—ನಗೆಯ ಹಿಂದೆ ಹಾವಿನ ಹಲ್ಲು, ಮೃದುನುಡಿಯ ಹಿಂದೆ ಹುಲಿಯ ಬಾಯಿ, ಒಲವಿನ ಹಿಂದೆ ಬ್ರಹ್ಮರಾಕ್ಷಸ ಮನುಷ್ಯನನ್ನು ಕಬಳಿಸಲು ನಿಂತಿರುತ್ತದೆ. ಲೋಕದಲ್ಲಿ ಸತ್ಯವಿದೆಯೇ, ಧರ್ಮವಿದೆಯೇ, ನ್ಯಾಯವಿದೆಯೇ ? ಇಂದಿನ ಜೀವನದಲ್ಲಿ ಕೃತಜ್ಞತೆಗೆ ಸ್ಥಾನವಿದೆಯೇ? ಈ ಲೋಕದಲ್ಲಿಂದು ಮನುಷ್ಯರು ಬಾಳುವೆ ಮಾಡುತ್ತಿಲ್ಲ—ಇದೇ ಪ್ರತ್ಯಕ್ಷ ನರಕ. ಇದು ಪಿಶಾಚಿಗಳ ತೌರುಮನೆ.'

ಮಂಜಯ್ಯನ ಮನಸ್ಸು ರೋಸಿಹೋಗಿದ್ದರೂ, ಸರಸ್ವತಿಯನ್ನು ಸಂಪೂರ್ಣವಾಗಿ ಮರೆತುಬಿಡಬೇಕೆಂದು ಅವನು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ರಾಗ, ದ್ವೇಷಗಳ ರಣಭೂಮಿಯಾಗಿತ್ತು ಅವನ ಮನಸ್ಸು. 'ನನ್ನ ವಿಶ್ವಾಸವನ್ನು ಕಾಲಿನಲ್ಲಿ ತುಳಿದು ನನ್ನ ಶಾಂತಿಯನ್ನು ನಾಶಮಾಡಿಬಿಟ್ಟಳವಳು. ಇವಳ ವಿನಾಶಕೃತ್ಯ ತಡೆಗಟ್ಟಬೇಕು.... ಪುಡಿಗುಟ್ಟಬೇಕು. ನನ್ನ ಬಾಳಿನ ಮೇಲೆ ಇವಳು ರುದ್ರನಾಟ್ಯವಾಡಿದಂತೆ ಇತರರ ಬಾಳಿನಮೇಲೆ ಪ್ರಭಾವ ಬೀರಲು ಅವಕಾಶ ಕೊಡಬಾರದು' ಎಂದು ನಿರ್ಧರಿಸಿಕೊಂಡ.

ಮಂಜಯ್ಯನಿಗೆ ತಕ್ಷಣ ಒಂದು ಯೋಚನೆ ಹೊಳೆಯಿತು. ತನ್ನ ನಂಬಿಕೆಯಾಳು ಗಣೇಶನನ್ನು ಕರೆದು,

"ಗಣೇಶ ನಿನಗೊಂದು ಗೋಪ್ಯಕೆಲಸ ವಿಧಿಸುತ್ತೇನೆ. ವಿಷಯ ನಮ್ಮಿಬ್ಬರಲ್ಲಿಯೇ ಇರಬೇಕು. ಯಾರಲ್ಲಿಯಾದರೂ ಬಾಯಿಬಿಟ್ಟರೆ ನಿನ್ನ ಮೂಳೆ ಮುರಿದುಬಿಡುತ್ತೇನೆ."

"ಹೇಳಿ ನೋಡಿ. ನಾನು ನಿಮ್ಮ ಮಾತು ಮೀರುತ್ತೇನೆಯೇ ?"

" ಮಾವಳ್ಳಿ ಮನೆ ಗುರುತಿದೆಯಲ್ಲವೇ ? "

" ಸರಸ್ವತಮ್ಮನೋರದು ? "

" ಹೂ. ಹೊಟೇಲ್ ಕೆಲಸದಿಂದ ನಿನಗೆ ರಜಾ ಕೊಟ್ಟಿದ್ದೇನೆ. ನೀನು ಅವಳ ಕಣ್ಣಿಗೆ ಬೀಳದಂತೆ ಹೊಂಚುಕಾದು ಅವಳ ಮನೆಗೆ ಯಾರು ಬರುತ್ತಾರೆ, ಯಾರು ಹೋಗುತ್ತಾರೆ ತಿಳಿದು ಬರಬೇಕು. ರಾತ್ರಿ ಹಗಲೂ ಇದೇ ಕೆಲಸ ಮಾಡು. ನಿನ್ನ ಸಂಬಳವನ್ನು ಹೆಚ್ಚು ಮಾಡುತ್ತೇನೆ—ಕೈತುಂಬ ಕಾಸೂ ಕೊಡುತ್ತೇನೆ. "

" ಹಂಗೆ ಆಗ್ಲಿ ಸೋಮಿ. "

" ಅವಳ ಮನೆಗೆ ಬರುವವರ ಗುರುತು ಚೆನ್ನಾಗಿ ತಿಳಿದುಕೊಳ್ಳಬೇಕು. ಅವರ ಮನೆಯೆಲ್ಲಿಯೆಂಬುದನ್ನೂ ವಿಚಾರಿಸಿಕೊಳ್ಳಬೇಕು. "

" ನಿಮಗೆ ಎಲ್ಲಾ ಸುದ್ದಿ ತಂದು ಮುಟ್ಟಿಸ್ತೇನೆ ಸೋಮಿ. "

ಮಂಜಯ್ಯ ಗಣೇಶನ ಅನ್ವೇಷಣೆಯ ಫಲ ಕಾಯುತ್ತಾ ಕುಳಿತ.

ನಂಜಪ್ಪ ಕುಮಾರನನ್ನಟ್ಟಿ ಗರಡಿ ರಂಗಪ್ಪನನ್ನು ' ನಾಟ್ಯಶಾಲೆ 'ಗೆ ಬರಮಾಡಿಕೊಂಡ.

" ಏನಣ್ಣಾ ಬರಮಾಡಿದೆಯಂತೆ. ಅಂಗಡಿ ತಾಕ್ಕೆ ಬಂದಿದ್ದೆ. "

" ಬಂದಿದ್ದೆಯಂತೆ —ನಾಗಣ್ಣ ಹೇಳಿದ. "

" ಹನುಮಜ್ಜಯಂತೀಗೆ ನಿನ್ನ ಚಂದಾ ಬರ್ಲಿಲ್ಲಣ್ಣ. "

" ಎಷ್ಟು ಕೊಡಬೇಕು ರಂಗಪ್ಪ. "

" ಹೂವಿನ ಪಲ್ಲಕ್ಕಿ ಮಾಡಿಸ್ಬೇಕು. ನೀನು ನೂರುರೂಪಾಯಿಯಾದರೂ ಕೊಡಬೇಕಪ್ಪ. "

" ಕೊಡುತ್ತೇನೆ. ನನ್ನದೊಂದು ಕೆಲಸ ನೀನು ಮಾಡಿಕೊಡಬೇಕಲ್ಲ ರಂಗಪ್ಪ. "

" ಹೇಳಣ್ಣಾ. ನಿನ್ನ ಕೆಲಸ ಯಾವದು ನಾನು ಮಾಡಾಕಿಲ್ಲ ಅಂದಿದ್ದೀನಿ. "

" ರಂಗಸ್ವಾಮಿ ಗುಡಿ ಬೀದಿಯಲ್ಲಿ ' ಮೋಹಿನಿ ಉಪಹಾರ ಮಂದಿರ '

ಎಂತಾ ಒಂದು ಹೊಟೇಲಿದೆ ಗೊತ್ತೇ ?"

"ಉಡುಪಿಯೋನದು. ನಾನು ಕಾಣ್ನಾ ?"

"ಅದರ ಮಾಲಿಕ ಮಂಜಯ್ಯ ನಿನಗೆ ಗೊತ್ತೇ ?"

"ಧಡಿಯ—ಅವನನ್ನ ನೋಡಿದ್ದೇನೆ."

"ಅವನು ನನ್ನ ಸಂಸಾರದಲ್ಲಿ ಕಾಲಿಡ್ಡೋ ಪ್ರಯತ್ನ ಮಾಡುತ್ತಾ ಇದ್ದಾನೆ ರಂಗಣ್ಣ."

"ನಿನ್ನ ಸಂಸಾರದಾಗೆ—ಏನಣ್ಣಾ ನೀನು ಹೇಳೋದು."

"ಮಾವಳ್ಳಿಯಲ್ಲಿ ನನ್ನದು ಎರಡನೆಯ ಸಂಸಾರ ಇದೆ—ಅವಳನ್ನ ಗೋಳು ಹುಯ್ದುಕೊಳ್ಳುವುದಕ್ಕೆ ಮಂಜಯ್ಯ ಷುರು ಮಾಡಿದ್ದಾನೆ."

"ನಿನ್ನ ಸಂಸಾರ ಇವನ್ಗೆ ಹೆಂಗೆ ಗೊತ್ತಣ್ಣ."

"ಅವಳ ಗಂಡ ತೀರಿಕೊಂಡಿದ್ದಾನೆ. ಆ ಗಂಡನಿಗೆ ಮಂಜಯ್ಯ ಸ್ವಲ್ಪ ಸಾಲಕೊಟ್ಟಿದ್ದ."

"ಈ ಹೊಟ್ಟೆಗನಿಗೆ ಅಷ್ಟು ಧೈರ್ಯ ಬಂತಾ ನಂಜಣ್ಣ."

"ಕಾಲ ಹೇಗಾಯಿತು ನೋಡು ರಂಗಪ್ಪ."

"ನಾನೇನು ಮಾಡಬೇಕು ಹೇಳಿಬಿಡು."

"ಸ್ವಲ್ಪ ಅವನನ್ನ ವಿಚಾರಿಸಿಕೋ."

"ನೀನು ಯೋಚನೆ ಬಿಟ್ಟುಬಿಡಣ್ಣ. ಅವನ ಸಮಾಚಾರ ನನಗಿರಲಿ."

ಎಂದು ರಂಗಪ್ಪ ಧೈರ್ಯ ಹೇಳಿಹೋದ.

ಎರಡು ದಿನಗಳು ಒಂದೇ ಸಮನಾಗಿ ಸರಸ್ವತಿಯ ಮನೆಯ ಬಳಿ ಪೈಗಸ್ತಿ ತಿರುಗಿ ಗಣೇಶ ಹೊಸಸುದ್ದಿಗಳನ್ನು ತಂದು ಧಣಿಗೆ ಒಪ್ಪಿಸಿದ.

"ಒಂಭತ್ತುಗಂಟೆ ಮೇಲೆ ಲಕ್ಷಣವಾಗಿರೋ ಒಬ್ಬ ಹುಡುಗ ಬರುತ್ತಾನೆಂದು ಹೇಳಿದೆಯಾ ?"

"ಹೌದು ಸೋಮಿ. ಅವನು ಇಸ್ಕೂಲು ಮೇಷ್ಟ್ರು, ಚಾಮರಾಜ ಪೇಟ್ಯಾಗೆ ರೂಮ್ ಮಾಡಿಕೊಂಡವನೆ."

"ಅವನ ಹೆಸರೇನು ?"

" ಪೀತಾಂಬರರಾಯ. "

ಸರಸ್ವತಿಯ ಅಗಾಧ ಶಕ್ತಿಯನ್ನು, ಸುಳ್ಳುಹೇಳಿ ಸಾಧಿಸುವ ಅವಳ ಜಾಣ್ಮೆಯನ್ನು ಮಂಜಯ್ಯ ಮೆಚ್ಚಿಕೊಂಡ. ಸರಸ್ವತಿಯನ್ನು ಬಿಟ್ಟೆನಲ್ಲಾ— ಅನಾಥ ಹೆಂಗಸನ್ನು ಕಾಡುಪಾಲು ಮಾಡಿದೆನಲ್ಲಾ ಎನ್ನುವ ಆತನ ಪರಿತಾಪ ಉಪಶಮನಕ್ಕೆ ಬಂದಿತು. ' ನಾನು ಅವಳನ್ನು ಸಾಕಬೇಕಾಗುವ ಅಗತ್ಯವೇನು– ನನ್ನಂಥ ನಾಲ್ವರನ್ನು ಅವಳೇ ಸಾಕಬಲ್ಲಳು ' ಎಂದುಕೊಂಡ.

ಒಂದು ದಿನ ಮಧ್ಯಾಹ್ನ ಹನ್ನೆರಡು ಗಂಟೆ ಸಮಯ. ಮಂಜಯ್ಯ ಹೊಟೇಲಿನ ಗಲ್ಲದ ಮೇಲೆ ಕುಳಿತಿದ್ದಾನೆ. ವ್ಯಾಪಾರ ಸಾಧಾರಣವಾಗಿದೆ. ನಾಲ್ವರು ಬಂದು ಮಂಜಯ್ಯನ ಎದುರಿಗಿದ್ದ ಮೇಜಿನ ಮುಂದೆ ಕುಳಿತರು. ಪದ್ಧತಿಯಂತೆ ಸಪ್ಲೈಯರ್ ಬಂದು

" ಏನುಬೇಕು " ಎಂದು ವಿಚಾರಿಸಿದ.

ಗುಂಪಿನಲ್ಲೊಬ್ಬ

" ಬಿಸಿ ವಡೆಯಿದ್ದರೆ ಒಂದೊಂದು ಕೊಟ್ಟು ಸ್ಪೆಷಲ್ ಕಾಫಿ ತಂದು ಕೊಡು " ಎಂದ.

ಸಪ್ಲೈಯರ್ ವಡೆ ತಂದಿಟ್ಟು ಕಾಫಿ ತರಲುಹೋದ. ನಾಲ್ವರೂ ಗಿರಾಕಿಗಳೂ ಕೇಕೆ ಹಾಕುತ್ತಾ, ವಡೆಯನ್ನು ಅಪಹಾಸ್ಯ ಮಾಡುತ್ತ ತಿಂದು ಮುಗಿಸಿದರು. ಸಪ್ಲೈಯರ್ ಕಾಫಿ ತಂದಿಟ್ಟ. ಒಬ್ಬ ಕಾಫಿರುಚಿ ನೋಡಿ ' ಸಕ್ಕರೆ ತೊಗೊಂಡು ಬಾ ' ಎಂದ ; ಇನ್ನೊಬ್ಬ ' ಸ್ವಲ್ಪ ಹಾಲು ತೊಗೊಂಡು ಬಾ ' ಎಂದ ; ಮೂರನೆಯವನು ಡಿಕಾಕ್ಷನ್ ಬೇಕೆಂದ.

ಸಪ್ಲೈಯರ್ ಮೂರನ್ನೂ ಸ್ವಲ್ಪ ಸ್ವಲ್ಪ ತಂದಿಟ್ಟ.

ಸಕ್ಕರೆ ಕೇಳಿದವನು

" ಇದೇನ್ಲೇ, ಈಟೇ ತಂದೆ. ಇನ್ನಷ್ಟು ತರಾಕಾಗಾಕಿಲ್ವಾ. "

" ಇದಕ್ಕಿಂತ ಹೆಚ್ಚು ಸಕ್ಕರೆ ಹಾಕುವುದಕ್ಕಾಗುವುದಿಲ್ಲ ಸಾರ್. ರೇಷನ್ ಕಾಲ " ಎಂದ

ಸಕ್ಕರೆ ಕೇಳಿದವನಿಗೆ ರೇಗಿತು.

" ಸಕ್ಕರೆ ಕೇಳಿದ್ರೆ ಎಷ್ಟಾಲ್ಲ ಮಾತಾಡ್ತಿ."

ಎಂದವನೇ ಸಪ್ಲೈಯರ್ ಷರಟು ಹಿಡಿದುಕೊಂಡು ಅವನ ಕಪಾಳಕ್ಕೆ ಬಿಗಿದ. ಮಂಜಯ್ಯ ಕೂಡಲೆ ಗಲ್ಲ ಬಿಟ್ಟಿಳಿದು ಬಂದು

" ಏನ್ರೀ ಇದು ಪುಂಡಾಟ " ಎಂದು ಕೇಳಿದ.

ಡಿಕಾಕ್ಷನ್ ಕೇಳಿದವನು ತನ್ನ ಲೋಟದ ಕಾಫಿಯನ್ನು ಮಂಜಯ್ಯನ ಮೇಲೆ ಎಸೆದ. ಮಂಜಯ್ಯನಿಗೆ ರೇಗಿ ಅವನ ಮೇಲೆ ಕೈಮಾಡಲು ಸಣ್ಣ ಯುದ್ಧವೇ ಆರಂಭವಾಯಿತು. ನಾಲ್ವರೂ ಎದ್ದು ನಿಂತು ಕೈಗೆ ಸಿಕ್ಕಿದ ಪ್ಲೇಟು, ಲೋಟಗಳನ್ನು, ಕುರ್ಚಿಗಳನ್ನು ಅಂಗಡಿಯ ಪಠಗಳ ಮೇಲೆ, ಕನ್ನಡಿಗಳ ಮೇಲೆ, ತಿಂಡಿಯಿಟ್ಟಿದ್ದ ಬೀರುವಿನ ಮೇಲೆ ಎಸೆದರು. ಕನ್ನಡಿಗಳು ಒಡೆದು ಚೂರಾದವು ; ಮಾಡಿದ್ದ ಅಂಗಡಿಯ ತಿಂಡಿ ಚಲ್ಲಾಪಿಲ್ಲಿಯಾಯಿತು ; ಒಬ್ಬ ಎಸೆದ ಕುರ್ಚಿ ಗಲ್ಲದ ಪಕ್ಕದಲ್ಲಿದ್ದ ರೇಡಿಯೋಗ್ರಾಮಿಗೆ ತಗುಲಿ ಅದನ್ನು ಪುಡಿ ಪುಡಿ ಮಾಡಿತು.

ಹೊಟೇಲ್ ಮಾಣಿಯೊಬ್ಬ ಓಡಿಹೋಗಿ ಸಮೀಪದಲ್ಲಿದ್ದ ಪೋಲೀಸ್ ಸ್ಟೇಷನ್ನಿನಿಂದ ಒಬ್ಬ ಪೋಲೀಸಿನವನನ್ನು ಕರೆತಂದ. ಅವನ ಜತೆಗೆ ನಾಲ್ವರೂ, ಮಂಜಪ್ಪ ಹೋದರು. ಮಂಜಪ್ಪ ನಡೆದ ವಿದ್ಯಮಾನ ವಿವರಿಸಿ ಸಾದ್ಯಂತ ಕಂಪ್ಲೇಂಟು ಕೊಟ್ಟ. ಮಂಜಯ್ಯನೇ ಮೊದಲು ಕೈಮಾಡಿ ಹೊಡೆದನೆಂದು ನಾಲ್ವರು ಮರು ಕಂಪ್ಲೇಂಟು ಕೊಟ್ಟರು. ಸ್ಟೇಷನ್ ಸಬ್ ಇನ್ಸ್‌ಪೆಕ್ಟರು ಮಂಜಯ್ಯನಿಗೆ ಸಮಾಧಾನ ಹೇಳಿ ಕೇಸು ಮಾಡುವುದಾಗಿ ಭರವಸೆಯಿತ್ತು ಅವನನ್ನು ಕಳುಹಿಸಿಕೊಟ್ಟರು.

ಮಂಜಯ್ಯ ಸ್ಟೇಷನ್ ಬಿಟ್ಟು ಹೊರಗೆ ಹೋಗುವುದನ್ನೇ ನೋಡುತ್ತ ಕಾದಿದ್ದ ರಂಗಪ್ಪ ತನ್ನ ನಾಲ್ವರು ಶಿಷ್ಯರನ್ನು ಬಿಡಿಸಿಕೊಂಡುಹೋದ. ಸಬ್ ಇನ್ಸ್‌ಪೆಕ್ಟರು ಕಂಪ್ಲೇಂಟುಗಳನ್ನು ಹರಿದು ಬಿಸುಡಿದರು.

ತನ್ನ ಕಂಪ್ಲೇಂಟಿನ ಗತಿಯೇನಾಯಿತು ಎಂದು ವಿಚಾರಿಸಲು ಹೋದ ಮಂಜಯ್ಯನಿಗೆ ಸಬ್ ಇನ್ಸ್‌ಪೆಕ್ಟರು

" ವ್ಯಾಪಾರಮಾಡುವವರು ನೀವು ರಂಗಪ್ಪನ ವಿರೋಧ ಕಟ್ಟಿಕೊಳ್ಳ

ಬಾರದ್ರೀ" ಎಂದು ಬುದ್ಧಿವಾದ ಹೇಳಿ ಕಳುಹಿಸಿದರು.

ರಂಗಪ್ಪನೇ ತನ್ನ ಶಿಷ್ಯರನ್ನು ಬಿಟ್ಟು ಹೊಟೇಲ್ ಧ್ವಂಸಮಾಡುವ ಕೆಲಸ ಮಾಡಿಸಿದ್ದಾನೆಂಬುದು ಸ್ವತಃಸ್ಸಿದ್ಧವಾಗಿತ್ತು. ರಂಗಪ್ಪನಿಗೂ ಮಂಜಯ್ಯನಿಗೂ ದ್ವೇಷವಿರಲಿಲ್ಲ. ಪರಿಚಯಕೂಡ ಇರಲಿಲ್ಲ. ರಂಗಪ್ಪನನ್ನು ಈ ಕೆಲಸಕ್ಕೆ ನೇಮಿಸಿದವರು ಯಾರು ಎಂದು ಮಂಜಯ್ಯ ಯೋಚನೆಮಾಡಿದ. ಅವನ ಬುದ್ಧಿ ಇದ್ದಕ್ಕಿದ್ದಂತೆ ತಿಳಿಯಾಯಿತು. 'ಓಹೋ! ಇದು ನಂಜಪ್ಪನ ಚಿತಾವಣೆ. ನಂಜಪ್ಪನಿಗೆ ಸರಸ್ವತಿ ಇಲ್ಲಸಲ್ಲದ ಚಾಡಿ ಹೇಳಿರಬೇಕು. ಸರಸ್ವತಿ ಮಹಾ ಸತ್ಯಸಂಧೆಯೆಂದುಕೊಂಡು ನಂಜಪ್ಪ ಇಂಥ ಅತ್ಯಾಚಾರ ಮಾಡಿಸಿರಬೇಕು' ಎಂದು ನಿರ್ಧರಿಸಿಕೊಂಡ.

ವಿನಾಕಾರಣ ತನ್ನಮೇಲೆ ಕುತ್ತು ಒದಗಿಬಂದುದಕ್ಕೆ ಮಂಜಯ್ಯನಿಗೆ ತುಂಬ ದುಃಖವಾಯಿತು. ವಿಷಬೀಜವನ್ನಂತೂ ಸರಸ್ವತಿ ಬಿತ್ತುಬಿಟ್ಟಿದ್ದಾಳೆ. ಇದು ಮೊಳಕೆಯಾಗಿ ಗಿಡವಾಗಿ ಬೆಳೆಯದಂತೆ ನೋಡಿಕೊಳ್ಳಬೇಕು. ಸ್ಥಳವಂದಿಗರ ದ್ವೇಷವೇಕೆ ಕಟ್ಟಿಕೊಳ್ಳಬೇಕು. ಈ ಯೋಚನೆಯ ಜತೆಗೆ ಮಂಜಯ್ಯನಿಗೆ ಮತ್ತೊಂದು ಯೋಚನೆ ಹೊಳೆದು ಅವನನ್ನು ಕಾರ್ಯಾತುರನನ್ನಾಗಿ ಮಾಡಿತು. 'ನನಗೆ ಈ ಗತಿ ಕಾಣಿಸಿದ ಸರಸ್ವತಿ, ನಂಜಪ್ಪನಿಗೆ ಯಾವ ಮೃತ್ಯುವನ್ನು ಆರಿಸಿಟ್ಟಿರುವಳೋ. ಅವನು ಚಿಕ್ಕಪುಟ್ಟ ಮನುಷ್ಯ, ಸಂಸಾರವಂದಿಗ. ಸಮಯೋಚಿತ ಎಚ್ಚರಿಕೆ ಕೊಡಬೇಕಾದುದು ನನ್ನ ಕರ್ತವ್ಯ.'

ಅಂದೇ ಸಂಜೆ ಮಂಜಯ್ಯ ತಾನೇ ನಂಜಪ್ಪನನ್ನು ಹುಡುಕಿಕೊಂಡು ಅವನ ಅಂಗಡಿಗೆ ಹೋದ. ಮಂಜಯ್ಯನ ಮುಖಕಂಡು ಉದ್ರೇಕಗೊಂಡ ನಂಜಪ್ಪ ಬಿರುಸಾಗಿ

"ಏನು ಬೇಕಾಗಿತ್ತು?" ಎಂದು ಕೇಳಿದ.

"ಏನೂ ಬೇಕಾಗಿಲ್ಲ. ನಿಮ್ಮ ಜತೆ ಸ್ವಲ್ಪ ಮಾತನಾಡಬೇಕಾದದ್ದಿತ್ತು."

"ನನ್ನ ಜತೆ ನೀವು ಮಾತನಾಡುವುದೇನಿದೆ?"

"ಅದು ನಿಮಗೇ ಗೊತ್ತಾಗುತ್ತದೆ. ಒಂದು ಗಂಟೆಕಾಲ ಪುರಸತ್ತು

ಮಾಡಿಕೊಳ್ಳಲು ಸಾಧ್ಯವೇ ?"

"ಏನು ಹೇಳುವುದಿದೆಯೋ ಇಲ್ಲಿಯೇ ಹೇಳಿ."

"ಇದು ಅಂಗಡಿ. ನಾವಿಬ್ಬರೇ ಕುಳಿತು ಮಾತನಾಡುವುದಕ್ಕಾಗುವುದಿಲ್ಲ. ನಿಮಗೆ ಅಭ್ಯಂತರವಿಲ್ಲದಿದ್ದರೆ ನನ್ನ ಹೋಟೇಲಿಗೆ ಹೋಗೋಣ. ಮಹಡಿಯ ಮೇಲೆ ರೂಮಿದೆ. ನಿಧಾನವಾಗಿ ಮಾತನಾಡಬಹುದು. ನಾನು ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಬಂದಿಲ್ಲ ನಂಜಪ್ಪನವರೇ—ನಿಮಗೊಂದು ಉಪಕಾರಮಾಡಲು ಬಂದಿದ್ದೇನೆ. ಅನುಮಾನವಾಗುವ ಹಾಗಿದ್ದರೆ ನಡೆಯಿರಿ. ನೀವು ಎಲ್ಲಿ ಕರೆದುಕೊಂಡು ಹೋಗುವಿರೋ ಅಲ್ಲಿಗೆ ನಾನು ಬರುತ್ತೇನೆ."

"ಈಗಲೇ ಹೊರಡಬೇಕೇ ?"

"ಹೊರಟರೆ ಒಳ್ಳೆಯದು."

"ಹೋಗಲೀ ಬಿಡಪ್ಪ." ಎಂದು ಕ್ಷಣಕಾಲ ನಂಜಪ್ಪ ಆಲೋಚಿಸಿದ. ಮಂಜಯ್ಯನ ಕರೆಗೆ ಹಿಂದಲೇಟು ಹೊಡೆಯುವುದರಿಂದ ತನ್ನ ಹೇಡಿತನ ಸ್ಥಾಪಿತವಾಗುವುದೆಂದು ಹೆದರಿದ. ಮನಸ್ಸಿಗೆ ಧೈರ್ಯತಂದುಕೊಂಡು,

"ಒಳ್ಳೆಯದು ನಡೆಯಿರಿ" ಎಂದು ಹೇಳಿದ.

ಇಬ್ಬರೂ 'ಮೋಹಿನಿ ಉಪಹಾರ ಮಂದಿರ'ಕ್ಕೆ ಬಂದರು. ಮಂಜಯ್ಯ ನಂಜಪ್ಪನನ್ನು ಮಹಡಿಯ ಮೇಲಕ್ಕೆ ಕರೆದೊಯ್ದು ರೂಮಿನಲ್ಲಿ ಕೂಡಿಸಿ ಮಾಣಿಯನ್ನು ಕೂಗಿ

"ರಾಯರಿಗೆ ತಿಂಡಿ ಕಾಫಿ ತಂದುಕೊಡು. ನನಗೆ ಕಾಫಿಮಾಡಿ ತೆಗೆದುಕೊಂಡು ಬಾ" ಎಂದು ಹೇಳಿದ.

"ತಿಂಡಿಯೇಕೆ? ಏನೂ ಬೇಡ."

ಎಂದು ನಂಜಪ್ಪ ಹೇಳಿದರೂ ಕೇಳಲಿಲ್ಲ.

ಮಾಣಿ ತಂದಿಟ್ಟ ತಿಂಡಿಯನ್ನು ಬಲವಂತಮಾಡಿ ಮಂಜಯ್ಯ ನಂಜಪ್ಪನಿಗೆ ತಿನ್ನಿಸಿ ಅವನ ಜತೆಯಲ್ಲಿ ತಾನು ಕಾಫಿ ತೆಗೆದುಕೊಂಡ. ಮಾಣಿ ಪಾತ್ರೆ ಪದಾರ್ಥಗಳನ್ನು ತೆಗೆದುಕೊಂಡು ಹೋದಮೇಲೆ,

"ನಂಜಪ್ಪನವರೇ ಇನ್ನು ನಾವು ಮಾತಾಡಬಹುದು. ಗರಡಿ ರಂಗಪ್ಪನಿಗೆ ಹೇಳಿ ನೀವು ನನ್ನ ಅಂಗಡಿಯಮೇಲೆ ಹಲ್ಲೆ ಮಾಡಿಸಿದಿರಿ. ಆದರಿಂದ ನನಗೆ ಎರಡು ಸಾವಿರ ರೂಪಾಯಿಗಳಷ್ಟು ನಷ್ಟವಾಯಿತು. ಚಿಂತೆಯಿಲ್ಲ. ಬೇಕಾದಷ್ಟು ಸಂಪಾದನೆ ಮಾಡಿದ್ದೇನೆ. ಎರಡು ಸಾವಿರ ರೂಪಾಯಿಗಳಿಗೆ ನಾನು ಹೆದರುವುದಿಲ್ಲ. ಆದರೆ ನೀವು ನನ್ನನ್ನು ತಪ್ಪು ತಿಳಿದುಕೊಂಡಿರಲ್ಲಾ ಎಂದು ನನಗೆ ವಿಷಾದವಾಗಿದೆ."

"ನಾನೇನು ತಪ್ಪು ತಿಳಿದುಕೊಂಡಿರುವುದು."

"ಅಂದು ನೀವು ಸರಸ್ವತಿಯ ಮನೆಯಲ್ಲಿದ್ದು ಬಂದುದನ್ನು ನಾನೇ ಕಣ್ಣಾರೆ ನೋಡಿದೆ. ನನಗೆ ಕೋಪ ತಡೆಯಲಾಗಲಿಲ್ಲ. ಒಳಗೆ ಹೋಗಿ ಅವಳನ್ನು ಚೆನ್ನಾಗಿ ಹೊಡೆದೆ, ಅದರ ಕಾರಣ ನೀವು ಬಲ್ಲಿರಾ?"

"ಏನು ಕಾರಣ."

"ಅವಳ ಮನೆಯ ಸಮಸ್ತ ಖರ್ಚನ್ನೂ ನಾನು ನಿರ್ವಹಿಸುತ್ತಿದ್ದೆ. ಅವಳು ಕೇಳಿದ ಸೀರೆ ಕುಪ್ಪಸಗಳನ್ನು ತೆಗೆದುಕೊಟ್ಟೆ, ಅವಳು ಗಿರವಿ ಇಟ್ಟಿದ್ದ ಪದಾರ್ಥಗಳನ್ನು ಬಿಡಿಸಿ ತಂದುಕೊಟ್ಟೆ, ಹೊಸದಾಗಿ ಒಡವೆಗಳನ್ನು ಮಾಡಿಸಿ ಕೊಟ್ಟೆ, ಅವಳ ಗಂಡನ ಸಾಲದ ಪತ್ರವನ್ನು ಹರಿದು ಬಿಸುಟೆ. ನೀವೂ ನಾನೂ ಸಂಧಿಸಿದ ದಿನ ಅವಳ ಮಗಳ ಮದುವೆಗೆಂದು ಸಾವಿರ ರೂಪಾಯಿ ಕೊಡಲು ತೆಗೆದುಕೊಂಡು ಹೋಗಿದ್ದೆ. ದೇವರಮುಂದೆ ನಿಂತು, ದೀಪ ಹಚ್ಚಿಟ್ಟು ನನಗೆ ಪ್ರಮಾಣ ಮಾಡಿದ್ದಳು."

"ಏನೆಂದು?"

"ನಿಮಗೆ ದ್ರೋಹ ಬಗೆಯುವುದಿಲ್ಲವೆಂದು. ಸರಸ್ವತಿಯ ದಿವ್ಯರೂಪಕ್ಕೆ ಮರುಳಾಗಿ ನಾನು ಅವಳಲ್ಲಿ ಮೋಹಗೊಂಡಿದ್ದೆ ಎಂದು ಭಾಸಿವಿರುವಿರಾ? ನನಗೆ ಅಂಥ ಚಾಪಲ್ಯವಿದ್ದರೆ ಊರಿನಿಂದ ಕಣ್ಣಿಗೊಪ್ಪುವ ರಂಭೆಯರನ್ನು ಕರೆದುಕೊಂಡು ಬಂದು ಇಟ್ಟುಕೊಳ್ಳುತ್ತಿದ್ದೆ. ಸರಸ್ವತಿಯ ಗಂಡ ಸುಬ್ಬಣ್ಣ ನನ್ನ ಸ್ನೇಹಿತ. ಅವನ ಸಂಸಾರ ಹಾಳಾಗಿ ಹೋಗುತ್ತದಲ್ಲಾ ಎಂದು ನಾನು ಅದನ್ನು ಕಟ್ಟಿಕೊಂಡೆ."

" ಅದು ಸರಿ ಮಂಜಯ್ಯನವರೇ—ನೀವು ಅಂದು ಅವಳನ್ನು ಹೊಡೆದು ನನ್ನ ಮರ್ಯಾದೆ ಹಾಳುಮಾಡುವುದಾಗಿ ಏಕೆ ಹೆದರಿಸಿದಿರಿ. ನಾನು ರಸ್ತೆಯಲ್ಲಿ ತಲೆಯೆತ್ತಿ ತಿರುಗಾಡದಂತೆ ಮಾಡುವುದಾಗಿ ಹೇಳಿದರಂತೆ. "

" ಈಗ ನಿಮ್ಮ ಜತೆ ಸರಸ್ವತಿಯ ಮನೆಗೆ ಬರಲು ಸಿದ್ಧವಾಗಿದ್ದೇನೆ. ಅವಳ ಬಾಯಲ್ಲಿ ಈ ಮಾತು ನೀವು ಹೇಳಿಸಿಬಿಟ್ಟರೆ ನೀವು ಕೊಡುವ ಶಿಕ್ಷೆ ಅನುಭವಿಸಲು ನಾನು ಸಿದ್ಧವಾಗಿದ್ದೇನೆ. "

" ಅವಳು ನನಗೆ ಹೇಳಿದ್ದು ಸುಳ್ಳೆ? "

" ಅವಳು ನಿಮಗಾಗಲಿ, ನನಗಾಗಲಿ, ಯಾರಿಗಾಗಲಿ ಎಂದು ನಿಜ ಹೇಳಿದ್ದಾಳೆ ನಂಜಪ್ಪನವರೇ. "

" ನಾನು ಯಾರ ಮಾತನ್ನು ನಂಬಲಿ? "

" ಸ್ವಾಮಿ, ಧರ್ಮಸ್ಥಳ ಮಹಾಜಾಗೃತಸ್ಥಳವೆಂದು ಕೇಳಿರುವಿರಲ್ಲವೇ? ಮಂಜುನಾಥಸ್ವಾಮಿ ಬಹಳ ಖಂಡಿತವಾದಿ ದೇವರು. ಸುಳ್ಳು, ಮೋಸ ಕ್ಷಮಿಸುವ ದೇವರಲ್ಲ. ನಾನು ಆ ದೇವರ ಭಕ್ತ, ಮಂಜುನಾಥಸ್ವಾಮಿಯ ಮೇಲೆ ಆಣೆಮಾಡಿ ಹೇಳುತ್ತೇನೆ—ನಾನು ನಿಮಗೆ ಸುಳ್ಳು ಹೇಳುತ್ತಿಲ್ಲ. "

ಮಂಜಯ್ಯನ ಗಂಭೀರನುಡಿ ನಂಜಪ್ಪನನ್ನು ಚಕಿತನನ್ನಾಗಿ ಮಾಡಿತು. ತಾನು ಮಾಡಿದುದನ್ನು ನೆನೆದು ಅವನಿಗೆ ಪಶ್ಚಾತ್ತಾಪವೂ ಆಯಿತು.

" ನನ್ನದು ತಪ್ಪಾಯಿತು ಮಂಜಯ್ಯನವರೇ. ಕ್ಷಮಿಸಿ. ನಿಮಗಾಗಿರುವ ನಷ್ಟ ಕಟ್ಟಿಕೊಡಲು ನಾನು ಸಿದ್ಧನಾಗಿದ್ದೇನೆ. "

" ಬಿಡಿ ಸ್ವಾಮಿ. ಗೋಪಾಳದ ಎರಡು ಸಾವಿರ ರೂಪಾಯಿ ಯಾವ ದೊಡ್ಡ ನಷ್ಟ. ನೀವು ನನಗೊಂದು ಉಪಕಾರ ಮಾಡಬೇಕು. "

" ಹೇಳಿ. "

" ನಾನು ಸರಸ್ವತಿಗೆ ಕೈಮುಗಿದು ಬಂದ ವಿಷಯ ನಿಮಗೆ ಗೊತ್ತಾಗಿರ ಬಹುದು. "

" ಗೊತ್ತಾಗಿದೆ. "

" ನೀವೂ ಕೈ ಮುಗಿದು ಬಿಡಬೇಕು. "

"ಏಕೆ ?"

"ಇಷ್ಟು ಅಲ್ಪಕಾರಣಕ್ಕೆ, ಆದರಲ್ಲಿಯೂ ತನ್ನಲ್ಲಿಯೇ ತಪ್ಪನ್ನಿಟ್ಟು ಕೊಂಡು ನನ್ನನ್ನು ಹೊಡೆಸಲು ಪ್ರೇರೇಪಿಸಿದಳು. ಇನ್ನು ಮುಂದೆ ನಿಮ್ಮ ಕೈಯಲ್ಲಿ ಅವಳೇನು ಮಾಡಿಸಬಹುದು ಯೋಚನೆಮಾಡಿ. ಸರಸ್ವತಿ ಮನುಷ್ಯಳಲ್ಲ, ಹೆಂಗಸಲ್ಲ—ಅವಳು ಮಹಾರಾಕ್ಷಸಿ. ಅವಳ ಸಹವಾಸದಿಂದ ನೀವು ಇನ್ನು ಮುಂದೆ ಪಡಬಾರದ ಕಷ್ಟಗಳನ್ನನುಭವಿಸಬೇಕಾಗುತ್ತದೆ."

"ನಿಮಗವಳು ದ್ರೋಹ ಮಾಡಿದುದು ನನ್ನ ಮೇಲಿನ ಅನುರಾಗದಿಂದ ಮಂಜಯ್ಯನವರೇ."

ಮಂಜಯ್ಯ ತಡೆಯಲಾರದೆ ನಗುತ್ತಾ

"ಇನ್ನೂ ನಿಮಗೆ ಭ್ರಾಂತಿ ಹೋಗಿಲ್ಲವೆ ? ಆ ಹೆಣ್ಣು ಯಾರ ಮೇಲಾದರೂ ಅನುರಾಗವಿಡಲು ಸಾಧ್ಯವೇ ? ಅವಳ ಕಾಮಾಗ್ನಿಗೆ ಪುರುಷರು ಸೌದೆ. ಬೆಂಕಿ ಸೌದೆಯ ಮೇಲೆ ಅನುರಾಗವಿಡಲು ಸಾಧ್ಯವೇ ಸ್ವಾಮಿ."

"ನನಗೂ ಅವಳು ಮೋಸಮಾಡುತ್ತಿರುವಳೇ ?"

"ಅದನ್ನು ಕಣ್ಣಿಂದ ನೋಡಬೇಕೆಂದು ಬಯಸುವಿರೇನು ?"

"ರುಜುವಾತು ಆಗಿ ಹೋಗಲಿ."

"ಈಗ ಗಂಟೆಯೆಷ್ಟು ನೋಡಿ."

"ಎಂಟೂವರೆ."

"ಇನ್ನೊಂದು ಗಂಟೆ ಬಿಟ್ಟು ಅವಳ ಮನೆಗೆ ಹೋಗೋಣ. ನಿಮಗೇ ಎಲ್ಲವೂ ವೇದ್ಯವಾಗುತ್ತದೆ."

"ಇದೇನು ಹೇಳುತ್ತಿರುವಿರಿ ಮಂಜಯ್ಯನವರೇ ?"

"ಏನು ಇಲ್ಲ. ಮನಸ್ಸನ್ನು ಕಲ್ಲು ಮಾಡಿಕೊಳ್ಳಿ. ಮನುಷ್ಯನ ಮನಸ್ಸಿನ ಮೇಲಿರುವ ದೇಹ್ಯ ವಸ್ತ್ರಗಳನ್ನು ಕಳಚಿ ನೋಡಿದಾಗ ಅದು ಅಷ್ಟು ಸುಂದರವಾಗಿರುವುದಿಲ್ಲ ನಂಜಪ್ಪನವರೇ. ನಿಮ್ಮ ಸರಸ್ವತಿಯ ಸ್ನೇಹಕ್ಕೆ ಭಂಗತರಬೇಕೆಂದು ನಾನು ಈ ಮಾತು ಹೇಳುತ್ತಿಲ್ಲ. ನನ್ನ ಸಂಬಂಧ ಯಾವಾಗ ಕಡಿದು ಹೋಯಿತೋ ಆಗ ನನಗೆ ಆಗಬೇಕಾದದ್ದೇನು ? ನೀವು ಅವಳ ಮನೆಗೆ ಹೋದ

ರೇನು ಬಿಟ್ಟರೇನು? ಅದು ನನ್ನ ತೋಟದ ಹಣ್ಣು ಎಂದು ಭಾವಿಸಿಕೊಂಡಿರುವ ವರೆಗೆ ಮೋಹ ಕಾಡುತ್ತದೆ; ಅದು ಸಾಲುಮರದ ಹಣ್ಣೆಂದು ಭಾವಿಸಿಕೊಂಡಿರುವಾಗ ಮೋಹಕ್ಕೆ ಎಡೆಯುಂಟೇ?"

ಮಂಜಯ್ಯನ ಒಂದೊಂದೂ ಮಾತೂ ನಂಜಪ್ಪನನ್ನು ಈಟಿಯಂತೆ ತಿವಿದು ಘಾತಿಸಿದವು. ಅವನ ಹೃದಯಕ್ಕೆ ಅಸಹನೀಯ ಯಾತನೆಯಾಯಿತು.

ಮಂಜಯ್ಯನ ಅಂತಃಕರಣ ಅನುಕಂಪಕ್ಕೀಡಾಯಿತು. ನಂಜಪ್ಪನ ಮನಸ್ಸಿನಲ್ಲಾಗುತ್ತಿದ್ದ ಆಂದೋಲನದ ಪೂರ್ಣ ಕಲ್ಪನೆ ಮಂಜಯ್ಯನಿಗಾಗಿತ್ತು. ಮೂಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತ ಅವನು ಸುಮ್ಮನೆ ಕುಳಿತ.

ನಂಜಪ್ಪನನ್ನು ಶೋಕಕೋಪಗಳು ಆವರಿಸಿದವು. ಅವನ ಕಣ್ಣುಗಳಿಂದ ಕೆಂಗಿಡಿಗಳು ಪುಟಿಯುತ್ತಿದ್ದವು. ಆಗಾಗ್ಗೆ ತುಟಿ ಕಚ್ಚುತ್ತಿದ್ದ.

"ಈ ಹೆಣ್ಣು ಜಾತಿಯನ್ನೇ ನಾಶಮಾಡಿಬಿಡಬೇಕು. ಇವರು ಯಾರನ್ನೂ ನಂಬಲು ಸಾಧ್ಯವಿಲ್ಲ" ಎಂದ.

ಮಂಜಯ್ಯನ ಮೈನಡುಗಿತು. ಈ ಅವಸ್ಥೆಯಲ್ಲಿ ನಂಜಪ್ಪನನ್ನು ಬಿಟ್ಟರೆ ಸರಸ್ವತಿಯ ಇತಿಶ್ರೀಯಾಗುತ್ತದೆಂದು ಅವನು ಭಾವಿಸಿದ. ನಂಜಪ್ಪನನ್ನು ಸಮಾಧಾನ ಮಾಡಬೇಕಾದುದು ಅಗತ್ಯವಾಗಿತ್ತು.

"ನೋಡಿ ನಂಜಪ್ಪನವರೇ . . . **ಒಂದು ಹೆಣ್ಣು, ಹತ್ತು ಹೆಣ್ಣು, ನೂರು ಹೆಣ್ಣು ದುರ್ಮಾರ್ಗಪ್ರವರ್ತಕರಾಗುತ್ತಾರೆಂದು ಹೆಣ್ಣು ಜಾತಿಯನ್ನು ನಿಂದಿಸುವುದು ಯಾವ ನ್ಯಾಯ. ನಿಮ್ಮನ್ನು ನನ್ನನ್ನು ಹೆತ್ತವರು, ಕೈ ಹಿಡಿದವರು, ನಮ್ಮ ಬಾಳಿಗೆ ಊರುಗೋಲಾಗಿ ನಿಂತಿರುವವರೂ ಹೆಣ್ಣು ಮಕ್ಕಳೇ ಅಲ್ಲವೇ? ಒಬ್ಬ ಕುಲಟೆಯ ದುಷ್ಕರ್ಮಕ್ಕಾಗಿ ನಮ್ಮ ತಾಯಿಂದಿರನ್ನು ಏಕೆ ನಿಂದಿಸೋಣ**"

"ಮಂಜಯ್ಯ, ನಾನು ವಿವೇಕಶೂನ್ಯನಾಗಿದ್ದೇನೆ. ನನ್ನನ್ನು ಕಾಪಾಡಿ."

"ಇಂದು ಸರಸ್ವತಿಯು ಮನೆಗೆ ಹೋಗುವುದು ಬೇಡ."

"ಖಂಡಿತ ಹೋಗಲೇ ಬೇಕು. ನನ್ನ ಕಣ್ಣಿನ ಪರೆ ಜಾರುವ ಕಾಲ

ಬಂದಿದೆ—ಅದು ಬೇಗ ಜಾರಿಹೋಗಲಿ. ”

“ ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ. ಬಿಸಿ ಕಾಫಿ ತರಿಸಿಕೊಡುತ್ತೇನೆ ತೆಗೆದುಕೊಳ್ಳಿ. ಒಂಭತ್ತೂವರೆಗೆ ಅಲ್ಲಿಗೆ ಹೋಗಿ ಬರೋಣ. ”

ಎಂದು ಹೇಳಿ ಮಂಜಯ್ಯ ಕೆಳಗಿಳಿದು ಹೋಗಿ ಬಿಸಿ ಕಾಫಿ ಕಳುಹಿಸಿ ಕೊಟ್ಟ.

ತನ್ನ ಅಂಗಡಿಯ ಕೆಲಸ ಮುಗಿಸಿಕೊಂಡು ಒಂಭತ್ತೂವರೆಗೆ ಮಂಜಯ್ಯ ಬಂದು ನಂಜಪ್ಪನನ್ನು ಕರೆದೊಯ್ದ. ಇಬ್ಬರೂ ಗಾಡಿ ಮಾಡಿಕೊಂಡು ಬಂದು, ಸರಸ್ವತಿಯ ಮನೆಗೆ ಸ್ವಲ್ಪ ದೂರದಲ್ಲಿಳಿದು ಅವಳ ಮನೆಗೆ ನಡೆದುಕೊಂಡೇ ಹೋದರು.

ದಾರಿಯಲ್ಲಿ ಮತ್ತೊಮ್ಮೆ ಮಂಜಯ್ಯ

“ ಕೈಮಾಡುವುದಕ್ಕೆ ಹೋಗಬೇಡಿ ”

ಎಂದು ಎಚ್ಚರಿಕೆ ಕೊಟ್ಟು ತಾವು ಅನುಸರಿಸಬೇಕಾದ ಮಾರ್ಗವನ್ನು ನಂಜಪ್ಪನಿಗೆ ವಿವರಿಸಿ ಒಳಕ್ಕೆ ಕರೆದೊಯ್ದ. ಸರಸ್ವತಿಯ ಮನೆಯಲ್ಲಿ ದೀಪ ವಿರಲಿಲ್ಲ. ಅವಳ ರೂಮಿನ ಕಿಟಕಿಯನ್ನು ತೆರೆ ಮುಚ್ಚಿತ್ತು. ಮಂಜಯ್ಯ ರೂಮಿನ ಬಾಗಿಲುಬಳಿ ನಿಂತು, ತಲೆಬಾಗಿಲು ತೆಗೆಸಲು ನಂಜಪ್ಪನನ್ನು ಕಳುಹಿಸಿ ಕೊಟ್ಟ. ನಂಜಪ್ಪ ತಲೆಬಾಗಿಲು ತಟ್ಟಿದ. ಒಳಗಿನಿಂದ ಮಾರುತ್ತರ ಬರಲಿಲ್ಲ. ಪುನಃ ತಟ್ಟಿದ, ಯಾರೋ ಚಲಿಸುವ ಶಬ್ದ ಬಂತು. ಮೂರನೆಯ ಸಲ ಬಲವಾಗಿ ಬಾಗಿಲು ಬಡಿದ. ಒಳಗಿನಿಂದ ಸರಸ್ವತಿ ‘ ಯಾರು ? ’ ಎಂದು ಕೇಳಿದಳು. ‘ ನಾನು—ನಂಜಪ್ಪ ’ ಎಂದು ನಂಜಪ್ಪ ಉತ್ತರಿಸಿದ. ಆದರೂ ಬಾಗಿಲು ತೆಗೆಯಲಿಲ್ಲ. ನಂಜಪ್ಪ ಬಿರುಸಾಗಿ ‘ ಬೇಗ ಬಾಗಿಲು ತೆಗೆಯುವೆಯೋ ಇಲ್ಲವೊ ’ ಎಂದು ಗದರಿಸಿದ.

ರೂಮಿನ ಬಾಗಿಲುಕಡೆಯಿಂದ ಯಾರೋ ಕೈಯಲ್ಲಿ ಷೂಸ್ ಹಿಡಿದುಕೊಂಡು ಹೊರಬಿದ್ದರು. ಮಂಜಯ್ಯನ ಬಾಹುಗಳು ಅವನನ್ನಪ್ಪಿ ಹಿಡಿದವು.

ಸರಸ್ವತಿ ಬಾಗಿಲು ತೆಗೆದಳು.

ನಂಜಪ್ಪ ಒಳಗೆ ಪ್ರವೇಶಿಸಿ ಬಾಗಿಲು ಚಿಲಕ ಹಾಕಿ ಸರಸ್ವತಿಯ ಕೈ ಹಿಡಿದುಕೊಂಡು ದೀಪ ಹಚ್ಚಿದ. ಸರಸ್ವತಿ ನಿದ್ರೆಗಣ್ಣಿನಲ್ಲಿ

"ಇದೇನೂಂದ್ರೆ—ಇಷ್ಟುಹೊತ್ತಿಗೆ ಬಂದಿರಿ" ಎಂದಳು.

ರೂಮಿನೊಳಗಿನಿಂದ ಮಂಜಯ್ಯ ಯಾರನ್ನೋ ತರುಬಿಕೊಂಡು ತೊಟ್ಟಿಗೆ ಬಂದ. ಹೊಸಮುಖ ನೋಡಿದ ಕೂಡಲೆ ನಂಜಪ್ಪನ ಕೋಪ ಬ್ರಹ್ಮರಂಧ್ರಕ್ಕೇರಿತು. ಸರಸ್ವತಿಯ ಮುಖನೋಡದೆ ಒಂದೇಸಮನಾಗಿ ಬಡಿದ. ಸರಸ್ವತಿ ತಲೆಯಮೇಲೆ ಕೈಜೋಡಿಸಿಕೊಂಡು ಕುಕ್ಕರಿಸಿಬಿಟ್ಟಳು.

ಮಂಜಯ್ಯನ ಕೈಗಳು ಹೊಸಬನ ಮೈಮೇಲೆ ರಾಕ್ಷಸನೃತ್ಯಮಾಡಿದವು. ಹೊಸಬ ಚೀರುತ್ತಿದ್ದ ಧ್ವನಿಕೇಳಿ ಮಂಜುಳಾ, ಸುಧಾ ತಮ್ಮ ರೂಮು ಬಿಟ್ಟು ಓಡಿಬಂದರು.

ಸುಧಾ ಬಂದವಳೇ ತಾಯಿಗೂ ನಂಜಪ್ಪನಿಗೂ ಅಡ್ಡಲಾಗಿ ನಿಂತು ಕೈಜೋಡಿಸಿಕೊಂಡು

"ನಿಮ್ಮ ದಮ್ಮಯ್ಯ ಹೊಡೆಯಬೇಡಿ" ಎಂದು ಅಂಗಲಾಚಿ ಬೇಡಿದಳು.

ಸರಸ್ವತಿಯ ಬಾಯಿಂದ ರಕ್ತ ಸುರಿಯುತ್ತಿತ್ತು. ಹೊಸಬನ ಮೂತಿ ಪೆಟ್ಟಿನಿಂದ ಹಸಿರುಗಟ್ಟಿತ್ತು.

ಮಂಜುಳಾ ಹೊಸಬನನ್ನು ಎವೆಯಿಕ್ಕದೆ ನೋಡುತ್ತ ನಿಂತಳು.

"ರುಜುವಾತು ಸಿಕ್ಕಿತೇ ನಂಜಪ್ಪನವರೇ" ಎಂದು ಮಂಜಯ್ಯ ಕೇಳಿದ.

ಹೊಸಬನ ಜಂಘಾಬಲ ಉಡುಗಿಹೋಗಿತ್ತು. ನಿಂತರೆ ಕೈಕಾಲು ಗಡಗಡ ನಡುಗುತ್ತಿತ್ತು.

"ತಪ್ಪಾಯಿತು ಕ್ಷಮಿಸಿ ಸಾರ್. ಇನ್ನು ಈ ಮನೆಗೆ ಕಾಲಿಡುವುದಿಲ್ಲ."

ಎಂದು ಪೀತಾಂಬರರಾಯ ಮಂಜಯ್ಯನ ಕಾಲುಗಳಮೇಲೆ ಬಿದ್ದ.

"ನಾನೂ ಮಂಜಯ್ಯನವರೂ ಇಬ್ಬರೂ ಹೋಗುತ್ತಿದ್ದೇವೆ. ಇನ್ನುಮೇಲೆ ನೀನೇ ಸರಸ್ವತಿಯ ಗಂಡನಾಗಿ ಸುಖವಾಗಿರು" ಎಂದು ನಂಜಪ್ಪ ಹೇಳಿದ.

ಮಂಜುಳೆಯ ಕಣ್ಣಲ್ಲಿ ಧಾರೆಹರಿಯಿತು. ಅವಳು ಸೆರಗಿನ ಕೊನೆಯಿಂದ ಮುಖ ಮುಚ್ಚಿಕೊಂಡಳು.

ನಂಜಪ್ಪ ಸರಸ್ವತಿಯ ಕಡೆ ತಿರುಗಿ

“ ನಮ್ಮಿಬ್ಬರಿಗೂ ಮೋಸಮಾಡಿ ಈ ಸೂಳೇಮಗನ ಸಹವಾಸಮಾಡಿದೆ. ನಿನ್ನ ಕರ್ಮಫಲ ನೀನೇ ಚೆನ್ನಾಗಿ ಉಣ್ಣುವೆಯಂತೆ. ಇನ್ನೇನಾದರೂ ನನ್ನ ಅಂಗಡಿ ಹತ್ತಿರ ಸುಳಿದೆಯೋ ನಿನ್ನ ಕೈಕಾಲು ಮುರಿದುಹಾಕಿಬಿಡುತ್ತೇನೆ. ಥೂ, ನಿನ್ನ ನಾಯಿಬಾಳಿಗೆ ಬೆಂಕಿಹಾಕ. ”

ಎಂದು ಮಂಜಯ್ಯನ ಕಡೆ ತಿರುಗಿ

“ ಹಾಳಾಗಿಹೋಗಲಿ ಬಿಟ್ಟುಬಿಡಿ ಸ್ವಾಮಿ ” ಎಂದ.

ಮಂಜುಳಾ ಅಲ್ಲಿ ನಿಲ್ಲಲಾರದೆ ಒಳಗೆ ಹೊರಟುಹೋದಳು. ಪೀತಾಂಬರರಾಯ ನೆಲದಮೇಲೆ ಬಿದ್ದಿದ್ದ ತನ್ನ ಷೂಗಳನ್ನೆತ್ತಿಕೊಂಡು ಒಂದೇ ಉಸುರಿಗೆ ಓಡಿದ.

ನಂಜಪ್ಪ ತನ್ನ ಕೋಪ ನುಂಗಿಕೊಂಡು

“ ನಾವು ಬಂದರೆಷ್ಟು ಹೋದರೆಷ್ಟು ಎಂದು ಮಾತನಾಡುತ್ತಿದ್ದೆ. ಈಗ ನಾವೇ ಹೊರಟುಹೋಗುತ್ತಿದ್ದೇವೆ. ನಿನಗೆ ಹೇಗೆ ಬೇಕೋ ಹಾಗೆ ಸುಖವಾಗಿರು. ಇಂದಿಗೆ ನನ್ನ ನಿನ್ನ ಋಣಾನುಬಂಧ ತೀರಿಹೋಯಿತು. ”

ಸರಸ್ವತಿ ಕತ್ತೆತ್ತಿ ನೋಡಿದಳು. ಅವಳ ಕಂಠ ಗದ್ಗದವಾಗಿತ್ತು.

“ ತಪ್ಪಾಯಿತು. ಇದೊಂದು ಬಾರಿಗೆ ಕ್ಷಮಿಸಿ. ನನ್ನ ಕೈಬಿಡಬೇಡಿ.

“ ನಿನ್ನ ಕೈಹಿಡಿಯುವುದಕ್ಕೆ ಇಡಿಯ ಬೆಂಗಳೂರೇ ಸಿದ್ಧವಾಗಿದೆ. ಬೀದಿ ನಾಯಿಗೆ ಎಂಜಲು ಹಾಳಿಗಳ ಕೊರತೆಯಿಲ್ಲವಷ್ಟೇ!—ನಡೀರಿ ಮಂಜಯ್ಯನವರೇ, ಇನ್ನು ಇಲ್ಲೇನು ನಮಗೆ ಕೆಲಸ ” ಎಂದು ಹೇಳಿದ.

ಮಂಜಯ್ಯ ನಂಜಪ್ಪನ ಕೈಹಿಡಿದುಕೊಂಡು ಹೊರಗೆ ಕರೆದೊಯ್ದ.

ಹೊರಗೆ ಬಂದಕೂಡಲೆ ನಂಜಪ್ಪನ ದುಃಖ ಉಕ್ಕಿಬಂತು. ಗೊಳೋ ಎಂದು ಕಂಬನಿಗರೆದ.

“ ಒಡೆದ ಹಾಲಿಗೆ ವ್ಯಥೆಪಟ್ಟರೇನು ಸಾರ್ಥಕ ಸ್ವಾಮಿ. ”

“ ಇವಳ ಸಂಬಂಧ ತೀರಿತೆಂದು ನಾನು ದುಃಖಿಸುತ್ತಿಲ್ಲ ಮಂಜಯ್ಯನವರೇ — ನಿಮಗೆ ನಾನು ಮಾಡಿದ ಅಪಚಾರಕ್ಕಾಗಿ ವ್ಯಥೆಪಡುತ್ತಿದ್ದೇನೆ.

ನಿಮ್ಮ ಕಾಲುಮುಟ್ಟಿ ಬೇಡಿಕೊಳ್ಳುತ್ತೇನೆ. ನನ್ನನ್ನು ಕ್ಷಮಿಸಿ—ನನಗೆ ನೀವು ಮಾಡಿರುವ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಶಕ್ತಿ ನನಗೆ ದೇವರು ಕೊಡಲಿ."

"ಎಲ್ಲಾ ಮರೆತುಬಿಟ್ಟು ಸುಖವಾಗಿ ಮನೆಗೆ ಹೋಗಿ ಮಲಗಿಕೊಳ್ಳಿ. ಉಳಿದದ್ದನ್ನು ಬೆಳಗ್ಗೆ ಮಾತನಾಡೋಣ. ನಡೆಯಿರಿ, ನಿಮ್ಮನ್ನು ಮನೆಯ ವರೆಗೆ ಬಿಟ್ಟು ನಾನು ಹೋಗುತ್ತೇನೆ."

"ನೀವು ನಾಳೆ ನನಗಿನ್ನೊಂದು ಉಪಕಾರಮಾಡಬೇಕು."

"ಏನು ಹೇಳಿ."

"ಅರುಣೋದಯ ನಾಟ್ಯಶಾಲೆ ಇರುವ ಸ್ಥಳ ಗೊತ್ತಿದೆಯಷ್ಟೆ."

"ಗೊತ್ತಿದೆ."

"ಬೆಳಿಗ್ಗೆ ಅಲ್ಲಿಗೆ ಬರುವಿರಾ?"

"ಒಂಭತ್ತು ಗಂಟೆಗೆ ಬರುತ್ತೇನೆ—ಆಗಬಹುದೋ?"

"ಹಾಗೇ ಆಗಲಿ."

ಮಂಜಯ್ಯ ಸ್ವಲ್ಪದೂರ ನಂಜಪ್ಪನ ಜತೆ ನಡೆದುಹೋಗಿ ಅವನ ಮನೆಯ ರಸ್ತೆಯ ತಿರುವಿನಲ್ಲಿ ಬೀಳ್ಕೊಂಡ.

೧೯

ಮಾರನೆಯ ದಿನ ಶನಿವಾರವಾಗಿದ್ದುದರಿಂದ ಮಂಜುಳಾ, ಸುಧಾ ಇಬ್ಬರಿಗೂ ಶಾಲೆಯಿರಲಿಲ್ಲ. ಸುಧೆಯೇ ಬೇಗ ಎದ್ದು ಒಲೆ ಹೊತ್ತಿಸಿ ಕಾಫಿ ಡಿಕಾಕ್ಷನ್ ಹಾಕಿದಳು. ಸರಸ್ವತಿ ಎಂದಿಗಿಂತ ತಡವಾಗೆದ್ದು ಅಡಿಗೆಯ ಮನೆಯಲ್ಲಿ ಹೋಗಿ ಕುಳಿತಳು. ಸುಧಾ ಕಾಫಿ ಬೆರಸಿ ತಾಯಿಗೆ ಕೊಟ್ಟು

"ಅಮ್ಮ, ರಾತ್ರಿಯೆಲ್ಲಾ ಮಂಜುಳಕ್ಕ ಕಣ್ಣುಮುಚ್ಚಲಿಲ್ಲ."

ಸರಸ್ವತಿಯ ಕಣ್ಣುಗಳು 'ಏಕೆ?' ಎಂದು ಕೇಳಿದವು.

"ತುಂಬ ಜ್ವರ. ಏನೇನೋ ಮಾತಾಡಿಕೊಳ್ಳುತ್ತಿದ್ದಳು. ಮಧ್ಯೆಮಧ್ಯೆ ನಾಯಿ, ನಾಯಿ ಎನ್ನುತ್ತಿದ್ದಳು."

"ಈಗಲೂ ಜ್ವರವಿದೆಯೇ?"

"ಮೈಸುಡುತ್ತಿದೆ."

"ನೀನೇ ಹೋಗಿ ಡಾಕ್ಟರನ್ನು ಕರೆದುಕೊಂಡು ಬಾ ಸುಧಾ."

"ಅಕ್ಕನಿಗೆ ಜ್ವರವೇಕೆ ಬಂತೋ ಕಾಣೆ"

ಎಂದು ಸುಧಾ ತನ್ನಷ್ಟಕ್ಕೆ ಆಡಿಕೊಂಡಳು.

ಸುಧೆಯ ಜತೆಯಲ್ಲಿ ಬಂದ ಡಾಕ್ಟರು ರೋಗಿಯನ್ನು ಪರೀಕ್ಷಿಸಿ

"ಯಾರಾದರೂ ಲೇಡಿ ಡಾಕ್ಟರನ್ನು ಕರೆದುತೋರಿಸಿ"

ಎಂದು ಹೇಳಿ ಹೋದರು. ಡಾಕ್ಟರು ಹೇಳಿದುದನ್ನು ಕೇಳಿ ಸರಸ್ವತಿ ಬೆಚ್ಚಿ ಡಾ|| ಲಕ್ಷಮ್ಮನವರನ್ನು ಕರೆತರಲು ಸುಧೆಯನ್ನು ಕಳುಹಿಸಿಕೊಟ್ಟಳು.

ಮಂಜುಳಾ ಬಡಬಡಿಸುತ್ತಲೇ ಇದ್ದಳು. ತಾಯಿ ಬಂದು ಪಕ್ಕದಲ್ಲಿ ಕುಳಿತರೂ ಅವಳಿಗೆ ಮೈಮೇಲೆ ಪರಿವೆಯೇ ಇಲ್ಲ. ಆಗಾಗ್ಗೆ 'ನಾಯಿ—ನಾಯಿ' ಎಂದಂದು ಹಲ್ಲುಮುಡಿ ಕಚ್ಚುತ್ತಿದ್ದಳು.

ಸುಧೆ ಡಾ|| ಲಕ್ಷಮ್ಮನವರನ್ನು ಕರೆದುಕೊಂಡು ಬಂದಳು. ಡಾಕ್ಟರು ರೋಗಿಯನ್ನು ಪರೀಕ್ಷಿಸಿ

" ಕೂಡಲೆ ಆಸ್ಪತ್ರೆಗೆ ಸಾಗಿಸಬೇಕಮ್ಮ. "

" ಏನಾಗಿದೆ ಡಾಕ್ಟರೇ ? "

" ಗರ್ಭಪಾತದ ಲಕ್ಷಣಗಳು ತೋರಿಬರುತ್ತಿವೆ. ತಡಮಾಡಿದರೆ ರಕ್ತ ಸ್ರಾವವಾಗಿ ಪೇಷಂಟ್ ಉಳಿಯುವುದೇ ಕಷ್ಟವಾಗುತ್ತದೆ. "

ಸರಸ್ವತಿಯ ತಲೆಯಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಅವಳ ಅನಾಥಸ್ಥಿತಿಯನ್ನು ನೋಡಿ ಡಾಕ್ಟರು

" ಮನೆಯಲ್ಲಿ ಗಂಡಸರು ಯಾರೂ ಇಲ್ಲವೇ ? "

" ಇಲ್ಲ " ಎಂದು ಸುಧಾ ಉತ್ತರ ಹೇಳಿದಳು.

" ಪೇಷಂಟನ್ನು ಸಿದ್ಧಮಾಡಿ. ನನ್ನ ಕಾರಿದೆ—ನಾನು ಆಸ್ಪತ್ರೆಗೆ ಕರೆದು ಕೊಂಡು ಹೋಗಿ ಸೇರಿಸುತ್ತೇನೆ " ಎಂದರು.

ತಾಯಿಗೆ ಧೈರ್ಯ ಹೇಳಿ, ಅಕ್ಕನನ್ನು ಹೊರಡಿಸುವ ಪ್ರಯತ್ನ ಸುಧೆಯೇ ಮಾಡಬೇಕಾಯಿತು.

ಮಂಜುಳನನ್ನು ಆಸ್ಪತ್ರೆಗೆ ಸೇರಿಸಿ ಡಾ|| ಲಕ್ಷಮ್ಮನವರು ಲೇಡಿ ಮೆಡಿಕಲ್ ಆಫೀಸರಿಗೆ ಪೇಷಂಟಿನ ಬಗ್ಗೆ ತಮಗೆ ತಿಳಿದುದನ್ನು ನಿವೇದಿಸಿ ಹೊರಟು ಹೋದರು.

ಸರಸ್ವತಿ ಬಾಯಿಗೆ ಅಕ್ಕಿಕಾಳು ಹಾಕಿಕೊಂಡು ಆಸ್ಪತ್ರೆಯಲ್ಲಿಯೇ ಕುಳಿತಳು.

' ನನಗೂ ನನ್ನ ಮಕ್ಕಳಿಗೂ ಯಾರೂ ದಿಕ್ಕಿಲ್ಲದಂತಾಯಿತೇ ' ಎಂದು ಅವಳ ಅಂತರಂಗ ಮೊರೆಯಿತು.

ಆಸ್ಪತ್ರೆಯ ಲೇಡಿ ಡಾಕ್ಟರು ಮೃತ್ಯುವಿನೊಂದಿಗೆ ಹೋರಾಟಕ್ಕೆ ನಿಂತರು. ರೋಗಿಯ ಪ್ರಾಣ ಉಳಿಸಲು ಶಸ್ತ್ರಪ್ರಯೋಗ ಮಾಡಲು ಹಿಂಜರಿಯಲಿಲ್ಲ.

ಮಂಜುಳಾ ಮೈಮೇಲೆ ಸ್ಮೃತಿಯಿಲ್ಲದೆ ಮಲಗಿದಳು. ಸುಧಾ ಹೊಟೇಲಿನಿಂದ ಅನ್ನತಂದು ತಾಯಿಗೆ ಬಲವಂತವಾಗಿ ಸ್ವಲ್ಪ ತಿನ್ನಿಸಿ ತಾನೂ ತಿಂದಳು.

ಸುಧಾ ಕೊಟ್ಟಿದ್ದ ತಂತೀ ವರ್ತಮಾನ ನೋಡಿ ಗಾಬರಿಯಾಗಿ ಚಲು

ವಯ್ಯ ಹೆಂಡತಿಯೊಂದಿಗೆ ಮಾರನೆಯ ದಿವಸ ಮೈಸೂರಿನಿಂದ ಬಂದ.

ಅಣ್ಣನ ಮುಂದೆ ಯಾವುದನ್ನೂ ಬೈತಿಡಲು ಸರಸ್ವತಿಗೆ ಸಾಧ್ಯವಾಗಲಿಲ್ಲ. ಸರಸ್ವತಿ ಹೇಳಿದುದನ್ನು ಕೇಳಿಕೊಂಡು ಚಲುವಯ್ಯ

“ ನಮ್ಮ ವಂಶಕ್ಕೇ ಒಳ್ಳೆಯ ಗೌರವ ತಂದೆ. ಇನ್ನು ನಾವು ತಲೆಯೆತ್ತಿಕೊಂಡು ಬಾಳುವೆ ಮಾಡುವುದು ಹೇಗೆ ? ತಂಗಿ ಅಣ್ಣನಿಗೆ ಮಾಡಿದ ಮಹೋಪಕಾರ ಇದೇ ” ಎಂದ.

ಸರಸ್ವತಿ ಅಣ್ಣ ಅತ್ತಿಗೆ ಇಬ್ಬರ ಕಾಲೂ ಹಿಡಿದುಕೊಂಡು

“ ಈಗ ನನ್ನ ಕೈ ಬಿಡಬೇಡಿ—ನಿಮ್ಮನ್ನುಬಿಟ್ಟು ನನಗೆ ಇನ್ನು ಯಾರು ದಿಕ್ಕು ? ” ಎಂದಳು.

ಮಂಜುಳನಿಗೆ ಸ್ವಲ್ಪ ಗುಣಮುಖವಾಗಿ ಅವಳು ಪ್ರಯಾಣಮಾಡಲು ಸಾಧ್ಯವಾದಾಗ ಅವಳೊಂದಿಗೆ ಮೈಸೂರಿಗೆ ಬರಬೇಕೆಂದು ಹೆಂಡತಿಗೆ ಹೇಳಿ ಚಲುವಯ್ಯ ಪ್ರಯಾಣಮಾಡಿದ.

ಮಂಜುಳಾ ಆಸ್ಪತ್ರೆ ಬಿಟ್ಟು ಮನೆ ಸೇರಬೇಕಾದರೆ ಒಂದು ತಿಂಗಳು ಬೇಕಾಯಿತು. ಅವಳಿನ್ನೂ ಎದ್ದು ಓಡಿಯಾಡುವ ಸ್ಥಿತಿಯಲ್ಲಿರಲಿಲ್ಲ. ಊರು ಬಿಟ್ಟು ಬಹಳ ದಿವಸವಾಯಿತೆಂದು ಚಲುವಯ್ಯನ ಹೆಂಡತಿ ಆತುರಪಡಿಸಲಾರಂಭಿಸಿದಳು. ಅಂದು ಶುಕ್ರವಾರವಾಗಿದ್ದುದರಿಂದ ಮಾರನೆಯ ದಿವಸ ಪ್ರಯಾಣ ಮಾಡುವುದೆಂದು ನಿಶ್ಚಯವಾಯಿತು. ಸುಧಾ ಮಾವನಿಗೆ ತಂತೀ ವರ್ತಮಾನ ಕೊಟ್ಟಳು.

ಬೆಳಿಗ್ಗೆ ಹತ್ತೂವರೆಯ ಪ್ಯಾಸೆಂಜರ್ ಗಾಡಿಗೆ ಹೊರಡುವುದೆಂದು ಇತ್ಯರ್ಥವಾಯಿತು.

ಸರಸ್ವತಿ ಮಗಳನ್ನು ಬೀಳ್ಕೊಡಲು ಅವಳ ರೂಮಿಗೆ ಹೋದಳು. ಮಂಜುಳಾ ಕಣ್ಣು ಕೆಂಪಗೆ ಮಾಡಿಕೊಂಡು

“ ಏನು ? ” ಎಂದಳು.

“ ನನ್ನನ್ನು ಕ್ಷಮಿಸುವೆಯಾ ಮಂಜೂ. ”

“ ನಿನ್ನ ಮಂಜು ಎಂದೋ ಸತ್ತುಹೋದಳು. ”

“ ನಾನೊಂದು ಯೋಚಿಸಿದರೆ ದೈವ ತಾನೊಂದು ಯೋಚಿಸಿತು. ”

“ ನೀನೇ ದೈವ. ನಿನಗೆ ಬೇರೆ ದೈವ ಯಾವದಿದೆ ? ”

“ ಮಂಜೂ—ಆಗಿ ಹೋದುದನ್ನು ಮರೆತುಬಿಡು. ಮೈಸೂರಿನಲ್ಲಿದ್ದು ಒಂದೆರಡು ತಿಂಗಳು ಸುಧಾರಿಸಿಕೊಂಡು ಬಾ. ಮುಂದಿನದನ್ನು ಸಾವಕಾಶವಾಗಿ ಯೋಚಿಸಿ ನಿರ್ಧರಿಸೋಣ. ”

“ ಮರೆತುಬಿಡುತ್ತೇನೆ. ಎಲ್ಲವನ್ನೂ ಮರೆತುಬಿಡುತ್ತೇನೆ. ಆದರೆ ಒಂದು ವಿಷಯ ನನ್ನನ್ನು ಜೀವಸಹಿತ ಸುಟ್ಟರೂ ಮರೆಯಲಾರೆ.—ನಾನೂ ನನ್ನ ತಾಯಿಯೂ ಒಬ್ಬನ ಸೇವೆ ಮಾಡಿದ ವಿಷಯ ಮರೆಯಲಾರೆ ! ನನ್ನ ಬಾಳನ್ನು ಮಣ್ಣುಗೂಡಿಸಿಬಿಟ್ಟೆಯಲ್ಲಾ — ಇನ್ನೇನು ಸಾವಕಾಶವಾಗಿ ಯೋಚಿಸಿ ನಿರ್ಧರಿಸುವೆ. ”

“ ನಿನ್ನ ಅವರ ಸಂಬಂಧ ನಾನು ಸತ್ಯವಾಗಿ ಅರಿಯೆ ಮಂಜು. ”

“ ನಿನ್ನ ಮಕ್ಕಳ ಸ್ನೇಹಿತರು ಕೂಡ ನಿನಗೆ ಬೇಕಾಯಿತಲ್ಲವೇ ?—ಹೋಗಲಿ, ನಿನ್ನನ್ನೇಕೆ ಆಕ್ಷೇಪಿಸಲಿ. ನೀನು ಹೇಗಾಗಿರುವೆಯೋ ಹಾಗೇ ನಮ್ಮನ್ನೂ ಮಾಡಿದೆ. ನಾಯಿ ಮುಟ್ಟಿದ ಈ ಮಡಕೆಯನ್ನು ಇನ್ನು ಯಾರು ಮೂಸುವರು. ”

“ ಹಾಗನ್ನಬೇಡ ಮಂಜೂ. ಯಾವನಾದರೂ ಪುಣ್ಯಾತ್ಮ ನಿನ್ನ ಕೈ ಹಿಡಿಯುತ್ತಾನೆ. ”

“ ನಾನು ಪೀತಾಂಬರರಾಯರನ್ನು ಮನಃಪೂರ್ವಕವಾಗಿ ಪ್ರೀತಿಸಿದೆ. ಅವರೂ ನನ್ನನ್ನು ಪ್ರೀತಿಸಿದರು. ನನ್ನನ್ನು ಮದುವೆಯಾಗುತ್ತೇನೆಂದು ಮಾತು ಕೊಟ್ಟರು. ನಾನು ನನ್ನ ಸರ್ವಸ್ವವನ್ನೂ ಅವರಿಗೆ ಅರ್ಪಿಸಿಬಿಟ್ಟೆ.—ಈಗ ನನ್ನ ದೋಣಿ ಒಡೆದು ಚೂರಾಯಿತು. ನನ್ನ ಬಾಳು ಮಣ್ಣುಗೂಡಿಸಿದವರು ಬೇರೆ ಯಾರೂ ಅಲ್ಲ—ನನ್ನ ಹೆತ್ತ ತಾಯಿ. ”

“ ಮಂಜೂ—ಮಂಜೂ....”

“ ಯೋಚಿಸಬೇಡ. ಮೈಸೂರಿಗೆ ಹೋಗಿ ಸೋದರಮಾವನ ಮನೆಯಲ್ಲಿ ಆರೋಗ್ಯ ಸಂಪಾದನೆ ಮಾಡಿಕೊಂಡು ಬರುತ್ತೇನೆ. ನಿಮಗೆ ಹೇಗೆ ಬೇಕೋ

ಹಾಗಿರುತ್ತೇನೆ. ನೀನು ಯಾರ ಯಾರ ಸ್ನೇಹ ಮಾಡಿಸುವೆಯೋ ಅವರ ಸ್ನೇಹ ಮಾಡಿಕೊಳ್ಳುತ್ತೇನೆ. ಸರಸ್ವತಮ್ಮನಿಗೆ ಸರಿಯಾದ ಮಗಳು ಎನಿಸಿಕೊಂಡು ನಿನಗೆ ಕೀರ್ತಿ ತರುತ್ತೇನೆ" ಎಂದಳು.

ಸರಸ್ವತಿ ಅವಳ ಮುಂದೆ ನಿಲ್ಲಲು ಸಾಧ್ಯವಾಗಲಿಲ್ಲ.

ಮಂಜುಳನನ್ನು ಕರೆದುಕೊಂಡು ಚಲುವಯ್ಯನ ಹೆಂಡತಿ ಪ್ರಯಾಣ ಮಾಡಿದರು.

ಸರಸ್ವತಿ ತನಗೂ ಮಂಜುಳನಿಗೂ ಏರ್ಪಟ್ಟ ಅಂತರವನ್ನು ಗ್ರಹಿಸಿದಳು. ತನಗಾದ ಎಲ್ಲ ನಷ್ಟಕ್ಕಿಂತ ಈ ನಷ್ಟ ಹಿರಿದಾದುದೆಂದು ಅವಳು ತಿಳಿಯದಿರಲಿಲ್ಲ.

೨೦

" ಅರುಣೋದಯ ನಾಟ್ಯಶಾಲೆ "ಯ ಬಳಿ ಮಂಜಯ್ಯನನ್ನು ನಿರೀಕ್ಷಿಸಿಕೊಂಡು ನಂಜಪ್ಪ ನಿಂತಿದ್ದ. ಮಂಜಯ್ಯ ಬರುತ್ತಲೆ ಅವನನ್ನು ಆದರದಿಂದ ಸ್ವಾಗತಿಸಿ ಒಳಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದ.

" ಇದೇನು ಸ್ವಾಮಿ, ಇಲ್ಲಿಗೆ ನನ್ನ ಬರಮಾಡಿಕೊಂಡಿದ್ದು. "

" ಹೇಳುತ್ತೇನೆ, ತಡೆಯಿರಿ ಮಂಜಯ್ಯ. ನಮ್ಮ ಕುಮಾರನ ಪರಿಚಯ ನಿಮಗಿರಬಹುದು. ಈ ಶಾಲೆಯ ದಿಗ್ದರ್ಶಕ — ಒಳ್ಳೆಯ ನಾಟ್ಯಕಲಾ ವಿಶಾರದ. "

" ಹೆಸರು ಕೇಳಿದ್ದೇನೆ. ಪರಿಚಯವಿಲ್ಲ. "

ಇಬ್ಬರೂ ಕುಳಿತ ಸ್ವಲ್ಪ ಹೊತ್ತಿನಲ್ಲಿ ಕುಂತಳೆಯೇ ತಿಂಡಿ ತಂದು ಅವರ ಮುಂದಿಟ್ಟಳು.

" ಊರಿಗೆಲ್ಲಾ ನೀವು ತಿಂಡಿ ಕಾಫಿ ಕೊಡುವಿರಿ ಮಂಜಯ್ಯನವರೇ. ನಾನು ನಿಮಗೆ ತಿಂಡಿ ಕಾಫಿ ಕೊಡುತ್ತಿದ್ದೇನೆ. "

" ಹೊಟೇಲು ತಿಂಡಿಗೂ ಮನೆ ತಿಂಡಿಗೂ ವ್ಯತ್ಯಾಸವಿಲ್ಲವೇ ಸ್ವಾಮಿ. "

" ತುಂಬ ವ್ಯತ್ಯಾಸವಿದೆ ಮಂಜಯ್ಯನವರೇ. ತೆಗೆದುಕೊಳ್ಳಿ. "

ಅವರು ತಿಂಡಿ ತಿಂದು ಮುಗಿಸುವ ವೇಳೆಗೆ ಕುಂತಳ ಕಾಫಿ ತಂದು ಕೊಟ್ಟಳು. ನಂಜಪ್ಪ ಅವಳ ಕೈಯಿಂದ ಕಾಫಿ ಲೋಟ ತೆಗೆದುಕೊಂಡು

" ಕುಂತಳಾ, ಮಂಜಯ್ಯನವರಿಗೆ ನಮಸ್ಕಾರ ಮಾಡು " ಎಂದ.

ಕುಂತಳ ಮಂಜಯ್ಯನ ಪಾದಮುಟ್ಟಿ ನಮಸ್ಕರಿಸಿದಳು.

" ಇದೇನು ಸ್ವಾಮಿ. "

" ಇದೇನೆಂದು ನಿಮಗೆ ತಿಳಿಸುವುದರ ಸಲುವಾಗಿಯೇ ನಿಮ್ಮನ್ನಿಲ್ಲಿ ಬರಮಾಡಿಕೊಂಡಿದ್ದು. ಕುಳಿತುಕೋ ಕುಂತಳಾ. "

ಕುಂತಳಾ ಗೋಡೆಯನ್ನೊರಗಿಕೊಂಡು ನೆಲದ ಮೇಲೆ ಹಾಸಿದ ರತ್ನ

ಗಂಬಳಿಯ ಮೇಲೆ ಕುಳಿತಳು. ರಾಮಲಕ್ಷಮ್ಮ ಬಾಗಿಲು ಮರೆಯಲ್ಲಿ ನಿಂತಳು. ಹೊರಗೆ ಹೊರಡಲು ಎದ್ದು ನಿಂತ ಕುಮಾರನಿಗೆ ನಂಜಪ್ಪ

"ನೀನೂ ಇರು ಕುಮಾರ—ಹೋಗಬೇಡ" ಎಂದು ಹೇಳಿದ.

ಕುಮಾರನಿಗೂ ತನಗೂ ಪರಿಚಯವಾದ ದಿನದಿಂದ ಆರಂಭಿಸಿ, ನಾಟ್ಯ ಶಾಲೆ ಸ್ಥಾಪಿತವಾದುದು, ಕುಂತಳೆ ಬಂದುದು, ಕುಂತಳೆಗೂ ತನಗೂ ಬೆಳೆದ ಸ್ನೇಹ—ಇಂದಿನ ಪರಿಸ್ಥಿತಿಗಳೆಲ್ಲವನ್ನೂ ನಂಜಪ್ಪ ಚಾಚೂ ತಪ್ಪದೆ ಕೂಲಂಕಷ ವಾಗಿ ವರ್ಣಿಸಿದ.

ನಂಜಪ್ಪನ ನಿರೂಪಣೆ ಕೇಳಿ ಮಂಜಯ್ಯನಿಗೆ ಅತ್ಯಾಶ್ಚರ್ಯವಾಯಿತು.

"ಇವೆಲ್ಲಾ ನನಗೇಕೆ ಹೇಳಿದಿರಿ ಸ್ವಾಮಿ."

"ನಿಮ್ಮಲ್ಲಿ ಹೇಳಿಕೊಂಡು ನಿಮ್ಮ ಸಲಹೆ ಪಡೆಯದೆ ನಾನು ಯಾರಲ್ಲಿ ಹೇಳಿಕೊಳ್ಳಬೇಕು. ನನ್ನ ಮಾನ, ಪ್ರಾಣ ಕಾಪಾಡಿದ ಮಹಾನುಭಾವರು ನೀವು. ನಾನು ಪಶುವಲ್ಲ ಮನುಷ್ಯ ಎಂದು ತೋರಿಸಿಕೊಟ್ಟವರು ನೀವು. ನೀವು ಆರಂಭಿಸಿದ ಕೆಲಸವನ್ನು ನೀವೇ ಮುಕ್ತಾಯ ಮಾಡಬೇಕು."

"ನಾನೇನು ಮಾಡಬೇಕು?"

"ಕುಂತಳನಿಗೆ ನಾನು ತುಂಬ ಅನ್ಯಾಯ ಮಾಡಿದ್ದೇನೆ. ಅವಳ, ಅವಳ ತಾಯಿಯ ಬಡತನದ ದುರುಪಯೋಗ ಮಾಡಿಕೊಂಡು ಕುಂತಳನನ್ನು ನನ್ನ ಸ್ವಾರ್ಥಕ್ಕೆ ಬಳಸಿಕೊಂಡಿದ್ದೇನೆ. ಇವಳಿಗೆ ನಾನು ಮಾಡಿರುವ ಅನ್ಯಾಯವನ್ನು ಹೇಗೆ ಸರಿಪಡಿಸಬೇಕೆಂಬುದನ್ನು ನೀವೇ ತೋರಿಸಿ ಕೊಡಬೇಕು."

"ಕುಂತಳ ನಿಮ್ಮನ್ನೇ ನಂಬಿಕೊಂಡಿದ್ದಾಳೆ ಸಾಹುಕಾರರೇ."

ಎಂದು ಕುಮಾರ ಸೂಚಿಸಿದ.

"ಅವಳ ನಂಬಿಕೆಗೆ ನಾನು ದ್ರೋಹ ಬಗೆಯುವುದಿಲ್ಲ ಕುಮಾರ. ಎಲ್ಲ ರಿಗೂ ಹಿತವಾಗುವ ರೀತಿಯಲ್ಲಿ ಇತ್ಯರ್ಥಮಾಡಬೇಕೆಂದು ನನ್ನ ಆಸೆ. ಅದಕ್ಕೇ ನಾನು ಮಂಜಯ್ಯನವರ ಸಹಾಯ ಕೋರಿದುದು."

"ಈಗ ಏನು ಮಾಡಬೇಕೆಂದು ಯೋಚಿಸಿರುವಿರಿ ಸ್ವಾಮಿ."

ಎಂದು ಕುಮಾರ ಕೇಳಿದ.

" ರಾಮಲಕ್ಷಮ್ಮನನ್ನು ಕರೆದು ಕೇಳು ಕುಮಾರ. ಕುಂತಳನ ಹಿತ ಸಂರಕ್ಷಣೆಗೆ ಅವಳು ಏನು ಹೇಳಿದರೂ ಮಾಡಲು ನಾನು ಸಿದ್ಧನಾಗಿದ್ದೇನೆ."

ರಾಮಲಕ್ಷಮ್ಮ ಒಳಗೆ ಬಂದು

" ನೀವೇ ನಮ್ಮ ಭಾಗದ ದೇವರೆಂದು ನಾವು ದೃಢವಾಗಿ ನಂಬಿದ್ದೇವೆ. ನಿಮಗೆ ಹೇಗೆ ಸೂಕ್ತ ತೋರುವುದೋ ಹಾಗೆಮಾಡಿ. ಹಾಲಿನಲ್ಲಾದರೂ ಹಾಕಿ ನೀರಿನಲ್ಲಾದರೂ ಹಾಕಿ."

" ನಿಮ್ಮ ಮನಸ್ಸಿನಲ್ಲಿ ಏನಿದೆ ಹೇಳಿ ನಂಜಪ್ಪನವರೇ."

ಎಂದು ಮಂಜಯ್ಯ ಕೇಳಿದ.

" ರಾಮಲಕ್ಷಮ್ಮನಿಗೆ ಇಷ್ಟವಿದ್ದರೆ ಅಣಿಯಾದ ಗಂಡು ನೋಡಿ ಕುಂತಳ ನಿಗೆ ಮದುವೆ ಮಾಡಲಿ. ಕುಂತಳ ಮರ್ಯಾದೆಯಾಗಿ ಬಾಳುವೆ ಮಾಡಿಕೊಂಡು ಸುಖವಾಗಿರಬೇಕೆಂಬುದೇ ನನ್ನ ಆಕಾಂಕ್ಷೆ."

" ಈ ವಿಷಯದಲ್ಲಿ ಕುಂತಳಮ್ಮನ ಅಭಿಪ್ರಾಯವೇನೆಂಬುದನ್ನು ತಿಳಿದು ಕೊಳ್ಳಬೇಕು."

" ಹೇಳಮ್ಮ, ಸಂಕೋಚಪಟ್ಟುಕೊಳ್ಳಬೇಡ "

ಎಂದು ಕುಮಾರ ಸೂಚಿಸಿದ.

ತನ್ನ ಮುಂದಿದ್ದ ಸಮಸ್ಯೆ ಗಹನವಾದುದೆಂದು ತಿಳಿಯಲು ಕುಂತಳನಿಗೆ ತಡವಾಗಲಿಲ್ಲ. ಆದರೆ ಸಮಸ್ಯೆ ಉದ್ಭವಿಸಿದ ಬಗೆಯ ಅರಿವು ಅವಳಿಗಾಗಿರಲಿಲ್ಲ. 'ನಂಜಪ್ಪನವರು ಏನು ಯೋಚಿಸುತ್ತಿದ್ದಾರೆ—ನನ್ನ ಕೈ ಬಿಡುವ ಯೋಚನೆ ಅವರಿಗೆ ಬಂದಿರಬಹುದೇ' ಎಂದು ವಿಚಾರಪರವಶಳಾದಳು. ಮಂಜಯ್ಯನ ಎದುರಿಗೆ ತನ್ನ ಅಂತರಂಗವನ್ನು ಬಿಚ್ಚಿ ತೋರಿಸಬೇಕಾದ ಪ್ರಸಂಗ ಒದಗಿದು ದಕ್ಕೆ ಅವಳಿಗೆ ಪರಿತಾಪವಾಯಿತು. ಅವಳು ಮಾತನಾಡಲು ಅನುಮಾನಿಸು ತ್ತಿದ್ದುದನ್ನು ಕಂಡು ನಂಜಪ್ಪ

" ಮಂಜಯ್ಯ ನನಗೆ ದೂರದವರಲ್ಲ ಕುಂತಳಾ. ಅವರನ್ನು ನಾನು ಗುರು ಗಳನ್ನಾಗಿ ಮಾಡಿಕೊಂಡಿದ್ದೇನೆ. ಅವರ ಮುಂದೆ ನೀನು ನಿಸ್ಸಂಕೋಚವಾಗಿ ಮಾತನಾಡಬಹುದು."

ಕುಂತಳೆ ಮನಸ್ಸು ಗಟ್ಟಿಮಾಡಿಕೊಂಡಳು. ಅತ್ಯಂತ ಪ್ರಯಾಸದಿಂ
ತನ್ನ ಭಾವೋದ್ವೇಗಕ್ಕೆ ಸಂಯಮದ ಕಡಿವಾಣ ಹಾಕಿ

" ಸ್ವಾಮಿ, ಏನೂ ಕೆಲಸಕ್ಕೆ ಬಾರದ ನನ್ನನ್ನು ನೀವು ಉದ್ಧಾರ ಮಾ
ದಿರಿ. ಬಡತನದ ಬೆಂಕಿಯಲ್ಲಿ ಬೇಯುತ್ತಿದ್ದ ನಮ್ಮನ್ನು ಕಾಪಾಡಿದಿರಿ. ನಿಮ
ಯಾವ ರೀತಿಯಲ್ಲಿಯೂ ಕಾಲ್ತೊಡಕಾಗಬೇಕೆಂಬುದು ನನ್ನ ಉದ್ದೇಶವಲ್ಲ
ನಿಮ್ಮನ್ನು ನೋಡುವ ಮುಂಚೆ ನಾನು ಯಾರನ್ನೂ ಕಣ್ಣೆತ್ತಿ ನೋಡಿರಲಿಲ್ಲ
ನೀವು ನನ್ನ ವಿಷಯದಲ್ಲಿ ಪ್ರೀತಿ ತೋರಿಸಿದಿರಿ. ನಾವಿಬ್ಬರೂ ಕೂಡಿದ ದಿನವೇ
ನಾನು ಶಪಥ ಮಾಡಿದೆ—ಈ ಜನ್ಮದಲ್ಲಿ, ಮುಂದಿನ ಜನ್ಮಗಳಲ್ಲಿ ಇವರೇ ನನ್ನ
ಪತಿ. ಇವರನ್ನುಳಿದು ನಾನು ಬೇರೊಬ್ಬರನ್ನು ಕಣ್ಣೆತ್ತಿಯೂ ನೋಡುವುದಿಲ್ಲ
ವೆಂದು. ನನ್ನ ಕೈ ಹಿಡಿದು ಕಾಪಾಡಿದರೂ ನೀವೇ ನನ್ನ ಪತಿ, ನನ್ನನ್ನು
ತ್ಯಜಿಸಿದರೂ ನೀವೇ ನನ್ನ ಪತಿ. ಕಷ್ಟ, ದುಃಖ, ಬಡತನ ನನಗೂ ನನ್ನ
ತಾಯಿಗೂ ಹೊಸದಲ್ಲ. ನಾವಿಬ್ಬರೂ ದುಡಿದು ಹೊಟ್ಟೆ ಹೊರೆಯಬಲ್ಲೆವು
ನನಗೆ ನಿಮ್ಮ ಪಾದಸೇವೆ ಮಾಡುವ ಭಾಗ್ಯವಿಲ್ಲದ ಹಾಗೆ ಮಾಡಬೇಡಿ. ಎರಡು
ಹೊತ್ತು ಊಟ, ವರ್ಷಕ್ಕೆರಡು ಸಾಧಾರಣ ಸೀರೆಗಳನ್ನುಳಿದು ನಾನೇನೂ
ಬಯಸುವುದಿಲ್ಲ. "

ಕುಂತಳೆಯ ಕಳಕಳಿಯ ನುಡಿ ಎಲ್ಲರ ಕಣ್ಣುಗಳನ್ನೂ ತೇವಗೊಳಿಸಿತು.
ನಂಜಪ್ಪ ಸಾವಕಾಶವಾಗಿ

" ಈಗ ನನ್ನ ಮನಸ್ಸಿಗೆ ದೊಡ್ಡ ಪೆಟ್ಟು ಬಿದ್ದಿದೆ ಕುಂತಳಾ. ಮಂಜಯ್ಯ
ನವರು ನನ್ನ ನೆರವಿಗೆ ಬಂದು ಕಾಪಾಡದಿದ್ದರೆ ನನ್ನ ಗತಿ ಏನು ಆಗಿ ಹೋಗು
ತ್ತಿತ್ತೋ—ನನ್ನ ದುರ್ವಿಧಿ ನನ್ನ ಕೈಯಲ್ಲಿ ಎಂಥ ಅತ್ಯಾಚಾರ ಮಾಡಿಸು
ತ್ತಿತ್ತೋ ? "

ಎಂದು ಸರಸ್ವತಿಯ ತನ್ನ ಸಂಬಂಧದ ಕಥೆಯನ್ನು ವಿವರವಾಗಿ ಹೇಳಿ
ಹಿಂದಿನ ರಾತ್ರಿಯ ಅನುಭವವನ್ನು ಮರೆಮಾಚದೆ ತಿಳಿಸಿದ. ಅದನ್ನು ಕೇಳಿ
ಕುಂತಳೆಯ ಮುಖ ಗಂಭೀರವಾಯಿತು.

" ಸ್ವಾಮಿ, ನಾನು ತಿಳಿದವಳಲ್ಲ, ವಿದ್ಯಾವತಿಯಲ್ಲ. ವಯಸ್ಸಿನಿಂದ

ಅನುಭವ ದೊರಕಿಸಿಕೊಂಡವಳೂ ಅಲ್ಲ. ನಿಮ್ಮನ್ನೊಂದು ಮಾತು ಸ್ಪಷ್ಟವಾಗಿ ಕೇಳುತ್ತೇನೆ. ನನ್ನಿಂದ ಅಪಚಾರವಾದರೆ ಅಜ್ಞಾನಿಯ ಮಾತೆಂದು ಕ್ಷಮಿಸಿಬಿಡಿ. ”

“ ಕೇಳು ಕುಂತಳಾ. ”

“ ಹೆಣ್ಣು ಏನು ಬಯಸುವುದು ಬಲ್ಲಿರಾ? ”

“ ಏನನ್ನು ಬಯಸುತ್ತದೆ ? ”

“ ದೇವರನ್ನು—ತನ್ನ ಸಮಸ್ತ ಶಕ್ತಿ, ಸೌಖ್ಯ, ಸೇವೆಯನ್ನು ಮನಃಪೂರ್ವಕವಾಗಿ ಗಂಡಿನ ಪಾದಕ್ಕೆ ವಿನಾಸಲು ಮಾಡಬೇಕೆಂದು ಬಯಸುತ್ತದೆ. ಅದಕ್ಕೆ ಪ್ರತಿಯಾಗಿ ಗಂಡಿನಿಂದ ನಿರೀಕ್ಷಿಸುವುದು ಒಂದು ಒಳ್ಳೆಯ ಮಾತು—ಕಷ್ಟ ಬಂದಾಗ ಕನಿಕರಿಸುವ ಸ್ವಭಾವ. ಒಡವೆ, ವಸ್ತ್ರಗಳನ್ನು ಹೆಣ್ಣು ಬಯಸುತ್ತದೆ ನಿಜ—ಅವುಗಳನ್ನು ಧರಿಸಿ ತನ್ನ ಗಂಡನ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕೆಂಬ ಆಸೆಯೇ ಆ ಬಯಕೆಯ ಕಾರಣ.—ಸರಸ್ವತಮ್ಮನಿಗೆ ಬೇಕಾಗಿದ್ದುದು ನಿಮ್ಮ ಹಣ, ನಿಮ್ಮ ಯೌವನ ; ನನಗೆ ಬೇಕಾಗಿರುವುದು ನಿಮ್ಮ ಗುಣ, ನಿಮ್ಮ ಅಮರ ಪ್ರೇಮ. ”

ಈ ಮಾತುಗಳನ್ನಾಡಿದವಳು ಕುಂತಳೆಯೇ ಎಂದು ಆಶ್ಚರ್ಯಚಕಿತನಾಗಿ ನಂಜಪ್ಪ ಅವಳ ಮುಖ ನೋಡಿದ.

ಎಲ್ಲರೂ ಮಂಜಯ್ಯನ ಕಡೆ ತಿರುಗಿದರು. ಮಂಜಯ್ಯನ ಸಲಹೆಯ ಮೇಲೆ ಕುಂತಳೆಯ ಭವಿಷ್ಯ ನಿಂತಿದ್ದಿತು.

“ ನಂಜಪ್ಪನವರೇ, ನಮಗೆ ದುಡ್ಡಿಗೆ ಸಿಕ್ಕುವುದು ಹೆಣ್ಣಿನ ಮೈಯೇ ವಿನಾ ಮನಸ್ಸಲ್ಲ. ಮನಸ್ಸನ್ನು ಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ. ಗಂಡುಹೆಣ್ಣುಗಳ ಯಾವದೋ ಜನ್ಮದ ಫಲದಿಂದ ಅವರಲ್ಲಿ ಪವಿತ್ರ ಅನುರಾಗ ಹುಟ್ಟುತ್ತದೆ. ಅಂಥದು ಸಾವಿರದಲ್ಲಿ, ಹತ್ತು ಸಾವಿರದಲ್ಲಿ ಒಂದು. ನೀವು ನಿಜವಾಗಿಯೂ ಪುಣ್ಯಶಾಲಿಗಳು. ಕುಂತಳಮ್ಮನಂಥ ಸದ್ಗುಣಿ ನಿಮ್ಮಲ್ಲಿ ಅನುರಕ್ತಳಾಗಿರುವುದು ನಿಮ್ಮ ಭಾಗ್ಯ—ಯಾವ ಕಾರಣಕ್ಕೂ ಈ ಭಾಗ್ಯವನ್ನು ಕಳೆದುಕೊಳ್ಳಬೇಡಿ. ಸರಸ್ವತಿಯ ದುಷ್ಟ ಸಂಗದಲ್ಲಿ ಆದ ಕಹಿ ಅನುಭವವನ್ನು

ಈಕೆಯ ಸದ್ಸಹವಾಸದಲ್ಲಿ ಮರೆತುಬಿಡಿ. ”

“ ನಿಮ್ಮ ಮಾತು ತೆಗೆದು ಹಾಕುವುದಿಲ್ಲ ಮಂಜಯ್ಯನವರೇ. ಗುರವಾಕ್ಯ ವೆಂದು ಅಕ್ಷರಶಃ ಪಾಲಿಸುತ್ತೇನೆ ” ಎಂದು ನಂಜಪ್ಪ ಹೇಳಿದ.

ಕುಂತಳೆಗಾದ ಸಂತೋಷ ಅಷ್ಟಿಷ್ಟಲ್ಲ. ತನ್ನ ಪಾಲಿನ ಪುಣ್ಯದೇವತೆ ಯಾಗಿ ಬಂದ ಮಂಜಯ್ಯನಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದಳು.

ಮಂಜಯ್ಯ ಹೊರಡಲನುವಾಗಿ ಕುಮಾರನ ಕಡೆ ತಿರುಗಿ

“ ನಿಮ್ಮ ನಾಟ್ಯ ನನಗಷ್ಟು ತೋರಿಸಿ ಕುಮಾರರೇ. ”

“ ಆಗಲಿ ಸ್ವಾಮಿ. ನಮ್ಮ ಶಾಲೆಯ ಮೇಲೆ ವಿಶ್ವಾಸವಿಡಿ. ”

“ ಆಗಬಹುದು ” ಎಂದು ಹೇಳಿದ.

ಅಂದು ಅಲ್ಲಿಯೇ ಮಂಜಯ್ಯನನ್ನು ಊಟಕ್ಕೆ ಉಳಿಸಿಕೊಳ್ಳಬೇಕೆಂದು ನಂಜಪ್ಪ, ಕುಂತಳ ಇಬ್ಬರೂ ಪ್ರಯತ್ನಿಸಿದರು. ‘ ಇನ್ನೊಮ್ಮೆ ಬರುತ್ತೇನೆ, ಇವತ್ತು ಬೇಡ ’ ಎಂದು ಹೇಳಿ ಮಂಜಯ್ಯ ಹೊರಟುಬಿಟ್ಟ.

೨೧

ಸರಸ್ವತಿ ಕಟ್ಟಿದ್ದ ಕನಸಿನ ಗೋಪುರ ಮುರಿದುಬಿದ್ದಿತ್ತು. ಅವಳ ಆಸೆಗಳು, ಬಯಕೆಗಳು ಮಣ್ಣುಗೂಡಿ ಹೋಗಿದ್ದವು. ಎಲ್ಲಿಯೋ ಮರೆಯಲ್ಲಿ ಅಡಗಿ ಕುಳಿತಿದ್ದ ಸಂಸಾರ ಶಾಪತ್ರಯ ಅವಳಿಗೆ ಮುತ್ತಿಗೆ ಹಾಕಿತ್ತು. ಮಂಜುಳನ ಔಷಧೋಪಚಾರದ ಖರ್ಚು, ಡಾಕ್ಟರುಗಳ ಫೀಸು, ಅಣ್ಣ ಅತ್ತಿಗೆ ಬಂದು ಹೋದ ಖರ್ಚುಗಳಲ್ಲದೆ ಮೈಸೂರಿಗೆ ಮಂಜುಳನಿಗೂ ಹಣ ಕಳುಹಿಸಿ ಕೊಡಬೇಕಾಗಿತ್ತು. ಅಣ್ಣ ತನ್ನವನಾದರೂ, ಅತ್ತಿಗೆ ತನ್ನವಳಲ್ಲ. ಮಂಜುಳನ ಆರೈಕೆ ಅತ್ತಿಗೆ ನೋಡಿಕೊಳ್ಳಬೇಕಾದರೆ ಅವಳಿಗೆ ಕೈತುಂಬ ಹಣ ಕಳುಹಿಸಿದ ಹೊರತೂ ನಿರ್ವಾಹವಿರಲಿಲ್ಲ.

ಸರಸ್ವತಿ ಬಳಿಯಿದ್ದ ಪುಡಿಗಂಟು ಕರಗಿ, ಮೈಮೇಲಿದ್ದ ಒಡವೆಗಳು ಗಿರವಿಯಂಗಡಿ ಸೇರಬೇಕಾಯಿತು. ಮಂಜಯ್ಯ, ನಂಜಪ್ಪ ತಂದುಕೊಟ್ಟಿದ್ದ ಹೊಸ ಸೀರೆಗಳನ್ನೂ ಒತ್ತೆಯಿಡಬೇಕಾಯಿತು.

ರಾಮುರಾಜುವೇನೋ ಬಂದು ಹೋಗುತ್ತಿದ್ದ. ಆದರೆ ಅವನ ಮನಸ್ಸಿನಲ್ಲಿಯೂ ಮೊದಲಿನ ಉತ್ಸಾಹ ಉಳಿದಿರಲಿಲ್ಲ. ಕರ್ತವ್ಯದೃಷ್ಟಿಯಿಂದ ಅವನು ಬರುತ್ತಿದ್ದ ಹಾಗಿತ್ತು. ಮೊದಲಿನ ಧಾರಾಳವೂ ಕಾಣೆಯಾಗಿತ್ತು. ಬಂದಾಗ ಐದು ಹತ್ತು ರೂಪಾಯಿ ಸರಸ್ವತಿಯ ಕೈಯಲ್ಲಿಡುತ್ತಿದ್ದ.

'ಮುಂದೇನು ಗತಿ' ಎಂದು ಸರಸ್ವತಿ ಯೋಚನೆ ಮಾಡತೊಡಗಿದಳು. ತಾಪತ್ರಯ ಹೆಚ್ಚಿದಂತೆ ಪಶ್ಚಾತ್ತಾಪವೂ ಹೆಚ್ಚುತ್ತ ಬಂದಿತು. ಮಂಜಯ್ಯ, ನಂಜಪ್ಪ ಇಬ್ಬರಿಗೂ ತಾನು ಮಾಡಿದ ಅನ್ಯಾಯವನ್ನು ನೆನೆದು ಕಣ್ಣೀರು ಗರೆದಳು.

ನೆರೆಹೊರೆಯವರು ಸರಸ್ವತಿಯ ಅಸಹಾಯಕ ಸ್ಥಿತಿಯನ್ನರಿತಿದ್ದರೂ ಅವರು ಸರಸ್ವತಿಯನ್ನು ಕಾಡದೆ ಬಿಡುತ್ತಿರಲಿಲ್ಲ. ಬೆಳಿಗ್ಗೆಯಿಂದ ಸಂಜೆಯ ವರೆಗೆ ತುಪ್ಪ, ಸಕ್ಕರೆ, ಕಾಫೀಪುಡಿ, ಅಕ್ಕಿ, ಬೇಳೆ, ಮೆಣಸಿನಪುಡಿ, ರವೆ,

ಇದ್ದಿಲು ಸಾಲ ಕೇಳುವವರ ಕಾಟ ನಿಲ್ಲಲಿಲ್ಲ. ಕೊಟ್ಟ ಸಾಲ ಹಿಂದಕ್ಕೆ ಬರುವು ದಿಲ್ಲವೆಂದು ತಿಳಿದಿದ್ದರೂ ಸರಸ್ವತಿ ಅವರ ಬೇಡಿಕೆಗಳನ್ನು ಪೂರೈಸುತ್ತಿದ್ದಳು. ನೆರೆಹೊರೆಯವರು ಮುನಿದು ಮನೆ ಬಿಡಿಸಿದರೇನು ಮಾಡುವುದು ಎನ್ನುವ ಚಿಂತೆ ಬೇರೆ ಅವಳನ್ನು ಕಾಡತೊಡಗಿತು.

ಹಗಲಿರುಳೂ ಯೋಚನೆ ಮಾಡಿ ಮಾಡಿ ಸರಸ್ವತಿ ಒಂದು ನಿರ್ಧಾರಕ್ಕೆ ಬಂದಳು. ಮಂಜಯ್ಯನ ವಿಶ್ವಾಸವನ್ನು ಹಿಂದಕ್ಕೆ ದೊರಕಿಸಿಕೊಳ್ಳುವುದು ಸಲ್ಲದ ಮಾತಾಗಿತ್ತು. ಖಂಡಿತವಾದಿಯಾದ ಅವನಿಗೆ ಕ್ಷಣಕ್ಷಣಕ್ಕೆ ಮನಸ್ಸು ಬದಲಾಯಿಸುವ ಸ್ವಭಾವವಿರಲಿಲ್ಲ. ಅಲ್ಲದೆ ಮೊದಲಿನಿಂದಲೂ ಸರಸ್ವತಿ ಮಂಜಯ್ಯನ ಸಂಗವನ್ನು ಸಹಿಸುತ್ತಿದ್ದಳಲ್ಲದೆ ಬಯಸುತ್ತಿರಲಿಲ್ಲ.

ಅವಳ ಧ್ಯಾನಬಿಂಬದಲ್ಲಿ ಕಂಗೊಳಿಸಿದುದು ನಂಜಪ್ಪನ ಮೂರ್ತಿ. ನಂಜಪ್ಪ ಭಾವಜೀವಿ—ದಯಾದಾಕ್ಷಿಣ್ಯಪರ. ಇಷ್ಟೆಲ್ಲ ಹಗರಣ—ಮಾರಣ ಹೋಮವಾಗಿದ್ದರೂ ಅವನ ಮನಸ್ಸನ್ನು ಕರಗಿಸಬಹುದೆಂಬ ಕುಟುಕು ಆಸೆ ಸರಸ್ವತಿಯನ್ನಾವರಿಸಿತು. ಒಮ್ಮೆ ಹೇಗಾದರೂ ಮಾಡಿ ನಂಜಪ್ಪನನ್ನು ಮನೆಗೆ ಬರಮಾಡಿಕೊಂಡರೆ ಅವನ ಅಂತಃಕರಣವನ್ನು ಕಲಕಬಹುದು. ಮಂಜುಳೆಯ ದುರ್ಗತಿ ತಿಳದ ಮೇಲಂತೂ ಖಂಡಿತವಾಗಿಯೂ ಅವನು ಮರುಗುತ್ತಾನೆ. ಪ್ರೇಮಧಿಂದಲ್ಲದಿದ್ದರೂ ಕನಿಕರದಿಂದ ಸಹಾಯಮಾಡುತ್ತಾನೆ ಎಂದು ಸರಸ್ವತಿ ಬಗೆದಳು.

ಆದರೆ ನಂಜಪ್ಪನನ್ನು ಬರಮಾಡಿಕೊಳ್ಳುವುದು ಹೇಗೆ? ಅವನ ಮೇಲೆ ಮಂಜಯ್ಯ ಪ್ರಭಾವ ಬೀರಿದ್ದಾನೆ. ತನ್ನ ಮನೆಗೆ ನಂಜಪ್ಪ ಬರುವುದಕ್ಕೆ ಮಂಜಯ್ಯ ಖಂಡಿತವಾಗಿ ಅವಕಾಶಕೊಡುವುದಿಲ್ಲ. ನಂಜಪ್ಪನಿಗೆ ಕಾಗದ ಬರೆಯುವುದೊಂದೇ ಉಪಾಯವೆಂದು ಸರಸ್ವತಿಗೆ ತೋರಿ ಬಂದಿತು.

ನಂಜಪ್ಪನಿಗೆ ದೀರ್ಘವಾಗಿ ಕಾಗದ ಬರೆದಳು. ಅದೇ ಕಾಗದದ ಇನ್ನೊಂದು ಪ್ರತಿ ಮಾಡಿದಳು. ಕಾಗದದ ಒಕ್ಕಣೆಯಲ್ಲಿ, ಮಾತುಗಾರಿಕೆ ಯಲ್ಲಿ ಏನು ಹೆಚ್ಚುಕಡಿಮೆಯಾಗಿದೆಯೋ ಎಂದು ಹಲವು ಬಾರಿ ಓದಿ ನೋಡಿ ಕೊಂಡಳು.

" ಹೃದಯೇಶ್ವರಾ,

ಮಹಾಪಾಪಿಯಾದ ನಾನು ನಿಮ್ಮ ಹೆಸರನ್ನು ಉಚ್ಚರಿಸುವುದಕ್ಕೂ ಅನರ್ಹಳು. ನಿಮಗೆ ಕಾಗದ ಬರೆದು ನನ್ನ ಹೃದಯ ತೋಡಿಕೊಳ್ಳುವ ಸಾಹಸ ಮಾಡುತ್ತಿದ್ದೇನೆ. ದಯೆಯಿಟ್ಟು ಸಹನೆ ತಂದುಕೊಂಡು ಕಾಗದವನ್ನು ಪೂರ್ತಿಯಾಗಿ ಓದಿ.

ಆ ರಾತ್ರಿ ನೀವೂ ಮಂಜಯ್ಯನವರೂ ಬಂದು ನನ್ನ ಮನೆಯಲ್ಲಿ ನಡೆಯುತ್ತಿದ್ದುದನ್ನು ಕಣ್ಣಾರೆ ಕಂಡು ಹೋದ ಮೇಲೆ ನೀವು ಇತ್ತ ಸುಳಿಯಲಿಲ್ಲ. ತಪ್ಪಿತಸ್ಥಳಾದ ನನಗೆ ಅಂದು ಒಂದು ಮಾತೂ ಹೇಳಲು ಸಾಧ್ಯವಾಗಲಿಲ್ಲ. ಹಿಂದೆ ನಾನು ಹೇಳುತ್ತಿದ್ದಂತೆ ಈಗಲೂ ಸುಳ್ಳು ಹೇಳಿ ನಿಮ್ಮನ್ನು ವಂಚಿಸಲಿಚ್ಛಿಸುವುದಿಲ್ಲ. ನನ್ನ ದೇವರ ಮುಂದೆ ಸತ್ಯವನ್ನು ಹೇಳಿಬಿಡುತ್ತೇನೆ. ಪಶ್ಚಾತ್ತಾಪದಿಂದ ಬೆಂದುಹೋಗಿರುವ ನನ್ನ ಮನಸ್ಸಿಗೆ ನಿಮ್ಮ ಅನ್ಮೃತನುಡಿಗಳು ಜೀವಕಳೆಯನ್ನು ನೀಡಬೇಕು.

ಪೀತಾಂಬರರಾಯರೊಡನೆ ನಾನು ಸಂಬಂಧ ಬೆಳಸಿದ್ದುದು ನಿಜ. ಅಂದು ನೀವು ಕೋಪಮಾಡಿಕೊಂಡು ನನ್ನನ್ನು ಹೊಡೆದಿರಿ. ಆ ಶಿಕ್ಷೆಗೆ ನಾನು ಅರ್ಹಳು. ನಿಮ್ಮ ಪ್ರೇಮದ ಘನತೆಯನ್ನರಿಯದೆ ಕೀಳುಮಾರ್ಗದಲ್ಲಿ ಕಾಲಿಟ್ಟೆ. ನಿಮ್ಮ ಮನಸ್ಸಿಗೆ ನಾನು ಮಾಡಿದ ನೋವಿಗೆ ದೇವರೂ ನನ್ನನ್ನು ಕ್ಷಮಿಸಲಾರ.

ಆದರೆ ನಾನು ಪೀತಾಂಬರರಾಯರೊಂದಿಗೆ ಕಾಮೇಚ್ಛೆಗಾಗಿ ಸಂಬಂಧ ಬೆಳಸಲಿಲ್ಲ. ಅವರು ಮಂಜುಳನ ಸ್ನೇಹ ಬೆಳಸಿದ್ದರು. ಮಂಜುಳನ ಭವಿಷ್ಯವನ್ನು ಪೀತಾಂಬರರಾಯರು ಹಾಳುಮಾಡಿಬಿಡುವರೆಂದು ಹೆದರಿದೆ. ಮಂಜುಳ ನನ್ನ ಬುದ್ಧಿಯ ಮಾತು ಕೇಳಲಿಲ್ಲ. ಪೀತಾಂಬರರಾಯರ ಮನಸ್ಸನ್ನು ಮಂಜುಳನ ಹಿಡಿತದಿಂದ ಬಿಡಿಸಿದರೆ ಅವಳ ಬಾಳು ಸುಗಮವಾಗುತ್ತದೆಂದು ಲೆಕ್ಕ ಹಾಕಿಕೊಂಡೆ. ಉದ್ದೇಶಪೂರ್ವಕವಾಗಿ ಅವರೊಂದಿಗೆ ಸಂಬಂಧ ಬೆಳಸಿದೆ. ಆದರೆ ಪರಿಣಾಮ ನಾನು ನಿರೀಕ್ಷಿಸಿದಂತೆ ಆಗಲಿಲ್ಲ. ನಿಮ್ಮನ್ನೂ ಕಳೆದುಕೊಂಡೆ—ಮಂಜುಳನನ್ನೂ ಕಳೆದುಕೊಂಡೆ.

ನನ್ನನ್ನು ಪ್ರೇಯಸಿ ಎಂದು ಪ್ರೀತಿಸುತ್ತಿದ್ದಿರಿ. ಮಕ್ಕಳ ಶ್ರೇಯಸ್ಸಿಗಾಗಿ ನಾನು ಪಟ್ಟ ಕಷ್ಟ—ಅನುಭವಿಸುತ್ತಿದ್ದ ಬಾಳನ್ನು ನೆನೆದು ಕಣ್ಣೀರು ಹಾಕು ತ್ತಿದ್ದಿರಿ. 'ನೀನು ಎಷ್ಟೇ ಕೆಟ್ಟವಳಾದರೂ ತಾಯಿ ಎಂಬುದನ್ನು ಮರೆಯಲಾರೆ' ಎಂದು ಹೇಳುತ್ತಿದ್ದಿರಿ. ಆ ಮಾತನ್ನು ಈಗ ನಾನು ನಿಮಗೆ ಜ್ಞಾಪಿಸಿ ಕೊಡುತ್ತೇನೆ.

ರಾಜೂ—ನೀವು ದೊಡ್ಡವರು. ನಿಮ್ಮ ಉಂಗುಷ್ಠವನ್ನು ಹೋಲುವ ಯೋಗ್ಯತೆ ನನಗಿಲ್ಲ. ನನ್ನ ಅಪರಾಧ ಮನ್ನಿಸುವುದು ನಿಮಗೊಂದು ದೊಡ್ಡ ವಿಷಯವೇ? ಮದರಾಸಿನಲ್ಲಿ ನಾವಿಬ್ಬರೂ ಜತೆಯಲ್ಲಿ ಕಳೆದ ದಿನಗಳನ್ನು ಜ್ಞಾಪಿಸಿಕೊಳ್ಳಿ. ಅಂದು ನಾವು ಸುಖಪಟ್ಟುದು ಸುಳ್ಳೇ? ಆ ಪವಿತ್ರ ದಿನಗಳ ಸ್ಮರಣೆ ತಂದುಕೊಂಡು ನನ್ನನ್ನು ಕ್ಷಮಿಸಲಾರಿರಾ?

ಹಿಂದೆ ನಿಮಗೆ ನಾನೆಷ್ಟೋ ಮಾತು ಕೊಟ್ಟದ್ದೇನೆ. ಒಂದನ್ನೂ ನಡೆಸಿಲ್ಲ. ಉದ್ದಕ್ಕೂ ಸುಳ್ಳು ಹೇಳಿಕೊಂಡೇ ಬಂದಿದ್ದೇನೆ. ಇನ್ನು ಏತಕ್ಕೆ ಸುಳ್ಳು ಹೇಳಲಿ—ನನ್ನ ಮಕ್ಕಳಾಣೆಗೂ ಇನ್ನು ಮುಂದೆ ಸುಳ್ಳು ಹೇಳುವುದಿಲ್ಲ, ಕೀಳು ಆಸೆಗೆ ಮನಸ್ಸುಗೊಡುವುದಿಲ್ಲ, ಯಾವ ಕಾರಣಕ್ಕೂ ನಿಮಗೆ ಅಸಮಾಧಾನ ವನ್ನುಂಟುಮಾಡುವುದಿಲ್ಲ.

ಇದೊಂದು ಬಾರಿಗೆ ನನ್ನನ್ನು ಕ್ಷಮಿಸಿ ಇಲ್ಲಿಗೆ ಬನ್ನಿ. ಇದು ಎಂದಿದ್ದರೂ ನಿಮ್ಮ ದೇಹ, ನಿಮಗಾಗಿ ಕಾಯುತ್ತಿರುತ್ತದೆ. ನೀವು ಅಪ್ಪಿಕೊಂಡರೆ ತನ್ನ ಜನ್ಮ ಸಾರ್ಥಕವಾಯಿತೆಂದು ಭಾವಿಸುತ್ತದೆ.

ರಾಜೂ, ಖಂಡಿತವಾಗಿ ನಿಮ್ಮನ್ನು ಬಿಟ್ಟು ನಾನು ಬದುಕಿರಲಾರೆ. ನಿಮ್ಮ ವಿಶ್ವಾಸವನ್ನು ಕಳೆದುಕೊಂಡು ಬಾಳು ನೂಕಲಾರೆ. ಬನ್ನಿ ದೊರೆ—ಬಂದು ನನ್ನನ್ನು ಕಾಪಾಡಿ. ನನ್ನ ಮೊರೆ ನಿಮ್ಮ ಹೃದಯ ಮುಟ್ಟಲಿ ಎಂದು ಭಗವಂತ ನನ್ನು ಪ್ರಾರ್ಥಿಸುವ

ನಿಮ್ಮ ಪಾದಧೂಳಿ 'ಸರಸಾ'"

ಕಾಗದದ ಒಂದು ಪ್ರತಿಯನ್ನು ನಂಜಪ್ಪನ ಅಂಗಡಿಯ ವಿಳಾಸಕ್ಕೂ ಇನ್ನೊಂದು ಕಾಗದವನ್ನು 'ನಾಟ್ಯಶಾಲೆ'ಯ ವಿಳಾಸಕ್ಕೂ ಪೋಸ್ಟ್ ಮಾಡಿ

ನಂಜಪ್ಪನನ್ನು ನಿರೀಕ್ಷಿಸುತ್ತ ಕುಳಿತಳು. ಕಾಗದ ನೋಡಿದ ಕೂಡಲೆ ನಂಜಪ್ಪ ಬಂದೇ ಬರುವನೆಂದು ಅವಳು ಅಳಿಯಾಸೆ ತಳೆದಳು.

ಅಂಗಡಿಯಲ್ಲಿ ನಾಗಣ್ಣ ಕೊಟ್ಟ ಕಾಗದವನ್ನು ನೋಡಿಕೊಂಡು ಕಿಸೆಯಲ್ಲಿ ಅದನ್ನು ಇಟ್ಟುಕೊಂಡೇ ನಂಜಪ್ಪ 'ನಾಟ್ಯಶಾಲೆ'ಗೆ ಬಂದ. ಅಲ್ಲಿಗೆ ಬಂದಿದ್ದ ಕಾಗದವನ್ನು ಕುಂತಳಾ ನಂಜಪ್ಪನ ಕೈಗಿತ್ತಳು. ಅದನ್ನೂ ನೋಡಿಕೊಂಡು ಎರಡು ಕಾಗದಗಳನ್ನೂ ನಂಜಪ್ಪ ಕುಂತಳನ ಕೈಯಲ್ಲಿಟ್ಟು

"ನೋಡು" ಎಂದ.

ಕುಂತಳ ಕಾಗದಗಳನ್ನೋದಿಕೊಂಡು

"ಎರಡೂ ಒಂದೇ ಕಾಗದದ ಪ್ರತಿಗಳು."

"ಹೌದು. ನನ್ನ ಕೈಗೆ ಕಡ್ಡಾಯವಾಗಿ ಸೇರಬೇಕೆಂದು ಎರಡು ವಿಳಾಸಕ್ಕೂ ಕಳುಹಿಸಿದ್ದಾಳೆ."

"ಉತ್ತರ ಏನು ಬರೆಯುವಿರಿ?"

"ಉತ್ತರ ಬರೆಯಬೇಕೇನು?"

"ನೋಡಿ—ಹೇಗೆ ಸೂಕ್ತವೋ ಹಾಗೆ ಮಾಡಿ."

"ಏನು ಮಾಡಲಿ ಎಂದು ನಿನ್ನನ್ನು ಕೇಳುತ್ತಿದ್ದೇನೆ."

"ಆಕೆ ತುಂಬ ವ್ಯಸನದಲ್ಲಿರುವ ಹಾಗೆ ಕಾಣುತ್ತದೆ. ಹೋಗಿ ಒಮ್ಮೆ ನೋಡಿಕೊಂಡು ಬಂದರೆ ಒಳ್ಳೆಯದಲ್ಲವೇ?"

"ಪರಿಣಾಮ ವಿಪರೀತವಾದರೆ...."

"ಏನಾಗುತ್ತದೆ."

"ಮತ್ತೆ ಅವಳು ನನಗೆ ಗಂಟುಬಿದ್ದರೆ."

"ಗಂಟುಹಾಕಿಕೊಳ್ಳುವುದಕ್ಕೆ ನೀವು ಸಿದ್ಧವಾಗಿದ್ದರೆ ತಾನೆ ಅವಳು ಗಂಟು ಬೀಳುವುದು."

"ಮನುಷ್ಯನ ಮನಸ್ಸು ಯಾವಾಗಲೂ ಗಟ್ಟಿಯಾಗಿರುತ್ತದೆಂದು ಹೇಳಲು ಸಾಧ್ಯವಿಲ್ಲ."

"ನನ್ನ ಸ್ವಾಮಿಯ ಮನಸ್ಸು ಗಟ್ಟಿಯೆಂದು ನಾನು ಬಲ್ಲೆ. ಅದಕ್ಕೇ

ಧೈರ್ಯವಾಗಿ ಹೋಗಿ ಬನ್ನಿರೆಂದು ನಾನು ಹೇಳುತ್ತಿರುವುದು."

"ನಾಳೆ ಹೆಚ್ಚು ಕಡಿಮೆಯಾಗಿ ನಿನ್ನನ್ನು ಬಿಡಬೇಕಾದ ಪ್ರಸಂಗ ಬಿದ್ದರೆ."

"ಅದಕ್ಕೂ ನಾನು ಸಿದ್ಧಳಾಗಿದ್ದೇನೆ. ಸ್ವಾಮಿಗೆ ಹೇಗೆ ಸುಖವೋ ಹಾಗೆ ಮಾಡಬಹುದು."

"ನಿನ್ನ ತ್ಯಾಗ ಜೀರ್ಣಿಸಿಕೊಳ್ಳುವ ಯೋಗ್ಯತೆ ಲೋಕಕ್ಕಿಲ್ಲ ಕುಂತಳಾ."

"ಪ್ರತಿಫಲವನ್ನಪೇಕ್ಷಿಸುವ ತ್ಯಾಗ ಎಂಥ ತ್ಯಾಗ?"

"ನಾನು ಮಾರುತ್ತರವನ್ನೂ ಕೊಡುವುದಿಲ್ಲ—ಅತ್ತ ಸುಳಿಯುವುದೂ ಇಲ್ಲ. ಈಗ ನಾನು ಅನುಭವಿಸಿರುವುದೇ ಸಾಕು. ನನ್ನನ್ನು ಇನ್ನೂ ಜೀವ ದೊರಸೆ ಈ ಪುಣ್ಯಾತ್ಗಿತ್ತಿ ಬಿಡುವ ಹಾಗಿಲ್ಲ. ಯಾವ ವಿಷಗಳಿಗೆಯಲ್ಲಿ ಇವಳ ದರ್ಶನ ಮಾಡಿದೆನೋ ಏನೋ?" ಎಂದು ಬೇಸರಪಟ್ಟುಕೊಂಡ.

ಮೂರು ದಿವಸಗಳ ತರುವಾಯ ಸಂಜಪ್ಪನಿಗೆ ಮತ್ತೊಂದು ಕಾಗದ ಬಂದಿತು.

"ಪ್ರಿಯತಮಾ,

ನನ್ನ ಕಾಗದಗಳಿಗೆ ನಿಮ್ಮಿಂದ ಉತ್ತರ ಬರಲಿಲ್ಲ. ನೀವೇ ಬರುತ್ತೀರೆಂದು ನಂಬಿದ್ದೆ. ನೀವೂ ಬರಲಿಲ್ಲ. ನನ್ನನ್ನೇಕೆ ಹೀಗೆ ಹಿಂಸೆ ಮಾಡುವಿರಿ? ನನ್ನ ಪರೀಕ್ಷೆ ಯಾವಾಗ ಮುಗಿಯುತ್ತದೆ ಎಂಬುದನ್ನಾದರೂ ತಿಳಿಸಿ.

ನಿಮ್ಮನ್ನು ನೋಡದೆ ನಾನು ಬದುಕಿರಲಾರೆ. ನೀವು ಹೀಗೆಯೇ ನನ್ನನ್ನು ಉಪೇಕ್ಷೆಮಾಡುತ್ತ ಬಂದರೆ ಮುಂದೆ ತುಂಬ ವ್ಯಸನಪಡುವಿರಿ. ನಾನು ವಿಷ ಕುಡಿದು ನಾಟ್ಯಶಾಲೆಯ ಕಾಂಪೌಂಡಿನಲ್ಲಿ ಪ್ರಾಣ ಬಿಡುತ್ತೇನೆ.

ಈ ಕಾಗದ ಕೈ ಸೇರಿದ ಕೂಡಲೆ ಬಂದು ನನ್ನನ್ನು ಕಾಪಾಡಿ. ನನ್ನನ್ನೊಮ್ಮೆ ನೀವು ನೋಡಿದರೆ ನನ್ನ ಅವಸ್ಥೆ ಗೊತ್ತಾಗುತ್ತದೆ. ನೀವು ಬರುವಿರಿ ಎನ್ನುವ ಆಸೆಯೇ ನನ್ನ ಪ್ರಾಣ ಕಾಪಾಡುತ್ತಿದೆ. ನನ್ನನ್ನು ನಿರಾಶೆಗೊಳಿಸಿ ಸ್ತ್ರೀಹತ್ಯಕ್ಕೆ ಗುರಿಯಾಗಬೇಡಿ.

ಇಂತು ನಿಮ್ಮ ದಾಸಿ 'ಸರಸಾ'"

ಸರಸ್ವತಿಯ ಎರಡನೆಯ ಕಾಗದ ನಂಜಪ್ಪನ ಮನಃಶಾಂತಿಯನ್ನು ಕದಡಿತ್ತು. ಕೆರಳಿ ಕೆಂಡವಾಗಿ

"ನೋಡಿದೆಯಾ ಇವಳ ಆಟ ಕುಂತಳಾ. ಬೇಡಿದ್ದಾಯಿತ್ತು, ಈಗ ಹೆದರಿಸುವುದಕ್ಕೆ ಆರಂಭಿಸಿದ್ದಾಳೆ."

"ಒಂದು ವೇಳೆ ಆಕೆ ಬರೆದಿರುವಂತೆ ವಿಷಕುಡಿದು ಪ್ರಾಣಬಿಟ್ಟರೆ...."

ನಂಜಪ್ಪ ಗಹಗಹಿಸಿ ನಕ್ಕು

"ಅವಳಿಗಂಥ ಮನೋದಾರ್ಢ್ಯವಿದೆಯೆಂದು ತಿಳಿದಿರುವೆಯಾ? ಸಾಯು ವವರು ಯಾರಾದರೂ ಊರಿನಲ್ಲೆಲ್ಲಾ ಡಂಗುರ ಸಾರಿಕೊಂಡು ಪ್ರಾಣ ಬಿಡು ತ್ತಾರೆಯೇ? ನನ್ನ ಮೇಲಣ ವಿಶ್ವಾಸದಿಂದ ನನಗಾಗಿ ಪ್ರಾಣ ಒಪ್ಪಿಸಲು ಸಿದ್ಧ ವಾಗಿರುವವಳು ನನಗೆ ವಂಚನೆ ಮಾಡುತ್ತಿದ್ದಳೇ? ಮನೆಗೆ ಬಂದವರ ಮಗ್ಗುಲಿ ನಲ್ಲೆಲ್ಲಾ ಮಲಗುವುದಕ್ಕೆ ಮನಸ್ಸು ಮಾಡುತ್ತಿದ್ದಳೇ? ಇದೆಲ್ಲಾ ನಾಲ್ಕುಕಾಸು ಕಿತ್ತುಕೊಳ್ಳುವ ಹಂಚಿಕೆ ಕುಂತಳಾ."

"ಈಗೇನು ಮಾಡುವಿರಿ?"

"ಏನೂ ಮಾಡುವುದಿಲ್ಲ. ಕಾಗದವನ್ನು ಹರಿದು ಬಿಸುಟು ಸುಮ್ಮ ನಾಗುತ್ತೇನೆ."

ತನ್ನ ಎರಡನೆಯ ಕಾಗದಕ್ಕೂ ಉತ್ತರ ಬರದೆ ನಂಜಪ್ಪನೂ ಮನೆಯತ್ತ ಸುಳಿಯದಿದ್ದುದನ್ನು ಕಂಡು ಸರಸ್ವತಿ ಹೊಸ ಹಂಚಿಕೆ ಹೂಡಿದಳು.

ಮನೆಗೆ ಬಂದ ರಾಮರಾಜಪ್ಪ ಸರಸ್ವತಿಯ ಇಳಿಮೋರೆಯನ್ನು ಕಂಡು

"ಏಕೆ ಹೀಗಿದ್ದೀ. ಮೈಯಲ್ಲಿ ಹುಷಾರಿಲ್ಲವೇ?" ಎಂದು ಕೇಳಿದ.

"ನನಗೇನೂ ರೋಗವಿಲ್ಲ. ಇರುವ ರೋಗವೊಂದೇ–ಮನೋರೋಗ."

"ಇನ್ನೂ ನಂಜಪ್ಪನ ಧ್ಯಾನ ಬಿಡಲೊಲ್ಲೆ."

"ಅವರಿಗೆ ಎರಡು ಕಾಗದ ಬರೆದೆ—ಒಂದಕ್ಕೂ ಉತ್ತರವಿಲ್ಲ."

"ಅವನನ್ನೇಕೆ ಬಲವಂತಮಾಡುವೆ. ಋಣಾನುಬಂಧ ತೀರಿತು."

"ಎಂದಿಗೂ ಸಾಧ್ಯವಿಲ್ಲ."

"ಏನು ಮಾಡುತ್ತೀ?"

" ಅವರ ಅಂಗಡಿಗೇ ಹುಡುಕಿಕೊಂಡು ಹೋಗುತ್ತೇನೆ. "

" ಆತ ನಾಲ್ಕು ಜನರಲ್ಲಿ ಮರ್ಯಾದೆಯಾಗಿ ಬಾಳುವೆ ಮಾಡುತ್ತಿದ್ದಾನೆ. ನೀನು ಆತನ ಮರ್ಯಾದೆ ಕಳೆಯುವುದು ನ್ಯಾಯವಲ್ಲ. "

" ಇಷ್ಟು ನಾನು ಕೇಳಿಗೊಂಡರೂ ಅವರು ಒಂದು ಸಲವಾದರೂ ಇತ್ತ ಬರಬಾರದೇ ? "

" ನೀನು ಅವನ ಅಂಗಡಿಯ ಸಮೀಪಕ್ಕೆ ಹೋಗುವುದಿಲ್ಲವೆಂದು ಮಾತು ಕೊಟ್ಟರೆ ನಾನು ಹೋಗಿ ಕರೆದು ಬರುತ್ತೇನೆ. "

" ಅಷ್ಟು ಮಾಡುವಿರಾ ? "

" ಮಾಡದಿದ್ದರೆ ವಿಧಿಯೇ ಇಲ್ಲವಾಗಿದೆ. ನನ್ನ ಹಣೆಯ ಬರಹ ಏನಾಯಿತು ನೋಡು. "

ರಾಮರಾಜಪ್ಪ ಕೊಟ್ಟ ಮಾತು ತಪ್ಪಲಿಲ್ಲ. ಸಂಜೆ ಅಂಗಡಿಯ ಕಡೆ ಹೋದ. ಗಿರಾಕಿಗಳು ತುಂಬಿದ್ದರು. ಅಲ್ಲಿ ಮಾತನಾಡಲು ಸಾಧ್ಯವಾಗುವುದಿಲ್ಲವೆಂದು ಎಂಟು ಗಂಟೆಯ ವೇಳೆಗೆ ನಾಟ್ಯಶಾಲೆಗೆ ಸಂಜಪ್ಪನನ್ನು ಹುಡುಕಿಕೊಂಡು ಬಂದ.

" ನನ್ನ ಪರಿಚಯ ನಿಮಗಿದೆಯೋ ಇಲ್ಲವೋ ನಂಜಪ್ಪನವರೇ. "

" ಪರಿಚಯವಿಲ್ಲ. ನಿಮ್ಮನ್ನು ಮುತ್ತಮ್ಮನ ಮನೆಯಲ್ಲಿ ನೋಡಿದ್ದೇನೆ. ಇದೇನು ಇಲ್ಲಿಗೆ ಬಂದಿರಿ. "

" ನಿಮ್ಮಲ್ಲಿ ಸ್ವಲ್ಪ ಮಾತಾಡುವುದಿತ್ತು. "

" ಯಾವ ವಿಷಯ. "

" ಸರಸ್ವತಿಯ ವಿಷಯ. "

" ಅದಕ್ಕೂ ನಿಮಗೂ ಏನು ಸಂಬಂಧ. "

" ಸರಸ್ವತಿಗೂ ನನಗೂ ಸ್ನೇಹ. ಅವಳೇ ಹೇಳಿ ಕಳುಹಿಸಿದ್ದಾಳೆ "

" ಸ್ನೇಹ ಯಾವಾಗಿನಿಂದ ? "

" ನೀವು ಅವಳೊಂದಿಗೆ ಮುತ್ತಮ್ಮನ ಮನೆಗೆ ಬಂದು ಹೋದಿರಲ್ಲಾ— ಅದಾದ ಕೆಲವು ದಿವಸಗಳ ಮೇಲೆ. "

“ ನಿಮ್ಮನ್ನು ನೋಡಲು ಅವಳು ಮುತ್ತಮ್ಮನ ಮನೆಗೆ ಬರುತ್ತಿದ್ದಳೇ ? ”

“ ಬರುತ್ತಿದ್ದಳು. ”

“ ಮುತ್ತಮ್ಮನ ಸಹವಾಸ ನೀಚ ಸಹವಾಸ, ತನ್ನಂಥ ಮಹಾಸಾಧ್ವಿ ಅವಳ ಮನೆಗೆ ಹೋಗುವುದು ಗೌರವವಲ್ಲ ಎಂದು ನನಗೆ ಹೇಳಿದ್ದಳು. ”

“ ಆ ವೃತ್ತಿಗೆ ಬಿದ್ದವರು ಹಾಗೆ ಹೇಳುವುದು ಸಹಜ ನಂಜಪ್ಪನವರೇ. ಅವಳ ಮಾತನ್ನು ವೇದವಾಕ್ಯವೆಂದು ನಂಬಿದುದು ನಿಮ್ಮ ತಪ್ಪು. ”

“ ಅವಳ ಸಹವಾಸ ಮಾಡಿದುದು ನನ್ನ ದೊಡ್ಡ ತಪ್ಪು. ”

“ ಒಮ್ಮೆ ಬಂದು ಹೋಗಲು ಸಾಧ್ಯವಿಲ್ಲವೇ ? ”

“ ನಾನೇಕೆ ಬರಬೇಕು. ”

“ ಅವಳು ನಿಮ್ಮ ಅಂಗಡಿಗೆ ಹೋಗಿ ನಿಮ್ಮನ್ನು ಕಾಣುತ್ತೇನೆಂದಳು. ಇದರಿಂದ ನಿಮಗೆ ತೊಂದರೆಯಾಗಬಹುದೆಂದು ನಾನು ನಿಮ್ಮನ್ನು ಬರಮಾಡುವ ಹೊಣೆ ಹೊತ್ತುಕೊಂಡೆ. ”

“ ನಿಮ್ಮ ಉಪಕಾರಕ್ಕೆ ನಾನು ಋಣಿಯಾಗಿದ್ದೇನೆ. ಆದರೆ ನಾನು ಯಾವ ಕಾರಣಕ್ಕೂ ಅವಳ ಮನೆಯ ಹೊಸ್ತಿಲು ಮೆಟ್ಟುವುದಿಲ್ಲ—ಅವಳ ಮುಖಾವಲೋಕನ ಮಾಡುವುದಿಲ್ಲ. ”

“ ಒಂದು ಬಾರಿ ಬರಲು ಸಾಧ್ಯವಿಲ್ಲವೇ ? ”

“ ನನ್ನ ಹಿತೈಷಿಗಳಾಗಿ ನೀವು ಈಗಾಗಲೇ ನನಗೊಂದು ಉಪಕಾರ ಮಾಡಿರುವಿರಿ. ಇನ್ನೊಂದು ಉಪಕಾರಮಾಡಿ. ಅವಳಿಗೆ ವಿವೇಕ ಹೇಳಿ ನನಗೆ ಈ ಕಾಟ ತಪ್ಪಿಸಿ. ಯಾವಜ್ಜೀವವೂ ನಿಮಗೆ ನಾನು ಋಣಿಯಾಗಿರುತ್ತೇನೆ. ಅವಳು ನನ್ನ ಅಂಗಡಿಗೆ ಬಂದು ನನ್ನ ಮರ್ಯಾದೆ ಕಳೆಯಲೆತ್ನಿಸಿದರೆ ಅವಳ ಪಾಡು ನೆಟ್ಟಗಾಗುವುದಿಲ್ಲ. ”

“ ದುಡುಕಬೇಡಿ. ಆ ಅವಿವೇಕಿಗೆ ನಾನು ಬುದ್ಧಿ ಹೇಳುತ್ತೇನೆ. ”

“ ನೀವೇಕೆ ಈ ಕುಲಟೆಯ ರಾಯಭಾರಿಗಳಾಗಿ ಬಂದಿರಿ ? ”

“ ಹೇಳಿದೆನಲ್ಲಾ, ಅವಳಿಗಾಗಿಯಲ್ಲ, ನಿಮಗಾಗಿ. ನನಗೆ ಇಂಥವರ ವಿಷಯದಲ್ಲಿ ಒಣಮೋಹವೇ ಇಲ್ಲ ನಂಜಪ್ಪನವರೇ. ಅಂದಿನ ಋಣ ಅಂದೇ

ಪರಿಹರಿಸಿಕೊಂಡುಬಿಡುತ್ತೇನೆ."

"ನೀವೇ ಸುಖಿಗಳು. ನಾನು ಒರಟು ಮಾತನಾಡಿದ್ದರೆ ಕ್ಷಮಿಸಿ."

"ನೀವು ನಿಶ್ಚಿಂತರಾಗಿರಿ." ಎಂದು ರಾಮರಿಾಜಪ್ಪ ಹೇಳಿಹೋದ.

ಎರಡು ದಿನಗಳ ತರುವಾಯ ನಂಜಪ್ಪನಿಗೆ ಇನ್ನೊಂದು ಕಾಗದ ಬಂದಿತು. ಅದನ್ನು ಒಡೆದು ನೋಡಿಕೊಂಡಾಗ ಅವನ ತಲೆ ಕಾದುಹೋಯಿತು. ಸ್ವಲ್ಪ ಹೊತ್ತಾದಮೇಲೆ ಅಂಗಡಿಯ ಮುಂದೆ ಸರಸ್ವತಿ ಒಂದೆರಡು ಬಾರಿ ಸುಳಿದಾಡಿ. ಎದುರಿಗಿದ್ದ ಬೆಳ್ಳಿಯ ಅಂಗಡಿಗೆ ಹೋಗಿ ಅಲ್ಲಿಂದ ದಿಟ್ಟಿಸಿ ನೋಡಿದುದನ್ನು ಕಂಡು ನಂಜಪ್ಪನ ಮನಃಶಾಂತಿ ತುಮುರು ತಮುರಾಗಿ ಒಡೆದುಹೋಯಿತು. ಸರಸ್ವತಿ ಬೆಳ್ಳಿಯ ಅಂಗಡಿ ಬಿಟ್ಟು ಹೋಗುವುದಕ್ಕೆ ಕಾದಿದ್ದು ನಂಜಪ್ಪ ನೇರ ವಾಗಿ ನಾಟ್ಯಶಾಲೆಗೆ ಬಂದ.

ನಂಜಪ್ಪನ ಕೋಪೋದ್ದೀಪಿತ ಸ್ಥಿತಿಯನ್ನು ನೋಡಿ ಕುಮಾರ, ಕುಂತಳೆ ಇಬ್ಬರೂ ಗಾಬರಿಯಾದರು. ಅಂದು ನಡೆದುದನ್ನು ನಂಜಪ್ಪ ವರ್ಣಿಸಿ

"ಕುಮಾರ, ಒಂದು ಕೆಲಸ ಮಾಡಯ್ಯ. ನೀನು ಈಗಲೇ ಅವಳ ಮನೆಗೆ ಹೋಗಿ, 'ನಂಜಪ್ಪನವರನ್ನು ಕಾಡುವುದನ್ನು ಬಿಡದಿದ್ದರೆ ನಿನ್ನ ಸ್ಥಿತಿ ನೆಟ್ಟಗಾಗುವುದಿಲ್ಲ. ಇನ್ನೊಂದು ಸಲ ನೀನು ಅಂಗಡಿಯ ಮುಂದೆ ಸುಳಿದರೆ ನಿನ್ನ ಕಾಲು ಮುರಿಸಿಹಾಕುತ್ತಾರೆ' ಎಂದು ತಿಳಿಸಿ ಬಾ."

"ನಾನು ಅವರ ಮನೆಗೆ ಕಾಲಿಟ್ಟು ಎಷ್ಟೋ ದಿವಸವಾಯಿತಲ್ಲಾ ಸಾಹುಕಾರರೇ."

"ಚಿಂತೆಯಿಲ್ಲ. ಇವತ್ತು ನನಗಾಗಿ ಹೋಗಿ ಬಾ" ಎಂದು ಕಟ್ಟಾಜ್ಞೆ ವಿಧಿಸಿದ.

ಕುಮಾರನ ಮುಖ ಕಂಡೊಡನೆಯೇ ಸರಸ್ವತಿಯ ಮುಖದಲ್ಲಿ ಸಂತೋಷ ಚಿಮ್ಮಿತು. 'ಬನ್ನಿ ಬನ್ನಿ' ಎಂದು ಸ್ವಾಗತಿಸಿ ಅವನು ತೊಟ್ಟಿಯಲ್ಲಿ ಕುಳಿತಮೇಲೆ

"ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಹಾಗೆ ಬಂದಿರಿ."

"ಯಾರಮ್ಮ ಬಡವರು!"

“ ನಿಮಗೂ ನನ್ನ ಮೇಲೆ ನಿರ್ದಯವೇ ? ”

“ ದಯ ನಿರ್ದಯ ತೋರಿಸುವುದಕ್ಕೆ ನಾನು ಯಾವ ಊರ ದಾಸಯ್ಯ.”

“ ಸಾಹುಕಾರರು ಚೆನ್ನಾಗಿದ್ದಾರೆಯೇ ? ”

“ ಚೆನ್ನಾಗಿದ್ದಾರೆ. ”

“ ನಾನು ಕಾಗದ ಬರೆದಿದ್ದೆ. ಅವರಿಂದ ಜವಾಬು ಬರಲಿಲ್ಲ. ”

“ ಅದಕ್ಕೇ ನನ್ನ ಕಳುಹಿಸಿದ್ದಾರೆ. ”

“ ಏನು ಹೇಳಿದರು—ಯಾವಾಗ ಬರುತ್ತಾರೆ. ”

“ ಅವರು ಬರುವ ಯೋಚನೆ ಬಿಟ್ಟುಬಿಡಿ. ”

“ ನಮ್ಮಿಬ್ಬರನ್ನೂ ಒಂದುಗೂಡಿಸಿದವರು ನೀವು ಕುಮಾರರೇ. ಆ ಕೆಲಸ ನೀವೇ ಪುನಃ ಮಾಡಬೇಕಾಗಿದೆ. ”

“ ಅದು ನನ್ನ ಶಕ್ತಿಮೀರಿದ ಕೆಲಸ. ನಿಮಗೊಂದು ಮಾತು ಹೇಳುತ್ತೇನೆ. ಕೇಳುತ್ತೀರೋ ? ”

“ ಏನು ಹೇಳಿ. ”

“ ನಿಮ್ಮ ಭಾಗಕ್ಕೆ ಅವರಿಲ್ಲವೆಂದುಕೊಂಡು ಮನಸ್ಸು ಗಟ್ಟಿಮಾಡಿಕೊಳ್ಳಿ. ನೀವು ಹೀಗೆ ಪದೇ ಪದೇ ಅವರಿಗೆ ತೊಂದರೆ ಕೊಟ್ಟರೆ ಅವರು ತಕ್ಕ ಕ್ರಮ ಕೈಗೊಳ್ಳಬೇಕಾಗುತ್ತದೆ. ”

“ ಈ ಮಾತು ಅವರೇ ಹೇಳಿಕಳುಹಿಸಿದರೇ ? ”

“ ಅವರು ಹೇಳಿಕಳುಹಿಸಿದುದನ್ನು ನಾನು ಸ್ಪಷ್ಟವಾಗಿ ಹೇಳಿದರೆ ನಿಮ್ಮ ಎದೆ ನಡುಗುತ್ತದೆ. ನಿಮ್ಮ ಹೆಸರು ಎತ್ತಿದರೆ ಅವರು ಕಿಡಿಕಿಡಿಯಾಗುತ್ತಾರೆ. ಈ ಸಂಬಂಧ ಮತ್ತೆ ಕುದುರುವುದಿಲ್ಲ, ಅವರನ್ನು ನೀವು ಬೇಗ ಮರೆತುಬಿಡಿ. ”

“ ಅವರನ್ನು ಬಿಟ್ಟು ನಾನು ಬದುಕಿರಲಾರೆ ಕುಮಾರರೇ. ”

“ ಈ ಬಿನ್ನಾಣದ ಮಾತು ಸಾಕುಮಾಡೀಮ್ಮ. ಅವರಿಗೆ ನೀವು ಮಾಡಿರುವ ಉಪಕಾರಕ್ಕೆ ನಾನು ಕೂಡ ನಿಮ್ಮನ್ನು ಮಾತನಾಡಿಸಕೂಡದು. ದೇವರಂಥ ಮನುಷ್ಯನ ಮನಸ್ಸು ಕದಡಿಬಿಟ್ಟು ಪುನಃ ಅವರ ಸ್ನೇಹ ಸಹವಾಸ ಬಯಸುತ್ತಿರುವಿರಲ್ಲಾ—ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲವೇ?—ನೀವು ಪುನಃ ಅವರ

ಮಾರ್ಗದಲ್ಲಿ ಅಡಿಯಿಟ್ಟರೆ ನಿಮ್ಮ ಪರಿಣಾಮ ನೆಟ್ಟಗೆ ಆಗುವುದಿಲ್ಲ. ಈ ಮಾತನ್ನು ಸೆರಗಿನಲ್ಲಿ ಗಂಟುಹಾಕಿಕೊಳ್ಳಿ."

ಎಂದು ಹೇಳಿ ಮುಗಿಸಿದವನೇ ಅಲ್ಲಿಂದೆದ್ದು ಹೊರಟುಹೋದ.

ಸರಸ್ವತಿ ತಲೆಯಮೇಲೆ ಕೈಹೊತ್ತು ಕುಳಿತಳು. ಆಕಾಶವೇ ಕಳಚಿ ತಲೆಯಮೇಲೆ ಬಿದ್ದಂತಾಗಿತ್ತು. ಶೋಕದ ಭರದಲ್ಲಿ ಹಣೆ ಹಣೆ ಚಚ್ಚಿಕೊಂಡಳು. ಆ ಸಮಯದಲ್ಲಿ ಯಾರ ಪ್ರೇಮಹಸ್ತವೂ ಅವಳ ದುಃಖವನ್ನು ನಿವಾರಿಸಲು ಮುಂದಾಗಲಿಲ್ಲ.

೨೨

ಮೈಸೂರಿನಿಂದ ಬರುತ್ತಿದ್ದ ಕಾಗದಗಳು ಉತ್ತೇಜಕವಾಗಿರಲಿಲ್ಲ. ಮಂಜುಳನ ಆರೋಗ್ಯ ಸ್ವಲ್ಪವೂ ತೃಪ್ತಿಕರವಾಗಿರಲಿಲ್ಲ. ಕ್ಯಾಲ್‌ಷಿಯಂ, ಲಿವರ್, ಪೆನ್ಸಿಲಿನ್ ಇಂಜಕ್ಷನ್‌ಗಳಾಗುತ್ತಿದ್ದವು. ಮೈಸೂರಿಗೆ ಕಳುಹಿಸಲು ಹಣ ಹೊಂದಿಸುವುದಕ್ಕೆ ಸರಸ್ವತಿ ತನ್ನ ಸಮಸ್ತ ಬುದ್ಧಿಶಕ್ತಿ, ಚೇತನವನ್ನು ವಿನಿಯೋಗಿಸಬೇಕಾಯಿತು,

ಅಣ್ಣನಿಂದ ಬರುತ್ತಿದ್ದ ಕಾಗದಗಳು ಶೂಲಪ್ರಾಯವಾಗಿದ್ದವು. ಮಂಜುಳಿಯ ಪ್ರಕರಣ ಅವನ ಆರ್ಥಿಕ ಸ್ಥಿತಿಯನ್ನು ಅಲುಗಾಡಿಸಿದ್ದುದಲ್ಲದೆ, ಸಮಾಜದ ಅವನ ಸ್ಥಾನಮಾನಗಳಿಗೆ ಬಲವಾದ ಪೆಟ್ಟು ಹಾಕಿತ್ತು. ಕಾಗದಗಳಲ್ಲಿ ಅವನ ವೇದನೆಯ ಪ್ರತಿಧ್ವನಿ ಸ್ಪಷ್ಟವಾಗಿ ಕೇಳಿಬರುತ್ತಿತ್ತು.

ಸರಸ್ವತಿಯ ಕೊರಳಲ್ಲಿದ್ದ ಸರವೂ ಮಾಯವಾಯಿತು ; ಕೈಯಲ್ಲಿದ್ದ ಬಳೆಗಳೂ ಕರಗಿಹೋದವು. ಬೆಲೆಬಾಳುವ ಸೀರೆಗಳು ಗಿರವಿ ಅಂಗಡಿ ಪಾಲಾದವು. ಮಂಜಯ್ಯ, ನಂಜಪ್ಪ ಇಬ್ಬರನ್ನೂ ಕಳೆದುಕೊಂಡ ತನ್ನ ದೌರ್ಭಾಗ್ಯವನ್ನು ನೆನೆನೆನೆದು ಗೋಳಿಟ್ಟಳು.

ಇತ್ತ ಕೆರೆ—ಅತ್ತ ಭಾವಿ ಎನ್ನುವಂತಾಗಿತ್ತು ಸರಸ್ವತಿಯ ಪರಿಸ್ಥಿತಿ. ರಾಮರಾಜಪ್ಪ ಮೊದಲು ತೋರಿಸಿದ ಧಾರಾಳ ಬುದ್ಧಿಯನ್ನು ಉಳಿಸಿಕೊಂಡು ಬರಲಿಲ್ಲ. ಪತಂಗದಂತೆ ಹೂವಿನಿಂದ ಹೂವಿಗೆ ಹಾರುತ್ತಿದ್ದ ಅವನ ಮನಸ್ಸು ಸರಸ್ವತಿಯಲ್ಲಿ ನೆಲೆಯಾಗಿ ನಿಲ್ಲಲಿಲ್ಲ. ನಂಜಪ್ಪನ ಬಾಯಿಂದಲೇ ಸರಸ್ವತಿಯ ಗುಣಕಥನ ಕೇಳಿದ ಮೇಲಂತೂ ಅವನ ಆಸಕ್ತಿ ಮತ್ತಷ್ಟು ಕುಂದಿಹೋಯಿತು. ಹುಣ್ಣಿಮೆ, ಅಮಾವಾಸ್ಯೆಗೊಮ್ಮೆ ಸರಸ್ವತಿಯ ಮನೆಗೆ ಹಣಿಕಿ ಹಾಕುತ್ತಿದ್ದ. ಬಂದಾಗ ಹತ್ತೋ ಹದಿನೈದೋ ಒಗೆದು ಹೋಗುತ್ತಿದ್ದ. ಸರಸ್ವತಿಯ ಮನೆಯ ಮೇಲೆ ಬಡತನದ ಕರಿನೆರಳು ಬಿದ್ದಿದ್ದುದು ಅವನ ಕಣ್ಣಿಗೆ ಕಾಣುತ್ತಿದ್ದರೂ ಅವನು ಲಕ್ಷ್ಯಕೊಡುತ್ತಿರಲಿಲ್ಲ.

ಮುತ್ತಮ್ಮನ ಮನೆಗೆ ಸರಸ್ವತಿ ನಿತ್ಯಯಾತ್ರೆ ಆರಂಭಿಸಿದಳು ಒಂದೊಂದು ದಿನ ಮನೆಗೆ ಹಿಂದಿರುಗುವಾಗ ಕೈಯಲ್ಲಿ ಹತ್ತಿಪ್ಪತ್ತು ರೂಪಾಯಿಗಳು ತರುತ್ತಿದ್ದಳು. ಅನೇಕ ದಿನ ಕೈಯಿಂದ ಗಾಡಿಯ ಖರ್ಚು ತೆತ್ತುದೇ ಲಾಭವಾಗುತ್ತಿತ್ತು.

ಮುತ್ತಮ್ಮನ ಮನೆಯಲ್ಲಿ ತನಗೆ ನಿರ್ದೇಶವಾಗುತ್ತಿದ್ದ ಸ್ಥಾನವನ್ನು ಸರಸ್ವತಿ ಗಮನಿಸದಿರಲಿಲ್ಲ. ವೆಂಕಟಿ, ಬಾಲೂ, ಬಾಯಮ್ಮ ಮೊದಲಾದ ಮುತ್ತಮ್ಮನ ಸಾಕುಮಕ್ಕಳಿಗೆ ಸರಸ್ವತಿ 'ಅಕ್ಕ'ನಾಗುತ್ತಾ ಬಂದಳು. ಅವರನ್ನು ತೃಪ್ತಿಪಡಿಸುವುದಕ್ಕೆ ಸರಸ್ವತಿ ಮನೆಯಿಂದ ಏನಾದರೂ ತಿಂಡಿ ಪದಾರ್ಥಮಾಡಿ ತೆಗೆದುಕೊಂಡು ಹೋಗುತ್ತಿದ್ದಳು.

ಸರಸ್ವತಿ ಆಶ್ರಿತಸ್ಥಿತಿಗೆ ಬಂದಮೇಲೆ ಮುತ್ತಮ್ಮ ಬಹುವಚನಕ್ಕೆ ತಿಲೋದಕ ಬಿಟ್ಟು ಏಕವಚನ ಆರಂಭಿಸಿದ್ದಳು. ಒಂದು ದಿನ ಸರಸ್ವತಿ ಹನ್ನೊಂದು ಗಂಟೆಗೆ ಬಂದವಳು ಸಂಜೆಯವರೆವಿಗೂ ಸುಮ್ಮನೆ ಕುಳಿತಳು. ಅಂದು ಯಾವ ನರಪ್ರಾಣಿಯೂ ಮುತ್ತಮ್ಮನ ಮನೆಯ ಕಡೆ ಸುಳಿದಿರಲಿಲ್ಲ. ಬೇಸತ್ತ ಸರಸ್ವತಿ ಮುಖ ಗಂಟುಹಾಕಿಕೊಂಡು

"ಸುಮ್ಮನೆ ಬಂದು ಬಂದು ಹೋಗುವುದಾಗುತ್ತದೆ" ಎಂದಳು.

ಮುತ್ತಮ್ಮನಿಗೆ ಅವಳ ಟೀಕೆ ಸಹ್ಯವಾಗಲಿಲ್ಲ.

"ದಿನವೂ ನಿಮಗೆಲ್ಲಾ ಗಿರಾಕಿಗಳನ್ನು ನಾನೆಲ್ಲಿ ಹೊಂದಿಸಲಮ್ಮ."

"ಹೀಗೆ ಹೊತ್ತು ಕಳೆದರೆ ನಮ್ಮ ಜೀವನವಾಗುವುದು ಹೇಗೆ ಮುತ್ತಮ್ಮ."

"ನಿಮ್ಮ ಜೀವನ ನಾನು ನಡಸುತ್ತೇನೆಂದು ಪತ್ರ ಬರೆದು ಕೊಟ್ಟಿದ್ದೇನೆಯೇ? ನಿಮ್ಮ ನಿಮ್ಮ ಅದೃಷ್ಟ ಹೇಗಿರುತ್ತದೋ ಹಾಗಾಗುತ್ತದೆ."

"ನಿನ್ನ ಆಕ್ಷೇಪಿಸಲಿಲ್ಲಮ್ಮ. ನನ್ನ ಸಂಕಟ ಹೇಳಿಕೊಂಡೆ."

"ಆಕ್ಷೇಪಣೆ ಮಾಡುವವರು ನನ್ನ ಮನೆಗೆ ಬರಬೇಕಾದದ್ದೇ ಇಲ್ಲ."

ಎಂದು ಮುತ್ತಮ್ಮ ಕಟುವಾಗಿ ನುಡಿದಳು.

ಇನ್ನುಮೇಲೆ ಮುತ್ತಮ್ಮನ ಮನೆಗೆ ಕಾಲೇ ಇಡಬಾರದೆಂದು ಸರಸ್ವತಿ

ಯೋಚಿಸಿದಳು. ಆದರೆ ಮಾರನೆಯ ದಿನ—ತನ್ನ ಅದೃಷ್ಟಪರೀಕ್ಷೆಗಾಗಿ ಅವಳು ಮುತ್ತಮ್ಮನ ಮನೆಗೆ ಬಂದೇ ಬಂದಳು.

ಅಭ್ಯಾಸಬಲ, ಸಂಸಾರದ ಯೋಚನೆ ಸರಸ್ವತಿಯನ್ನು ಮುತ್ತಮ್ಮನ ಮನೆಗೆ ಕರೆತರುತ್ತಿದ್ದವು. ಮನಸ್ಸಿಗೆ ತೃಪ್ತಿಯಿಲ್ಲ. ದೇಹವನ್ನೆಷ್ಟು ಬಳಿಸಿದರೂ ಕೋರಿದಷ್ಟು ಹಣ ಸಿಕ್ಕುತ್ತಿರಲಿಲ್ಲ.

ಸರಸ್ವತಿಯ ಅಂತರಂಗ ಅತೃಪ್ತಿಯ ಅಗ್ನಿಕುಂಡವಾಯಿತು.

ರಾತ್ರಿಯೆಲ್ಲಾ ಒಂದೇಸಮನೆ ಕಣ್ಣೀರ್ಗರೆಯುತ್ತಿದ್ದಳು. ಮಂಜಯ್ಯನವರೋ ನಂಜಪ್ಪನೋ ಬಂದು ತನ್ನ ತಪ್ಪು ಕ್ಷಮಿಸಿ, ಜೀವನ ನಡೆಸಲು ನೆರವಾಗುವುದಿದ್ದರೆ ಅವರ ಪಾದಸೇವೆ ಮಾಡಿಕೊಂಡು ಕಾಲ ತಳ್ಳುವುದಾಗಿ ಯೋಚಿಸಿದಳು.

ಸರಸ್ವತಿಯಲ್ಲಿದ್ದ ವಿಚಾರತರಂಗಕ್ಕೆ ಪ್ರತಿಭಟನೆ ಸೂಚಿಸಿ ಅವಳ ಅಂತರಂಗ ಕೇಳಿತು

'ಸರಸ್ವತಿ ಜೀವನ ಮಾಡುವುದು ಕಷ್ಟವೇ?'

'ಕಷ್ಟವಾಗಿದೆ.'

'ಏಕೆ?'

'ನಾನು ಹೆಣ್ಣು—ಗಂಡಸರ ಈ ಪ್ರಪಂಚದಲ್ಲಿ ಹೆಣ್ಣು ಜೀವಿಸುವುದು ತುಂಬ ಕಷ್ಟ.'

'ಈ ಪ್ರಪಂಚದಲ್ಲಿ ಯಾವ ಹೆಂಗಸೂ ಮರ್ಯಾದೆಯಾಗಿ ಜೀವನ ನಡೆಸುತ್ತಿಲ್ಲವೇ?'

'ಹಾಗೆಂದರೆ?'

'ಮೈಮುರಿಯ ದುಡಿದು, ತನ್ನ ಅನ್ನ ಸಂಪಾದಿಸಿಕೊಳ್ಳುತ್ತಿಲ್ಲವೇ?'

'ನಾನು ಅನ್ನ ತಿಂದು ಬದುಕುವುದಕ್ಕೆ ಹುಟ್ಟಿಲ್ಲ.'

'ಅದು ಸತ್ಯವಾದ ಮಾತು—ನಿನಗೆ ವೈಭವ ಬೇಕು, ವಿಲಾಸ ಬೇಕು. ಮನಸ್ಸಿನ ನೂರೆಂಟು ಈಪ್ಸಿತಗಳಿಗೆ ಸಂತೃಪ್ತಿ ಬೇಕು.'

'ಯಾರಿಗೆ ಬೇಡ.'

'ಎಲ್ಲರಿಗೂ ಬೇಕು ಸರಸ್ವತಿ. ಆದರೆ ಕರ್ತವ್ಯ, ಧರ್ಮ, ತ್ಯಾಗ ಬುದ್ಧಿ ಅನೇಕರ ಜೀವನಕ್ಕೆ ಸಂಯಮದ ಕಡಿವಾಣ ಒದಗಿಸುತ್ತದೆ. ನೀನು ಸ್ವಚ್ಛಂದತೆಯಲ್ಲಿ ಪಡೆಯುವ ಸೌಖ್ಯವನ್ನು ಅವರು ಸಂಯಮದಲ್ಲಿ ಪಡೆಯುತ್ತಾರೆ.'

'ಸಂಯಮವನ್ನು ನಾನು ಕಂಡುದೇ ಇಲ್ಲ.'

'ಅದು ಸ್ವತಃಸ್ಸಿದ್ಧವಾಗಿದೆ. ಮೊದಲಿನಿಂದಲೂ ನಿನ್ನ ಮನಸ್ಸು ಪುಂಡು ದನದಂತೆ ಓಡಿಯಾಡಿದೆ. ದುಡಿದು ತಿನ್ನುವ ಅನ್ನ ಪುಂಡುದನಕ್ಕೆ ರುಚಿಸುವುದಿಲ್ಲ—ಕಂಡವರ ಎಂಜಲ ಕೂಳೇ ಅದಕ್ಕೆ ರುಚಿ.'

'ನಾನೂ ಹೆಣ್ಣು ನಿಜ. ಆದರೆ ಎಲ್ಲರ ಹಾಗೆ ಹೆಣ್ಣಲ್ಲ.'

'ಬ್ರಹ್ಮ ನಿನಗಾಗಿ ಬೇರೊಂದು ಅಚ್ಚು ಸಿದ್ಧಗೊಳಿಸಿ ನಿರ್ಮಾಣ ಮಾಡಿದನೇನು?'

'ಹಾಗೂ ಇರಬಹುದು. ಎಲ್ಲರಿಗೂ ಆಗುವಂತೆ ನನಗೆ ತೃಪ್ತಿಯ ಅನುಭವವಾಗಿಲ್ಲ.'

'ಸಿಂಹದ ಹಸಿವು ಹಿಂಗಿಸಬಹುದು. ತೋಳನ ಹಸಿವಿಗೆ ಇತಿಮಿತಿಯಿಲ್ಲ.'

'ನನ್ನ ಹಸಿವು ಹಿಂಗುವುದು ಹೇಗೆ?'

'ಮೃತ್ಯುವಿನ ಕಟಾಕ್ಷದಿಂದ. ಹಸಿವಿಗಿಂತ ಹಸಿವಿನ ಕಲ್ಪನೆ ನಿನ್ನಲ್ಲಿ ಬೆಳೆದಿದೆ ಸರಸ್ವತಿ. ದೇಹದ ವ್ಯಾಧಿಗೆ ಔಷಧವಿದೆ, ಮನಸ್ಸಿನ ವ್ಯಾಧಿಗೆ ಔಷಧವಿಲ್ಲ.'

ಸರಸ್ವತಿ ಆ ತರ್ಕಸರಣಿಯನ್ನು ಒಪ್ಪಲಿಲ್ಲ. ಮನಸ್ಸಿನ ವ್ಯಾಧಿಗೂ ಔಷಧವಿದೆಯೆನ್ನುವುದು ಅವಳ ದೃಢ ನಂಬಿಕೆಯಾಗಿತ್ತು.

ರಾತ್ರಿ ಮಲಗಿ ಯೋಚಿಸುತ್ತಿರುವಂತೆ ಸರಸ್ವತಿಗೆ ಥಟ್ಟನೆ ರಾಘವಾಚಾರ್ಯರ ನೆನಪಾಯಿತು. ಬೆಳಗಾದ ಕೂಡಲೆ ಸುಧೆಯನ್ನು ಆಚಾರ್ಯರ 'ವಾಣಿ ಸಂಗೀತ ವಿದ್ಯಾಲಯ'ಕ್ಕೆ ಆಚಾರ್ಯರನ್ನು ಬರಮಾಡಲು ಕಳುಹಿಸಿ ಕೊಟ್ಟಳು.

ಆಚಾರ್ಯರು ಯಥಾಕ್ರಮದಂತೆ ಹನ್ನೊಂದು ಗಂಟೆಗೆ ಬೆವರು ಸುರಿಸಿಕೊಂಡು ಬಂದರು. ಅವರ 'ಮಾಮೂಲ್' ಕಾಫಿಯನ್ನು ಸರಸ್ವತಿ ತಪ್ಪಿಸಲಿಲ್ಲ.

"ಏನಮ್ಮ ಹೇಳಿ ಕಳಿಸಿದ್ದು ?"

"ಕರೆಸಿಕೊಂಡೇ ಬರಬೇಕೆಂದಿದ್ದಿರಾ ಮೇಷ್ಟ್ರೇ. ಬಡವರ ಜ್ಞಾಪಕ ಬರಲಿಲ್ಲವೇನು ?"

"ಯಾರಮ್ಮ ಬಡವರು. ನಿಮ್ಮ ಮನೆಯ ಮೂಲೆ ಮೂಲೆಯಲ್ಲಿ ಲಕ್ಷ್ಮೀ ಲಾಸ್ಯವಾಡುವುದಕ್ಕೆ ಆರಂಭಿಸಿದ್ದಳು. ನಾನೇಕೆ ಬರಲಿ ಎಂದು ಸುಮ್ಮನಿದ್ದೆ."

"ನೀವೂ ನನ್ನನ್ನು ಪರಿಹಾಸ್ಯ ಮಾಡುವಿರಾ ?"

"ಏನಾಯಿತಮ್ಮ. ನೀವು ಕಷ್ಟದಲ್ಲಿರುವ ಹಾಗೆ ಕಾಣುತ್ತದೆ. ಮಂಜಯ್ಯನವರು........"

"ಅವರು ಕೈಕೊಟ್ಟರು. ನಂಬಿಸಿ ನಂಬಿಸಿ ಕೊನೆಗೂ ಕೊರಳು ಕುಯ್ದು ಬಿಟ್ಟರು. ಪ್ರಪಂಚದಲ್ಲಿ ಯಾರನ್ನು ನಂಬುವುದು ಮೇಷ್ಟ್ರೇ ?"

"ಅಯ್ಯೋ ಪಾಪ !"

"ಇದೇ ಸಮಯಕ್ಕೆ ಮಂಜುಳನಿಗೆ ತುಂಬಾ ಕಾಹಿಲೆಯಾಯಿತು ?"

"ಈಗೆಲ್ಲಿ ಅವಳು."

"ಮೈಸೂರಿಗೆ ಅಣ್ಣನ ಮನೆಗೆ ಸುಧಾರಿಸಿಕೊಂಡು ಬರಲು ಹೋಗಿದ್ದಾಳೆ."

"ಏನಾಗಿತ್ತಮ್ಮ ?"

"ಒಂದು ರಾತ್ರಿ ಎದ್ದವಳೇ ಚಿಟ್ಟನೆ ಚೀರಿ ಮೂರ್ಛೆಬಿದ್ದುಬಿಟ್ಟಳು. ಜ್ವರ ಬರುವುದಕ್ಕಾರಂಭವಾಯಿತು."

"ಯಂತ್ರ ಕಟ್ಟಿಸಬೇಕಾಗಿತ್ತು."

"ಪೂಜೆ—ಯಂತ್ರ—ಔಷಧ ಎಲ್ಲಾ ಆಯಿತು."

"ಈಗ ಹೇಗಿದೆ"

“ ಆರೋಗ್ಯವಾಗಿದ್ದಾಳಂತೆ. ತುಂಬ ನಿಶ್ಶಕ್ತಿ. ”

“ ಕಷ್ಟಗಳು ಒಟ್ಟೊಟ್ಟಿಗೆ ಬರುತ್ತವಮ್ಮ. ಈಗ ಸಂಸಾರ ನಡೆಯುತ್ತಿರುವುದು........? ”

“ ನೋಡಿ ನಿಮಗೇ ಗೊತ್ತಾಗುತ್ತದೆ. ಮೈಮೇಲಿದ್ದ ಒಡವೆಗಳನ್ನೆಲ್ಲಾ ಮಾರಿದ್ದಾಯಿತು. ಉಡುತ್ತಿದ್ದ ಸೀರೆಗಳನ್ನೆಲ್ಲಾ ಗಿರವಿ ಇಟ್ಟದ್ದಾಯಿತು. ಈ ಸಮಯದಲ್ಲಿ ನೀವು ನನಗೆ ಉಪಕಾರ ಮಾಡಬೇಕು. ”

“ ನಾನು ಹಣವಂತನಲ್ಲವಲ್ಲಮ್ಮ. ನನ್ನ ಸ್ಥಿತಿಗತಿ ನಿಮಗೆ ಗೊತ್ತೇ ಇದೆಯಲ್ಲಾ. ದುಡಿಯಬೇಕು—ತಿನ್ನಬೇಕು. ”

“ ನಿಮ್ಮನ್ನು ಹಣ ಕೇಳುತ್ತಿಲ್ಲ ಮೇಷ್ಟ್ರೇ—ನನಗೊಂದು ದಾರಿ ತೋರಿಸಿ ಕೊಟ್ಟು ನನ್ನ ಮನೆ ಉಳಿಸಿ ಉಪಕಾರಮಾಡಿ. ”

ರಾಘವಾಚಾರ್ಯರು ಯೋಚನೆಮಾಡಿ ಸಾವಕಾಶವಾಗಿ

“ ನನ್ನ ಗುರುತಿನವರು ಒಬ್ಬರಿದ್ದಾರೆ—ಅನುಕೂಲಸ್ಥರು. ”

“ ಯಾರವರು ? ”

“ ಸರ್ಕಾರದಲ್ಲಿ ದೊಡ್ಡ ಅಧಿಕಾರಿಗಳಾಗಿದ್ದಾರೆ. ತಿಂಗಳಿಗೆ ಎಂಟುನೂರ ರೂಪಾಯಿ ಸಂಬಳ. ”

“ ಅವರಿಗೆ ಸಂಸಾರ........”

“ ಸಂಸಾರವಿಲ್ಲ. ಹೆಂಡತಿ ತೀರಿಕೊಂಡು ಒಂದು ವರ್ಷವಾಯಿತು. ”

“ ಅವರು ನಿಮಗೆ ಹೇಗೆ ಗೊತ್ತು. ”

“ ಅವರ ಮಗಳಿಗೆ ನಾನು ಪಾಠ ಹೇಳುತ್ತೇನೆ. ”

“ ಎಷ್ಟು ಜನ ಮಕ್ಕಳು. ”

“ ಒಬ್ಬ ಮಗಳು—ಒಬ್ಬ ಮಗ ಇಬ್ಬರೇ. ”

“ ಮನೆ ನೋಡಿಕೊಳ್ಳುವವರು ? ”

“ ಮಡಿ ಹೆಂಗಸು ಅಕ್ಕ ಒಬ್ಬರಿದ್ದಾರೆ. ”

“ ಮನುಷ್ಯ ಹೇಗೆ? ”

“ ತುಂಬ ಸಂಭಾವಿತ. ”

"ಕೈ ಹಿಡಿತವಿಲ್ಲವಷ್ಟೇ?"

"ಹಿಡಿತವಿಲ್ಲ—ಆದರೆ ಮಿತಿಮೀರಿದ ಧಾರಾಳವೂ ಇಲ್ಲ."

"ಅವರನ್ನು ಯಾವಾಗ ಕರೆದುಕೊಂಡು ಬರುತ್ತೀರಿ."

"ನೀವು ಒಪ್ಪಿದರೆ ಇವತ್ತೇ ಸಂಜೆಗೆ ಕರೆದುಕೊಂಡು ಬರುತ್ತೇನೆ. ನಾನು ಸಂಜೆ ಅವರ ಕಛೇರಿ ಬಳಿ ಹೇಗೂ ಹೋಗಬೇಕಾಗಿದೆ."

"ಅಷ್ಟು ಉಪಕಾರಮಾಡಿ ಮೇಷ್ಟ್ರೇ. ಸದ್ಯಕ್ಕೆ ನನಗೊಂದು ಸಾವಿರ ರೂಪಾಯಿ ಕೊಡಿಸಬಲ್ಲಿರಾ?"

"ನಾನು ಈಗಲೇ ಹೇಗೆ ಮಾತು ಕೊಡಲಿ?"

"ಸಾಧ್ಯವಾದಷ್ಟು ಕೊಡಿಸಿ."

"ಆಗಲಿ—ಪ್ರಯತ್ನಮಾಡಿ ನೋಡುತ್ತೇನೆ."

"ಸಂಜೆಗೆ ನಾನು ಕಾಯುತ್ತಿರುತ್ತೇನೆ."

ಆಗಲಿ ಎಂದು ಹೇಳಿ ರಾಘವಾಚಾರ್ಯರು ಎದ್ದರು. ಶ್ರೀರಂಗರಾಯರು ಕಛೇರಿ ಬಿಡುವ ಮುನ್ನವೇ ರಾಘವಾಚಾರ್ಯರು ಅವರನ್ನು ಕಛೇರಿಯಲ್ಲಿಯೇ ಕಂಡರು. ರಾಯರು ಆಚಾರ್ಯರಿಗೆ ಸ್ವಾಗತ ಬಯಸಿ

"ಏನು ಇಷ್ಟು ದೂರ ದಯೆಮಾಡಿಸಿದಿರಿ ಮೇಷ್ಟ್ರೇ."

"ಸ್ವಾಮಿಯ ಹತ್ತಿರ ಕೆಲಸವಿತ್ತು."

"ಹೇಳಿ—"

"ಹೊರಗೆ ಹೋಗಿ ಮಾತನಾಡೋಣ. ಸ್ವಾಮಿ ಕೆಲಸ ಮಾಡಿಕೊಂಡು ಬಂದಿದ್ದೇನೆ."

ಶ್ರೀರಂಗರಾಯರು ಪರ್ಸನಲ್ ಕ್ಲಾರ್ಕ್ ಕರೆದು ಅವನಿಗೆ ಆಫೀಸ್ ಒಪ್ಪಿಸಿ ಆಚಾರ್ಯರ ಜತೆಯಲ್ಲಿ ಎದ್ದರು.

"ಬನ್ನಿ ಕ್ಲಬ್ಬಿನಲ್ಲಿ ಹೋಗಿ ಕುಳಿತುಕೊಂಡು ಮಾತನಾಡೋಣ."

"ಕ್ಲಬ್ ಬೇಡ ಸ್ವಾಮಿ. ಬ್ಯಾಂಡ್ ಸ್ಟ್ಯಾಂಡ್ ಕಡೆ ಮಾತನಾಡಿ ಕೊಂಡು ವಾಕಿಂಗ್ ಹೋಗೋಣ."

ಜನಜಂಗುಳಿ ಬಿಟ್ಟು ಸ್ವಲ್ಪ ದೂರ ಹೋದಮೇಲೆ ರಾಯರು

" ಹೇಳಿ. ಇಲ್ಲಿ ಯಾರೂ ಇಲ್ಲ. "

" ತಮ್ಮ ಕೆಲಸ ಕುದುರಿಸಿಕೊಂಡು ಬಂದಿದ್ದೇನೆ. "

" ಯಾರದು ? "

" ಸಂಸಾರವಂದಿಗಿತ್ತಿ. ಲಕ್ಷಣವಾಗಿದ್ದಾರೆ. ಇಬ್ಬರು ಮಕ್ಕಳು. ಸ್ವಾಮಿ ಹೋಗಿ ಬರುವುದಕ್ಕೆ ಗೌರವವಾದ ಸ್ಥಳ. "

" ಗಂಡ ! "

" ಗಂಡ ತೀರಿಕೊಂಡು ಎರಡು ಮೂರು ವರ್ಷವಾಯಿತು. "

" ಮಕ್ಕಳು ದೊಡ್ಡವರೋ ? "

" ಎರಡೂ ಹೆಣ್ಣು ಮಕ್ಕಳು, ತಾಯಿಯ ಮಾತು ಮೀರುವವರಲ್ಲ. "

" ಇದನ್ನು ಹೇಗೆ ಕುದುರಿಸಿದಿರಿ ಮೇಷ್ಟ್ರೇ. "

" ಅವರ ಮನೆಗೂ ಪಾಠಕ್ಕೆ ಹೋಗುತ್ತಿದ್ದೆ. ಇವತ್ತು ಮಾತಿಗೆ ಮಾತು ಬಂದು ತಮ್ಮ ವಿಷಯ ಪ್ರಸ್ತಾಪಮಾಡಿದೆ. ಆಕೆಯೂ ಕಷ್ಟದಲ್ಲಿದ್ದಾರೆ—ಸ್ವಾಮಿ ಸ್ವಲ್ಪ ಸಹಾಯಮಾಡಿದರೆ ಉಭಯತಾಪಿ ಅನುಕೂಲವಾಗುತ್ತದೆ. "

" ಈಗೆಷ್ಟು ಕೊಡಬೇಕಾಗುತ್ತದೆ. "

" ದೊಡ್ಡ ಮಗಳಿಗೇನೋ ಕಾಹಿಲೆಯಂತ ಚಿಕಿತ್ಸೆಗೆ ಮೈಸೂರಿಗೆ ಕಳುಹಿಸಿಕೊಟ್ಟಿದ್ದಾರೆ. ಹೆಣ್ಣು ಹೆಂಗಸು—ಯಾರಿಗಾದರೂ ಕಷ್ಟವೇ ?"

" ಎಷ್ಟು ಕೊಡಬೇಕು ಮೇಷ್ಟ್ರೇ. "

" ಈಗೊಂದು ಸಾವಿರ ಕೊಟ್ಟರಾಯಿತು. ಆಮೇಲೆ ತಿಂಗಳಿಗೆ ಮನೆಯ ಖರ್ಚಿಗೆ ಕೊಡುತ್ತ ಹೋದರೆ ಸಾಕು. "

" ಸದ್ಯಕ್ಕೆ ಸಾವಿರ ಇಲ್ಲ. "

" ಎಷ್ಟಿದೆಯೋ ಅಷ್ಟೇ ಕೊಡಿ. "

" ನನ್ನ ಹತ್ತಿರ ಅಷ್ಟು ಹಣವಿಲ್ಲ. ನಡೆಯಿರಿ ಕ್ಲಬ್ಬಿಗೆ ಹೋಗಿ ಚೆಕ್ ಕ್ಯಾಷ್ ಮಾಡಿಸಿಕೊಳ್ಳುತ್ತೇನೆ. ಕಾರೂ ಅಲ್ಲೇ ಕಾದಿದೆ. "

" ಕಾರ್ ಕಳಿಸಿಬಿಟ್ಟಿದ್ದರೆ ಆಗಿತ್ತು. "

" ಅವರ ಮನೆಯೆಲ್ಲಿ ? "

" ಮಾವಳ್ಳಿಯಲ್ಲಿ. "

" ನಾವು ಲಾಲ್‌ಬಾಗ್ ಗೇಟಿನ ಬಳಿ ಇಳಿದು ಕಾರು ಕಳಿಸಿಬಿಡೋಣ." ಎಂದರು.

ರಾಯರು ಆಚಾರ್ಯರೊಂದಿಗೆ ಕ್ಲಬ್ಬಿಗೆ ಬಂದು ಒಂದು ಚೆಕ್ ಕೊಟ್ಟು ಕ್ಯಾಷ್ ತೆಗೆದುಕೊಂಡರು. ಕ್ಲಬ್ಬಿನಿಂದ ಉಪಾಹಾರ ತರಿಸಿ ಆಚಾರ್ಯರಿಗೂ ಕೊಟ್ಟು ತಾವೂ ಭುಜಿಸಿದರು.

ಇಬ್ಬರೂ ಕಾರಿನಲ್ಲಿ ಲಾಲ್‌ಬಾಗ್ ಗೇಟಿನವರೆಗೆ ಬಂದರು. ಅಲ್ಲಿ ಇಳಿದು ರಾಯರು ಕಾರ್ ಮನೆಗೆ ಕಳಿಸಿಬಿಟ್ಟರು.

ಸರಸ್ವತಿ ಮನೆಯನ್ನು ಶುದ್ಧಮಾಡಿ, ಅಲಂಕರಿಸಿ, ತೊಟ್ಟಿಯಲ್ಲಿದ್ದ ದೇವರ ಪಟಗಳಿಗೆ ಹೂವಿನ ಮಾಲೆಗಳನ್ನು ಹಾಕಿ, ಕಾಫಿ ಉಪಾಹಾರ ಮಾಡಿಕೊಂಡು ಕಾದಿದ್ದಳು.

ರಾಯರನ್ನು ಆಚಾರ್ಯರು ಕರೆದುಕೊಂಡು ಬಂದು ತೊಟ್ಟಿಯಲ್ಲಿದ್ದ ಕುರ್ಚಿಯ ಮೇಲೆ ಕೂರಿಸಿ ತಾವು ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತರು.

ಒಳಗೆ ಅಡಗಿದ್ದ ಸರಸ್ವತಿಯನ್ನು ಆಚಾರ್ಯರು

" ಬನ್ನೀಯಮ್ಮ, ನಮ್ಮ ರಾಯರ ಪರಿಚಯ ಮಾಡಿಕೊಳ್ಳಿ. "

ಅಡಿಗೆಯ ಮನೆಯಿಂದ ಹೊರಗೆ ಬಂದು ಸರಸ್ವತಿ ರಾಯರಿಗೆ ದರ್ಶನವಿತ್ತಳು. ಮಾತು ಆರಂಭಿಸುವುದಕ್ಕೆ ವಿಷಯ ಹುಡುಕಿ ರಾಯರು

" ದೇವರಲ್ಲಿ ತುಂಬ ಭಕ್ತಿ ಇರುವ ಹಾಗೆ ಕಾಣುತ್ತದೆ " ಎಂದರು.

ಆಚಾರ್ಯರು ಅವರ ಮಾತಿಗೆ ವ್ಯಾಖ್ಯಾನಮಾಡುತ್ತಾ

" ಪೂಜೆ ಪುರಸ್ಕಾರ ಬಲೆ ಜೋರು ಸ್ವಾಮಿ. ದೇವರ ತಲೆಯ ಮೇಲೆ ಎಷ್ಟು ಹೂವೇರಿಸಿದರೂ ಸರಸ್ವತಮ್ಮನವರಿಗೆ ತೃಪ್ತಿಯೇ ಇಲ್ಲ. "

" ಹೀಗಿರುವುದು ಬಹಳ ಅಪರೂಪ. "

" ರಾಯರೂ ಹಾಗೇ ಕಾಣ್ತ್ರಮ್ಮ. ತಾವೇ ಬೆಳಿಗ್ಗೆ ದೇವರಪೂಜೆ ಮಾಡತಿ

ಮನೆ ಬಿಡುವುದೇ ಇಲ್ಲ, ಧರ್ಮದ ಕೆಲಸವೆಂದು ಯಾರೇ ಬರಲಿ ಕೈಯೆತ್ತಿ ಕೊಡುತ್ತಾರೆ ಮಹಾನುಭಾವರು."

"ನಾವು ದೇವರ ಕೈಬಿಟ್ಟರೆ ಅವನು ನಮ್ಮ ಕೈಬಿಡುತ್ತಾನೆ ಮೇಷ್ಟ್ರೇ" ಎಂದು ರಾಯರು ಅಪ್ಪಣೆಕೊಡಿಸಿದರು.

ಸರಸ್ವತಿ ಸಣ್ಣ ಧ್ವನಿಯಲ್ಲಿ

"ಸ್ವಲ್ಪ ಕಾಫಿ ತೆಗೆದುಕೊಳ್ಳಬಹುದಲ್ಲವೇ?"

"ಈಗ ಯಾಕಮ್ಮ ಕಾಫಿ ಮಾಡಿದಿರಿ. ರಾಯರು ಕ್ಲಬ್ಬಿನಲ್ಲಿ ಭರ್ಜರಿ ತಿಂಡಿ ಕಾಫಿ ಈಗತಾನೆ ಹಾಕಿಸಿದ್ದಾರೆ."

"ಇರಲಿ—ಬಡವರ ಸೇವೆ."

ಎಂದು ಹೇಳಿ ಸರಸ್ವತಿ ಬೋಂಡ, ಕಾಫಿ ತಂದಿಟ್ಟಳು. ಆಚಾರ್ಯರು ಬೋಂಡ ನುಂಗುತ್ತಾ

"ಇವರು ಯಾವಾಗಲೂ ಹೀಗೇ ಸ್ವಾಮಿ. ಎಷ್ಟೇ ಹೊತ್ತಿಗೆ ನಾನು ಬರಲಿ, ಕಾಫಿ ತಿಂಡಿ ಕೊಡದೆ ಕಳಿಸೋದೇ ಇಲ್ಲ. ಅವರ ಕೈಯಲ್ಲಿ ಭಗವಂತ ಅನ್ನರೇಖೆ ದೊಡ್ಡದಾಗಿ ಬರೆದಿದ್ದಾನೆ."

ಉಪಾಹಾರ ಮುಗಿದ ಮೇಲೆ ಕ್ಷಣಕಾಲ ಶಾಂತಿ ಆವರಿಸಿತು. ಯಾರೂ ಮಾತನಾಡಲಿಲ್ಲ. ಸರಸ್ವತಿ ತಾಂಬೂಲದ ತಟ್ಟೆ ತಂದು ಮುಂದಿಟ್ಟಳು. ಆಚಾರ್ಯರು ಮನದಣಿಯುವಷ್ಟು ತಾಂಬೂಲ ಸವಿದರು.

"ರಾಯರ ಯೋಗಕ್ಷೇಮ ಸರಿಯಾಗಿ ನೋಡಿಕೊಳ್ಳುವುದು ನಿಮ್ಮ ಭಾರಾಮ್ಮ. ಎಲ್ಲಿಗೂ ಹೋಗಿ ಬಂದು ಅವರಿಗೆ ಅಭ್ಯಾಸವಿಲ್ಲ. ಅವರ ದೊಡ್ಡ ಹೆಸರಿನ ಗೌರವ ಕಾಯುವುದು ನಿಮ್ಮ ಜವಾಬ್ದಾರಿ."

"ನನ್ನ ವಿಷಯವೆಲ್ಲಾ ನಿಮಗೆ ಗೊತ್ತೇ ಇದೆಯಲ್ಲಾ ಮೇಷ್ಟ್ರೆ. ನಾನು ಹೊಸದಾಗಿ ಹೇಳಬೇಕಾದದ್ದೇನಿದೆ? ಇದೂ ತಮ್ಮ ಮನೆಯೆಂದೇ ತಿಳಿದು ಕೊಂಡು ಅವರು ನನ್ನ ಕಾಪಾಡಿಕೊಂಡು ಬರಬೇಕು."

"ಅವರೆದುರಾಗಿ ನಾನು ಅವರ ಗುಣವರ್ಣನೆ ಮಾಡಬಾರದು. ಕಾಲಾನು ಕಾಲಕ್ಕೆ ನಿಮಗೆ ಗೊತ್ತಾಗುತ್ತದೆ."

ಸರಸ್ವತಿ ಕಾಫಿ ತಿಂಡಿಯ ಪಾತ್ರೆಗಳನ್ನು ಒಳಕ್ಕೆ ತೆಗೆದುಕೊಂಡು ಹೋದಾಗ ಆಚಾರ್ಯರು

“ ಏನಾದರೂ ಹೇಳಿ ಸ್ವಾಮಿ. ಸುಮ್ಮನೆ ಕುಳಿತುಬಿಟ್ಟಿರಲ್ಲಾ ! ”

“ ನಾನು ಹೇಳುವುದೇನಿದೆ. ಎಲ್ಲಾ ನೀವೇ ಮಾತನಾಡುತ್ತಿರುವಿರಲ್ಲಾ.”

“ ಒಪ್ಪಿಗೆಯಾಯಿತಷ್ಟೆ. ”

“ ಧಾರಾಳವಾಗಿ. ”

“ ಮುಂದಿನ ವಿಷಯ ಪ್ರಸ್ತಾಪಿಸಿಬಿಡುತ್ತೇನೆ. ”

ಆಗಬಹುದೆಂದು ರಾಯರು ತಲೆದೂಗಿ

“ ಸದ್ಯಕ್ಕೆ ಐದುನೂರು ತೆಗೆದುಕೊಳ್ಳುವಂತೆ ಹೇಳಿ ” ಎಂದರು.

ಸರಸ್ವತಿ ಪುನಃ ಬಂದು ಸ್ವಸ್ಥಾನದಲ್ಲಿ ಕೂಡಲು ಆಚಾರ್ಯರು

“ ನಿಮ್ಮ ಕಷ್ಟ ಸುಖ ಎಲ್ಲಾ ತಿಳಿಸಿದೆನಮ್ಮ. ತುರ್ತು ಖರ್ಚಿಗೆ ಐದು ನೂರು ರೂಪಾಯಿ ಕೊಡಲು ರಾಯರು ಒಪ್ಪಿದ್ದಾರೆ. ”

“ ಅವರ ಸಂತೋಷ. ಅವರಿಗೆ ಹೇಗೆ ಹೇಳಿದರೆ ಹಾಗೆ ಮಾಡಲು ನಾನು ಸಿದ್ಧಳಾಗಿದ್ದೇನೆ. ”

ರಾಯರಿಂದ ಹಣ ತೆಗೆದುಕೊಂಡು ಆಚಾರ್ಯರು ಸರಸ್ವತಿ ಕೈಗೆ ಕೊಡುತ್ತಾ

“ ತಿಂಗಳ ಖರ್ಚು ಪ್ರತ್ಯೇಕ ಕೊಡುತ್ತಾರೆ. ಯೋಚನೆಮಾಡಬೇಡಿ. ”

ಸರಸ್ವತಿ ಹಣ ತೆಗೆದುಕೊಂಡು ತನ್ನ ರೂಮಿಗೆ ಹೋದಳು. ಆಚಾರ್ಯರು ರಾಯರಿಗೆ

“ ಒಳಗೆ ಹೋಗಿ ಸ್ವಾಮಿ. ನಾನು ಮನೆಗೆ ಹೋಗುತ್ತೇನೆ. ”

“ ಇರಿ—ನಾನೂ ಬರುತ್ತೇನೆ, ಜತೆಯಲ್ಲಿ ಹೋಗೋಣ. ”

ಎಂದು ಹೇಳಿ ಎದ್ದು ಒಳಕ್ಕೆ ಹೋದರು.

ಸರಸ್ವತಿ ರಾಯರನ್ನು ರೂಮಿನಲ್ಲಿ ಕೂಡಿಸಿ ಹೊರಗೆ ಬಂದು

“ ಮೇಸ್ತ್ರೀ—ಸುಧಾ ಸ್ಕೂಲಿನಿಂದ ಬರುತ್ತಾಳೆ. ಒಲೆಯ ಮುಂದೆ ತಿಂಡಿ ಮುಚ್ಚಿಟ್ಟಿದ್ದೇನೆ ಎಂದು ಹೇಳಿ. ”

" ಹಾಗೇ ಆಗಲಿ–ತಾಂಬೂಲ ಕೈಯಲ್ಲಿ ಹಿಡಿದುಕೊಂಡು ಹೋಗೀಮ್ಮ."

ಸರಸ್ವತಿ ನಸುನಗುತ್ತಾ ತಾಂಬೂಲದ ತಟ್ಟೆ ಒಳಕ್ಕೆ ತೆಗೆದುಕೊಂಡು ಹೋದಳು.

ರಾಯರು ಹೊರಗೆ ಬರುವವರೆಗೆ ಆಚಾರ್ಯರು ಅಲ್ಲೇ ಕಾದಿದ್ದು ಅವರೊಂದಿಗೆ ಮನೆಗೆ ಹೊರಟರು.

ಸುಮಾರು ಅರ್ಧದಾರಿ ಕಳೆಯುವವರೆಗೆ ಇಬ್ಬರೂ ಮಾತನಾಡಲಿಲ್ಲ. ಆಚಾರ್ಯರ ಮನಸ್ಸನ್ನು ಕುತೂಹಲ ಕಾಡುತ್ತಿತ್ತು.

" ಏನು ಸ್ವಾಮಿ. ನನ್ನೇನೂ ಬಯ್ಯುವಂತಿಲ್ಲವಲ್ಲ. "

" ಬಯ್ಯುವುದು, ಏನು ಮಾತು ಮೇಷ್ಟ್ರೇ. ನಿಮ್ಮ ಉಪಕಾರಕ್ಕೆ ನಾನು ಎಷ್ಟು ಋಣಿಯಾಗಿದ್ದರೂ ಸಾಲದು. "

" ಬಹಳ ದಿನ ಕಾದದ್ದಕ್ಕೂ ನಿಸ್ವಾರ್ಥಕವಾಗಲಿಲ್ಲವಲ್ಲ. "

" ಬಹಳ ಒಳ್ಳೆಯವಳು ಕಣ್ರೀ. "

" ನಾನು ಧನ್ಯನಾದೆ. ನಿಮ್ಮ ಮನಸ್ಸಿಗೆ ಒಪ್ಪಿಗೆಯಾಯಿತಲ್ಲ ಅಷ್ಟೇ ಸಾಕು " ಎಂದು ಹೇಳಿದರು.

ಮಾರನೆಯ ಬೆಳಿಗ್ಗೆ ಆಚಾರ್ಯರು ಸರಸ್ವತಿ ಮನೆಗೆ ತಮ್ಮ ಪಾಲು ವಸೂಲ್ಮಾಡುವುದಕ್ಕೆ ಬಂದರು. ಸರಸ್ವತಿ ಮರುಮಾತಾಡದೆ ಆಚಾರ್ಯರ ಕೈಗೆ ನೂರು ರೂಪಾಯಿಗಳನ್ನಿತ್ತಳು.

೨೩

ಅಂಬಕ್ಕನ ಹೆಸರು ಕೇಳದಿದ್ದವರು, ವಿಷಯ ತಿಳಿಯದಿದ್ದವರು ಬಸವನ ಗುಡಿಯಲ್ಲಿ ವಿರಳ. ಬಾಂದಿನವರ ಬೀದಿಯ ಜನಕ್ಕಂತೂ ಅಂಬಕ್ಕ ಮನೆ ಯವರೇ ಆಗಿದ್ದರು. ಬೆಟ್ಟದಂಥ ಮೈ ಹೊತ್ತುಕೊಂಡು ಅಂಬಕ್ಕ ಬೀದಿಯಲ್ಲಿ ನಡೆದುಹೋದರೆ ಹುಡುಗರು ಆಡಿಕೊಳ್ಳುತ್ತಿದ್ದರು. ಅಂಬಕ್ಕ ಹುಡುಗರ ಕಡೆ ಮಂದಹಾಸಬೀರಿ

"ಮಕ್ಕಳಿರಾ, ನನ್ನಷ್ಟು ವಯಸ್ಸಾಗಲಿ, ನೀವೂ ನನ್ನ ಹಾಗೆ ಆಗು ವಿರಿ" ಎಂದು ನುಡಿಯುತ್ತಿದ್ದರು.

ಬಾಂದಿನವರ ಬೀದಿಯಲ್ಲಿ ಯಾರ ಮನೆಯಲ್ಲಿ ಯಾವ ಕೆಲಸವಾಗ ಬೇಕಾದರೂ ಅಂಬಕ್ಕ ಬರಬೇಕು. ತ್ರಾಹಿ ಎಂದು ಬಂದವರ ಸೇವೆಗೆ ಅಂಬಕ್ಕ ಸದಾಸಿದ್ಧ. ಬೆಳಿಗ್ಗೆಯಿಂದ ಸಂಜೆಯವರೆಗೆ ಯಾರದೋ ಮನೆಯ 'ಕಷ್ಟ ವ್ಯಸನ' ಹಚ್ಚಿಕೊಂಡು ದುಡಿದು, ಸೋತು ಹಣ್ಣಾಗಿ ತನ್ನ ಹರುಕು ಮಂದಲೆ ಹಾಸಿಕೊಂಡು, ಸೀರೆಯ ಸುರುಳಿ ತಲೆಯ ಕೆಳಗಿಟ್ಟುಕೊಂಡು ಮಲಗಿದರೆ ಅಂಬಕ್ಕನಿಗೆ ತೃಪ್ತಿ. ನೆರೆಹೊರೆಯವರು ಯಾರಾದರೂ ಅಂಬಕ್ಕ ನಿಗೇಕೆ ಕಷ್ಟವೆಂದು ತಾವೇ ಮನೆಯಲ್ಲಿ ಬಾಣಂತನವನ್ನೋ ಮತ್ತೆ ಯಾವ ದಾದರೂ ಶುಭಕಾರ್ಯವನ್ನೋ ಕೈಗೊಂಡರೆ ಅಂಬಕ್ಕ ಅವರಲ್ಲಿಗೆ ಹೋಗಿ

"ಯಾಕಮ್ಮ–ಅಂಬಕ್ಕ ಜೀವಂತಳಾಗಿರುವುದು ಮರೆತುಹೋಯಿತೇನು"

"ಇಲ್ರೀ ಅಂಬಕ್ಕ. ಎಲ್ಲಾದಕ್ಕೂ ನಿಮ್ಮ ಜೀವ ಹಿಂಡುವುದು ಯಾವ ನ್ಯಾಯಾಂತ ತಿಳಿಸಲಿಲ್ರೀ."

"ಹಾಗೇನು! ನಿಮಗೆಲ್ಲಾ ಬೇಕೂಂತ ಅಂಬಕ್ಕ ಇನ್ನೂ ಬದುಕಿದ್ದಾಳೆ. ನಿಮಗೆ ಬೇಡವಾದ ಮೇಲೆ ಅವಳೇಕಮ್ಮ ಇರಬೇಕು."

ಅಂಬಕ್ಕನ ಕೈಯಲ್ಲಿ ಬಯ್ಸಿಕೊಂಡವರು ಉಸಿರೆತ್ತದೆ ಅಂಬಕ್ಕನ ಕೈಗೆ ಅಧಿಕಾರ ಒಪ್ಪಿಸಿ ತೆಪ್ಪಗಾಗುತ್ತಿದ್ದರು.

ಶ್ರೀರಂಗರಾಯರು ದೊಡ್ಡ ಅಧಿಕಾರಿಗಳಾಗಿ, ನೂರಾರು ಜನ 'ತಾಪೇದಾರ'ರನ್ನು ಬೆದರಿಸಿಕೊಳ್ಳುತ್ತಿದ್ದರೂ ಅಂಬಕ್ಕನಿಗೆ ಹೆದರಿ ನಡೆಯುತ್ತಿದ್ದರು. ಯಾವ ಕಾರಣಕ್ಕೂ ಅಂಬಕ್ಕನಿಗೆ ಪ್ರತಿ ಹೇಳುತ್ತಿರಲಿಲ್ಲ. ರಾಯರು ಅಂಬಕ್ಕನ ವಿಷಯದಲ್ಲಿ ಇಷ್ಟು ವಿಶ್ವಾಸ, ಗೌರವ ತೋರಿಸುವುದಕ್ಕಿದ್ದ ಕಾರಣವೂ ಪ್ರಬಲವಾಗಿತ್ತು.

ಲಗ್ನವಾದಾಗ ಅಂಬಕ್ಕನ ವಯಸ್ಸು ಹನ್ನೊಂದು, ಗಂಡನ ಮುಖ ಅಂಬಕ್ಕ ನೋಡಿದುದು ಲಗ್ನ ಸಮಯದಲ್ಲೇ. ಲಗ್ನಮಾಡಿಕೊಂಡು ಊರು ತಲುಪಿದ ಮೂರು ತಿಂಗಳಿಗೇ ಅಂಬಕ್ಕನ ಗಂಡ ವಿಷಮಸೀತ ಜ್ವರಕ್ಕೆ ತುತ್ತಾಗಿ ಶ್ರೀಹರಿಯ ಪಾದ ಸೇರಿದ. ಅತ್ತೆಯ ಮನೆಯ ದರ್ಶನಲಾಭ ಕೂಡ ಅಂಬಕ್ಕನಿಗಾಗಲಿಲ್ಲ. ತೌರುಮನೆಯ ಸೇವೆಯಲ್ಲಿಯೇ ಅಂಬಕ್ಕ ಜೀವ ಸವೆಸುತ್ತ ಬಂದರು. ಶ್ರೀರಂಗರಾಯ ಅವರಿಗೆ ತಮ್ಮನೂ ಆಗಿದ್ದ, ಮಗನೂ ಆಗಿದ್ದ. ತಮ್ಮ ಗಂಡನ ಮನೆಯ ಕಡೆಯ ಹುಡುಗಿಯನ್ನೇ ತಂದು ಅಂಬಕ್ಕ ತಮ್ಮನಿಗೆ ಮದುವೆಮಾಡಿಸಿದ್ದರು.

ಶ್ರೀರಂಗರಾಯನ ನಡುವಯಸ್ಸಿನಲ್ಲಿ ಹೆಂಡತಿ ತೀರಿಕೊಂಡಳು. ಹಿರಿಯ ಮಗಳು ಗಾಯತ್ರಿ, ಮಗ ಜಯ ಇಬ್ಬರೂ ಅಂಬಕ್ಕನ ಕೊರಳಿಗೇ ಬಿದ್ದರು. ತಮ್ಮನ ಮಕ್ಕಳನ್ನು ಅಂಬಕ್ಕ ಸ್ವಂತ ಮಕ್ಕಳಂತೆ ಜೋಪಾನಮಾಡಿದರು.

ಶ್ರೀರಂಗರಾಯನಿಗೆ ಎರಡನೆಯ ಮದುವೆ ಮಾಡಿಸಬೇಕೆಂದು ಅಂಬಕ್ಕ ವಿಶ್ವಪ್ರಯತ್ನ ಮಾಡಿದರು. ಶ್ರೀರಂಗರಾಯ ಸುತರಾಂ ಒಲ್ಲೆನೆಂದುಬಿಟ್ಟ. ತಮ್ಮ ಕೈತುಂಬ ಸಂಪಾದಿಸಿ, ದೊಡ್ಡ ಅಧಿಕಾರಿಯೆನಸಿಕೊಂಡು ಅನುಕೂಲವಾಗಿದ್ದರೂ ಮನೆಯಲ್ಲಿ ಅವನ ಆರೈಕೆ ನೋಡಿಕೊಳ್ಳಲು ಹೆಂಡತಿ ಇಲ್ಲವಲ್ಲಾ ಎನ್ನುವ ಕೊರಗು ಅಂಬಕ್ಕನನ್ನು ಬಿಟ್ಟಿರಲಿಲ್ಲ. ಆದರೆ ಈ ವಿಷಯದಲ್ಲಿ ಮಾತ್ರ ಅಕ್ಕನ ಮಾತು ಕೇಳುವುದಿಲ್ಲವೆಂದು ತಮ್ಮ ನಿರ್ಧರಿಸಿಬಿಟ್ಟಿದ್ದ.

ತಂದೆಯನ್ನು ಅಂಬಕ್ಕ 'ಮಗೂ' ಎಂದು ಸಂಬೋಧಿಸಿದರೆ ಗಾಯತ್ರಿ, ಜಯ ಕಿಲಕಿಲನೆ ನಗುತ್ತಿದ್ದರು. ಶ್ರೀರಂಗರಾಯನನ್ನು 'ಮಗೂ' ಎಂದು ಕರೆಯಲು ಅಂಬಕ್ಕ ಸ್ವಲ್ಪವೂ ಸಂಕೋಚಪಟ್ಟುಕೊಳ್ಳುತ್ತಿರಲಿಲ್ಲ.

ಗಾಯತ್ರಿ, ಜಯ ಸ್ಕೂಲಿನಿಂದ ಬಂದಮೇಲೆ ಪ್ರತಿನಿತ್ಯವೂ ಅತ್ತೆಗೆ ಶಾಲೆಯ ವರದಿ ಒಪ್ಪಿಸಬೇಕಾಗಿತ್ತು. ಗಾಯತ್ರಿ, ಜಯ ಇಬ್ಬರ ಸ್ನೇಹಿತರ, ಉಪಾಧ್ಯಾಯರ, ಚಟುವಟಿಕೆಗಳ ಬಗ್ಗೆ ಬಿಡಿಸಿ ಬಿಡಿಸಿ ಕೇಳಿ ಅಂಬಕ್ಕ ಸಂತೋಷಿಸುತ್ತಿದ್ದರು.

ಗಾಯತ್ರಿ ತುಂಬ ಮಾತುಗಾತಿ. ತನ್ನ ಮಾತನ್ನು ಕೇಳುವವರು ಸಿಕ್ಕಿ ಬಿಟ್ಟರಂತೂ ಅವಳ ವಾಕ್ಪ್ರವಾಹ ತಡಸಲಿನಂತೆ ಧುಮುಕುತ್ತಿತ್ತು. ತನ್ನ ಗೆಳತಿಯರ, ಸಹಪಾಠಿಯರ ಗುಣಶೀಲಗಳನ್ನು, ಮಾತುಕತೆಗಳನ್ನು, ಪಾಠದ ಯಶ ಅಪಯಶಗಳನ್ನವಳು ಸವಿಸ್ತಾರವಾಗಿ ಅತ್ತೆಗೆ ಅರಿಕೆಮಾಡುತ್ತಿದ್ದಳು.

ಒಂದು ದಿನ ಗಾಯತ್ರಿ ತನ್ನ ಸಹಪಾಠಿ ಸುಧಾ ವಿಷಯ ಅತ್ತೆಗೆ ಹೇಳುತ್ತಾ

" ಆ ಹುಡುಗೀದು ಬಲು ಜಂಬ ಕಣೇ ಅತ್ತೆ. ಅದಕ್ಕೆ ಪೀಪಿ ಚೆನ್ನಾಗಿದೆ. ಸ್ವಲ್ಪ ಹಾಡುತ್ತೆ. ತಾನಾಗಲೇ ಸರಸ್ವತಿ ಮುರುಕು ಎಂದು ತಿಳಿದುಕೊಂಡಿದೆ. "

" ಮೈ ಬಗ್ಗಿಸಿ ಕಲಿತುಕೊಂಡರೆ ನೀನೂ ಅವಳ ಹಾಗೆ ಹಾಡಬಲ್ಲೆ. ರಾಘವಾಚಾರ್ರು ಕಲಿಸಲ್ಲ ಎನ್ನುತ್ತಾರೆಯೇ ? "

" ಈಗಲೂ ನಾನು ಅವಳಿಗಿಂತ ಚೆನ್ನಾಗೇ ಹಾಡ್ತೀನಿ ಅತ್ತೇ. ಅದು ಒಣಜಂಬ ಹತ್ತಿ ಮೆರೆಯತ್ತೆ. "

" ಹೋಗಲಿ ಬಿಡು. ಆ ಹುಡುಗಿಯಿಂದ ದೂರ ಇದ್ದರಾಯಿತು. "

" ಅದು ಎಷ್ಟು ಕೆಟ್ಟ ಹುಡುಗಿ ಗೊತ್ತೇ ಅತ್ತೇ. ಮೇಷ್ಟ್ರು ಪಾಠ ಹೇಳುತ್ತಿದ್ದರೆ ಹಿಂದಿನ ಬೆಂಚಿನಲ್ಲಿ ಕೂತುಕೊಂಡು ಚುಕ್ಕಿಆಟ ಆಡುತ್ತಿರುತ್ತದೆ. ತನ್ನದೇ ಒಂದು ಗುಂಪು ಕಟ್ಟಿಕೊಂಡು ಮನಸ್ಸು ಬಂದ ಹಾಗೆ ಕುಣಿದಾಡುತ್ತದೆ. ಮೈಮೇಲಿನ ಸೆರಗು ಹಾರಾಡುವುದೂ ಲಕ್ಷ್ಯದಲ್ಲಿರುವುದಿಲ್ಲ."

" ಅವಳು ಹೇಗಾದರೂ ಇದ್ದುಕೊಳ್ಳಲಿ. ನೀನು ಯಾರ ಕೈಯಲ್ಲಿಯೂ ವ್ಯಾಜ್ಯ ಕಟ್ಟಿಕೊಳ್ಳುವುದಕ್ಕೆ ಹೋಗಬೇಡಮ್ಮ "

ಎಂದು ಅಂಬಕ್ಕ ಬುದ್ಧಿ ಹೇಳುತ್ತಿದ್ದರು.

ಸರಸ್ವತಿಯ ಸಂಬಂಧವಾದ ವಿಷಯ ಅಂಬಕ್ಕನಿಗೆ ಗೊತ್ತಾಗದಿರಲೆಂದು ಶ್ರೀರಂಗರಾಯರು ಗುರುತುಕಂಡ ದೇವರುಗಳಿಗೆಲ್ಲಾ ಹರಕೆ ಹೊತ್ತರು. ಅವರು ಮನೆಗೆ ಬರುವ ವೇಳೆ, ಮನೆಬಿಟ್ಟು ಹೊರಡುವ ವೇಳೆಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಿಲ್ಲ. ಕ್ಲಬ್ ಮುಗಿಸಿಕೊಂಡು ರಾತ್ರಿ ೯, ೯–೩೦ ಗಂಟೆಗೆ ಯಥಾಪ್ರಕಾರ ಬರುತ್ತಿದ್ದಂತೆ ಈಗಲೂ ಮನೆಗೆ ಬರುತ್ತಿದ್ದರು. ಅಂಬಕ್ಕನ ಮನಸ್ಸಿನಲ್ಲಿ ಯಾವ ಸಂಶಯಕ್ಕೂ ಆಸ್ಪದವಾಗಲಿಲ್ಲ.

ಐದು ತಿಂಗಳು ಕಳೆದ ತರುವಾಯ ಮಂಜುಳಾ ಮೈಸೂರಿನ ಚಿಕಿತ್ಸೆ ಮುಗಿಸಿಕೊಂಡು ಊರಿಗೆ ಬಂದಳು. ಸರಸ್ವತಿಗೂ ಮಂಜುಳನಿಗೂ ಪರಿಹರಿಸ ಲಾಗದ ಅಂತರವೇರ್ಪಟ್ಟಿತ್ತು. ತಾಯಿ ತನಗಾಗಿ ಮಾಡಿಕೊಂಡಿದ್ದ ಹೊಸ ಏರ್ಪಾಟು ಕೇಳಿದ ಮೇಲಂತೂ ಮಂಜುಳಾ ಕಿಡಿಕಿಡಿಯಾದಳು. ತನ್ನ ಕೋಪವನ್ನು ಹೊರಗೆ ಪ್ರಕಟಿಸುವ ಸಾಹಸಕ್ಕೆ ಅವಳು ಕೈ ಹಾಕಲಿಲ್ಲ.

ಶ್ರೀರಂಗರಾಯರಿಗೂ ಸುಧನಿಗೂ ಬಳಕೆ ಹೆಚ್ಚುತ್ತ ಬಂತು. ಅವಳು ನಿರ್ಭಯದಿಂದ ಅವರ ಬಳಿ ಬಂದು ಮಾತುಕತೆಯಾಡುತ್ತಿದ್ದಳು, ತನ್ನ ಖರ್ಚಿಗೆ ಹಣ ಬೇಕಾದರೆ ಕೇಳಿ ತೆಗೆದುಕೊಳ್ಳುತ್ತಿದ್ದಳು. ಬಟ್ಟೆಬರೆ ಬೇಕಾದರೆ ತಾನೇ ಕೇಳುತ್ತಿದ್ದಳು. ಮಂಜುಳ ಶ್ರೀರಂಗರಾಯರಿದ್ದಲ್ಲಿ ಸುಳಿ ಯುತ್ತಿರಲಿಲ್ಲ. ತಾನಾಯಿತು ತನ್ನ ರೂಮಾಯಿತು.

ಒಂದು ದಿನ ಶ್ರೀರಂಗರಾಯರು ಸರಸ್ವತಿಯನ್ನು ಲೋಕಾಭಿರಾಮವಾಗಿ

"ಯಾವಾಗಲೂ ರೂಮಿನಲ್ಲಿ ಕುಳಿತುಕೊಂಡು ಮಂಜುಳಾ ಏನು ಮಾಡುತ್ತಿರುತ್ತಾಳೆ?" ಎಂದು ಕೇಳಿದರು.

"ಜಪ ಮಾಡುತ್ತಿರುತ್ತಾಳೆ. ಅದೊಂದು ಶುದ್ಧ ಮೂದೇವಿ."

"ಸುಧಾ ಬಂದು ಎಷ್ಟು ಚೆನ್ನಾಗಿ ಮಾತನಾಡುತ್ತಾಳೆ. ಎಷ್ಟು ಸಂತೋಷವಾಗಿರುತ್ತಾಳೆ. ತನಗೆ ಏನು ಬೇಕಾದರೂ ಕೇಳುತ್ತಾಳೆ. ಮಂಜುಳೆಯೂ ಹೀಗಿರಬಾರದೇ?"

"ಅವಳ ಸ್ವಭಾವವೇ ಹಾಗೇಂದ್ರೆ. ಮೊದಲಿನಿಂದಲೂ ಅದು ಮುಖೇಡಿ."

“ ನೀನು ಅವಳಿಗೆ ಬುದ್ಧಿ ಹೇಳಿ ಮುಖೇಡಿತನ ತಪ್ಪಿಸಬೇಕು.” ಎಂದು ಸಲಹೆಯಿತ್ತರು.

ರಾಯರ ತೃಪ್ತ್ಯರ್ಥವಾಗಿ ಸರಸ್ವತಮ್ಮ ಮಂಜುಳೆಯ ಹತ್ತಿರ ಪ್ರಸ್ತಾಪ ತೆಗೆದು

“ ಅದೇಕೆ ಮಂಜುಳಾ, ಅವರನ್ನು ಕಂಡರೆ ಹುಲಿ ಕಂಡಹಾಗೆ ಆಡ್ತೀ ?”

“ ನಾನೇನು ಮಾಡಬೇಕಾಗಿತ್ತು.”

“ ಬಂದು ಮಾತನಾಡಿಸಬಾರದಾಗಿತ್ತೇನು ?”

“ ನೀನಿರುವಾಗ ನಾನೇನು ಮಾತಾನಾಡಿಸುವುದು.”

“ ಮಾತಿಗೆ ಮಾತಾನಾಡುವುದು ಕಲಿತಿದ್ದೀಯೇ ವಿನಾ ಹೇಳಿದ್ದು ತಿಳಿದುಕೊಳ್ಳುವುದಿಲ್ಲಮ್ಮ ನೀನು.”

“ ಯಾವ ಮಾತೂ ಆಡಬಾರದೆಂದು ನಾನು ಬಾಯಿ ಮುಚ್ಚಿಕೊಂಡಿದ್ದೀನಲ್ಲಾ.”

“ ಹೀಗೆ ಮಾಡಬಾರದು ಮಂಜುಳಾ. ನಿಮ್ಮಿಬ್ಬರಿಗಾಗಿ ನಾನು ಪಡುತ್ತಿರುವ ಕಷ್ಟ ಕಾಣೆಯಾ? ತಾಯಿ ಮಾತ್ರಿಗೆ ಸ್ವಲ್ಪ ಬೆಲೆ ಕೊಡಬೇಕಮ್ಮ.”

“ ಬೆಲೆ ಕೊಟ್ಟು ನಾನು ಮಾಡಬೇಕಾದದ್ದೇನು. ಮನೆಗೆ ಬರುವವರೆಲ್ಲರ ಜತೆಯಲ್ಲಿ ಚಕ್ಕಂದವಾಡಬೇಕೇನು ?”

“ ನನ್ನ ಮಾತಿಗೆ ಅಪಾರ್ಥ ಕಲ್ಪಿಸಿದರೆ ಏನು ಹೇಳಲಿ ?”

“ ಅಪಾರ್ಥವಲ್ಲ—ಸರಿಯಾದ ಅರ್ಥವನ್ನೇ ಕಲ್ಪಿಸಿದ್ದೇನೆ. ನಿನ್ನ ಸ್ನೇಹಿತರ ಹತ್ತಿರ ನನಗೇನೂ ಕೆಲಸವಿಲ್ಲ. ನನ್ನ ಸ್ನೇಹಿತರನ್ನು ನೀನು ಕದಿಯುವ ಹಾಗೆ ನಿನ್ನ ಸ್ನೇಹಿತರನ್ನು ಕದಿಯುವ ಇಷ್ಟ ನನಗಿಲ್ಲ.”

ಸರಸ್ವತಿಯ ಮೈಯುರಿದುಹೋಯಿತು. ಮಂಜುಳನನ್ನು ಹಿಡಿದು ಅಪ್ಪಳಿಸಿಬಿಡಬೇಕೆನ್ನುವಷ್ಟು ಕೋಪ ಬಂದಿತು. ಆದರೆ ಮಂಜುಳನ ದಿಟ್ಟನೋಟವನ್ನು ಎದುರಿಸುವಷ್ಟು ಅವಳಿಗೆ ಶಕ್ತಿ ಸಾಲದೆ ಹೋಯಿತು. ಕಣ್ಣಿನಿಂದ ಕೋಡಿ ಹರಿದ ನೀರನ್ನು ಒರಸಿಕೊಳ್ಳುತ್ತಾ ತನ್ನ ರೂಮಿಗೆ ಬಂದು

ಹಾಸಿಗೆಯ ಮೇಲೆ ಬಿದ್ದಳು.

'ಮಂಜುಳಾ ನನ್ನ ಮಗಳಲ್ಲ—ನನ್ನ ಪರಮಶತ್ರು. ಅವಳ ಹೃದಯದಲ್ಲಿ ದಯೆ, ಕನಿಕರ, ಪ್ರೇಮವಿಲ್ಲ' ಎಂದು ದುಃಖಿಸಿದಳು.

ಮಂಜುಳನ ಹೃದಯದಲ್ಲಿ ದಯೆ, ಕನಿಕರ, ಪ್ರೇಮವಿಲ್ಲದುದಕ್ಕಿಂತಲೂ ಹೆಚ್ಚಾಗಿ ಕ್ರೋಧ, ಈರ್ಷೆ, ಪ್ರತೀಕಾರ ತುಂಬಿದ್ದುದ್ದನ್ನು ಸರಸ್ವತಿಯ ಬುದ್ಧಿ ಗ್ರಹಿಸಲಾರದೆ ಹೋಯಿತು.

ಶ್ರೀರಂಗರಾಯರು ಪ್ರತಿನಿತ್ಯ ಆಫೀಸಿಗೆ ಹೋಗುವ ಮುನ್ನ ಸರಸ್ವತಿಯ ಮನೆಗೆ ಹಣಿಕಿಹಾಕಿ ಅವಳು ಅಣಿಮಾಡಿಕೊಟ್ಟ ತಾಂಬೂಲ ಸವಿದು ಹೋಗುತ್ತಿದ್ದರು. ಆಫೀಸ್ ಮುಗಿದೊಡನೆಯೇ ನೇರವಾಗಿ ಸರಸ್ವತಿಯ ಮನೆಗೆ ಬಂದು ಒಂಭತ್ತು, ಒಂಭತ್ತುವರೆಯವರೆಗೆ ಅಲ್ಲಿದ್ದು ಮನೆಗೆ ಹೋಗುತ್ತಿದ್ದರು. ಸರಸ್ವತಿಯ ಮನೆಯ ಸಮೀಪದಲ್ಲಿದ್ದ ಅರಳಿಯಮರದ ಕೆಳಗೆ ಡ್ರೈವರ್ ಕಾರ್ ನಿಲ್ಲಿಸಿಕೊಳ್ಳುತ್ತಿದ್ದ.

ತನ್ನ ಧಣಿಗೂ ಸರಸ್ವತಿಗೂ ಬೆಳೆದಿದ್ದ ಸಂಬಂಧ ಡ್ರೈವರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಆ ಬಗ್ಗೆ ಉಸಿರೆತ್ತುವುದು ತನ್ನ ನೌಕರಿಗೆ ಕಂಟಕಪ್ರಾಯವೆಂದು ತಿಳಿದಿದ್ದ ಅವನು ಬಾಯಿಬಿಡುತ್ತಿರಲಿಲ್ಲ.

ಸುತ್ತಮುತ್ತಲಿನವರಿಗೆ ರಾಯರ ಚೆವಲ್‌ರೇ ಕಾರ್ ಚಿರಪರಿಚಿತವಾಗುತ್ತ ಬಂತು. ಅವರು ಹೋಗುವುದು ಬರುವುದನ್ನು ನೆರೆಹೊರೆಯವರು ಕುತೂಹಲದಿಂದೀಕ್ಷಿಸುತ್ತಿದ್ದರು.

ಒಂದು ದಿನ ಬೆಳಿಗ್ಗೆ ಸ್ಕೂಲಿಗೆ ಹೋಗುವ ಮುನ್ನ ಸುಧಾ ತನಗೆ ಸರಿಯಾದ ಫೌಂಟನ್‌ಪೆನ್ ಇಲ್ಲವೆಂದು ಗೊಣಗಿದಳು. ಷೀಫರ್ ಪೆನ್ ತರಿಸಿಕೊಡುತ್ತೇನೆಂದು ತಾಯಿ ಮಾಡಿದ್ದ ವಾಗ್ದಾನವನ್ನು ಜ್ಞಾಪಿಸಿದಳು. ಸರಸ್ವತಿ ಮಗಳ ಕೋರಿಕೆಯನ್ನು ರಾಯರಿಗೆ ನಿವೇದಿಸಿದಳು.

ಅಂದೇ ಸಂಜೆ ರಾಯರು ಷೀಫರ್ ಮೇಜರ್ ಪೆನ್ ತಂದು ತಾವೇ ಕೈಯಾರ ಸುಧೆಗೆ ಕೊಟ್ಟರು. ಸುಧೆಗಾದ ಆನಂದ ಅಷ್ಟಿಷ್ಟಲ್ಲ. ಮಾರನೆಯ ದಿನ ಕ್ಲಾಸಿನಲ್ಲಿ ತನ್ನ ಪೆನ್ನನ್ನು ಮೆರೆಸಿದಳು.

ಸುಧೆಯ ಸಹಧ್ಯಾಯಿನಿಯರಾದ ಕಾತ್ಯಾಯಿನಿ, ಪರಿಮಳಾ ಅವಳ ಮನೆಯ ಸಮೀಪದಲ್ಲಿದ್ದರೂ ಅವರವರಿಗೆ ವಿಶ್ವಾಸ ಬೆಳದಿರಲಿಲ್ಲ. ಸುಧೆಯ 'ಚಿಲ್ಲಿತನ'ವನ್ನು ಅಪಹಾಸ್ಯ ಮಾಡುವುದರಲ್ಲಿ ಅವರು ಮುಂದಾಳುಗಳಾಗಿದ್ದರು. ಶಾಲೆಯ ವಾದ್ಯಮೇಳದಲ್ಲಿ ಕಾತ್ಯಾಯಿನಿಗೆ ಸ್ಥಾನ ತಪ್ಪಿ, ಆ ಸ್ಥಾನ ಸುಧೆಗೆ ಸಿಕ್ಕಿತ್ತು. ಅವಳು ಸುಧೆಯ ಮೇಲೆ ಒಂದು ಕಣ್ಣು ಇಟ್ಟೇ ಇದ್ದಳು.

ಸುಧಾ ತೋರಿಸಿದ ಷೀಪರ್ ಪೆನ್ ನೋಡಿ ಮೆಚ್ಚಿಕೊಂಡ ಕಾತ್ಯಾಯಿನಿ, ಪರಿಮಳಾ ಮರುಕ್ಷಣವೇ ಸುದ್ದಿಯನ್ನು ಗಾಯಿತ್ರಿಗೆ ಮುಟ್ಟಿಸಿದರು.

"ಷೀಪರ್ ಪೆನ್ನಿಗೆ ಎಂಭತ್ತು ತೊಂಬತ್ತು ರೂಪಾಯಿ ಆಗುತ್ತದಲ್ರೀ. ಇಷ್ಟು ಹಣ ಕೊಟ್ಟು ಪೆನ್ ಕೊಳ್ಳುವುದಕ್ಕೆ ಸುಧೆಗೆ ಅನುಕೂಲವೆಲ್ಲಿದೆ?"

"ನಿಮಗೆ ನಮಗೆ ಕಷ್ಟ ಕಣ್ರೀ ಗಾಯಿತ್ರಿ. ಸುಧೆಗೇನು? ಯಾರಾದರೂ ತಂದುಕೊಡುತ್ತಾರೆ."

"ಹಾಗಂದರೇನ್ರೀ?"

"ನಿಮಗೆ ಗೊತ್ತೇ ಇಲ್ಲವೇನು?"

"ಯಾವ ವಿಷಯ?"

"ಸುಧೆಯ ಮನೆಯ ವಿಷಯ."

"ನನಗೇನು ಗೊತ್ತಮ್ಮ."

"ಅವರ ತಾಯಿ ಬೇಕಾದ ಹಾಗೆ ಸಂಪಾದಿಸುತ್ತಾರ್ರೀ."

"ತಾಯಿ ಸಂಪಾದಿಸುತ್ತಿದ್ದರೆ ಸುಧಾ ಫ್ರಿಷಿಪ್ಪಿಗೇಕೆ ಅಪ್ಲಿಕೇಷನ್ ಹಾಕುತ್ತಿದ್ದಳು."

"ಅದೇನೋಮ್ಮ ರಹಸ್ಯ—ಅವಳನ್ನೇ ಕೇಳಬೇಕು."

"ಅವಳ ತಾಯಿ ತುಂಬ ಆಸ್ತಿವಂತರೇ?"

"ಹೂ. ಕಂಡವರ ಆಸ್ತಿಯಲ್ಲಾ ಅವರದೇ ಆಗಿದೆ."

"ನಿಮ್ಮ ಮಾತೇ ನನಗೆ ಅರ್ಥವಾಗಲ್ಲಮ್ಮ."

"ಅವರ ಮನೆಗೆ ಬಂದು ಹೋಗುವವರು ಬಹಳ."

"ಬಂದು ಹೋಗುವವರೆಲ್ಲಾ ಆಸ್ತಿ ತಂದುಕೊಡುತ್ತಾರೇನ್ರೀ. ಅಣ್ಣನ್ನ

ಹುಡುಕಿಕೊಂಡು ನಮ್ಮ ಮನೆಗೂ ಎಷ್ಟೋ ಜನ ಬರುತ್ತಾರೆ."

"ನಿಮ್ಮ ಮನೆಗೆ ಬರುವುದಕ್ಕೂ ಅವರ ಮನೆಗೆ ಬರುವುದಕ್ಕೂ ತುಂಬ ವ್ಯತ್ಯಾಸವಿದೆ ಗಾಯಿತ್ರಿ. ಅವರ ಮನೆಯ ಹೊಸ್ತಿಲೊಳಗೆ ಕಾಲಿಡಕೂಡದೆಂದ ನಮ್ಮ ತಾಯಿ ಕಟ್ಟಪ್ಪಣೆ ಮಾಡಿದ್ದಾರೆ."

"ಸುಧಾ ತಾಯಿ ಅಷ್ಟು ಕೆಟ್ಟವರೇನ್ರೀ."

"ಮಾಡಿದವರ ಪಾಪ ಆಡಿದವರ ಬಾಯಲ್ಲಿ—ನಮಗೇಕಮ್ಮ ಅವ ಸಂಸಾರದ ವಿಷಯ. ಇವತ್ತು ನಮ್ಮ ಮನೆಗೆ ಬರುತ್ತೀರೇನ್ರೀ ಗಾಯಿತ್ರಿ."

"ಏಕಮ್ಮ?"

"ಸುಧೆಗೆ ಷೀಫರ್ ಪೆನ್ ತಂದುಕೊಟ್ಟವರನ್ನು ತೋರಿಸುತ್ತೇನೆ."

"ಬೇಡ—ಅವರನ್ನು ನಾನು ಏಕೆ ನೋಡಬೇಕು" ಎಂದು ಹೇ ಬೇಕೆಂದು ಗಾಯಿತ್ರಿಯ ಮನಸ್ಸು ಪ್ರೇರೇಪಿಸಿತು. ಆದರೆ ಕುತೂಹಲಗ್ರಸ್ತ ಳಾದ ಅವಳು

"ಆಗಲಿ ಬರುತ್ತೇನೆ. ಎಷ್ಟು ಹೊತ್ತಿಗೆ ಹೋಗೋಣ" ಎಂದಳು.

"ಕೊನೆಯ ಪೀರಿಯಡ್ಡಿಗೆ ಚಕ್ಕರ್ ಹೊಡೆದುಬಿಡೋಣ."

ಎಂದು ಕಾತ್ಯಾಯಿನಿ, ಪರಿಮಳಾ ಸನ್ನಾಹ ಮಾಡಿದರು.

ಗಾಯಿತ್ರಿ, ಪರಿಮಳಾ, ಕಾತ್ಯಾಯಿನಿ ಹೊರಟು ಹೋದುದನ್ನು ಸುಧಾ ಗಮನಿಸಲಿಲ್ಲ. ಅವಳು ಕ್ಲಾಸಿನಲ್ಲಿಯೇ ಕೊನೆಯ ಪಿರಿಯಡ್ಡಿಗೆ ಉಳಿದು ಕೊಂಡಳು.

ಕಾತ್ಯಾಯಿನಿಯ ತಾಯಿ ಮನೆಯಲ್ಲಿ ಮಾಡಿಟ್ಟಿದ್ದ ತಿಂಡಿಯನ್ನು ಮಕ್ಕಳಿಗೂ ಗಾಯಿತ್ರಿಗೂ ಕೊಟ್ಟರು. ಉಪಾಹಾರ ಮುಗಿಸಿ ಹೂವರು ಹರಟೆ ಕೊಚ್ಚುತ್ತ ಕುಳಿತಿರುವಲ್ಲಿ ಮನೆಯ ಮುಂದೆ ಒಂದು ಕಾರ ಹೋಗುವ ಶಬ್ದವಾಯಿತು. ಕಾತ್ಯಾಯಿನಿ ಕಾರನ್ನು ಗಾಯಿತ್ರಿ ತೋರಿಸಿದಳು.

"ನಮ್ಮ ಕಾರು" ಎಂದಳು ಗಾಯಿತ್ರಿ.

"ಹಾಗೆ ನೋಡಿ."

ಗಾಯಿತ್ರಿ ನೋಡುತ್ತಿರುವಂತೆ ಶ್ರೀರಂಗರಾಯರು ಕಾರಿನಿಂದಿಳಿದು ಸರಸ್ವತಿಯ ಮನೆಯೊಳಗೆ ಹೋದರು. ಕಾರು ಅರಳೀಮರದ ಕೆಳಗೆ ಹೋಗಿ ನಿಂತಿತು.

ಗಾಯಿತ್ರಿಯ ಮನಸ್ಸು ಕದಡಿಹೋಯಿತು. ಸೆರಗಿನಿಂದ ಮುಖ ಮುಚ್ಚಿಕೊಂಡು ಅಳುತ್ತ ಕುಳಿತಳು. ಕಾತ್ಯಾಯಿನಿ, ಪರಿಮಳಾ ಸಮಾಧಾನ ಹೇಳಿದರು. ಗಾಯಿತ್ರಿ ಮನೆಗೆ ಹೋಗಲು ಬಯಸಿದಳು. ಕಾತ್ಯಾಯಿನಿ ಅವಳನ್ನು ಹಿತ್ತಿಲು ಬಾಗಿಲಿನಿಂದ ಮನೆಗೆ ಕಳುಹಿಸಿಕೊಟ್ಟಳು.

—ಮನೆಗೆ ಬಂದವಳೇ ಗಾಯಿತ್ರಿ ಅತ್ತೆಯನ್ನೂ ಮಾತನಾಡಿಸದೆ ತನ್ನ ರೂಮಿಗೆ ಹೋಗಿ ಅಳುತ್ತ ಕುಳಿತಳು. ತಿಂಡಿ ತೆಗೆದುಕೊಂಡು ಬಂದ ಅಂಬಕ್ಕನ ಉಪಹಾರ ಪ್ರಯೋಜನಕ್ಕೆ ಬರಲಿಲ್ಲ.

"ಏನಾಯಿತು ಗಾಯಿತ್ರಿ ಪ್ರಮಾದ. ನೀನು ಇಷ್ಟು ದುಃಖಪಡುವುದಕ್ಕೇನು ಕಾರಣ? ಸ್ಕೂಲಿನಲ್ಲಿ ಮೇಷ್ಟ್ರು ಬಯ್ದರೇ—ಜತೆ ಹುಡುಗಿಯರೇನಾದರೂ ವ್ಯಾಜ್ಯ ಕಾದರೇ?"

"ಏನೂ ಇಲ್ಲ ಅತ್ತೆ."

"ಏನೂ ಇಲ್ಲದೆ ಇಷ್ಟು ಅಳುತ್ತಿರುವೆಯಾ? ನಿನ್ನ ಕಣ್ಣು ನೋಡು ಹೇಗೆ ಊದಿಕೊಂಡಿದೆ. ಅಳಬೇಡ ನನ್ನ ಬಂಗಾರಾ—ನಿನಗೇನು ಬೇಕು ನಾನು ತರಿಸಿಕೊಡುತ್ತೇನೆ. ಬಾ, ತಿಂಡಿ ತೊಗೋ."

ಎನ್ನುತ್ತಾ ಅಂಬಕ್ಕನ ಕಣ್ಣಲ್ಲಿ ನೀರು ಫಳಫಳನೆ ಉದುರಿದುವು. ಅತ್ತೆಯ ಸಹಾನುಭೂತಿ ಗಾಯಿತ್ರಿಯ ಮನದುಮ್ಮಳವನ್ನು ಸ್ವಲ್ಪ ಕಡಿಮೆ ಮಾಡಿತು. ಶಾಲೆಯಲ್ಲಿ ಕಾತ್ಯಾಯಿನಿ ಹೇಳಿದ ಮಾತು, ಕಾತ್ಯಾಯಿನಿಯ ಮನೆಯ ಮುಂದೆ ತಾನು ಕಂಡ ದೃಶ್ಯವನ್ನು ಗಾಯಿತ್ರಿ ವಿವರಿಸಿದಳು.

ಅಂಬಕ್ಕನಿಗೆ ಸಿಡಿಲು ಬಡಿದಂತಾಯಿತು. ಅವರ ಬಾಯಿಂದ ಮಾತೇ ಹೊರಡಲಿಲ್ಲ. ಕೂಡಲೇ ಎದ್ದುಹೋಗಿ ಶ್ರೀರಂಗರಾಯನನ್ನು ಮನೆಗೆ ದರದರನೆ ಹಿಡಿದೆಳೆದುಕೊಂಡು ಬರಬೇಕೆಂದು ಯೋಚಿಸಿದರು. ಆದರೆ ಒರಟುತನದಿಂದ ಕೆಲಸ ಕೆಟ್ಟು ಪ್ರಮಾದವಾಗಬಹುದೆಂಬ ಅಂಜಿಕೆಯೂ

ಅಂಬಕ್ಕನನ್ನು ಬಾಧಿಸಿತು.

"ನೀನು ಯೋಚನೆ ಬಿಟ್ಟು ತಿಂಡಿ ತಿನ್ನು ಗಾಯಿತ್ರಿ. ಈ ವಿಷಯ ನಾನು ನೋಡಿಕೊಳ್ಳುತ್ತೇನೆ. ಅವಳ ಮನೆಯೆಲ್ಲಿ?"

"ಮಾವಳ್ಳಿಯಲ್ಲಿ."

"ಅವಳ ಮನೆ ಯಾವಾಗಲಾದರೂ ಜಯನಿಗೆ ತೋರಿಸಿರು."

ಎಂದು ಹೇಳಿದರು. ಅಂಬಕ್ಕನ ಮನಸ್ಸಿನಲ್ಲಾಗುತ್ತಿದ್ದ ಮಹಾ ಯುದ್ಧದ ಕಲ್ಪನೆ ಗಾಯಿತ್ರಿಗೆ ಬರಲಿಲ್ಲ.

ಅಂಬಕ್ಕ ತಮ್ಮ ವಿಚಾರಶಕ್ತಿಗನುಗುಣವಾಗಿ ಈ ಸಮಸ್ಯೆಯನ್ನೆದುರಿಸುವ ಮಾರ್ಗವನ್ನು ಆವಿಷ್ಕಾರ ಮಾಡಿಕೊಂಡರು. ಆದರೆ ಅದಕ್ಕೆ ಕೂಡಲೆ ಕಾರ್ಯ ರೂಪ ಕೊಡಲು ಸಾಧ್ಯವಾಗಲಿಲ್ಲ. ಶ್ರೀರಂಗರಾಯರು ಊರಿನಲ್ಲಿ ಇರುವಾಗ ಇದಕ್ಕೆ ಕೈ ಹಾಕಿದರೆ ಅನವಶ್ಯಕ ಗೊಂದಲಕ್ಕೆಡೆಯಾಗಬಹುದೆಂದು ಮನಸ್ಸನ್ನು ಹತೋಟಿಗೆ ತಂದುಕೊಂಡರು.

ಕಾತ್ಯಾಯಿನಿಯನ್ನು ಮನೆಗೆ ಬರಮಾಡಿಕೊಂಡು ಅವಳಿಂದ ಅಂಬಕ್ಕ ಹೆಚ್ಚಿನ ವಿಷಯ ಸಂಗ್ರಹ ಮಾಡಿದರು. ಕಾತ್ಯಾಯಿನಿಯ ತಾಯಿ ತಾವೇ ಅಂಬಕ್ಕನಲ್ಲಿಗೆ ಬಂದು ತಮಗೆ ತಿಳಿದಿದ್ದ ವಿಷಯಗಳನ್ನು ಬಿನ್ನವಿಸಿಕೊಂಡರು. ಸರಸ್ವತಿಯ ಪೂರ್ವೋತ್ತರ, ಹಿಂದಿನ ಜೀವನ, ಇಂದಿನ ಜೀವನದ ಸಮಗ್ರ ಚಿತ್ರ ಅಂಬಕ್ಕನಿಗೆ ಸಿಕ್ಕಿದಂತಾಯಿತು.

ಶ್ರೀರಂಗರಾಯರು ಮೈಸೂರಿಗೆ ದಸರಾ ದರ್ಬಾರಿಗೆ ಹೋಗುವುದು ಅತ್ಯವಶ್ಯವಾಗಿತ್ತು. ಸರ್ಕಾರಿ ಅಧಿಕಾರಿಗಳು ದರ್ಬಾರನ್ನು ಯಾವ ಕಾರಣಕ್ಕೂ ತಪ್ಪಿಸಿಕೊಳ್ಳುವಂತಿರಲಿಲ್ಲ. ತಮ್ಮ ಮೈಸೂರಿಗೆ ಪ್ರಯಾಣ ಮಾಡುವುದಕ್ಕೇ ಅಂಬಕ್ಕ ಕಾದಿದ್ದರು. ಶ್ರೀರಂಗರಾಯರು ಕಾರಿನಲ್ಲೇ ಮೈಸೂರಿಗೆ ಪ್ರಯಾಣ ಬೆಳಸಿದರು.

"ಅಂದೇ ಸಂಜೆ ನೇರವಾಗಿ ಅಂಬಕ್ಕ ಸರಸ್ವತಿಯ ಮನೆಗೆ ಬಂದರು. ಜತೆಯಲ್ಲಿ ಬಂದ ಜಯ ಅಂಬಕ್ಕನಿಗೆ ಸರಸ್ವತಿಯ ಮನೆ ತೋರಿಸಿ ತನ್ನ ಆಟಕ್ಕೆ ಹೊರಟು ಹೋದ.

ವಯಸ್ಸಾದ ಮಡಿ ಹೆಂಗಸು ಯಾರೋ ಬಂದಿದ್ದಾರೆಂದು ಸರಸ್ವತಿ ಅಂಬಕ್ಕನನ್ನು ಮರ್ಯಾದೆಯಿಂದ ಒಳಗೆ ಬರಮಾಡಿಕೊಂಡಳು. ಅಂಬಕ್ಕ ಚಾಪೆಯ ಬಳಿ ಸುಳಿಯದೆ ನೆಲದ ಮೇಲೇ ಕುಳಿತರು.

" ಯಾರಮ್ಮ ನೀವು. ಏನು ಇಷ್ಟು ದೂರ ಬಂದಿರಿ."

" ಸರಸ್ವತಮ್ಮ ನೀವೇನೋ ?"

" ಹೌದು."

" ನಿಮ್ಮ ಮಗಳು ಸುಧಾ ಹೈಸ್ಕೂಲಿನಲ್ಲಿ ಓದುತ್ತಿದ್ದಾಳಲ್ಲವೇ ?"

" ಹೌದು. ನೀವು ಅವಳನ್ನು ಹೇಗೆ ಬಲ್ಲಿರಿ."

" ನಮ್ಮ ಹುಡುಗಿಯೂ ಅದೇ ಸ್ಕೂಲಿನಲ್ಲಿ ಓದುತ್ತಿದ್ದಾಳೆ."

" ಅವಳ ಹೆಸರೇನು ?"

" ಗಾಯಿತ್ರಿ."

ಗಾಯಿತ್ರಿಯ ಹೆಸರು ಕೇಳಿದೊಡನೆಯೇ ಸರಸ್ವತಿಯ ಕಾಲುಗಳು ಸೋತುಬಿದ್ದವು, ಮುಖ ಕಪ್ಪಿಟ್ಟಿತು.

" ಇವತ್ತು ಯಜಮಾನರು ಬರಲಿಲ್ಲವೇನೋ ?"

ಸರಸ್ವತಿಗೆ ಉತ್ತರ ಕೊಡಲಾಗಲಿಲ್ಲ. ಅವಳ ಬಾಯಿ ಒಣಗಿ ಹೋಗುತ್ತಿತ್ತು.

" ಅವರು ಇನ್ನೂ ಎಂಟು ಹತ್ತು ದಿವಸ ಬರಲ್ಲಮ್ಮ. ಮೈಸೂರಿಗೆ ಹೋಗಿದ್ದಾರೆ."

ತಾನು ಕುಳಿತಿದ್ದೆಡೆಯೇ ಭೂಮಿ ಬಾಯಿ ತೆರೆದು ತನ್ನನ್ನು ನುಂಗಿ ಕೊಳ್ಳಬಾರದೇ ಎಂದು ಸರಸ್ವತಿ ಬಯಸಿದಳು. ಮುದುಕಿಗೆ ಒಂದು ಒಳ್ಳೆಯ ಮಾತು ಆಡಿ ಉಪಾಯವಾಗಿ ಹೊರಗೆ ಸಾಗಿಸಬೇಕೆಂದು ಸರಸ್ವತಿ ಲೆಕ್ಕ ಹಾಕಿಕೊಂಡು

" ಗಾಯಿತ್ರಿ ನಿಮಗೇನಾಗಬೇಕು."

" ನನ್ನ ತಮ್ಮನ ಮಗಳು—ನಿಮ್ಮ ಯಜಮಾನರಾಗಿದ್ದಾರಲ್ಲಾ ಶ್ರೀರಂಗರಾಯರು ಅವರೇ ನನ್ನ ತಮ್ಮ."

ಸರಸ್ವತಿಯ ಬಾಯಲ್ಲಿ ದ್ರವ ಉಳಿದಿರಲಿಲ್ಲ. ಅವಳು ಹೊರಗೆ ಹೋಗುವುದಕ್ಕೆ ಸಾಧ್ಯವಾಗದಂತೆ ಅಂಬಕ್ಕ ಗಣಪತಿಯಂತೆ ಬಾಗಿಲಿಗಡ್ಡವಾಗಿ ಕುಳಿತಿದ್ದರು.

" ನಿನಗೆ ಒಂದು ಬುದ್ಧಿ ಮಾತು ಹೇಳುವುದಕ್ಕೆ ನಾನು ನಿನ್ನ ಮನೆಯ ಬಾಗಿಲವರೆಗೆ ಬರಬೇಕಾಯಿತು. ರಾಯರ ಗುಡಿ ಪಾವಟಿಗೆ ತುಳಿದ ಜನ್ಮ ಇಂದು ಸಾರ್ಥಕವಾಯಿತು."

" ಏನು ಹೇಳುತ್ತೀರೋ ಹೇಳೀಮ್ಮ."

" ಶ್ರೀರಂಗ ನಿಮ್ಮಂಥಾವರ ಕೈತುತ್ತಾಗೋ ಮನುಷ್ಯನಲ್ಲಮ್ಮ. ಅವನು ಮರ್‍ಯಾದಸ್ಥ, ಮಕ್ಕಳುವಂದಿಗ—ದೊಡ್ಡ ಅಧಿಕಾರದಲ್ಲಿದ್ದಾನೆ. ಇನ್ನೂ ದೊಡ್ಡ ಅಧಿಕಾರಕ್ಕೆ ಹೋಗತಕ್ಕವನು."

" ಅವರಿಗೆ ನಾನೇನು ಮಾಡಿದೆ?"

" ಬೆಕ್ಕು ಕಣ್ಣು ಮುಚ್ಚಿಕೊಂಡೇ ಹಾಲು ಕುಡಿಯುವುದು. ಊರ ಲ್ಲೆಲ್ಲಾ ಜನ ಆಡಿಕೊಂಡು ನಗುತ್ತಾ ಇದ್ದಾರೆ. ನೀನು ಇಷ್ಟು ವಯಸ್ಸಾದ ವಳು—ಮಕ್ಕಳುವಂದಿಗಿತ್ತಿ, ನಿನಗಿನ್ನೂ ವಿವೇಕ ಬಂದಿಲ್ಲವಲ್ಲ. ಇಂಥ ಬಾಳು ಬಾಳುವುದಕ್ಕಿಂತ ಕೂಲಿನಾಲೆ ಮಾಡಿಕೊಂಡು ಮರ್ಯಾದೆಯಾಗಿ ಹೊಟ್ಟೆ ಹೊರೆಯುವುದು ಲೇಸು."

" ನನ್ನ ಕಷ್ಟಸುಖಕ್ಕೆ ನೀವೇನು ಆಗುವವರಲ್ಲವಲ್ಲಾ. ನನಗೇಕೆ ಉಪದೇಶ ಮಾಡಲು ಬಂದಿರಿ ?"

" ನಿನಗೆ ಉಪದೇಶ ಮಾಡಿ ನನಗೆ ಆಗಬೇಕಾದದ್ದೇನು ? ನಮ್ಮ ವಸ್ತು ಇಲ್ಲಿ ಸಿಕ್ಕಿಕೊಂಡು ನರಳಾಡುತ್ತಿದೆಯಲ್ಲಾ ಎಂದು ನಾನು ಬರಬೇಕಾಯಿತು."

" ನಿಮ್ಮ ತಮ್ಮಂದಿರೇನೂ ಎಳೆಯ ಮಕ್ಕಳಲ್ಲ, ಅವರ ಜವಾಬ್ದಾರಿ ಅವರಿಗೆ ಗೊತ್ತಿದೆ. ನಿಮ್ಮ ತಮ್ಮಂದಿರು ಇಲ್ಲಿಗೆ ಬರುವುದು ಸರಿಯಲ್ಲ ಎಂದು ನಿಮಗೆ ತೋರಿದ್ದರೆ ಅವರಿಗೆ ನೀವು ಬುದ್ಧಿ ಹೇಳಬೇಕೇ ವಿನಾ ನನಗೆ ಉಪದೇಶ ಮಾಡುವುದಕ್ಕೆ ಬರಬಾರದು."

" ನೀನು ಅವನ ಸಹವಾಸ ಬಿಟ್ಟುಬಿಡಬೇಕು."

"ಅವರಾಗಿಯೇ ಬಂದರೆ?"

"ಮನೆ ಸೇರಿಸಬಾರದು."

"ನನ್ನ ಜೀವನ ನಡೆಸುವವರು ಯಾರು?"

"ದೇವರು."

"ದೇವರಿಗೆ ತಿಳುವಳಿಕೆಯಿದ್ದಿದ್ದರೆ ನನ್ನ ಸ್ಥಿತಿ ಹೀಗೇಕಾಗುತ್ತಿತ್ತು."

"ನಿನ್ನ ಜೀವನ ನಡೆಸೋಕೆ ಶ್ರೀರಂಗ ಮನೆ ಹಾಳುಮಾಡಿಕೊಳ್ಳಬೇಕೇನು? ತನ್ನ ಗೌರವ ಮಣ್ಣುಪಾಲು ಮಾಡಿಕೊಳ್ಳಬೇಕೇನು? ಲೋಕದಲ್ಲಿ ನಿನ್ನಂಥ ಮಾನಗೆಟ್ಟ ರಂಡೆಯರು ಸಾವಿರ ಜನ ಸಿಕ್ಕುತ್ತಾರೆ, ಶ್ರೀರಂಗನಂಥ ಮರ್ಯಾದಸ್ಥರು ಸಿಕ್ಕುವುದು ಅಪರೂಪ."

"ಏನಮ್ಮ—ವಯಸ್ಸಾದವರು ಎಂದು ಒಳಗೆ ಕರೆದು ಗೌರವ ತೋರಿಸಿದರೆ ನಾಲಿಗೆ ಹಗುರಮಾಡುತ್ತಿರುವಿರಿ. ನಿಮ್ಮ ತಮ್ಮಂದಿರು ದೊಡ್ಡ ಮನುಷ್ಯರಾಗಿದ್ದರೆ ಮಾನಗೆಟ್ಟ ರಂಡೆ ಮನೆಗೇಕೆ ಬರುತ್ತಿದ್ದರು."

"ಅವನ ವಿಷಯ ನೀನು ಮಾತನಾಡಿದರೆ ಹಲ್ಲು ಮುರಿದು ಕೈಗೆ ಕೊಟ್ಟೇನು. ಎಷ್ಟು ಸಂಸಾರ ಹಾಳು ಮಾಡಿ ಕೊನೆಗೆ ಶ್ರೀರಂಗನ ಸಂಸಾರಕ್ಕೆ ಗಂಟು ಬಿದ್ದಿದ್ದೀ. ಅವನ ಸಹವಾಸ ನೀನು ಬಿಡಲಿಲ್ಲಾಂದ್ರೆ ಭೂಮಿಗೆ ಹಾಕಿ ತುಳಿದುಬಿಟ್ಟೇನು" ಎಂದು ಗರ್ಜಿಸಿದರು.

ಅಂಬಕ್ಕನ ಭರ್ತ್ಸನೆಯ ನುಡಿ ಸರಸ್ವತಿಯ ಆತ್ಮಗೌರವಕ್ಕೆ ಬಲವಾದ ಪೆಟ್ಟು ಹಾಕಿತ್ತು. ಅವಳ ದೇಹಾದ್ಯಂತವೂ ಕೋಪದಿಂದ ಕೆಂಪೇರಿತು.

"ನಡಿಯಾಚೆ—ಮುದಿಗೊಡ್ಡೇ—ಇಲ್ಲಿ ನಿನ್ನ ಗೃಯ್ಯಾಳಿತನ ಕೇಳುವವರು ಯಾರೂ ಇಲ್ಲ. ಭೂತದಂಥ ನಿನ್ನ ದೇಹ ನೋಡಿ ಹೆದರುತ್ತೇನೆಂದು ತಿಳಿದೆಯಾ. ಶ್ರೀರಂಗರಾಯರನ್ನು ನಾನು ಎಂದೆಂದಿಗೂ ಬಿಡುವುದಿಲ್ಲ. ಏನು ಮಾಡುತ್ತೀಯೋ ನೋಡೋಣ" ಎಂದಳು.

ಅಂಬಕ್ಕ ಚಿರತೆಯ ಮರಿಯಂತೆ ಎದ್ದು ನಿಂತು ಸರಸ್ವತಿಯ ತಲೆ ಕೂದಲು ಹಿಡಿದರು. ಮೂಲೆಯಲ್ಲಿ ಒರಗಿಸಿದ್ದ ಪರಕೆ ಅವರ ಕಣ್ಣಿಗೆ ಬಿತ್ತು. ಕೈಗೆ ಪರಕೆಯನ್ನೆತ್ತಿಕೊಂಡು ಸರಸ್ವತಿಯನ್ನು ಹೊರಗೆಳೆದುಕೊಂಡು ಬಂದರು.

ಸರಸ್ವತಿ ಬಿಡಿಸಿಕೊಳ್ಳುವುದಕ್ಕೆ ಸರ್ವಸಾಹಸ ಮಾಡಿದಳು. ಅಂಬಕ್ಕನ ಕಪಿ ಮುಷ್ಟಿಯಿಂದ ಪಾರಾಗುವುದು ಅವಳಿಗೆ ದುಸ್ಸಾಧ್ಯವಾಯಿತು.

ಸರಸ್ವತಿಯನ್ನು ಬೀದಿಗೆಳತಂದು ಅಂಬಕ್ಕ ಪರಕೆಯನ್ನು ಅವಳ ಮೇಲೆ ಧಾರಾಳವಾಗಿ ಪ್ರಯೋಗಿಸಿದರು. ಸರಸ್ವತಿಯ ಚೀರಾಟ ಕೇಳಿ ರೂಮಿನಲ್ಲಿದ್ದ ಮಂಜುಳಾ ಓಡಿ ಬಂದಳು. ಅಂಬಕ್ಕನ ಮೊಣಕೈಯ ತಿವಿತಕ್ಕೆ ಸಿಕ್ಕಿ ಮಂಜುಳಾ ದೂರ ಹೋಗಿ ಬಿದ್ದಳು.

ಅದೇ ಶಾಲೆಯಿಂದ ಬರುತ್ತಿದ್ದ ಸುಧಾ, ಅವಳ ಗೆಳತಿಯರ ಕಣ್ಣಿಗೂ ಈ ದೃಶ್ಯ ಬಿತ್ತು. ತಾಯಿಯನ್ನು ಬಿಡಿಸಿಕೊಳ್ಳುವ ಪ್ರಯತ್ನ ಸುಧೆಯೂ ಮಾಡಿದಳು. ಮಹಾಕಾಳಿಯ ಅವತಾರ ತಾಳಿ ನಿಂತಿದ್ದ ಅಂಬಕ್ಕನೆದುರು ನಿಲ್ಲಲು ಅವಳಿಗೂ ಸಾಧ್ಯವಾಗಲಿಲ್ಲ. ಕಿಟಕಿ, ಬಾಗಿಲು, ಕಾಂಪೌಂಡು ಮರೆಯಲ್ಲಿ ನಿಂತು ನೋಡುತ್ತಿದ್ದ ನೆರೆಹೊರೆಯವರನ್ನು ಸುಧಾ ಕರೆತಂದಳು.

ಅಂಬಕ್ಕನ ಹೊಡೆತಕ್ಕೆ ಸಿಕ್ಕಿ ಸರಸ್ವತಿ ಹಣ್ಣಾಗಿದ್ದಳು. ಅಂಬಕ್ಕನ ಮೈ ಮುಖವೆಲ್ಲಾ ಸರಸ್ವತಿಯ ನಖಘಾತಕ್ಕೆ ಸಿಕ್ಕಿ ರಕ್ತಮಯವಾಗಿತ್ತು. ಕಾತ್ಯಾಯಿನಿಯ ತಾಯಿ ಓಡಿಬಂದು ಸರಸ್ವತಿಯನ್ನು ಬಿಡಿಸಿಕೊಂಡರು.

ಅಂಬಕ್ಕ ಬಲಗೈಯಲ್ಲಿದ್ದ ಪರಕೆ, ಎಡಗೈಗೆ ಸುತ್ತಿಕೊಂಡಿದ್ದ ಸರಸ್ವತಿಯ ತಲೆಗೂದಲನ್ನು ಬಿಸುಟು

"ಇನ್ನೊಂದು ದಿನ ಅವನ ಸುದ್ದೀಗೆ ಬಾ—ಆಗ ನೋಡುವಿಯಂತೆ ಮಾರಣಹೋಮ."

ಎಂದು ಹೇಳಿ ಮನೆಯ ಕಡೆ ಹೊರಟುಬಿಟ್ಟರು.

ಸರಸ್ವತಿ ಒಳಗೆ ಬಂದು ಕೈಮೇಲೆ ತಲೆಹೊತ್ತು ಕುಳಿತುಬಿಟ್ಟಳು. ಏನು ಮಾಡಬೇಕೆಂದು ಅವಳಿಗೆ ದಿಕ್ಕೇ ತೋರದಂತಾಗಿತ್ತು. ಸುಧೆಯನ್ನಟ್ಟಿ ರಾಘವಾಚಾರ್ಯರನ್ನು ಬರಮಾಡಿಕೊಂಡು, ನಡೆದುದನ್ನು ಅವರಿಗೆ ತಿಳಿಸಿ

"ನೀವು ಇವತ್ತೇ ಮೈಸೂರಿಗೆ ಹೋಗಿ ರಾಯರಿಗೆ ಎಲ್ಲಾ ತಿಳಿಸಿ ಬನ್ನಿ"

ಎಂದು ಹೇಳಿದಳು. ರಾಘವಾಚಾರ್ಯರು ರಾಯರ ಸಲುವಾಗಿ ಅವಳ ಮಾತಿಗೆ ಒಪ್ಪಿಗೆ ಕೊಟ್ಟರು.

ಮಾರನೆಯ ದಿನವೇ ಸುಧಾ ಸ್ಕೂಲಿಗೆ ಶರಣು ಹೊಡೆದುಬಿಟ್ಟಳು. ಸರಸ್ವತಿ ಛತ್ರಕ್ಕೆ ಸಾಮಾನು ಸಾಗಿಸಿಕೊಂಡು ಮಕ್ಕಳನ್ನು ಕರೆದುಕೊಂಡು ಹೋಗಿಬಿಟ್ಟಳು.

ತಮ್ಮ ಮೈಸೂರಿನಿಂದ ಬರುವ ವೇಳೆಗೆ ಹೆಣ್ಣು ಗೊತ್ತುಮಾಡಿಕೊಂಡಿದ್ದು, ಅವನು ಬಂದ ಕೂಡಲೆ ಬನ್ನೇರುಘಟ್ಟದಲ್ಲಿ ಮದುವೆ ಮಾಡಿಬಿಡುವುದೆಂದು ಅಂಬಕ್ಕ ನಿಶ್ಚಯಿಸಿಕೊಂಡರು.

ಅತ್ತೆಯ ಸಾಹಸಕೃತ್ಯ ಕೇಳಿ ಗಾಯಿತ್ರಿ ಬೆಕ್ಕಸಬೆರಗಾದಳು. ಜಯ ಅತ್ತೆಯನ್ನು

" ನೀನು ಮಿಲ್ಟ್ರೀ ಸೇರಬೇಕಾಗಿತ್ತು ಅಂಬಕ್ಕ " ಎಂದು ಪರಿಹಾಸ್ಯ ಮಾಡಿದ.

' ಹೋಗೋ ಮುಕ್ಕ' ಎಂದು ಅಂಬಕ್ಕ ಅವನ ಮಾತಿಗೆ ನಕ್ಕುಬಿಟ್ಟರು.

೨೪

ಸರಸ್ವತಿ ಛತ್ರದಲ್ಲಿದ್ದುಕೊಂಡು ಎಂಟು ದಿವಸ ಒಂದೇ ಸಮನಾಗಿ ಮನೆಗಾಗಿ ಪರದಾಡಿದಳು. ಒಳ್ಳೆಯ ವಿಸ್ತರಣಗಳಲ್ಲಿ ಸಿಕ್ಕುತ್ತಿದ್ದ ಮನೆಗಳ ಬಾಡಿಗೆ ಕೇಳಿದರೇ ಭಯವಾಗುತ್ತಿತ್ತು. ಹತ್ತು ಹನ್ನೆರಡು ರೂಪಾಯಿಗಳಿಗೆ ಮನೆ ಸಿಕ್ಕುವ ಮಾತು ಹಾಗಿರಲಿ — ಒಂದು ರೂಮು ಕೂಡ ಸಿಕ್ಕುತ್ತಿರಲಿಲ್ಲ.

ಸರಸ್ವತಿ ಭಾಗ್ಯಮ್ಮನ ನೆರವು ಕೋರದೆ ನಿರ್ವಾಹವಿರಲಿಲ್ಲ. ಭಾಗ್ಯಮ್ಮ ಗವೀಪುರ ಗುಟ್ಟಹಳ್ಳಿಯಲ್ಲಿ ಇಪ್ಪತ್ತು ರೂಪಾಯಿಗಳಿಗೆ ಒಂದು ಮನೆ ಗೊತ್ತು ಮಾಡಿಕೊಂಡು ಬಂದಳು. ಅಡಿಗೆಯಮನೆ, ನಡುಮನೆ, ರೂಮು ಮೂರೂ ಸಣ್ಣದಾಗಿದ್ದವು. ಮನೆಯ ಹೊರಗಡೆ ಜಿಂಕ್‌ಷೀಟ್ ಹೊದೆಸಿದ ಸ್ನಾನ ಗೃಹ. ಇದಕ್ಕಿಂತ ಉತ್ತಮ ಮನೆಯನ್ನು ಹುಡುಕಿ ದೊರಕಿಸಿಕೊಳ್ಳುವ ತಾಳ್ಮೆ, ಚೈತನ್ಯ ಸರಸ್ವತಿಗಿರಲಿಲ್ಲ. ಸರಸ್ವತಿಯ ಮನೆಗೂ ಮುತ್ತಮ್ಮನ ಮನೆಗೂ ನಾಲ್ಕೇ ಫರ್ಲಾಂಗುಗಳ ದೂರ.

ದಸರಾ ಹಬ್ಬ ಮುಗಿಯುತ್ತ ಬಂದಿತ್ತು. ಶ್ರೀರಂಗರಾಯರು ದಸರಾ ಮುಗಿಸಿಕೊಂಡು ಊರಿಗೆ ಬಂದಿರಬಹುದೆಂದು ಸರಸ್ವತಿ ನಿರೀಕ್ಷಿಸಿದಳು. ರಾಘವಾಚಾರ್ಯರನ್ನು ತಾನೇ ಹುಡುಕಿಕೊಂಡು ಹೋದಳು.

" ರಾಯರ ಯೋಚನೆ ಬಿಟ್ಟುಬಿಡಿ. ಅವರ ಮನೆಯಲ್ಲಿದೆಯಲ್ಲಾ ಹೆಮ್ಮಾರಿ ಅಂಬಕ್ಕ ಅದು ಎಲ್ಲಾ ಭದ್ರಮಾಡಿಬಿಟ್ಟಿದೆ. ನಿಮ್ಮ ಮನೆಗೆ ಹೋಗುವುದಿಲ್ಲವೆಂದು ರಾಯರ ಗುಡಿಯಲ್ಲಿ ಶ್ರೀರಂಗರಾಯರ ಕೈಯಲ್ಲಿ ಪ್ರಮಾಣ ಮಾಡಿಸಿದೆ. ಸದ್ಯದಲ್ಲೇ ಶ್ರೀರಂಗರಾಯರ ಮದುವೆಯೂ ನಡೆಯುತ್ತದೆ."

" ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು ಎಂದ ಹಾಗಾಯಿತಲ್ಲಾ ಮೇಷ್ಟ್ರೇ! ಮುಂದೆ ನನಗೇನು ಗತಿ. ಈಗ ನಾನಿರುವ ಮನೆಗೆ

ಕೆಂಪಾಂಬುಧಿ ಕೆರೆ ಹತ್ತಿರ—ಅದೇ ಒಂದು ಸಮಾಧಾನ."

"ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೇನ್ರಮ್ಮ. ಏಕೆ ಯೋಚನೆ ಮಾಡುವಿರಿ. ಏನಾದರೂ ಮಾರ್ಗ ದೇವರು ತೋರಿಸುತ್ತಾನೆ."

"ಮನೆಯವನಿಗೆ ಬಾಡಿಗೆ ಅಡ್ವಾನ್ಸ್ ಕೊಡಬೇಕಾದರೇ ನನಗೆ ಸಾಕು ಸಾಕಾಗಿ ಹೋಯಿತು. ನನ್ನ ಸಂಸಾರ ನಡೆಯುವುದು ಹೇಗೆ ಮೇಷ್ಟ್ರೇ."

"ನಾನು ಯೋಚನೆ ಮಾಡಿ ತಿಳಿಸುತ್ತೇನೆ. ನಿಮ್ಮ ಮನೆಗೆ ಗುರುತು ಹೇಳಿರಿ" ಎಂದು ರಾಘವಾಚಾರ್ಯರು ಆಶ್ವಾಸನವಿತ್ತರು.

ಮುತ್ತಮ್ಮನ ಮನೆಯೇ ಸರಸ್ವತಿಗೆ ಆಧಾರವಾಯಿತು.

ಸುಧಾ ಶಾಲೆಯ ಮಕ್ಕಳಿಗೆ ಪಾಠ ಹೇಳಿ ಸ್ವಲ್ಪ ಹಣ ಸಂಪಾದಿಸುವ ಪ್ರಯತ್ನ ಮಾಡಿದಳು. ಅವಳಿಗೆ ಒಂದೆರಡು ಟ್ಯೂಷನ್‌ಗಳೂ ಸಿಕ್ಕಿದವು. ಟ್ಯೂಷನ್ ಮನೆಯವರಿಗೆ ಯಾರೋ ಸರಸ್ವತಿಯ ಚರಿತ್ರೆ ಮುಟ್ಟಿಸಿದರು. ಸುಧಾ ಕೆಲಸ ಕಳೆದುಕೊಂಡು ಮನೆಗೆ ಬಂದು ಕುಳಿತಳು.

ಒಂದು ದಿನ ಬೆಳಿಗ್ಗೆ ಹತ್ತು ಗಂಟೆಗೆ ರಾಘವಾಚಾರ್ಯರು ಸರಸ್ವತಿಯ ಮನೆ ಹುಡುಕಿ ಹುಡುಕಿ ಆಯಾಸಗೊಂಡು, ಕೊನೆಗೆ ಪತ್ತೆ ಹಚ್ಚಿ ಅವಳ ಮನೆಗೆ ಬಂದರು.

"ನಿಮ್ಮ ಮನೆ ಹುಡುಕುವುದು ತುಂಬ ಕಷ್ಟವಾಯಿತಮ್ಮ."

"ಕಷ್ಟವಾದರೂ ಬಂದಿರಲ್ಲಾ ಮೇಷ್ಟ್ರೇ."

"ನಿಮಗೆ ಮಾತು ಕೊಟ್ಟದ್ದೆ—ನಡಸದಿದ್ದರಾಗುತ್ತದೆಯೇ?"

"ಏನು ಸಮಾಚಾರ—ರಾಯರು ಸಿಕ್ಕಿದ್ದರೇನು?"

"ಸಿಕ್ಕುತ್ತಲೇ ಇರುತ್ತಾರೆ. ಅವರ ಮಾತು ಬಿಟ್ಟುಬಿಡಿ ಎಂದು ಹೇಳಿದೆನಲ್ಲಾ."

"ಮುಂದೆ ಗತಿ?"

"ಇದೆ—ಅದಕ್ಕಾಗಿಯೇ ಬಂದೆ—ಶ್ರೀಕಂಠಮೂರ್ತಿಗಳ ಹೆಸರು ಕೇಳಿದ್ದೀರೋ?"

"ಯಾವ ಶ್ರೀಕಂಠಮೂರ್ತಿಗಳು."

" ಗೌರಿಮನೋಹರಿ ಪ್ರಸಾದಿಕ ನಾಟಕ ಮಂಡಳಿಯ ಮಾಲಿಕರು—ಸುಪ್ರಸಿದ್ಧ ನಟರು."

" ಹೆಸರು ಕೇಳಿದ್ದೇನೆ."

" ನಾಟಕ ನೋಡಿಲ್ಲ?."

" ನೋಡಿಲ್ಲ."

" ಇವತ್ತು ಸಂಜೆ ಅವರನ್ನು ಕರೆದುಕೊಂಡು ಬರುತ್ತೇನೆ. ಹೆಣ್ಣು ಪಾರ್ಟು ಮಾಡುವವರನ್ನು ಅವರು ಹುಡುಕುತ್ತಿದ್ದಾರೆ. ನಿಮಗೆ ಸರಿತೋರಿದರೆ ಮಂಜುಳಾ, ಸುಧಾ ಇಬ್ಬರಿಗೂ ಒಂದು ದಾರಿಯಾಗುತ್ತದೆ."

" ಮಂಜುಳನ ವಿಷಯ ನಿಮಗೆ ಗೊತ್ತೇ ಇದೆಯಲ್ಲ. ಮಹಾ ಹಟಮಾರಿ ಹುಡುಗಿ—ಅವಳು ಒಪ್ಪುತ್ತಾಳೆಯೋ ಇಲ್ಲವೋ ?"

" ಒಪ್ಪದೆ ಏನು ಮಾಡುತ್ತಾಳಮ್ಮ. ಇಂಥ ಅವಕಾಶ ಬಿಟ್ಟರೆ ಮತ್ತೆಲ್ಲಿ ನಿಮಗೆ ಸಿಕ್ಕಬೇಕು."

" ಹಣ ಕಾಸಿನ ವಿಷಯ."

" ಶ್ರೀಕಂಠಮೂರ್ತಿಗಳ ಕಂಪೆನಿ ಚೆನ್ನಾಗಿ ನಡೆದಿದೆ. ಅವರ ಬೆಂಗಳೂರು ಸೀಸನ್ ಮುಗಿಯುತ್ತ ಬಂದಿದೆ. ಮುಂದೆ ದಾವಣಗೆರೆ, ಹುಬ್ಬಳ್ಳಿ, ಬೆಳಗಾಂವಿ ಕಡೆ ಹೋಗುತ್ತಾರೆ. ಸ್ತ್ರೀ ಪಾತ್ರವನ್ನು ಇಲ್ಲೇ ಸರಿಪಡಿಸಿಕೊಂಡು ಮುಂದೆ ಪ್ರಯಾಣ ಮಾಡಬೇಕೆಂದು ಅವರ ಇಚ್ಛೆ."

" ನಾವೂ ಅವರ ಜತೆಯಲ್ಲಿ ಪ್ರಯಾಣ ಮಾಡಬೇಕಾಗುತ್ತದೆ."

" ಮಾಡದಿದ್ದರಾಗುತ್ತದೆಯೇ ?"

" ಅಡ್ವಾನ್ಸ್ ಎಷ್ಟು ಕೊಡುತ್ತಾರೆ. ಒಡವೆ, ಸೀರೆಗಳನ್ನೆಲ್ಲಾ ಅಡವಿಟ್ಟಿದ್ದೇನೆ. ಅವುಗಳನ್ನು ಬಿಡಿಸಿಕೊಂಡ ಹೊರತೂ ನಾನು ಹೊರಗೆ ಕಾಲಿಡಲು ಸಾಧ್ಯವಾಗುವುದಿಲ್ಲ."

" ಅವರ ಜತೆ ನೀವೇ ಮಾತನಾಡಿ. ಶ್ರೀಕಂಠಮೂರ್ತಿಗಳು ಈಗ ಇಕ್ಕಟ್ಟಿಗೆ ಸಿಕ್ಕಿಕೊಂಡಿದ್ದಾರೆ. ದಾವಣಗೆರೆಯಿಂದ ಅವರಿಗೆ ಒಳ್ಳೆಯ ಕಂಟ್ರ್ಯಾಕ್ಟ ಬಂದಿದೆ—ಇದೇ ಸಮಯಕ್ಕೆ ಸ್ತ್ರೀಪಾತ್ರ ಮಾಡುತ್ತಿದ್ದವರಿಬ್ಬರೂ

ನೋಟೀಸ್ ಕೊಟ್ಟಿದ್ದಾರೆ."

"ಏಕೆ—ಅವರಿಗೇನಾಯಿತು ?"

"ಫಿಲಂ ಕಂಪೆನಿಯಲ್ಲಿ ಕೆಲಸ ಸಿಕ್ಕಿತಮ್ಮ."

ಸರಸ್ವತಿಯ ಊಹೆಯ ಹಕ್ಕಿ ಯೋಜನ ದೂರ ಹಾರಿತು. ನಾಟಕದ ಕಂಪೆನಿಯಲ್ಲಿ ಸ್ವಲ್ಪ ಹೆಸರು ಮಾಡಿಕೊಂಡರೆ ಮುಂದೆ ಫಿಲಂಸ್ಟಾರ್ ಆಗುವ ಅವಕಾಶವಿದೆಯೆಂಬುದನ್ನು ಗ್ರಹಿಸಿದಳು.

"ಸಂಜೆ ಅವರನ್ನು ಕರೆದುಕೊಂಡು ಬರುವುದು ಖಂಡಿತವಷ್ಟೆ."

"ಸರಿ. ನನಗೆ ಪುರಸತ್ತಿದ್ದರೆ ಮೂರು ನಾಲ್ಕು ದಿವಸಗಳ ಹಿಂದೆಯೇ ಅವರನ್ನು ಕರೆದುಕೊಂಡು ಬರುತ್ತಿದ್ದೆ" ಎಂದು ಹೇಳಿದರು.

ಸರಸ್ವತಿ ಆಚಾರ್ಯರ ಮಾತಿಗೆ ಮತ್ತಷ್ಟು ಬಣ್ಣ ಕಟ್ಟಿ ಮಂಜುಳನಿಗೆ ಹೇಳಿದಳು. ತಾಯಿಯ ಸೂಚನೆ ಕೇಳಿ ಸುಧಾ ಸಂತೋಷದಿಂದ ಕುಣಿದಾಡಿದಳು. ಮಂಜುಳಾ ಗಂಭೀರವಾಗಿ

"ನಿನ್ನಿಷ್ಟ—ನೀನು ಏನು ಬೇಕಾದರೂ ಮಾಡಬಹುದು" ಎಂದಳು.

ಶ್ರೀಕಂಠಮೂರ್ತಿಗಳ ಸ್ವಾಗತ ಸಿದ್ಧತೆಯಾಯಿತು. ಸರಸ್ವತಿ ತನ್ನ ಬಡತನ ತೋರಿಸಿಕೊಳ್ಳಬಾರದೆಂದು ನೆರೆಮನೆಯವರಿಂದ ತಿರಿದು ತಂದು ಕಾಫಿ ತಿಂಡಿ ಮಾಡಿಟ್ಟಳು.

ಆಚಾರ್ಯರು ಶ್ರೀಕಂಠಮೂರ್ತಿಗಳೊಂದಿಗೆ ಸಂಜೆ ಐದು ಗಂಟೆಗೆ ಬಂದರು. ಪರಿಚಯವಾದ ಮೇಲೆ ಉಪಾಹಾರ ವಿಧಿ ಪೂರೈಸಿತು. ಅಲಂಕಾರ ಮಾಡಿಕೊಂಡು ಸಿದ್ಧರಾಗಿದ್ದ ಮಂಜುಳಾ, ಸುಧಾ ಇಬ್ಬರೂ ಬಂದು ಕುಳಿತು ತಮ್ಮ ವೀಣಾನೈಪುಣ್ಯ, ಹಾಡಿಕೆಯ ಜಾಣ್ಮೆಗಳನ್ನು ಪ್ರದರ್ಶನ ಮಾಡಿದರು.

ಅವರ ಸಂಗೀತ ಮುಗಿದಮೇಲೆ ಆಚಾರ್ಯರು

"ಸುಧಾ ನಾಟ್ಯವನ್ನೂ ಮಾಡುತ್ತಾಳೆ ಸ್ವಾಮಿ."

"ಯಾರಲ್ಲಿ ಕಲಿತಳು ?"

"ಕುಮಾರರಲ್ಲಿ?"

"ಸಂತೋಷ—ಏನಮ್ಮಾ, ನಮ್ಮ ಕಂಪೆನಿಗೆ ಬರುವುದಕ್ಕೆ ಅಭ್ಯಂತರ

ವಿಲ್ಲವಷ್ಟೇ ? ”

“ ಮೇಷ್ಟ್ರು ಎಲ್ಲಾ ವಿಷಯ ತಿಳಿಸಿರಬೇಕಲ್ಲಾ ” ಎಂದು ಸರಸ್ವತಿ ಸೂಚಿಸಿದಳು.

“ ಹಣ ಕಾಸಿನ ವಿಷಯ ನಾನು ಮಾತನಾಡಿಲ್ಲಮ್ಮ. ಶ್ರೀಕಂಠಮೂರ್ತಿಗಳುಂಟು ನೀವುಂಟು. ”

“ ಏನು ಕೊಡಬೇಕಮ್ಮ. ನಿಮ್ಮ ಇಬ್ಬರು ಮಕ್ಕಳೂ ಪಾರ್ಟು ಮಾಡಬೇಕಾಗುತ್ತದೆ. ”

“ ಹಾಗೇ ಆಗಲಿ. ಅಡ್ವಾನ್ಸ್ ಹಣ ಕೊಡಬೇಕು. ”

“ ಎಷ್ಟು ? ”

“ ಅದನ್ನು ನೀವೇ ಹೇಳಿ. ನಾವು ನಾಟಕದ ಕಂಪೆನಿಗೆ ಪ್ರವೇಶ ಮಾಡುತ್ತಿರುವುದು ಇದೇ ಮೊದಲು. ”

“ ಸಾವಿರ ರೂಪಾಯಿ ಅಡ್ವಾನ್ಸ್ ತೆಗೆದುಕೊಳ್ಳಿ—ತಿಂಗಳಿಗೆ ಇನ್ನೂರು ರೂಪಾಯಿ ಸಂಬಳ ತೆಗೆದುಕೊಳ್ಳಿ. ಕ್ಯಾಂಪ್ ಹೋದರೆ ಕಂಪೆನಿ ಮನೆಯಲ್ಲಿ ತಿಂಡಿ ಊಟದ ವ್ಯವಸ್ಥೆ ಇರುತ್ತದೆ. ”

“ ಬಹಳ ಕಡಿಮೆಯಾಯಿತು. ನನಗೆ ಮೂರು ಸಾವಿರ ರೂಪಾಯಿಗಳ ಸಾಲವಿದೆ. ಅದನ್ನು ತೀರಿಸಿದಲ್ಲದೆ ನಾನು ಊರು ಬಿಟ್ಟು ಕದಲುವ ಹಾಗಿಲ್ಲ. ”

ಸ್ವಲ್ಪ ಕಾಲ ಜಿಜ್ಞಾಸೆ ನಡೆದು ಕೊನೆಗೆ ಶ್ರೀಕಂಠಮೂರ್ತಿಗಳು ಎರಡು ಸಾವಿರ ರೂಪಾಯಿ ಅಡ್ವಾನ್ಸ್, ತಿಂಗಳಿಗೆ ಮೂವರಿಂದ ಮುನ್ನೂರು ರೂಪಾಯಿ ಸಂಬಳ ಕೊಡಲೊಪ್ಪಿದರು.

“ ನಾನೂ ಪಾರ್ಟು ಮಾಡಬೇಕೇ ? ”

“ ಏಕೆ ? ಮಾಡಬಾರದೇ ? ”

“ ನನಗೆ ಪಾರ್ಟು ಮಾಡಿ ಅಭ್ಯಾಸವಿಲ್ಲ. ”

“ ನಾನು ಅಭ್ಯಾಸ ಮಾಡಿಸುತ್ತೇನೆ. ರಂಗದ ಮೇಲೆ ನಾಲ್ಕು ದಿವಸ ಬಂದರೆ ಚಳಿ ಬಿಟ್ಟು ಹೋಗುತ್ತದೆ. ”

" ಕಂಟ್ರ್ಯಾಕ್ಟ್ ಯಾವಾಗ ಮಾಡಿಕೊಳ್ಳುವಿರಿ ಸ್ವಾಮಿ."

"ನಾಳೆಯೇ ಮಾಡಿಕೊಳ್ಳೋಣ. ಇವರು ನಾಡಿದ್ದಿನಿಂದಲೇ ಪ್ರ್ಯಾಕ್ಟೀಸಿಗೆ ಬರಬೇಕಾಗುತ್ತದೆ. ರಾತ್ರಿ ನಾಟಕಕ್ಕೆ ಕರೆದುಕೊಂಡು ಬನ್ನಿ."

" ಇವತ್ತೇನು ನಾಟಕ."

" ಗುಲೇಬಕಾವಲಿ."

ಆಗಲೆಂದು ರಾಘವಾಚಾರ್ಯರು, ಸರಸ್ವತಮ್ಮ ಇಬ್ಬರೂ ಒಪ್ಪಿ ಕೊಂಡರು.

ರಾತ್ರಿ ನಾಟಕ ನೋಡಿದ ಮೇಲೆ ಸರಸ್ವತಿಯ ಉತ್ಸಾಹ ಇಮ್ಮಡಿಸಿತು. ಮಾರನೆಯ ದಿನ ಕಂಟ್ರ್ಯಾಕ್ಟೂ ಆಗಿ, ಸರಸ್ವತಿಯ ಕೈಗೆ ಅಡ್ವಾನ್ಸ್ ಹಣ ಬಂದಿತು.

ಸರಸ್ವತಿ, ಮಂಜುಳಾ, ಸುಧಾ ನಿತ್ಯವೂ ಕಂಪೆನಿ ಮನೆಗೆ 'ಪ್ರ್ಯಾಕ್ಟೀಸಿ'ಗೆ ಹೋಗಿಬರಲಾರಂಭಿಸಿದರು, ಶ್ರೀಕಂಠಮೂರ್ತಿಗಳು ಅವರ ಪಾತ್ರಗಳ ಫೋಟೋಗಳನ್ನು ತೆಗೆಸಿ ಪ್ರಚಾರಕಾರ್ಯ ಆರಂಭಿಸಿದರು. ಹಸ್ತಪತ್ರಿಕೆ ಗಳಲ್ಲಿ, ವರ್ತಮಾನ ಪತ್ರಿಕೆಗಳಲ್ಲಿ, ಸಿನೀಮಾ ಸ್ಲೈಡುಗಳಲ್ಲಿ, ವಾಲ್‌ಪೋಸ್ಟರ ಗಳಲ್ಲಿ ಸರಸ್ವತಿ, ಮಂಜುಳಾ, ಸುಧಾ ಇವರ ಪಾತ್ರ ಚಿತ್ರಗಳು ಮೆರೆದಾಡಿದವು.

ಹಸ್ತಪತ್ರಿಕೆ ನೋಡಿದ ಮಂಜಯ್ಯ

" ಭಾಗ್ಯಲಕ್ಷ್ಮಿ ನಾಟಕದ ಕಂಪೆನಿಗೆ ಕಾಲಿಟ್ಟಿದ್ದಾಳೆ. ಶ್ರೀಕಂಠಮೂರ್ತಿಗೆ ಶುಕ್ರಪೀಡೆ ಆರಂಭವಾಗಿರಬೇಕು " ಎಂದುಕೊಂಡ.

ಕುಮಾರ ತಂದುಕೊಟ್ಟ ವರ್ತಮಾನ ಪತ್ರಿಕೆಗಳ ಜಾಹೀರಾತುಗಳನ್ನು ನೋಡುತ್ತಾ ನಂಜಪ್ಪ

" ಸರಸ್ವತಿಯ ಜೀವನ ನಾಟಕದ ಮುಂದೆ ಇವೆಂಥ ನಾಟಕಗಳು " ಎಂದ.

ರಾಘವಾಚಾರ್ಯರು ತಂದುಕೊಟ್ಟ ಪ್ರಕಟನೆಗಳನ್ನು ನೋಡಿ ಶ್ರೀರಂಗ ರಾಯರು

" ಪಾಯಸಕ್ಕೆ ಉಪ್ಪು ಹಾಕಿದ ಹಾಗೆ ಅಂಬಕ್ಕ ಎಲ್ಲಾ ಕೆಡಿಸಿಬಿಟ್ಟಳು "

ಎಂದು ಗೊಣಗಿಕೊಂಡರು.

ಚೆಲುವಯ್ಯನ ಕಣ್ಣಿನ ಮುಂದೆಯೂ ತಂಗಿಯ, ತಂಗಿಯ ಮಕ್ಕಳ ಚಿತ್ರಗಳು ಮೆರೆದಾಡಿದವು—ಅವುಗಳನ್ನು ಸಂಗ್ರಹಿಸಿಕೊಂಡು ಮನೆಗೆ ತೆಗೆದುಕೊಂಡು ಹೋಗಿ ಹೆಂಡತಿಗೆ ತೋರಿಸುತ್ತಾ

" ನೋಡಿದೆಯಾ, ಕೊನೆಗೂ ಈ ಹಾಳು ರಂಡೆ ನಮ್ಮ ವಂಶದ ಗೌರವ ಬೀದಿಗೆಳದುಬಿಟ್ಟಳು. ಇವತ್ತಿನಿಂದ ಅವರು ನನ್ನ ಭಾಗಕ್ಕೆ ಸತ್ತಹಾಗೆ. ಎಲ್ಲಿಯಾದರೂ ಹಾಳಾಗಿ ಹೋಗಿಲಿ " ಎಂದು ಶಾಪ ಹಾಕಿದ.

೨೫

ಸರಸ್ವತಿ, ಮಂಜುಳಾ, ಸುಧಾ ಕಂಪೆನಿಯೊಂದಿಗೆ ದಾವಣಗೆರೆಗೆ ಹೊರಡುವ ದಿನ ಸಮೀಪಿಸಿತು.

ಸರಸ್ವತಿ ಒಂದು ಬುಟ್ಟಿ ತುಂಬ ತರಕಾರಿ, ಹಣ್ಣು ತೆಗೆದುಕೊಂಡು ಮುತ್ತಮ್ಮನ ಮನೆಗೆ ಹೋದಳು.

ಮುತ್ತಮ್ಮ ಯಥಾಪ್ರಕಾರ ಎಮ್ಮೆಯ ಮೇಲೆ ಸಿಡಿಗುಟ್ಟಿಕೊಂಡು ಅದನ್ನು ತೊಳೆಯುತ್ತಿದ್ದಳು. ಭಾಗ್ಯಮ್ಮ ಕಣ್ಣು ಕೆಂಪಗೆ ಮಾಡಿಕೊಂಡು ಹೊಗೆಯಲ್ಲಿ ಅಡಿಗೆ ಮಾಡುತ್ತಿದ್ದಳು.

ಸರಸ್ವತಿ ತನ್ನ ಪ್ರಯಾಣದ ವಿಷಯ ಮುತ್ತಮ್ಮನಿಗೆ ತಿಳಿಸಿ

"ನಿನ್ನ ಮನೆಗೆ ಬಂದ ಹೊತ್ತು ಒಳ್ಳೆಯದಮ್ಮ. ದೇವರು ಅನುಕೂಲ ಮಾಡಿಕೊಟ್ಟ" ಎಂದು ತನ್ನ ಕೃತಜ್ಞತೆ ಸೂಚಿಸಿದಳು.

"ನಿಮ್ಮ ನಾಟಕ ನನಗೆ ತೋರಿಸಲ್ವೇನಮ್ಮ?"

"ನಾವಿನ್ನೂ ಪಾರ್ಟು ಮಾಡುತ್ತಿಲ್ಲ. ದಾವಣಗೆರೆಯಿಂದ ಆರಂಭ. ನೀವು ಒಂದೆರಡು ದಿನ ಬಿಡುವು ಮಾಡಿಕೊಂಡು ದಾವಣಗೆರೆಗೆ ಬನ್ನಿ."

"ಎಲ್ಲಿ ಆಗತ್ತಮ್ಮ. ಬೆಂಗಳೂರಿಗೆ ನಿಮ್ಮ ಕಂಪೆನಿ ತಿರುಗಿ ಬಂದಾಗ ನೋಡುತ್ತೇನೆ" ಎಂದಳು.

ಸರಸ್ವತಿ ಹೊರಡುವ ಮುನ್ನ ಕುಪ್ಪಸದ ಒಳಗಿನಿಂದ ನೂರುರೂಪಾಯಿ ನೋಟುಗಳನ್ನು ತೆಗೆದು ಮುತ್ತಮ್ಮನ ಕೈಯಲ್ಲಿಟ್ಟಳು.

"ಇದು ಏಕಮ್ಮ" ಎಂದು ಮುತ್ತಮ್ಮ ಉಪಚಾರಕ್ಕಂದಳು.

"ನನ್ನ ಕಷ್ಟಕ್ಕೆ ನೀನೂ ಭಾಗ್ಯಮ್ಮ ಆದಿರಿ. ಅದನ್ನು ನಾನು ಮರೆತರೆ ದೇವರು ಒಳ್ಳೆಯದು ಮಾಡುತ್ತಾನೆಯೇ?"

"ದೇವರು ನಿನ್ನ, ನಿನ್ನ ಮಕ್ಕಳನ್ನ ಚಂದಾಕಿರಸ್ಲಮ್ಮ. ನೀನೂ ತುಂಬ ಕಷ್ಟ ನೋಸಿದೋಳು. ಇನ್ನುಮೇಲಾದರೂ ಸುಖವಾಗಿರು" ಎಂದಳು.

ಮುತ್ತಮ್ಮನಾದರೂ ತನ್ನ ಬಗ್ಗೆ ಕನಿಕರ ತೋರಿಸಿದಳಲ್ಲಾ ಎಂದು ಸರಸ್ವತಿ ಸಂತೋಷಿಸಿದಳು.

ಸರಸ್ವತಿ ಹೋದಮೇಲೆ ಮುತ್ತಮ್ಮ ಭಾಗ್ಯಮ್ಮನಿಗೆ

"ಒಳ್ಳೆ ಹೆಂಗಸು—ದೇವರು ಕಣ್ಣು ಬಿಟ್ಟು ನೋಡಿದ—ಎಲ್ಲಾದರೂ ಚಂದಾಕಿರ್ಲಿ. ಆದರೆ ಖಯಾಲಿ—ನಾಟಕದ ಕಂಪೆನೀಲಿ ಎಷ್ಟು ದಿನ ನಿಲ್ಲುತ್ತಾಳೋ ಏನೋ" ಎಂದಳು.

ಭಾಗ್ಯಮ್ಮ ಅವಳ ಯಥಾರ್ಥ ವಿಮರ್ಶೆಗೆ ತಲೆದೂಗಿ ನಸುನಕ್ಕಳು.

ಕನ್ನಡ
ಅಮರಕಲಾಕೃ
ಪ್ರಕಟಿಸಲ್ಪಡುತ್ತ
ಈ ಮಹಾಕಾದಂಬರಿ ಭಾ
ವೃದ್ಧರು ಪದೇ ಪದೇ
ಕೊಳ್ಳಲು ನೆರವಾಗುವ ಕ

ಕಾದಂಬರಿಯೊಂದಿ
ಗಳನ್ನು ಸೇರಿಸಲಾ
ಇನಾಮದಾರರು
ಸ. ಮಾಳವ
ಮಾರ್ಮಿಕ

ಸ